ಗುರುವಾರ, ಆಗಸ್ಟ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 232 | ಪುಟ 14

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮಾದಕ ವಸ್ತು ನಿಗ್ರಹ
ದೇಶದ ವಿವಿಧ ಬಂದರುಗಳಲ್ಲಿ 2020ರಿಂದ 2024ರವರೆಗೆ ₹11,310 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ಆಧುನೀಕರಣ
ಪ್ರಯಾಣಿಕರ ಕಾಯ್ದಿರಿಸುವಿಕೆ ವ್ಯವಸ್ಥೆಯನ್ನು ರೈಲ್ವೆ ಇಲಾಖೆ ಸಂಪೂರ್ಣ ಆಧುನೀಕರಣಗೊಳಿಸಿದ್ದು, ಈಗ ಪ್ರತಿ ನಿಮಿಷಕ್ಕೆ 25 ಸಾವಿರ ಟಿಕೆಟ್‌ಗಳನ್ನು ಬುಕ್ಕಿಂಗ್ ಮಾಡಬಹುದಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ

ಸೆನ್ಸೆಕ್ಸ್ 81,857 | ನಿಫ್ಟಿ 25,050 | $/₹ 87.07 | ಚಿನ್ನ (Std. 10g) ₹1,03,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,18,200 (ಬೆಂಗಳೂರು)

ಲೋಕಸಭೆ: ಮಸೂದೆ ಕೋಲಾಹಲ

ಪ್ರಧಾನಿ, ಮುಖ್ಯಮಂತ್ರಿ, ಸಚಿವರ ಪದಚ್ಯುತಿಗೊಳಿಸುವ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಂಧನಕ್ಕೆ ಒಳಗಾಗಿ 30 ದಿನ ಜೈಲಿನಲ್ಲಿದ್ದರೆ ಪ್ರಧಾನಿ, ಮುಖ್ಯಮಂತ್ರಿ ಹಾಗೂ ಸಚಿವರನ್ನು ಪದಚ್ಯುತಿಗೊಳಿಸುವುದಕ್ಕೆ ಅನುವು ಮಾಡಿಕೊಡುವ ಸಂವಿಧಾನ ತಿದ್ದುಪಡಿ ಮಸೂದೆಯ ಮಂಡನೆ ಸಂದರ್ಭದಲ್ಲಿ ಲೋಕಸಭೆಯಲ್ಲಿ ಬುಧವಾರ ಕೋಲಾಹಲ ಸೃಷ್ಟಿಯಾಯಿತು.

ಸರ್ಕಾರದ ಪ್ರಸ್ತಾವಕ್ಕೆ ಒಕ್ಕೊರಲಿನಿಂದ ತೀವ್ರ ವಿರೋಧ ವ್ಯಕ್ತಪಡಿಸಿದ 'ಇಂಡಿಯಾ' ಕೂಟದ ಸಂಸದರು ಸದನದಲ್ಲಿ ಗದ್ದಲ ಎಬ್ಬಿಸಿದರು. ಟಿಎಂಸಿಯ ಸಂಸದರು ಮಸೂದೆಗಳ ಪ್ರತಿಗಳನ್ನು ಹರಿದು ಗೃಹ ಸಚಿವರತ್ತ ಎಸೆದರು. ಬಿಜೆಪಿ ಹಾಗೂ ಟಿಎಂಸಿ ಸದಸ್ಯರು ಸಂಘರ್ಷಕ್ಕೆ ಅಣಿಯಾದರು. ಸದನದಲ್ಲಿ ನಾಟಕೀಯ ವಿದ್ಯಮಾನಗಳು ಘಟಿಸಿದವು.

▶10

ಆರೋಪ-ಪ್ರತ್ಯಾರೋಪ

ಕಲಾಪ ಮುಂದೂಡಿದ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಬಿಜೆಪಿಯ ಸಂಬಿತ್ ಪಾತ್ರಾ, 'ಮಸೂದೆಗಳ ಪ್ರತಿಗಳನ್ನು ಸಚಿವರ ಕಡೆಗೆ ಎಸೆಯಲಾಯಿತು. ವಿಪಕ್ಷಗಳ ನಡೆಯು ಸದನಕ್ಕೆ ಕಪ್ಪು ಚುಕ್ಕೆ' ಎಂದು ದೂರಿದರು. ಟಿಎಂಸಿ ಸಂಸದೆ ಮಿಥಾಲಿ ಬಾಗ್, 'ಇಬ್ಬರು ಸಚಿವರು ನನ್ನನ್ನು ತಳ್ಳಿದರು. ಇದರಿಂದ ಗಾಯಗೊಂಡೆ' ಎಂದು ಆರೋಪಿಸಿದರು. 'ನಾನು ಮಸೂದೆಗಳ ಪ್ರತಿ ಹರಿದು ಹಾಕಲಿಲ್ಲ. ಸಂವಿಧಾನ ವಿರೋಧಿ ಮಸೂದೆ ಪ್ರತಿಗಳನ್ನು ಹರಿದು ಹಾಕಿದವರಿಗೆ ನಾನು ಸೆಲ್ಯೂಟ್ ಮಾಡುತ್ತೇನೆ' ಎಂದು ಟಿಎಂಸಿಯ ಕಲ್ಯಾಣ್ ಬ್ಯಾನರ್ಜಿ ಹೇಳಿದರು.

ಏಟು-ಎದುರೇಟು

ಮಸೂದೆಯನ್ನು ಕಟು ಪದಗಳಲ್ಲಿ ವಿರೋಧಿಸಿದ ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, 'ಗುಜರಾತ್ ಗೃಹ ಸಚಿವರಾಗಿದ್ದಾಗ ಅಮಿತ್ ಶಾ ಬಂಧನಕ್ಕೆ ಒಳಗಾಗಿದ್ದರು. ಅವರಿಗೆ ಈ ಮಸೂದೆ ತರಲು ಯಾವ ನೈತಿಕ ಹಕ್ಕು ಇದೆ' ಎಂದು ಪ್ರಶ್ನಿಸಿದರು.

ಕೂಡಲೇ ಕೋಪದಿಂದ ಎದ್ದು ನಿಂತು ಪ್ರತಿಕ್ರಿಯಿಸಿದ ಶಾ, 'ಬಂಧನಕ್ಕೆ ಮುನ್ನವೇ ನೈತಿಕತೆ ಆಧಾರದಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಬಿಡುಗಡೆಯಾದ ನಂತರ ಸಂಪುಟಕ್ಕೆ ಸೇರಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ಗಂಭೀರ ಆರೋಪಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿ ಇರುವಷ್ಟು ನಾಚಿಕೆಗೇಡಿನ ವ್ಯಕ್ತಿ ಆಗಿಲ್ಲ' ಎಂದು ಶಾ ಹೇಳಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬುಧವಾರ ಮಸೂದೆಗಳನ್ನು ಮಂಡಿಸಿದ ಸಂದರ್ಭದಲ್ಲಿ ಟಿಎಂಸಿ ಸಂಸದರು ಮಸೂದೆಯ ಪ್ರತಿಗಳನ್ನು ಹರಿದು ಅವರತ್ತ ಎಸೆದರು — ಪಿಟಿಐ ಚಿತ್ರ

ಮೂರನೇ ಸಾಲಿನಲ್ಲಿ ಕುಳಿತ ಶಾ

ಮಧ್ಯಾಹ್ನ 3 ಗಂಟೆಗೆ ಸದನ ಮತ್ತೆ ಸೇರಿದಾಗ, ಶಾ ಅವರು ಮೂರನೇ ಸಾಲಿನಲ್ಲಿ ಕುಳಿತರು. ಯಾವುದೇ ಸಚಿವರು ಮೊದಲ ಎರಡು ಸಾಲುಗಳಲ್ಲಿ ಕುಳಿತುಕೊಳ್ಳಲಿಲ್ಲ. ಪ್ರತಿಭಟನೆನಿರತ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಇದ್ದದ್ದೇ ಇದಕ್ಕೆ ಕಾರಣ.

ಗದ್ದಲ ತಪ್ಪಿಸಲು ಹನ್ನೆರಡು ಪುರುಷ ಮತ್ತು ಇಬ್ಬರು ಮಹಿಳಾ ಮಾರ್ಷಲ್‌ಗಳನ್ನು ನಿಯೋಜಿಸಲಾಗಿತ್ತು.

ಘೋಷಣೆಗಳ ನಡುವೆಯೇ ಸಚಿವರು ಮಸೂದೆಗಳನ್ನು ಮಂಡಿಸಿದರು. ಮಸೂದೆಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಜಂಟಿ ಸಮಿತಿಗೆ ಕಳುಹಿಸಲು ಪ್ರಸ್ತಾವ ಮಂಡಿಸಿದರು. ಧ್ವನಿಮತದ ಮೂಲಕ ನಿರ್ಣಯ ಅಂಗೀಕರಿಸಲಾಯಿತು.

> ಚಂದ್ರಬಾಬು ನಾಯ್ಡು ಮತ್ತು ನಿತೀಶ್ ಕುಮಾರ್ ಅವರಂತಹ ಮಿತ್ರಪಕ್ಷಗಳ ನಾಯಕರಿಗೆ ಬೆದರಿಕೆ ಒಡ್ಡಲು ಗೃಹ ಸಚಿವರು ಈ ಅಪಾಯಕಾರಿ ಮಸೂದೆ ತಂದಿದ್ದಾರೆ. ಇದು ಸಾಂವಿಧಾನಿಕ ಒಕ್ಕೂಟ ತತ್ವಗಳ ಹೃದಯಭಾಗಕ್ಕೆ ದಾಳಿ ಮಾಡುತ್ತದೆ. ವಿರೋಧ ಪಕ್ಷಗಳ ಸರ್ಕಾರಗಳನ್ನು ಹಣಿಯುವ ದುರುದ್ದೇಶವಿದೆ
>
> **ಕೆ.ಸಿ.ವೇಣುಗೋಪಾಲ್,** ಕಾಂಗ್ರೆಸ್ ಸಂಸದ

> ಒಂದೆಡೆ, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮನ್ನು ಕಾನೂನಿನ ವ್ಯಾಪ್ತಿಗೆ ತರಲು ಸಾಂವಿಧಾನಿಕ ತಿದ್ದುಪಡಿ ತಂದಿದ್ದಾರೆ. ಮತ್ತೊಂದೆಡೆ, ಕಾಂಗ್ರೆಸ್ ನೇತೃತ್ವದಲ್ಲಿ ಇಡೀ ವಿರೋಧ ಪಕ್ಷಗಳು ಸರ್ಕಾರಗಳನ್ನು ಜೈಲಿನಿಂದ ನಡೆಸಲು ಮತ್ತು ಅಧಿಕಾರಕ್ಕೆ ಅಂಟಿಕೊಂಡಿರಲು ಮಸೂದೆಗಳನ್ನು ವಿರೋಧಿಸಿವೆ
>
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

ತರೂರ್ ಒಡಕು ಧ್ವನಿ

ನೀವು 30 ದಿನ ಜೈಲಿನಲ್ಲಿ ಇದ್ದರೆ ಸಚಿವರಾಗಿ ಮುಂದುವರಿಯಬಹುದೇ? ಇದು ಸಾಮಾನ್ಯ ಜ್ಞಾನ. ಇದರಲ್ಲಿ ನನಗೆ ಯಾವುದೇ ತಪ್ಪು ಕಾಣುತ್ತಿಲ್ಲ. ಮಸೂದೆಯನ್ನು ಪರಾಮರ್ಶೆಗಾಗಿ ಜೆಪಿಸಿಗೆ ಒಪ್ಪಿಸಿರುವುದು ಉತ್ತಮ ನಡೆ

ಶಶಿ ತರೂರ್, ಕಾಂಗ್ರೆಸ್ ಸಂಸದ (ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ)

ಒಳ ಮೀಸಲಾತಿ ಜಾರಿ: ಸಿದ್ದರಾಮಯ್ಯ ಘೋಷಣೆ

ಎಸ್‌ಸಿಗೆ ಶಾಶ್ವತ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸುವ ತೀರ್ಮಾನವನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಬುಧವಾರ ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ' ರಚಿಸಲಾಗುವುದು ಎಂದೂ ಪ್ರಕಟಿಸಿದರು.

ಮಂಗಳವಾರ ರಾತ್ರಿ ನಡೆದ ಸಚಿವ ಸಂಪುಟದ ವಿಶೇಷ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಕುರಿತು ಸದನದಲ್ಲಿ ಮುಖ್ಯಮಂತ್ರಿ ಹೇಳಿಕೆ ನೀಡಿದರು.

'101 ಪರಿಶಿಷ್ಟ ಜಾತಿಗಳನ್ನು 'ಎ', 'ಬಿ', 'ಸಿ' ಎಂದು ಮೂರು ಪ್ರವರ್ಗಗಳಾಗಿ ವಿಂಗಡಿಸಲು ತೀರ್ಮಾನಿಸಿದ್ದೇವೆ. ಎಡಗೈ ಸಂಬಂಧಿತ ಜಾತಿಗಳಿರುವ 'ಎ' ಪ್ರವರ್ಗಕ್ಕೆ ಶೇ 6, ಬಲಗೈ ಸಂಬಂಧಿತ ಜಾತಿಗಳಿರುವ 'ಬಿ' ಪ್ರವರ್ಗಕ್ಕೆ ಶೇ 6 ಹಾಗೂ 'ಸಿ' ಪ್ರವರ್ಗಕ್ಕೆ ಶೇ 5ರಷ್ಟು ಒಳ ಮೀಸಲಾತಿ ನೀಡಲು ನಿರ್ಣಯಿಸಿದ್ದೇವೆ' ಎಂದರು.

'ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆ ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿ, ಕಾಲಕಾಲಕ್ಕೆ ಈ ಜಾತಿಗಳ ಸ್ಥಿತಿಗತಿ ಅಧ್ಯಯನ ಮಾಡಿ ವರದಿ ನೀಡಲು ಪರಿಶಿಷ್ಟ ಜಾತಿಗಳ ಶಾಶ್ವತ ಆಯೋಗ ರಚಿಸಲಾಗುವುದು. ಒಳ ಮೀಸಲಾತಿಯ ಕುರಿತಂತೆ ಆದೇಶ ಹೊರಡಿಸಿದ ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು. ಅಲ್ಲದೆ, ಒಂದು ಬಾರಿಗೆ ವಯೋಮಿತಿ ಸಡಿಲಿಸಲಾಗುವುದು. ಒಳ ಮೀಸಲಾತಿ ಹೋರಾಟಗಾರರ ಮೇಲಿನ ಮೊಕದ್ದಮೆ ಹಿಂಪಡೆಯಲಾಗುವುದು' ಎಂದೂ ತಿಳಿಸಿದರು.

'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಲು ಸರ್ಕಾರ ರಚಿಸಿದ್ದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು, ಪರಿಶಿಷ್ಟ ಜಾತಿಗಳನ್ನು 'ಎ', 'ಬಿ', 'ಸಿ', 'ಡಿ', 'ಇ' ಎಂದು ಐದು ಪ್ರವರ್ಗಗಳಾಗಿ ವಿಂಗಡಿಸಿ ಶಿಫಾರಸು ಮಾಡಿತ್ತು. ಸುಪ್ರೀಂ ಕೋರ್ಟ್ ತೀರ್ಪಿನಲ್ಲಿದ್ದ ತತ್ವಗಳನ್ನು ಗಮನದಲ್ಲಿ ಇಟ್ಟುಕೊಂಡು ಕೆಲವು ಮಾರ್ಪಾಡುಗಳೊಂದಿಗೆ ಈ ಶಿಫಾರಸುಗಳನ್ನು ಅಂಗೀಕರಿಸಲಾಗಿದೆ' ಎಂದರು.

▶6

ಐದರ ಬದಲು ಮೂರು ಪ್ರವರ್ಗ

- ಆಯೋಗವು ಎಡಗೈ ಸಂಬಂಧಿತ ಜಾತಿಗಳೆಂದು ಗುರುತಿಸಿದ ಸಮುದಾಯಗಳಿಗೆ ಶೇ 6
- ಪರಾಯ, ಮೊಗೇರ ಮುಂತಾದ ಬಲಗೈ ಸಂಬಂಧಿತ ಜಾತಿಗಳನ್ನು ಎಡಗೈ ಸಂಬಂಧಿತ ಜಾತಿಗಳ ಜೊತೆ ಆಯೋಗವು ಸೇರಿಸಿದೆ. ಈ ಜಾತಿಗಳನ್ನು ಬಲಗೈ ಸಂಬಂಧಿತ ಜಾತಿಗಳ ಜೊತೆ ಸೇರಿಸಿ ಆ ಸಮೂಹಕ್ಕೆ ಶೇ 6
- ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಗುಂಪುಗಳಲ್ಲಿರುವ ಒಟ್ಟು 4,74,954 ಜನಸಂಖ್ಯೆಯನ್ನು ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಜಾತಿಗಳ ಜೊತೆ ಸಮಾನವಾಗಿ ಹಂಚಿಕೆ
- ಆಯೋಗವು ಸ್ಪೃಶ್ಯ ಜಾತಿಗಳ (ಕೊರಮ, ಕೊರಚ, ಭೋವಿ, ಲಂಬಾಣಿ) ಗುಂಪಿಗೆ ಶೇ 4 ಮತ್ತು 59 ಜಾತಿಗಳಿರುವ ಒಟ್ಟು 5,22,099 ಜನಸಂಖ್ಯೆಯನ್ನು ಪ್ರವರ್ಗ 'ಎ' ಎಂದು ತೀರ್ಮಾನಿಸಿ ಶೇ 1ರಷ್ಟು ಮೀಸಲಾತಿ ನೀಡುವಂತೆ ಶಿಫಾರಸು ಮಾಡಿತ್ತು. ಕೆಲವು ತಾಂತ್ರಿಕ ಕಾರಣಗಳಿಗೆ ಎರಡೂ ಗುಂಪುಗಳನ್ನು ಒಟ್ಟಿಗೆ ಸೇರಿಸಿ ಶೇ 5 ಮೀಸಲಾತಿ ನಿಗದಿ

ಮೀಸಲಾತಿ ಹಂಚಿಕೆ

6% ಪ್ರವರ್ಗ 'ಎ' ಎಡಗೈ ಸಂಬಂಧಿತ ಜಾತಿಗಳು

6% ಪ್ರವರ್ಗ 'ಬಿ' ಬಲಗೈ ಸಂಬಂಧಿತ ಜಾತಿಗಳು

5% ಪ್ರವರ್ಗ 'ಸಿ' ಅಲೆಮಾರಿ ಸೇರಿ ಸ್ಪೃಶ್ಯ ಜಾತಿಗಳು

ಚಿನಕುರುಳಿ ಪ್ರಕಾಶ್ ಶೆಟ್ಟಿ

ಆರೋಗ್ಯ, ಜೀವ ವಿಮೆಗೆ ಜಿಎಸ್‌ಟಿ ವಿನಾಯಿತಿ?

ನವದೆಹಲಿ (ಪಿಟಿಐ): ವ್ಯಕ್ತಿಗಳು ಖರೀದಿಸುವ ಜೀವ ವಿಮೆ ಹಾಗೂ ಆರೋಗ್ಯ ವಿಮೆಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ವಿನಾಯಿತಿ ನೀಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ಸಿದ್ಧಪಡಿಸಿದೆ ಎಂದು ಜಿಎಸ್‌ಟಿ ಮಂಡಳಿಯ ವಿಮೆ ಕುರಿತ ಸಚಿವರ ಗುಂಪಿನ ಸಂಚಾಲಕ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

ಈಗ ಆರೋಗ್ಯ ವಿಮೆ ಹಾಗೂ ಜೀವ ವಿಮೆಗೆ ಜಿಎಸ್‌ಟಿ ಅಡಿಯಲ್ಲಿ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಜಿಎಸ್‌ಟಿ ಮಂಡಳಿಯ ವಿಮೆ ಕುರಿತ ಸಚಿವರ ಗುಂಪು ಬುಧವಾರ ಸಭೆ ನಡೆಸಿತು.

ಕೇಂದ್ರದ ಪ್ರಸ್ತಾವವನ್ನು ಬಹುತೇಕ ಎಲ್ಲ ರಾಜ್ಯಗಳು ಬೆಂಬಲಿಸಿವೆ. ಆದರೆ, ಜಿಎಸ್‌ಟಿ ಅಡಿಯಲ್ಲಿ ನೀಡುವ ವಿನಾಯಿತಿಯು ಗ್ರಾಹಕರಿಗೆ ನೇರವಾಗಿ ವರ್ಗಾವಣೆ ಆಗುವಂತಹ ಮಾರ್ಗವೊಂದನ್ನು ರೂಪಿಸುವಂತೆ ರಾಜ್ಯಗಳು ಹೇಳಿವೆ ಎಂದು ಗುಂಪಿನ ಸದಸ್ಯ ಹಾಗೂ ತೆಲಂಗಾಣದ ಉಪ ಮುಖ್ಯಮಂತ್ರಿ ಮಲ್ಲು ಭಟ್ಟಿ ವಿಕ್ರಮಾರ್ಕ ತಿಳಿಸಿದ್ದಾರೆ.

'ಜಿಎಸ್‌ಟಿ ಇಳಿಕೆಯ ಪ್ರಯೋಜನವು ಗ್ರಾಹಕರಿಗೆ ಲಭಿಸಬೇಕೇ ವಿನಾ ಕಂಪನಿಗಳಿಗೆ ಅಲ್ಲ ಎಂಬುದನ್ನು ನಾವು ಸ್ಪಷ್ಟಪಡಿಸಿದ್ದೇವೆ. ಇದಕ್ಕಾಗಿ ಮಾರ್ಗೋಪಾಯವೊಂದನ್ನು ಕಂಡುಕೊಳ್ಳಬೇಕಿದೆ' ಎಂದು ಹೇಳಿದ್ದಾರೆ.

'ಜೀವ ವಿಮೆ ಹಾಗೂ ಆರೋಗ್ಯ ವಿಮೆ ಮೇಲಿನ ತೆರಿಗೆಯನ್ನು ಕಡಿಮೆ ಮಾಡಬೇಕು ಅಥವಾ ಅವುಗಳಿಗೆ ತೆರಿಗೆಯಿಂದ ವಿನಾಯಿತಿ ಕೊಡಬೇಕು ಎಂದು ರಾಜ್ಯಗಳು ಬಯಸಿದ್ದವು. ತೆರಿಗೆ ವಿನಾಯಿತಿಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದ ಮಾರ್ಗೋಪಾಯವನ್ನು ಜಿಎಸ್‌ಟಿ ಮಂಡಳಿಯು ಕಂಡುಕೊಳ್ಳಲಿದೆ' ಎಂದು ವಿಕ್ರಮಾರ್ಕ ತಿಳಿಸಿದ್ದಾರೆ.

ವ್ಯಕ್ತಿಗಳು ಖರೀದಿಸುವ ಈ ವಿಮೆಗಳಿಗೆ ಜಿಎಸ್‌ಟಿ ವಿನಾಯಿತಿ ನೀಡಿದರೆ ವಾರ್ಷಿಕ ವರಮಾನ ನಷ್ಟ ₹9,700 ಕೋಟಿ ಆಗಬಹುದು ಎಂಬ ಅಂದಾಜು ಇದೆ ಎಂದು ಹೇಳಿದ್ದಾರೆ.

▶10

ವಿದ್ಯಾರ್ಥಿನಿ ಕೊಲೆ; ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರಾಷ್ಟ್ರೀಯ ಹೆದ್ದಾರಿ- 48ರ ಸಮೀಪ, ತಾಲ್ಲೂಕಿನ ಗೋನೂರು ರಸ್ತೆಯಲ್ಲಿ ಪದವಿ ವಿದ್ಯಾರ್ಥಿನಿ ವರ್ಷಿತಾ (19) ಅವರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಆರೋಪಿಯೊಬ್ಬನನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಹಿರಿಯೂರು ತಾಲ್ಲೂಕು, ಕೋವೇರಹಟ್ಟಿ ಗ್ರಾಮದ ವರ್ಷಿತಾ ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ದ್ವಿತೀಯ ಬಿ.ಎ. ಓದುತ್ತಿದ್ದರು. ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯದಲ್ಲಿ ವಾಸವಿದ್ದರು. ನಾಲ್ಕು ದಿನಗಳ ಹಿಂದೆ ಊರಿಗೆ ಹೋಗುವುದಾಗಿ ರಜೆ ಪಡೆದು ತೆರಳಿದ್ದರು. ಆದರೆ ಅವರು ಮನೆಗೆ ಬಂದಿರಲಿಲ್ಲ. ಪೋಷಕರು ಹಿರಿಯೂರು ತಾಲ್ಲೂಕು ಐಮಂಗಲ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ವರ್ಷಿತಾ

ಗೋನೂರು ರಸ್ತೆಯ ಜಮೀನಿನಲ್ಲಿ ಮಂಗಳವಾರ ಅಪರಿಚಿತ ಶವವೊಂದು ಪತ್ತೆಯಾಗಿತ್ತು. ಪ್ರಕರಣದ ಬೆನ್ನುಹತ್ತಿದ ಪೊಲೀಸರು ಅಪರಿಚಿತ ಶವ ವರ್ಷಿತಾ ಅವರದ್ದು ಎಂದು ಪತ್ತೆ ಮಾಡಿದ್ದಾರೆ. ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿದ್ದು, ಅರೆಬರೆ ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ಪ್ರಕರಣ ಸಂಬಂಧ ವರ್ಷಿತಾ ಗೆಳೆಯ ಚೇತನ್ (21) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

▶10

ವ್ಯಾಪಕ ಪ್ರತಿಭಟನೆ

ವಿದ್ಯಾರ್ಥಿನಿಯ ಕೊಲೆಯನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು ನಗರದಲ್ಲಿ ವ್ಯಾಪಕ ಪ್ರತಿಭಟನೆ ನಡೆಸಿದರು. ಒನಕೆ ಓಬವ್ವ ವೃತ್ತ, ಅಂಬೇಡ್ಕರ್ ವೃತ್ತ, ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿನಿಯ ಸಂಬಂಧಿಕರು, ಗ್ರಾಮಸ್ಥರು ಜಿಲ್ಲಾ ಆಸ್ಪತ್ರೆ ಮುಂದಿನ ರಸ್ತೆ ಬಂದ್ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು ತುಂತುರು ಮಳೆಯಾಗುವ ಸಾಧ್ಯತೆ ಇದೆ

ಬಾಲಕನ ಚಿಕಿತ್ಸೆಗೆ ₹5 ಲಕ್ಷ ನೀಡಿದ ಜಮೀರ್

ಬೆಂಗಳೂರು: ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕು ಹಿರೇಹಳ್ಳಿಯ ಗಗನ್ ಗೌಡ ಎಂಬ ಬಾಲಕನಿಗೆ ಸಚಿವ ಜಮೀರ್ ಅಹಮದ್ ₹5 ಲಕ್ಷ ವೈದ್ಯಕೀಯ ನೆರವು ನೀಡಿದರು.

ಬಾಲಕನ ಚಿಕಿತ್ಸೆಗೆ ₹35 ಲಕ್ಷ ಅಗತ್ಯವಿದ್ದು, ಎಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮೂಲಕ ನೆರವಿಗಾಗಿ ಬೆಂಗಳೂರಿಗೆ ಬಂದಿದ್ದ ಬಾಲಕ ಗಗನ್ ಗೌಡ ಹಾಗೂ ಆತನ ತಂದೆ ಚೆಲುವಪ್ಪ ಅವರನ್ನು ವಿಕಾಸ ಸೌಧ ಕಚೇರಿಗೆ ಕರೆಸಿಕೊಂಡ ಸಚಿವರು ನೆರವು ಹಸ್ತಾಂತರಿಸಿದರು. ಶಾಸಕರಾದ ಗಣೇಶ್, ಅಸೀಫ್ ಸೇಠ್, ಭರತ್ ರೆಡ್ಡಿ, ಕೆಎಂಎಫ್ ಮಾಜಿ ಅಧ್ಯಕ್ಷ ಭೀಮಾನಾಯ್ಕ್ ಉಪಸ್ಥಿತರಿದ್ದರು.

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–11–ಸಿಡಿಎನ್/25

ಈ ಸಂಸ್ಥೆಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ವರ್ಷದ ಅವಧಿಗೆ ಒಂದು ಯಂಗ್ ಪ್ರೊಫೆಷನಲ್–I ಹುದ್ದೆಗೆ ತೊಡಗಿಸಿಕೊಳ್ಳಲು 03.09.2025 (ಬುಧವಾರ) ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢೀಕೃತ **ಮಾಸಿಕ ಸಂಭಾವನೆ: ರೂ. 30,000/–. ವಿದ್ಯಾರ್ಹತೆ:** ಬಿ.ಕಾಂ / ಬಿಬಿಎ / ಬಿಬಿಎಸ್. **ವಯೋಮಿತಿ: 21 ರಿಂದ 45 ವರ್ಷ.** ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು, ನೇರ ಸಂದರ್ಶನಕ್ಕೆ ಹಾಜರಾಗುವ ಸಮಯದಲ್ಲಿ ತಮ್ಮ ಎಲ್ಲಾ ಮೂಲ ಪ್ರಮಾಣಪತ್ರಗಳನ್ನು ಹಾಗೂ ದಾಖಲಾತಿಗಳನ್ನು ಹಾಜರುಪಡಿಸುವುದು ಕಡ್ಡಾಯ. **ಅರ್ಜಿ ನಮೂನೆಗಾಗಿ ಮತ್ತು ವಿವರವಾದ ಜಾಹೀರಾತಿಗಾಗಿ,** ದಯವಿಟ್ಟು ಸಂಸ್ಥೆಯ **www.nianp.res.in** ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– ಪ್ರಭಾರಿ ಆಡಳಿತಾಧಿಕಾರಿ

ಸೆ.1ರಿಂದ ಬಸವ ಸಂಸ್ಕೃತಿ ಅಭಿಯಾನ

ಅ.5ರಂದು ಅರಮನೆ ಮೈದಾನದಲ್ಲಿ ಸಮಾರೋಪ: ಸಚಿವರೊಂದಿಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗಾಯತ ಮಠಾಧೀಶರ ಒಕ್ಕೂಟವು ಸೆ.1ರಿಂದ ಅ.1ರವರೆಗೆ ರಾಜ್ಯದಲ್ಲಿ ಆಯೋಜಿಸಿರುವ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭವು ಅ.5ರಂದು ಇಲ್ಲಿನ ಅರಮನೆ ಮೈದಾನದಲ್ಲಿ ನಡೆಯಲಿದೆ.

ಅಭಿಯಾನದ ಕುರಿತು ಒಕ್ಕೂಟದ ಹಲವು ಸ್ವಾಮೀಜಿಗಳು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಬುಧವಾರ ಭೇಟಿಯಾಗಿ ಸಮಾಲೋಚನೆ ನಡೆಸಿದರು.

> **ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಕಾರ್ಯಕ್ರಮದಲ್ಲಿ ನಾಡಿನ ಎಲ್ಲೆಡೆಯಿಂದ ಬಸವಣ್ಣನ ಸಾವಿರಾರು ಅನುಯಾಯಿಗಳು ಪಾಲ್ಗೊಳ್ಳಲಿದ್ದಾರೆ**
> ಎಂ.ಬಿ.ಪಾಟೀಲ, ಸಚಿವ

ಬಸವನ ಬಾಗೇವಾಡಿಯಲ್ಲಿ ಸೆ.1ರಂದು ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಈ ಅಭಿಯಾನದ ಅಂಗವಾಗಿ ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಕಾರ್ಯಕ್ರಮಗಳು ನಡೆಯಲಿವೆ. ಸಮಾರೋಪ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಹಲವು ಗಣ್ಯರನ್ನು ಆಹ್ವಾನಿಸಲಾಗುವುದು' ಎಂದು ಎಂ.ಬಿ.ಪಾಟೀಲ ತಿಳಿಸಿದರು.

ಸಭೆಯಲ್ಲಿ ಗದಗಿನ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ, ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು, ನಾಗನೂರು ರುದ್ರಾಕ್ಷಿ ಮಠದ ಅಲ್ಲಮ ಪ್ರಭು ಸ್ವಾಮೀಜಿ, ಬಸವ ಧರ್ಮ ಪೀಠದ ಬಸವಯೋಗಿ ಸ್ವಾಮೀಜಿ ಇದ್ದರು.

ಸಚಿವ ಎಂ.ಬಿ.ಪಾಟೀಲ ಅವರೊಂದಿಗೆ ಬೆಂಗಳೂರಿನಲ್ಲಿ ಲಿಂಗಾಯಿತ ಮಠಾಧೀಶರು ಹಾಗೂ ಪ್ರಮುಖರು ಚರ್ಚಿಸಿದರು

ಕಸಾಪ ಅಧ್ಯಕ್ಷರ ನಡೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸರ್ವ ಸದಸ್ಯರ ಸಭೆಯನ್ನು ಕಾರ್ಯಕಾರಿ ಸಮಿತಿ ನಿರ್ಧಾರ ಮಾಡಬೇಕೇ ಹೊರತು, ಅಧ್ಯಕ್ಷರೊಬ್ಬರೇ ತೀರ್ಮಾನಿಸಿ ಘೋಷಿಸುವುದು ಎಷ್ಟರಮಟ್ಟಿಗೆ ಸರಿ' ಎಂದು ಕಸಾಪ ಆಜೀವ ಸದಸ್ಯರಾದ ಸಮಾನ ಮನಸ್ಕರು ಪ್ರಶ್ನಿಸಿದ್ದಾರೆ.

ಕಲ್ಲಳ್ಳಿಯಲ್ಲಿ ಕಸಾಪ ವಾರ್ಷಿಕ ಸಭೆ ನಡೆಸುವ ನಿರ್ಧಾರಕ್ಕೆ ಸಮಾನ ಮನಸ್ಕರು ವೇದಿಕೆ ಸಂಚಾಲಕರಾದ ಎಸ್‌.ಜಿ. ಸಿದ್ಧರಾಮಯ್ಯ, ಆರ್‌.ಜಿ. ಹಳ್ಳಿ ನಾಗರಾಜ್ ಮತ್ತು ಜಾಣಗೆರೆ ವೆಂಕಟರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದ್ದು, 'ಅಧ್ಯಕ್ಷ ಮಹೇಶ ಜೋಶಿ ಅವರ ಸರ್ವಾಧಿಕಾರಿ ಧೋರಣೆ ಖಂಡನೀಯ' ಎಂದಿದ್ದಾರೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಚಿಂತಾಮಣಿ
ತಾಲ್ಲೂಕು ಪಂಚಾಯಿತಿ, ಚಿಂತಾಮಣಿ, 2ನೇ ಅಂತಸ್ತಿನ ಮಹಡಿ ಡಬಲ್ ರೋಡ್, ರಾಘವೇಂದ್ರ ಸ್ವಾಮಿ ದೇವಸ್ಥಾನ ಹತ್ತಿರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ–563125 ಇಮೇಲ್:cdpo.chic@yahoo.com, ದೂರವಾಣಿ ಸಂಖ್ಯೆ:08154-255589

ಸಂ:ಶಿಅಯೋ:ಚಿಂ:ಹೊಗುವಾ.ಇ–ಟೆಂಡರ್:2025–26 ದಿನಾಂಕ:16.08.2025

: :ಹೊರಗುತ್ತಿಗೆ ಆಧಾರದಲ್ಲಿ ವಾಹನ ಬಾಡಿಗೆ ಪಡೆಯಲು ಆಹ್ವಾನಿಸಿದ ಇ–ಟೆಂಡರ್ ಪ್ರಕಟಣೆ: :

ವಿಷಯ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದಲ್ಲಿ ವಾಹನವನ್ನು ಬಾಡಿಗೆ ಪಡೆಯಲು ಇ–ಟೆಂಡರ್ ಆಹ್ವಾನಿಸುತ್ತಿರುವ ಕುರಿತು. **ಉಲ್ಲೇಖ:** (1) No. FD 03 TFP 2023 Dated:13.04.2023. (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು–2000. (3) ಮಾನ್ಯ ಉಪನಿರ್ದೇಶಕರ ಅನುಮತಿ ದಿನಾಂಕ: 02.07.2025. (4) ಸರ್ಕಾರದ ಆದೇಶ ಸಂಖ್ಯೆ: ಸರಿಗಳು: 30 ಶಿವಾನಿ 2013, ಬೆಂಗಳೂರು, ದಿನಾಂಕ: 31.03.2022. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿಶು ಅಭಿವೃದ್ಧಿಯೋಜನೆ ಚಿಂತಾಮಣಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳ ಭೇಟಿ, ಮೇಲ್ವಿಚಾರಣೆ ಹಾಗೂ ಕಛೇರಿ ಕೆಲಸ ಕಾರ್ಯಗಳ ನಿರ್ವಹಣೆಯ ದೃಷ್ಟಿಯಿಂದ ಅಧಿಕಾರಿ ಮತ್ತು ಸಿಬ್ಬಂದಿಗಳ ಓಡಾಟಕ್ಕೆ ವಾಹನದ ಅವಶ್ಯಕತೆಯಿರುವ ಕಾರಣ ಉಲ್ಲೇಖ(1)ರ ಸರ್ಕಾರಿ ಆದೇಶದಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ಹೊರಗುತ್ತಿಗೆ ಆಧಾರದಲ್ಲಿ ಬಾಡಿಗೆ ವಾಹನವನ್ನು ಪಡೆಯಲು ಉಲ್ಲೇಖ (2)ರ ನಿಯಮಗಳಂತೆ ಹಾಗೂ ಉಲ್ಲೇಖ (3)ರಲ್ಲಿ ಅನುಮೋದಿಸಿರುಂತೆ ಉಲ್ಲೇಖ(4) ರನ್ವಯ ಈ ಕೆಳಗಿನ ಷರತ್ತುಗಳನ್ವಯ ಆಸಕ್ತ ಟ್ರಾವೆಲ್ ಏಜೆನ್ಸಿಯವರಿಂದ / ವಾಹನ ಮಾಲೀಕರಿಂದ ಎರಡು ಲಕೋಟೆ (ತಾಂತ್ರಿಕ&ಆರ್ಥಿಕ) ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಪಟ್ಟ ಮಾಹಿತಿಯನ್ನು ಇಚ್ಛೆಯುಳ್ಳವರು **www.kppp.karnataka.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು ಹಾಗೂ ಅರ್ಜಿಗಳನ್ನು ಅಪ್–ಲೋಡ್ ಮಾಡಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ತಾಲ್ಲೂಕು ಪಂಚಾಯತಿ, ಚಿಂತಾಮಣಿ, 2ನೇ ಅಂತಸ್ತಿನ ಮಹಡಿ ಡಬಲ್ ರೋಡ್, ರಾಘವೇಂದ್ರ ಸ್ವಾಮಿ ದೇವಸ್ಥಾನ ಹತ್ತಿರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. **ವಿವರ:** (1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಲ್ಲಿ ಅಪ್ ಲೋಡ್ ಮಾಡಲು ಪ್ರಾರಂಭದ **ದಿನಾಂಕ: 16.08.2025.** (2) ಅಪ್ ಲೋಡ್ ಮಾಡಲು ಕೊನೆಯ **ದಿನಾಂಕ: 25.08.2025 ಸಂಜೆ 5:00 ವರೆಗೆ.** (3) ಇ.ಎಂ.ಡಿ ಮೊತ್ತ: **11,500 (ಇ–ಪೋರ್ಟಲ್ ನಲ್ಲಿ ಸಲ್ಲಿಸುವುದು).** (4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.08.2025, ಬೆಳಗ್ಗೆ 10:30.** (5) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 29.08.2025, ಬೆಳಗ್ಗೆ 10:30.** (6) ಟೆಂಡರ್‌ನ ವಾರ್ಷಿಕ **ಅಂದಾಜು ಮೊತ್ತ: 5.66 ಲಕ್ಷ.**

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:167/ಕೆಎಸ್‌ಎಂಸಿಎ/2025–26

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ ಬಿ/ಟಿಆರ್‌ಡಿ. 2025–26/11ದಿನಾಂಕ: 13.08.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
(i) ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ಎಸಿ ಲೋಕೋ ಟ್ರಿಪ್ ಶೆಡ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಓಎಚ್‌ಇ ಮಾರ್ಪಾಡು (ii) ಪ್ಲಾಟ್‌ಫಾರಂ 7 ಮತ್ತು 8 ರ ಕಡಿಮೆ ಎತ್ತರದ ಮೇಲ್ಛಾವಣಿ ಅನ್ನು ಬದಲಾಯಿಸುವ ಪ್ರಸ್ತಾವನೆ, ಗ್ರಾನೈಟ್ ನೆಲಹಾಸು–ಟಿಆರ್‌ಡಿ ಕೆಲಸ ಸೇರಿದಂತೆ ಎರಡನೇ ಪ್ರವೇಶ ಕಟ್ಟಡ ಮತ್ತು ಪ್ಲಾಟ್‌ಫಾರ್ಮ್ ಪ್ರವೇಶದ್ವಾರದ ನಡುವಿನ ತೆರೆದ ಪ್ರದೇಶದಲ್ಲಿ ಶೆಲ್ಟರ್ ಒದಗಿಸುವುದು. **ಪೂರ್ಣಗೊಳ್ಳುವ ಅವಧಿ: 08 ತಿಂಗಳುಗಳು**	ರೂ. 54,20,894.02/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04–09–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್/ಟಿಆರ್‌ಡಿ ಬೆಂಗಳೂರು
ಪಿಯುಬಿ/391 /ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಇ–ಹರಾಜು ಕ್ಯಾಟಲಾಗ್ ಪಿಎಫ್‌ಎಸ್–6 ಯೂನಿಟ್ಸ್ –2025 ದಿನಾಂಕ: 08.08.2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಹರಾಜನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು ಮತ್ತು ಇದರ ಸ್ಥಳಗಳು

ಪ್ಲಾಟ್‌ಫಾರ್ಮ್–2 & 3–ಕೊಪ್ಪಳ, ಪ್ಲಾಟ್‌ಫಾರ್ಮ್–2 &3–ಬಾಗಲಕೋಟೆ ('ಬಿ' ವರ್ಗ ಎಸ್‌ಎಂಯು), ಪ್ಲಾಟ್ ಫಾರ್ಮ್–1–ಹೊಳೆಆಲೂರು ('ಡಿ' ವರ್ಗ) ಪ್ಲಾಟ್ ಫಾರ್ಮ್–1–ಸಿಂಧನೂರು, ಪ್ಲಾಟ್‌ಫಾರ್ಮ್–1–ಗುಳೇದಗುಡ್ಡ, ಪ್ಲಾಟ್‌ಫಾರ್ಮ್–1–ಗಿಣಿಗೇರ ('ಇ' ವರ್ಗ) ಗಳಲ್ಲಿ 6 ಪ್ಲಾಟ್‌ಫಾರ್ಮ್ ಸ್ಟಾಲ್‌ಗಳನ್ನು ಸ್ಥಾಪಿಸಲು ಒಪ್ಪಂದ.

ಇ–ಹರಾಜು 28.08.2025 ರಂದು ಬೆಳಗ್ಗೆ 11:30 ಗಂಟೆಗಳಿಂದ 12:50 ಗಂಟೆಯವರೆಗೆ ನಿಗದಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಲಾಗಿನ್ ಆಗಿ: **www.ireps.gov.in**

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಹುಬ್ಬಳ್ಳಿ
ಪಿಯುಬಿ/382 /ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂಖ್ಯೆ.217/ವೈಟಿಎಸ್‌ಕೆ/ಎಸ್‌ಬಿಸಿ/9/2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಗೆ ಸಹಿ ಮಾಡಿರುವವರು, ಜೆಟಿಬಿಎಸ್, ಆರ್‌ಟಿಎಸ್‌ಎ, ಆರ್‌ಟಿಎ ಸೇರಿದಂತೆ ರೈಲ್ವೆಯು ನೇಮಿಸಿದ ಅಧಿಕೃತ ಟಿಕೆಟ್ ಏಜೆಂಟ್‌ಗಳು ಮತ್ತು ಐಆರ್‌ಸಿಟಿಸಿ ನೇಮಿಸಿದ ಏಜೆಂಟ್‌ಗಳು, ಐಆರ್‌ಸಿಟಿಸಿ ಯ ಚಿಲ್ಲರೆ ಸೇವಾ ಪೂರೈಕೆದಾರರಿಂದ ಗಣಕೀಕೃತ ಪ್ರಯಾಣಿಕರ ಮೀಸಲಾತಿ ವ್ಯವಸ್ಥೆ (ಪಿಆರ್‌ಎಸ್) ಮತ್ತು ಕಾಯ್ದಿರಿಸದ ಟಿಕೆಟ್ ವ್ಯವಸ್ಥೆ (ಯುಟಿಎಸ್) ಟರ್ಮಿನಲ್‌ಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಇವುಗಳನ್ನು ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಯಾತ್ರಿ ಟಿಕೆಟ್ ಸುವಿಧಾ ಕೇಂದ್ರ (ವೈಟಿಎಸ್‌ಕೆ) ಎಂದು ಕರೆಯಲಾಗುತ್ತದೆ. ಆರಂಭಿಕ ಮೂರು ವರ್ಷಗಳ ಅವಧಿಗೆ ಈ ನೇಮಕವು ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ **www.swr.indianrailways.gov.in** ಲಾಗಿನ್ ಮಾಡಿ

ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಸಮಯ	22–09–2025 ರಂದು ಬೆಳಗ್ಗೆ 10.00 ರಿಂದ ಸಂಜೆ 15.00 ರವರೆಗೆ
ಅರ್ಜಿಯನ್ನು ತೆರೆಯುವ ದಿನಾಂಕ ಮತ್ತು ಸಮಯ	22–09–2025 ರ 15:05 ಗಂಟೆಗಳು

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/393/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2025–26

ಕಾಯ್ದಿರಿಸದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು Google Play Store ನಿಂದ UTS Moblie ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

'ಪ್ರಧಾನಮಂತ್ರಿ ಫ್ರಾಡ್' ಹೇಳಿಕೆ: ವಾಗ್ವಾದ

ವಿಧಾನಪರಿಷತ್‌ನಲ್ಲಿ ಬಿಜೆಪಿ – ಕಾಂಗ್ರೆಸ್ ಮಾತಿನ ಚಕಮಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಮಂತ್ರಿ ಫ್ರಾಡ್' ಎಂಬ ಕಾಂಗ್ರೆಸ್‌ನ ನಸೀರ್ ಅಹ್ಮದ್ ಅವರ ಮಾತು ವಿಧಾನಪರಿಷತ್‌ನಲ್ಲಿ ತೀವ್ರ ವಾಗ್ವಾದಕ್ಕೆ ಕಾರಣವಾಯಿತು.

ವಿಧಾನಸಭೆಯಿಂದ ಅಂಗೀಕೃತವಾಗಿದ್ದ 'ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ'ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಪರಿಷತ್‌ನಲ್ಲಿ ಮಂಡಿಸಿದರು.

ಇದರ ಬಗ್ಗೆ, ಬುಧವಾರ ತಡರಾತ್ರಿಯವರೆಗೂ ನಡೆದ ಚರ್ಚೆಯ ವೇಳೆ ನಸೀರ್ ಅಹ್ಮದ್ ಅವರು 'ಪ್ರಧಾನ ಮಂತ್ರಿ ಫ್ರಾಡ್' ಎಂದು ಹೇಳಿದರು. ಇದರಿಂದ ಸಿಟ್ಟಿಗೆದ್ದ ಬಿಜೆಪಿ ಸದಸ್ಯರು, 'ನಸೀರ್ ಕ್ಷಮೆ ಕೇಳಬೇಕು' ಎಂದು ಪಟ್ಟು ಹಿಡಿದರು.

'ಕಡತದಿಂದ ತೆಗೆದು ಹಾಕಿದ್ದೇನೆ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. 'ಮತ್ತೊಮ್ಮೆ ಫ್ರಾಡ್ ಎಂದಿದ್ದಾರೆ. ಅವರು ಕ್ಷಮೆ ಕೇಳಬೇಕು. ಸದನದಿಂದ ಹೊರಗೆ ಹಾಕಬೇಕು. ಅನಗತ್ಯವಾಗಿ ಪ್ರಧಾನಿ ಹೆಸರು ತಂದಿದ್ದಾರೆ' ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಒತ್ತಾಯಿಸಿದರು.

ಬಿಜೆಪಿ ಸದಸ್ಯರು ಸಭಾಪತಿಯವರ ಪೀಠದ ಮುಂದೆ ನಿಂತು ಧರಣಿ ನಡೆಸಿ, 'ನಸೀರ್ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.

'ದೇಶದ ಪ್ರಧಾನಿ ಬಗ್ಗೆ ಮಾತನಾಡುವುದು ಸರಿಯಲ್ಲ, ವಾಪಸ್ ತೆಗೆದುಕೊಳ್ಳಲು ಸದಸ್ಯರಿಗೆ ಹೇಳಿ' ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ಸಭಾನಾಯಕ ಬೋಸರಾಜು ಅವರಿಗೆ ಸೂಚಿಸಿದರು.

'ಪ್ರಧಾನಿ ಬಗ್ಗೆ ಯಾರೇ ಮಾತನಾಡಿದರೂ ಸರಿಯಲ್ಲ, ದೇಶದ ನಾಯಕರು ಯಾರೇ ಇದ್ದರು ನಾವು ಮಾತನಾಡಬಾರದು' ಎಂದು ಬೋಸರಾಜು ಹೇಳಿದರು.

'ಬಿಜೆಪಿಯ ರವಿಯವರು ಪ್ರಧಾನಿ ಅವರನ್ನು ವಿಶ್ವಗುರು ಎಂದರು. ಚುನಾವಣೆಯಲ್ಲಿ ಫ್ರಾಡ್ ಮಾಡಿ ಪ್ರಧಾನಮಂತ್ರಿಯಾಗಿದ್ದಾರೆ. ನೋವಿನಿಂದ ನಾನು ಹೇಳಿದ್ದೇನೆ. ವ್ಯಕ್ತಿಗತವಾಗಿ ಟೀಕೆ ಮಾಡಬೇಕೆಂದೇನೂ ಇಲ್ಲ. ಇದರಿಂದ ಯಾರಿಗಾದರೂ ನೋವಾಗಿದ್ದರೆ ನಾನು ಹೇಳಿದ್ದನ್ನು ವಾಪಸ್ ಪಡೆಯುತ್ತೇನೆ' ಎಂದು ನಸೀರ್ ಅಹ್ಮದ್ ಹೇಳಿದರು.

ನಸೀರ್ ಅಹ್ಮದ್ ಹೇಳಿಕೆಯನ್ನು ವಾಪಸ್ ಪಡೆದುಕೊಂಡ ನಂತರ, 'ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ–2025'ಕ್ಕೆ ರಾತ್ರಿ 12ಕ್ಕೆ ಧ್ವನಿಮತದಿಂದ ಅಂಗೀಕಾರ ದೊರೆಯಿತು.

ರಾತ್ರಿ 12ರವರೆಗೆ ಕಲಾಪ

'ಕರ್ನಾಟಕ ಸಹಕಾರ ಸಂಘಗಳ ತಿದ್ದುಪಡಿ ಮಸೂದೆ– 2025ರ ಬಗ್ಗೆ ವಿಸ್ತಾರ ಚರ್ಚೆ ನಡೆದಿದ್ದರಿಂದ, ವಿಧಾನ ಪರಿಷತ್ ಕಲಾಪ ಬುಧವಾರ ತಡರಾತ್ರಿ 12ರವರೆಗೆ ನಡೆಯಿತು.

'ಮಸೂದೆ ಬಗ್ಗೆ ವಿಸ್ತೃತ ಚರ್ಚೆ ನಡೆಯಬೇಕಾಗಿದ್ದು, ಈಗಾಗಲೇ ಎಂಟೂವರೆಯಾಗಿದ್ದು, ಗುರುವಾರ ಇದನ್ನು ತೆಗೆದುಕೊಳ್ಳಬೇಕು' ಎಂದು ಛಲವಾದಿ ನಾರಾಯಣ ಸ್ವಾಮಿ, ಬಿಜೆಪಿಯ ರವಿಕುಮಾರ್, ಭಾರತಿ ಶೆಟ್ಟಿ ಅವರು ಸಭಾಪತಿ ಬಸವರಾಜ ಹೊರಟ್ಟಿ ಅವರಲ್ಲಿ ಮನವಿ ಮಾಡಿದರು.

'ಮಸೂದೆಗಳನ್ನು ಇಂದೇ ಅಂಗೀಕಾರ ಮಾಡಿಕೊಡಬೇಕು' ಎಂದು ಸಭಾನಾಯಕ ಬೋಸರಾಜು ಹಾಗೂ ಎಚ್‌.ಕೆ. ಪಾಟೀಲ ಅವರು ಸಭಾಪತಿಯವರನ್ನು ಕೇಳಿಕೊಂಡರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು ವಾಗ್ವಾದ ನಡೆಸಿದರು. ನಾರಾಯಣಸ್ವಾಮಿ ಹಾಗೂ ಬಸವರಾಜ ಹೊರಟ್ಟಿ ನಡುವೆಯೂ ಮಾತಿನ ಚಕಮಕಿ ನಡೆಯಿತು. 'ಕಲಾಪ ಮುಂದೂಡುವುದಿಲ್ಲ' ಎಂದು ಸಭಾಪತಿ ಹೇಳಿದರು.

ಅದಾದ ನಂತರ, ತಡರಾತ್ರಿಯವರೆಗೂ ಮಸೂದೆ ಬಗ್ಗೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು ಚರ್ಚೆ ನಡೆಸಿದರು. 12.01ಕ್ಕೆ ಕಲಾಪ ಮುಗಿದ ಮೇಲೆ, 'ಶುಭ ಮುಂಜಾನೆ' ಎಂದು ಹೇಳಿ ಸಭಾಪತಿ ಕಲಾಪವನ್ನು ಮುಂದೂಡಿದರು.

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

Kirloskar

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com **ಇ–ಮೇಲ್ :** investors@kirloskarelectric.com
CIN : L31100KA1946PLC000415

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ 78ನೇ ವಾರ್ಷಿಕ ಮಹಾಸಭೆಯ ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ (**'ಎಂ.ಸಿ.ಎ'**)ದ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015, ಈ ವಿಷಯದ ಕುರಿತು ಸೆಬಿ (ಇನ್ನು ಮುಂದೆ ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ) ಹೊರಡಿಸಿದ, ಎಜಿಎಂ ಸೂಚನೆ ಮತ್ತು ಎಜಿಎಂ ಅನುಬಂಧ ಸೂಚನೆಯಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ನಡೆಸಲು, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಂ.ಸಿ.ಎ') ಸೆಪ್ಟೆಂಬರ್ 19, 2024 ರಂದು ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024 ಮತ್ತು ಅಕ್ಟೋಬರ್ 03, 2024 ರಂದು ಹೊರಡಿಸಿದ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ರ ಅನುಸಾರವಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ (ಕಂಪನಿ) ಯ 78ನೇ ವಾರ್ಷಿಕ ಮಹಾಸಭೆಯು (**'ಎಜಿಎಂ'**) ಮಂಗಳವಾರ, ಸೆಪ್ಟೆಂಬರ್ 16, 2025 ರಂದು ಬೆಳಿಗ್ಗೆ 11.00 ಗಂಟೆಗೆ ವಿಡಿಯೋ ಕಾನ್ಫರೆನ್ಸ್ (**'ವಿಸಿ'**) / ಇತರೆ ಆಡಿಯೋ ವಿಷುಯಲ್ ಮೀನ್ಸ್ (**'ಒಎವಿಎಂ'**) ಮೂಲಕ ನಡೆಯಲಿದೆ.

2013 ರ ('ಆಕ್ಟ್') ಕಂಪನಿಗಳ ಕಾಯಿದೆ ಕಟ್ಟಳೆಗಳ ಅನುಸಾರ ಹಾಗೂ ಸೆಬಿ (ಲಿಸ್ಟಿಂಗ್ ಹೊಣೆಗಾರಿಕೆಗಳು ಮತ್ತು ಬಹಿರಂಗ–ಪಡಿಸುವಿಕೆಯ ಅಗತ್ಯತೆಗಳು) ನಿಯಂತ್ರಣಗಳು, 2015ರ (ಸೆಬಿ ಲಿಸ್ಟಿಂಗ್ ರೆಗ್ಯೂಲೇಶನ್ಸ್) ಮತ್ತು ಮೇಲೆ ತಿಳಿಸಲಾದ ಸುತ್ತೋಲೆಗಳಂತೆ ಕಂಪನಿಯ ಎಜಿಎಂನ್ನು ವಿಸಿ/ಓಎವಿಎಂ ಮೂಲಕ ನಡೆಸಲಾಗುತ್ತದೆ. ಹಾಗಾಗಿ ಸದಸ್ಯರು ಮುಂಬರುವ ಎಜಿಎಂಗೆ ವಿಸಿ/ಓಎವಿಎಂ ಮೂಲಕ ಹಾಜರಾಗಿ ಭಾಗವಹಿಸಬಹುದಾಗಿರುತ್ತದೆ.

78ನೇ ಎಜಿಎಂನ ಸೂಚನೆ ಮತ್ತು ಎಜಿಎಂ ನ ಪರಿಷ್ಕೃತ ಸೂಚನೆ ಹಾಗೂ ಹಣಕಾಸು ವರ್ಷ 2024–25 ರ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮಾದರಿಯಲ್ಲಿ ಕಂಪನಿ/ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಇವರಲ್ಲಿ ಇ–ಮೇಲ್ ವಿಳಾಸ ನೋಂದಾಯಿತವಾದ ಸದಸ್ಯರಿಗೆ ಕಳುಹಿಸಲಾಗುತ್ತದೆ. ಇ–ಮೇಲ್ ವಿಳಾಸ ನೋಂದಾಯಿಸದ ಸದಸ್ಯರಿಗೆ, 78ನೇ ವಾರ್ಷಿಕ ವರದಿಯ ಸಂಪೂರ್ಣ ವಿವರಗಳು ಲಭ್ಯವಿರುವ ನಿಖರವಾದ ವೆಬ್–ಲಿಂಕ್ ಅನ್ನು ಒದಗಿಸುವ ಪತ್ರವನ್ನು ಕಳುಹಿಸಲಾಗುತ್ತದೆ. ವಾರ್ಷಿಕ ವರದಿಯ ಭೌತಿಕ ಪ್ರತಿಗಳನ್ನು ನೀಡುವುದಕ್ಕೆ ವಿನಾಯಿತಿ ಇದ್ದರೂ ನಿರ್ದಿಷ್ಟವಾಗಿ ವಿನಂತಿಸುವ ಸದಸ್ಯರಿಗೆ ಕಳುಹಿಸಲಾಗುತ್ತದೆ. 78ನೇ ಎಜಿಎಂನ ಸೂಚನೆ ಮತ್ತು ಎಜಿಎಂ ನ ಪರಿಷ್ಕೃತ ಸೂಚನೆ ಹಾಗೂ ಹಣಕಾಸು ವರ್ಷ 2024–25 ರ ವಾರ್ಷಿಕ ವರದಿಯನ್ನು ಕಂಪನಿಯ ವೆಬ್ ಸೈಟ್ www.kirloskarelectric.com ದಲ್ಲಿ ಲಭ್ಯವಿದ್ದು, ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್‌ಗಳಾದ ಕ್ರಮವಾಗಿ www.bseindia.com ಮತ್ತು www.nseindia.com ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನ ವೆಬ್‌ಸೈಟ್ www.evotingindia.com ಗಳಲ್ಲಿ ಲಭ್ಯವಿರುತ್ತದೆ.

ಕಂಪನಿಯು ವಿಸಿ / ಓಎವಿಎಂ ಸೌಲಭ್ಯವನ್ನು ಸಿಡಿಎಸ್‌ಎಲ್ ನಿಂದ ಪಡೆಯುತ್ತಿದೆ. ಸದಸ್ಯರು ವಿಸಿ / ಓಎವಿಎಂ ಸೌಲಭ್ಯದ ಮೂಲಕ ಮಾತ್ರ ಎಜಿಎಂಗೆ ಹಾಜರಾಗಿ ಭಾಗವಹಿಸಬಹುದು. ವಿಸಿ / ಓಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಕಂಪನಿಗಳ ಕಾಯಿದೆ 2013 ರ ಸೆಕ್ಷನ್ 103 ಅಡಿಯಲ್ಲಿ ಕೋರಂ ಉದ್ದೇಶಕ್ಕಾಗಿ ಎಣಿಕೆ ಮಾಡಲಾಗುತ್ತದೆ. ಎಜಿಎಂ ಗೆ ಸೇರುವ ಸೂಚನೆಗಳು ಮತ್ತು ಎಜಿಎಂ ನಲ್ಲಿ ಭಾಗವಹಿಸುವ ವಿಧಾನವನ್ನು ಎಜಿಎಂ ನ ಸೂಚನೆಯಲ್ಲಿ ಒದಗಿಸಲಾಗಿದೆ.

ಸದಸ್ಯರುಗಳು ರಿಮೋಟ್ ಇ–ಮತದಾನದ ಮೂಲಕ ಎಜಿಎಂ ಸೂಚನೆ ಮತ್ತು ಎಜಿಎಂ ನ ಪರಿಷ್ಕೃತ ಸೂಚನೆಯಲ್ಲಿ ಸೂಚಿಸಿರುವಂತೆ ತಮ್ಮ ಮತಗಳನ್ನು ದೂರದಿಂದಲೇ ವ್ಯವಹಾರದ ಮೇಲೆ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಎಲೆಕ್ಟ್ರಾನಿಕ್ ಫೋಲಿಯೊ, ಭೌತಿಕ ಫೋಲಿಯೋ ಮತ್ತು ಇ–ಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರುಗಳು ರಿಮೋಟ್ ಇ–ಮತದಾನ ಮಾಡುವ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗುತ್ತದೆ, ಎಜಿಎಂಗೆ ವಿಸಿ / ಓಎವಿಎಂ ಮೂಲಕ ಹಾಜರಾದಾಗ ಪಾಲಿಸಬೇಕಾದ ಸೂಚನೆಗಳು ಎಜಿಎಂ ಸೂಚನೆಯಲ್ಲಿ ತಿಳಿಯಪಡಿಸಲಾಗಿದೆ. ಇ–ಮತದಾನದ ವ್ಯವಸ್ಥೆಯನ್ನು ಎಜಿಎಂಗೆ ಹಾಜರಾಗುವ ಸದಸ್ಯರುಗಳಿಗೆ ಎಜಿಎಂ ನಲ್ಲಿ ನೀಡಲಾಗುವದು, ಯಾರು ರಿಮೋಟ್ ಇ–ಮತದಾನವನ್ನು ಮಾಡಿರುವದಿಲ್ಲವೋ ಅವರು ಸಭೆ ನಡೆಯುವ ವೇಳೆಯಲ್ಲಿ ಇ–ಮತದಾನ ಮಾಡಬಹುದಾಗಿದೆ. ಎಲೆಕ್ಟ್ರಾನಿಕ್ ರೂಪದಲ್ಲಿ ಅಥವಾ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ ("ಆರ್‌ಟಿಎ") ಷೇರುಗಳನ್ನು ಹೊಂದಿದ್ದರೆ, ಸದಸ್ಯರು ತಮ್ಮ ಅರ್ಜಿ, ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ಮೌಲೀಕರಿಸಲು / ನವೀಕರಿಸಲು ಡಿಪಾಸಿಟರಿ ಭಾಗೀದಾರರನ್ನು (ಡಿಪಿ) ಸಂಪರ್ಕಿಸಲು ಕೋರಲಾಗಿದೆ. ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ತಾತ್ಕಾಲಿಕವಾಗಿ ತಮ್ಮ ಇ–ಮೇಲ್ ವಿಳಾಸಗಳನ್ನು ಮತ್ತು ಆರ್‌ಟಿಎನಲ್ಲಿ ನೋಂದಾಯಿಸಿದ ಮೊಬೈಲ್ ಸಂಖ್ಯೆಗಳನ್ನು ಪಡೆಯಬಹುದು. ಯಾವುದೇ ಪ್ರಶ್ನೆಗಳಿದ್ದಲ್ಲಿ ಸದಸ್ಯರು irg@integratedindia.in ಪರ್ಯಾಯವಾಗಿ ಎಲೆಕ್ಟ್ರಾನಿಕ್ ಫೋಲಿಯೋ ಮತ್ತು ಭೌತಿಕ ಫೋಲಿಯೋ ಸಂದರ್ಭದಲ್ಲಿ ಷೇರು ಪ್ರಮಾಣಪತ್ರದ ಪ್ರತಿಯೊಂದಿಗೆ ಸದಸ್ಯರು ಇ–ಮೇಲ್ ಐಡಿಗಾಗಿ ವಿನಂತಿಯನ್ನು irg@integratedindia.in ಕಳುಹಿಸಬಹುದು ಮತ್ತು ಮೊಬೈಲ್ ಸಂಖ್ಯೆ, ಇ–ಮೇಲ್ ವಿಳಾಸ, ಸ್ವಯಂ ದೃಢೀಕೃತ ಪ್ಯಾನ್ ಪ್ರತಿ ಮತ್ತು ಕ್ಲೈಂಟ್ ಮಾಸ್ಟರ್ ಒದಗಿಸುವ ಸಹಿ ಮಾಡಿದ ವಿನಂತಿಯ ಪತ್ರದ ಸ್ಕ್ಯಾನ್ ಮಾಡಿದ ಪ್ರತಿಯನ್ನು ಕಳುಹಿಸಬಹುದು. ಅಲ್ಲದೇ ಭೌತಿಕ ಷೇರುಗಳನ್ನು ಹೊಂದಿರುವ ಹಾಗೂ ಕೆವೈಸಿ ವಿವರಗಳನ್ನು ಸಲ್ಲಿಸಿರದ ಸದಸ್ಯರುಗಳು ಕಂಪನಿಯ ಆರ್‌ಟಿಎ ಗೆ ಆಯ್.ಎಸ್.ಆರ್–1 ಅರ್ಜಿಯನ್ನು ಪ್ಯಾನ ಮತ್ತು ಇತರೆ ಕೆವೈಸಿ ವಿವರಗಳನ್ನು ನವೀಕರಿಸಲು ಸಲ್ಲಿಸಬೇಕು. ಅರ್ಜಿಯ ನಮೂನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com/investors/ investors-information/investor-service-request.html ನಲ್ಲಿ ಪಡೆಯಬಹುದು.

ಸದಸ್ಯರುಗಳು ತಮಗೆ ಕೊಡಮಾಡಲಾಗುವ ಎಜಿಎಂ ಸೂಚನೆಯಲ್ಲಿನ ಎಲ್ಲಾ ವಿವರಗಳನ್ನು ವಿಶೇಷವಾಗಿ ಎಜಿಎಂ ಗೆ ಭಾಗವಹಿಸುವ, ಮತವನ್ನು ದೂರದಿಂದ ಚಲಾಯಿಸುವ ಅಥವಾ ಸಭೆಯಲ್ಲಿ ಭಾಗವಹಿಸುವಾಗ ಮತ ಚಲಾಯಿಸುವ ಕುರಿತಾದ ವಿವರಗಳನ್ನು ಜಾಗರೂಕತೆಯಿಂದ ಓದಿಕೊಳ್ಳಲು ಸೂಚಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ ಪರವಾಗಿ,
ಸಹಿ/–
ಮಹಾಬಲೇಶ್ವರ ಭಟ್,
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲಯೆನ್ಸ್ ಆಫಿಸರ್

ಸ್ಥಳ : ಬೆಂಗಳೂರು
ದಿನಾಂಕ : ಆಗಸ್ಟ್ 20, 2025

ಪಟ್ಟಣ ಪಂಚಾಯತಿ ಕಾರ್ಯಾಲಯ, ಹಾರೋಹಳ್ಳಿ
ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ – 562 112.
ದೂರವಾಣಿ: 080–2976 0055, ಇಮೇಲ್: ka.harohall.tp@gmail.com

ಸಂಖ್ಯೆ : ಪ.ಪ.ಹಾ./ಆ.ಶಾ/ಎ.ಬಿ.ಸಿ. ಟೆಂಡರ್–02/2025–26
ದಿನಾಂಕ : 18–08–2025

ಟೆಂಡರ್ ಪ್ರಕಟಣೆ

ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹಾರೊಹಳ್ಳಿ ರವರು ಹಾರೊಹಳ್ಳಿ ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಬೀದಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆಯನ್ನು **20th Live Stock Census Report 2019, Karnataka State Government** ನ್ನು ಆಧಾರವಾಗಿಟ್ಟುಕೊಂಡು **Animal Birth Control (Dogs) Rules, 2001 and the Prevention of Cruelty to Animals Act, 1960** ಅನುಸಾರ ನಡೆಸಬೇಕಿದ್ದು **DMA/2025-26/SE5546/Call-2,** ರೂ. 10.00 ಲಕ್ಷಗಳಿಗಾಗಿ ಆಸಕ್ತ ಅರ್ಹ ಕನ್ಸಲ್ಟೆಂಟ್ / ಏಜೆನ್ಸಿ / ಸಂಸ್ಥೆಯವರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಪೂರೈಕೆದಾರರು / ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು **www.kppp.karnataka.gov.in** ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಣ ಹಾಗೂ ಟೆಂಡರ್ ಪ್ರಕ್ರಿಯೆ ಶುಲ್ಕಗಳನ್ನು ಸಹ ವಿದ್ಯುನ್ಮಾನದ ಮೂಲಕ ಪಾವತಿಸಬೇಕು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **03–09–2025 ರ ಸಂಜೆ 5.00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ : 04–09–2025 ರ ಸಂಜೆ 5.00 ಗಂಟೆಯ ನಂತರ.**

ಯಾವುದೇ ದಿನಾಂಕಗಳಲ್ಲಿ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಮುಖ್ಯಾಧಿಕಾರಿಗಳು,
ಪಟ್ಟಣ ಪಂಚಾಯತಿ ಹಾರೋಹಳ್ಳಿ.

ಡಿಐಪಿಆರ್/ರಾಮನಗರ/294/ಮಣಿಪಾಲ್/2025–26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, 5ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ.ಹೆಚ್.ರಸ್ತೆ, ಬೆಂಗಳೂರು–560027. ವೆಬ್‌ಸೈಟ್ : www.mybmtc.com
ಸಂಖ್ಯೆ.ಬೆಮಸಾ/ಕೇಕ/ಕಾಇ/ಕಾನಿಅ/838/2025–26 ದಿನಾಂಕ: 20.08.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:05/2025–26

ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. (1) **ಬೆಂಗಳೂರು ಜಯನಗರದಲ್ಲಿರುವ ನೌಕರರ ವಸತಿಗೃಹಗಳಲ್ಲಿ ಅಗತ್ಯ ರಿಪೇರಿ ಮತ್ತು ಸುಧಾರಣೆ ಕೆಲಸಗಳನ್ನು ನಿರ್ವಹಿಸುವುದು.** ಟೆಂಡರ್‌ಗಿಟ್ಟ ಮೊತ್ತ **ರೂ.21.20 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.50,000/–** (2) **ಬೆಂಗಳೂರಿನ ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿರುವ 150 ಕೆ.ಎಲ್.ಡಿ. ಒಳಚರಂಡಿ ಸಂಸ್ಕರಣ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವುದು (12 ತಿಂಗಳ ಅವಧಿಗೆ).** ಟೆಂಡರ್‌ಗಿಟ್ಟ ಮೊತ್ತ: **ರೂ.5.04 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.12,600/–.** (3) **ಬೆಂಗಳೂರು ಐ.ಟಿ.ಪಿ.ಎಲ್.ನಲ್ಲಿರುವ ಟಿ.ಟಿ.ಎಂ.ಸಿ.ಯಲ್ಲಿ ಅಗತ್ಯ ನಿರ್ವಹಣೆ ಕೆಲಸಗಳನ್ನು ನಿರ್ವಹಿಸುವುದು.** ಟೆಂಡರ್‌ಗಿಟ್ಟ ಮೊತ್ತ: **ರೂ. 4.24 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.10,600/–.** (4) **ಬೆಂಗಳೂರಿನ ಜಯನಗರದಲ್ಲಿರುವ ಟಿ.ಟಿ.ಎಂ.ಸಿ.ಯಲ್ಲಿ ಅಗತ್ಯ ರಿಪೇರಿ ಮತ್ತು ಸುಧಾರಣೆ ಕೆಲಸಗಳನ್ನು ನಿರ್ವಹಿಸುವುದು.** ಟೆಂಡರ್‌ಗಿಟ್ಟ ಮೊತ್ತ: **ರೂ.12.72 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.25,450/–** (5) **ಬೆಂಗಳೂರು ಇಸ್ರೊ ಲೇಔಟ್‌ನಲ್ಲಿರುವ ಬಸ್ ನಿಲ್ದಾಣದಲ್ಲಿ ನಿರ್ವಹಣೆ ಕೆಲಸಗಳನ್ನು ನಿರ್ವಹಿಸುವುದು.** ಟೆಂಡರ್‌ಗಿಟ್ಟ ಮೊತ್ತ **ರೂ.12.70 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.25,400/–.** (6) **ಬೆಂ.ಮ.ಸಾ.ಸಂಸ್ಥೆಗೆ ಹೊರಗುತ್ತಿಗೆ ಆಧಾರದಲ್ಲಿ ಅಭಿಯಂತರರನ್ನು (ಕಾಮಗಾರಿ ಮತ್ತು ವಿದ್ಯುತ್) ಒದಗಿಸುವುದು (ಕರೆ–2).** ಇ.ಎಂ.ಡಿ. ಮೊತ್ತ: **ರೂ.50,000/–.** (7) **ಬೆಂಗಳೂರು ರಾಜರಾಜೇಶ್ವರಿ ನಗರದಲ್ಲಿರುವ ಘಟಕ–21ರಲ್ಲಿ ಬೋರ್‌ವೆಲ್ ಕೊರೆಸುವುದು ಹಾಗೂ ಸಂಬಂಧಿಸಿದ ಕೆಲಸಗಳು.** ಟೆಂಡರ್‌ಗಿಟ್ಟ ಮೊತ್ತ: **ರೂ.6.91 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ: **ರೂ.17,300/–.** ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು. (1) ಟೆಂಡರ್ ಸಲ್ಲಿಸಲು ಕಡೆ **ದಿನಾಂಕ:30.08.2025.** ಟೆಂಡರ್ ತೆರೆಯುವ **ದಿನಾಂಕ: 01.09.2025**

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಬೆಂ.ಮ.ಸಾ.ಸಂಸ್ಥೆ

ನಗರದಲ್ಲಿ ಕುಸಿದ ತಾಪಮಾನ

ಬೆಂಗಳೂರು: ಜಿಟಿಜಿಟಿ ಮಳೆ, ಮೋಡ ಕವಿದ ವಾತಾವರಣದಿಂದ ನಗರದಲ್ಲಿ ತಾಪಮಾನ ತಗ್ಗಿದ್ದು, ಆಗಾಗ ಬೀಸುವ ಶೀತ ಗಾಳಿಯಿಂದ ಚಳಿ ಕಾಣಿಸಿಕೊಂಡಿದೆ.

ಬುಧವಾರ ಮಧ್ಯಾಹ್ನ 1 ಗಂಟೆಗೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಗರಿಷ್ಠ ಉಷ್ಣಾಂಶ 24.4 ಡಿಗ್ರಿ ಸೆಲ್ಸಿಯಸ್ ವರದಿಯಾದರೆ, ಕನಿಷ್ಠ ಉಷ್ಣಾಂಶ 19.4 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿದೆ. ಗರಿಷ್ಠ ಉಷ್ಣಾಂಶದಲ್ಲಿ ನಾಲ್ಕರಿಂದ ಐದು ಡಿಗ್ರಿ ಸೆಲ್ಸಿಯಸ್‌ನಷ್ಟು ಇಳಿಕೆಯಾಗಿದೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ಗರಿಷ್ಠ ಉಷ್ಣಾಂಶವು 28 ಡಿಗ್ರಿ ಸೆಲ್ಸಿಯಸ್‌ನಿಂದ 29 ಡಿಗ್ರಿ ಸೆಲ್ಸಿಯಸ್ ಇರುತ್ತಿತ್ತು.

ದಿನದ ಕೆಲವು ಅವಧಿ ಗಂಟೆಗೆ 30 ಕಿ.ಮೀ.ಯಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿದೆ. ಇದರಿಂದಾಗಿಯೂ ವಾತಾವರಣದಲ್ಲಿ ಚಳಿ ಹೆಚ್ಚುತ್ತಿದೆ. ನಗರದಲ್ಲಿ ಇದೇ 26ರವರೆಗೂ ಮೋಡ ಕವಿದ ವಾತಾವರಣ ಇರುವ ಸಾಧ್ಯತೆಯಿದ್ದು, ಸಾಧಾರಣ ಮಳೆಯಾಗುವ ಸಂಭವವಿದೆ. ಗಾಳಿಯ ತೀವ್ರತೆ ಕಡಿಮೆಯಾಗಲಿದ್ದು, ಗರಿಷ್ಠ ಉಷ್ಣಾಂಶ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸೂಚನೆಯನ್ನು ನೀಡುವುದೇನೆಂದರೆ ಈ ಕೆಳಕಂಡ ಸಂಸ್ಥೆ ಶೇರ್ ಲಾಜಿಸ್ಟಿಕ್ಸ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಇದರ ನೋಂದಾಯಿತ ಕಚೇರಿಯು ಮೂರನೇ ಮಹಡಿ ಡಿಸ್ಕವರರ್ ಕಟ್ಟಡ, ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು, ಕರ್ನಾಟಕ 560066, ಭಾರತ (ಇದು ಕಂಪನಿ) ಇಲ್ಲಿ ಇದ್ದು ಇದು 2013ರ ಕಂಪನಿಗಳ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಅಸ್ತಿತ್ವದಲ್ಲಿದ್ದು ಇದರ CIN: U63000KA2019PTC120589 ಆಗಿರುತ್ತದೆ. ಈ ಕೆಳಕಂಡ ಆಸ್ತಿಯ ಶೀರ್ಷಿಕೆ ಮತ್ತು ಹಿತಾಸಕ್ತಿಯ ಬಗ್ಗೆ ವಿಚಾರಿಸಲಾಗುತ್ತಿದ್ದು ಈ ಸಂಸ್ಥೆಯು ಕೋಲಾರ ಜಿಲ್ಲೆ, ಮಾಲೂರು ತಾಲೂಕು ಕಸಬಾ ಹೋಬಳಿ ಚೊಕ್ಕಂಡಹಳ್ಳಿ ಗ್ರಾಮದಲ್ಲಿರುವ ಕೆಲವು ಸ್ಥಿರಾಸ್ತಿಗಳನ್ನು ಹೊಂದಿರುತ್ತದೆ, ಈ ಕೆಳಗೆ ತಿಳಿಸಿರುವಂತೆ ಇದು ಒಟ್ಟು 13 ಎಕರೆ 33 ಗುಂಟೆಗಳು ಹಾಗೂ ಅದರ ಮೇಲಿರುವ ಕಟ್ಟಡಗಳು (ತಿಳಿಸಿರುವ ಆಸ್ತಿ) ಆಗಿರುತ್ತದೆ.

ಆಸ್ತಿಯ ವಿವರಣೆ : ಸರ್ವೆ ಸಂಖ್ಯೆ 121ರ ವಿಸ್ತೀರ್ಣ 01 ಎಕರೆ 34 ಗುಂಟೆಗಳು, 125/3 (ಹಳೆಯ ಸಂಖ್ಯೆ 125/2) ರ ವಿಸ್ತೀರ್ಣ 01 ಎಕರೆ 08 ಗುಂಟೆಗಳು, 126/3 ರ ವಿಸ್ತೀರ್ಣ 01 ಎಕರೆ 38 ಗುಂಟೆಗಳು, 126/4 (ಹಳೆಯ ಸಂಖ್ಯೆ 126/2) ರ ವಿಸ್ತೀರ್ಣ 01 ಎಕರೆ 02 ಗುಂಟೆಗಳು, 127/3 ರ ವಿಸ್ತೀರ್ಣ 14 ಗುಂಟೆಗಳು, 127/4 ರ ವಿಸ್ತೀರ್ಣ 12 ಗುಂಟೆಗಳು, 127/5 ರ ವಿಸ್ತೀರ್ಣ 02 ಎಕರೆ 14½ ಗುಂಟೆಗಳು, 127/6 ಅಳತೆ 01 ಎಕರೆ 08¼ ಗುಂಟೆಗಳು , 129/1 ರ ವಿಸ್ತೀರ್ಣ 02 ಎಕರೆಗಳು ಮತ್ತು 129/3 (ಹಳೆಯ ಸಂಖ್ಯೆ 129/2) ರ ವಿಸ್ತೀರ್ಣ 01 ಎಕರೆ 21¼ ಗುಂಟೆಗಳು ಹಾಗೂ ಇದರ ಒಟ್ಟು ವಿಸ್ತೀರ್ಣ 13 ಎಕರೆ 33 ಗುಂಟೆಗಳು, ಹಾಗೂ ಇದರೂಂದಿಗೆ ಕಟ್ಟಡ ಕಟ್ಟಲಾಗಿರುತ್ತದೆ.

ಸದರಿ ಆಸ್ತಿ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ, ಆಸಕ್ತಿ ಅಥವಾ ಹಕ್ಕು ಹೊಂದಿರುವ ಅಥವಾ ಹಕ್ಕನ್ನು ಪ್ರತಿಪಾದಿಸುವ ವ್ಯಕ್ತಿಗಳು, ನೋಟರಿ ಪಬ್ಲಿಕ್ ಅವರಿಂದ ಸರಿಯಾಗಿ ದೃಢೀಕರಿಸಲ್ಪಟ್ಟ ಬೆಂಬಲಿಸುವ ಸಾಕ್ಷ್ಯಗಳೊಂದಿಗೆ ತಮ್ಮ ಹಕ್ಕುಗಳನ್ನು ಲಿಖಿತ ರೂಪದಲ್ಲಿ ಈ ಕೆಳ ಸಹಿದಾರರ ಈ ವಿಳಾಸಕ್ಕೆ ಪಿನಾಜ್ ಮೆಹತಾ ಹಾಗೂ ಡೆಂಜಿಲ್ ಆರಂಭನ್ ಅವರ ಗಮನಕ್ಕೆ ಬರುವಂತೆ – ಪ್ರೈಡ್ ಎಲೈಟ್, 2ನೇ ಮಹಡಿ, ಮ್ಯೂಸಿಯಂ ಕ್ರಾಸ್ ರಸ್ತೆ, ಬೆಂಗಳೂರು, ಕರ್ನಾಟಕ – 560001 ಹಾಗೂ pinaz.mehta@wadiaghandy.com ಮತ್ತು denzil.arambhan @wadiaghandy.com ಗೆ ಇಮೇಲ್ ಮೂಲಕ ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಒಳಗಾಗಿ ಸಲ್ಲಿಸಲು ವಿನಂತಿಸಲಾಗಿದೆ.

ನಿಗದಿತ ಸಮಯದೊಳಗೆ ಸ್ವೀಕರಿಸದ ಅಥವಾ ಬೆಂಬಲಿತ ಮಾನ್ಯ ದಾಖಲೆಗಳಿಲ್ಲದ ಕ್ಲೈಮ್‌ಗಳನ್ನು ಮನ್ನಾ ಮಾಡಲಾಗುತ್ತದೆ ಮತ್ತು ಕೈಬಿಡಲಾಗುತ್ತದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಅವುಗಳನ್ನು ಪರಿಗಣಿಸಲಾಗುವುದಿಲ್ಲ.

ಆಗಸ್ಟ್ 21, 2025 ರಂದು ದಿನಾಂಕ ಮಾಡಲಾಗಿದೆ.

ವಾಡಿಯಾ ಘಾಂಡಿ & ಕಂಪನಿ (ಬೆಂಗಳೂರು) ಪರವಾಗಿ
ಪಿನಾಜ್ ಮೆಹ್ತಾ
ಪಾಲುದಾರ

ಆಸಕ್ತಿಯನ್ನು ವ್ಯಕ್ತಪಡಿಸಲು ಆಹ್ವಾನ (ಇಒಐ) ಸಾಲದ ನಿಯೋಜನೆಗಾಗಿ

ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್ (ಆರ್ಸಿಲ್–ಎಸ್‌ಬಿಪಿಎಸ್-008-III ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದೆ) (ಇನ್ನು ಮುಂದೆ **"ಆರ್ಸಿಲ್"** ಎಂದು ಉಲ್ಲೇಖಿಸಲಾಗುತ್ತದೆ) ಸೆಪ್ಟೆಂಬರ್ 28, 2021 ರ ದಿನಾಂಕದ ನಿಯೋಜನೆ ಒಪ್ಪಂದದ ಮೂಲಕ ಸುರಕ್ಷಿತ ಸಾಲಗಾರರಾಗಿರುವುದರಿಂದ, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002 ("ಸರ್ಫೇಸಿ ಕಾಯ್ದೆ, 2002)ರ ನಿಬಂಧನೆಗಳ ಅಡಿಯಲ್ಲಿ, ಕೆಳಗೆ ತಿಳಿಸಲಾದ ಅನುತ್ಪಾದಕ ಆಸ್ತಿಯ ಮಾರಾಟಕ್ಕಾಗಿ ಅಸ್ತಿತ್ವದಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗ ಸೂಚಿಗಳ ಅಡಿಯಲ್ಲಿ ಎಲ್ಲಾ **ಅರ್ಹ ಆಸ್ತಿ ಪುನರ್ನಿರ್ಮಾಣ ಕಂಪನಿಗಳನ್ನು** ("ಪಾರ್ಟಿ"/ "ಬಿಡ್ಡರ್") ಆಹ್ವಾನಿಸುತ್ತದೆ.

ಪ್ರಕ್ರಿಯೆಯ ವಿವರವಾದ ನಿಯಮಗಳು ಮತ್ತು ಷರತ್ತುಗಳನ್ನು ಪ್ರಕ್ರಿಯೆ ದಾಖಲೆಯಲ್ಲಿ ಸೇರಿಹಿಡಿಯಲಾಗಿದೆ, ಇದನ್ನು EOI ಸ್ವೀಕರಿಸಿದ ನಂತರ ಅರ್ಹ ಬಿಡ್ಡರ್‌ಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ.

ಮಾರಾಟವು ಶೇ. 100 ನಗದು ಆಧಾರದ ಮೇಲೆ ಇರುತ್ತದೆ ಮತ್ತು ಹರಾಜು "ಸ್ವಿಸ್ ಚಾಲೆಂಜ್ ಪ್ರಕ್ರಿಯೆಯ ಮೂಲಕ" "ಎಲ್ಲಿ ಇದೆಯೋ ಹಾಗೆಯೇ", " ಇರುವಂತೆಯೇ " "ಇರುತ್ತದೆಯೇ" ಮತ್ತು "ಯಾವುದೇ ಸಹಾಯವಿಲ್ಲದೆ" ಆಧಾರದ ಮೇಲೆ, SARFAESI ಕಾಯ್ದೆ 2002. ಅಡಿಯಲ್ಲಿ, ಅಸ್ತಿತ್ವದಲ್ಲಿರುವ ಕೊಡುಗೆಯನ್ನು ಆಧರಿಸಿ ಹಣಕಾಸು ಆಸ್ತಿಯ ಸಂಕ್ಷಿಪ್ತ ವಿವರಗಳನ್ನು ಕೆಳಗೆ ನೀಡಲಾಗಿದೆ:

(ಕೋಟಿ ರೂ.ಗಳಲ್ಲಿ)

ಕ್ರ. ಸಂ.	ಸಾಲಗಾರನ ಹೆಸರು	ಆಂಕರ್ ಬಿಡ್*	ಇಎಂಡಿ
1.	ತರುಣ್ ರಿಯಲ್ಟರ್ಸ್ ಪ್ರೈವೇಟ್ ಲಿಮಿಟೆಡ್	71.98	7.2

*ಬಿಡ್ ಪ್ರಕ್ರಿಯೆ ದಾಖಲೆಯಲ್ಲಿ ವಿವರಗಳನ್ನು ನೀಡಲಾಗಿದೆ.
ಮೀಸಲು ಬೆಲೆ ಆಂಕರ್ ಬಿಡ್‌ನ ಶೇ. 10 ಮಾರ್ಕ್ -ಅಪ್‌ನಲ್ಲಿರುತ್ತದೆ
ಮೇಲೆ ತಿಳಿಸಿದ ಖಾತೆಯಲ್ಲಿ ಆರ್ಸಿಲ್‌ನ ಸಾಲದ ಭಾಗವನ್ನು ಪಡೆಯಲು ಸ್ವಿಸ್ ಚಾಲೆಂಜ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಯಸುವ ಅರ್ಹ ಬಿಡ್ಡರ್‌ಗಳು ಬಿಡ್ ಪ್ರಕ್ರಿಯೆ ದಾಖಲೆಗಳಲ್ಲಿ ಆರ್ಸಿಲ್ ನಿರ್ದಿಷ್ಟಪಡಿಸಿದ ರೂಪದಲ್ಲಿ ಮತ್ತು ರೀತಿಯಲ್ಲಿ ತಮ್ಮ ಬಿಡ್‌ಗಳನ್ನು ಆರ್ಸಿಲ್‌ಗೆ ಸಲ್ಲಿಸಬೇಕು. ಹರಾಜು ಪ್ರಕ್ರಿಯೆಗೆ ನಿರೀಕ್ಷಿತ ಸಮಯ ಮಿತಿಗಳನ್ನು ಕೆಳಗೆ ವಿವರಿಸಲಾಗಿದೆ:

ಕ್ರ. ಸಂ.	ಚಟುವಟಿಕೆ	ಸೂಚಿಸುವ ದಿನಾಂಕ
1.	ಜಾಹೀರಾತು ದಿನಾಂಕ / ಆಸಕ್ತಿಯ ಅಭಿವ್ಯಕ್ತಿ **("EOI")** ಪ್ರಾರಂಭ ದಿನಾಂಕ	ಆಗಸ್ಟ್ 21, 2025
2.	ಇತರ ದಾಖಲೆಗಳೊಂದಿಗೆ EOI ಸಲ್ಲಿಸುವ ಕೊನೆಯ ದಿನಾಂಕ	ಆಗಸ್ಟ್ 26, 2025 ರಂದು ಅಥವಾ ಅದಕ್ಕೂ ಮೊದಲು - ಸಂಜೆ 6 ಗಂಟೆಯ ಮೊದಲು
3.	ಅರ್ಹ ಬಿಡ್ಡರ್‌ಗಳು (ಆರ್ಸಿಲ್‌ನ ತೃಪ್ತಿಗಾಗಿ ಅಗತ್ಯವಿರುವ ಎಲ್ಲಾ ದಾಖಲೆಗಳೊಂದಿಗೆ EOI ಸಲ್ಲಿಸಿದ ಅರ್ಹ ಭಾಗ ವಹಿಸುವವರು) ಸೂಕ್ತ ಪರಿಶ್ರಮಕ್ಕಾಗಿ ಡೇಟಾ ಕೊಠಡಿಯನ್ನು ಪ್ರವೇಶಿಸಲು ಕೊನೆಯ ದಿನಾಂಕ.	ಸೆಪ್ಟೆಂಬರ್ 05, 2025 ಸಂಜೆ 6 ಗಂಟೆಯ ಮೊದಲು
4.	ಆರ್ಸಿಲ್ ಕಚೇರಿಯನ್ನು ತಲುಪಲು ಇಎಂಡಿ ಅಥವಾ ಭೌತಿಕ ಬಿಡ್‌ಗಳೊಂದಿಗೆ ಇಮೇಲ್ ಮೂಲಕ (ಪಾಸ್‌ವರ್ಡ್ ರಕ್ಷಿತ ಮಾತ್ರ) ಬೈಂಡಿಂಗ್ ಬಿಡ್‌ಗಳನ್ನು ಸಲ್ಲಿಸುವುದು.	ಸೆಪ್ಟೆಂಬರ್ 10, 2025 ಮಧ್ಯಾಹ್ನ 1 ಗಂಟೆಯ ಮೊದಲು
5.	ಬಿಡ್ ತೆರೆಯುವಿಕೆ	ಸೆಪ್ಟೆಂಬರ್ 10, 2025 ಮಧ್ಯಾಹ್ನ 3 ಗಂಟೆಯಿಂದ ಪೋಸ್ಟ್
6.	ಸ್ವಿಸ್ ಚಾಲೆಂಜ್ ದಿನಾಂಕ (ಇ-ಹರಾಜು ವೇದಿಕೆಯ ಮೂಲಕ. ಸಮಯವನ್ನು ಪ್ರತ್ಯೇಕವಾಗಿ ಹಂಚಿಕೊಳ್ಳಲಾಗುತ್ತದೆ)	ಸೆಪ್ಟೆಂಬರ್ 11, 2025
7.	ಆಂಕರ್‌ಬಿಡ್ಡರ್‌ರಿಂದ ಒಂದು ದಿನದೊಳಗೆ ಮೊದಲ ನಿರಾಕರಣೆಯ ಹಕ್ಕಿನ **("ROFR")** ಚಲಾವಣೆ.	ಸೆಪ್ಟೆಂಬರ್ 12, 2025
8.	ಯಶಸ್ವಿ ಬಿಡ್ದಾರರ ಘೋಷಣೆ	ಸೆಪ್ಟೆಂಬರ್ 12, 2025
9.	ನಿಯೋಜನೆ ಒಪ್ಪಂದದ ಕಾರ್ಯಗತಗೊಳಿಸುವಿಕೆ	ಯಶಸ್ವಿ ಬಿಡ್ದಾರರೊಂದಿಗಿನ ಚರ್ಚೆಗಳಲ್ಲಿ ಆರ್ಸಿಲ್ ನಡುವೆ ಪರಸ್ಪರ ಒಪ್ಪಿಗೆ ನೀಡಬಹುದು.

ಯಾವುದೇ ಪ್ರಶ್ನೆ ಅಥವಾ ಯಾವುದೇ ಸ್ಪಷ್ಟೀಕರಣದ ಸಂದರ್ಭದಲ್ಲಿ, ನೀವು ಈ ಕೆಳಗಿನ ಅಧಿಕೃತ ಪ್ರತಿನಿಧಿಗಳನ್ನು ಸಂಪರ್ಕಿಸಬಹುದು: ಪ್ರಫುಲ್ ಕಲಿಕಾ (praful.kalika@arcil.co.in);
ಅಂಗಿರಾ ಭಟ್ಟಾಚಾರ್ಜಿ (angira. bhattacharjee @arcil.co.in)
ದಯವಿಟ್ಟು ಗಮನಿಸಿ, ಅನುತ್ಪಾದಕ ಆಸ್ತಿಯ ಮಾರಾಟವು ಬಿಡ್ ಪ್ರಕ್ರಿಯೆಯ ದಾಖಲೆಯಲ್ಲಿ ಹೇಳಲಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಈ ಮಾರಾಟದ ನಿಯಮಗಳನ್ನು ಯಾವುದೇ ಸಮಯದಲ್ಲಿ ರದ್ದುಗೊಳಿಸುವ/ಮಾರ್ಪಡಿಸುವ ಹಕ್ಕನ್ನು ಆರ್ಸಿಲ್ ಕಾಯ್ದಿರಿಸಿದೆ.

ಸಹಿ/-
ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಪರವಾಗಿ
ಆರ್ಸಿಲ್‌ನ ಟ್ರಸ್ಟಿಯಾಗಿ-SBPS-008-III-ಟ್ರಸ್ಟ್

'ಪ್ರವರ ಪ್ರಶಸ್ತಿ'ಗೆ ರೇವತಿರಾಂ, ಅನಿರುದ್ಧ ಆಯ್ಕೆ

ಬೆಂಗಳೂರು: ಪ್ರವರ ಥಿಯೇಟರ್ ನೀಡುವ 2025ನೇ ಸಾಲಿನ 'ಪ್ರವರ ಪ್ರಶಸ್ತಿ'ಗೆ ರಂಗಕರ್ಮಿಗಳಾದ ಉಡುಪಿಯ ರೇವತಿರಾಂ ಕುಂದನಾಡು ಹಾಗೂ ಬೆಂಗಳೂರಿನ ಅನಿರುದ್ಧ ವೇದಾಂತಿ ಆಯ್ಕೆ ಆಗಿದ್ದಾರೆ.

ರಂಗ ಭೂಮಿಯಲ್ಲಿ ಕನಿಷ್ಠ ಹತ್ತು ವರ್ಷಗಳ ಕಾಲ ಸಕ್ರಿಯವಾಗಿ ತೊಡಗಿಸಿಕೊಂಡ ಕಲಾವಿದರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ₹5 ಸಾವಿರ ನಗದು ಹಾಗೂ ಪಾರಿತೋಷಕ ಒಳಗೊಂಡಿದೆ.

ಬೆಂಗಳೂರಿನ ಮಲ್ಲತ್ತಹಳ್ಳಿಯಲ್ಲಿರುವ ಕಲಾಗ್ರಾಮದಲ್ಲಿ ಆಗಸ್ಟ್ 23ರಂದು ಸಂಜೆ 6 ಗಂಟೆಗೆ ನಡೆಯುವ ಪ್ರವರ ಥಿಯೇಟರ್‌ನ 12ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಡ್ರಗ್ಸ್ ಪೂರೈಸಲು ಪೆಡ್ಲರ್‌ಗಳ 'ಡ್ರಾಪ್ ತಂತ್ರ'

ಮೈಸೂರಿನಲ್ಲಿ ಎಂಡಿಎಂಎ ತಯಾರಿಕಾ ಘಟಕ ಪತ್ತೆ, ರಾಜಧಾನಿಯಲ್ಲಿ ಕಾರ್ಯಾಚರಣೆ ತೀವ್ರ

• ಆದಿತ್ಯ ಕೆ.ಎ.

ಬೆಂಗಳೂರು: ಡ್ರಗ್ಸ್ ವಿರುದ್ಧದ ಕಾರ್ಯಾಚರಣೆಯನ್ನು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಪೊಲೀಸರು ತೀವ್ರಗೊಳಿಸಿದ್ದು, ಮಾದಕ ವಸ್ತುಗಳನ್ನು ಪೂರೈಸಲು ಪೆಡ್ಲರ್‌ಗಳು ಅನುಸರಿಸುತ್ತಿರುವ ಹೊಸ ತಂತ್ರಗಳಿಂದಾಗಿ ಆರೋಪಿಗಳ ಪತ್ತೆ, ಬಂಧನ ಸವಾಲಾಗಿದೆ.

ಡ್ರಗ್ಸ್ ಪೂರೈಸಲು ಪೆಡ್ಲರ್‌ಗಳು 'ಡ್ರಾಪ್ ತಂತ್ರ' ಸೇರಿ ಹಲವು ಹೊಸ ವಿಧಾನಗಳನ್ನು ಬಳಸಿಕೊಂಡು ಪೊಲೀಸರ ಕಣ್ತಪ್ಪಿಸುತ್ತಿದ್ದಾರೆ.

ಮೈಸೂರಿನಲ್ಲಿ ಕಳೆದ ತಿಂಗಳು ಮುಂಬೈ ಪೊಲೀಸರು ನಡೆಸಿದ್ದ ಕಾರ್ಯಾಚರಣೆಯಲ್ಲಿ ಡ್ರಗ್ಸ್ ತಯಾರಿಕಾ ಘಟಕವೇ ಪತ್ತೆಯಾಗಿತ್ತು. ಬಳಿಕ ಎಚ್ಚೆತ್ತಿರುವ ಪೊಲೀಸರು, ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ತೀವ್ರ ಮಾಡಿದ್ದಾರೆ. ಪೆಡ್ಲರ್‌ಗಳು ಅನುಸರಿಸುತ್ತಿರುವ ಹೊಸ ಮಾರ್ಗಗಳಿಂದಾಗಿ ಪೊಲೀಸರ ಕಾರ್ಯಾಚರಣೆಗೆ ನಿರೀಕ್ಷಿತ ಫಲ ದೊರೆಯುತ್ತಿಲ್ಲ.

ಮಾದಕ ವಸ್ತುಗಳನ್ನು ಸಾಗಿಸಲು ನೋಂದಣಿ ಸಂಖ್ಯೆಯಿಲ್ಲದ ಹಾಗೂ ನಕಲಿ ನಂಬರ್ ಪ್ಲೇಟ್ ಹೊಂದಿರುವ ದ್ವಿಚಕ್ರ ವಾಹನಗಳನ್ನು ಪೆಡ್ಲರ್‌ಗಳು ಬಳಕೆ ಮಾಡುತ್ತಿದ್ದಾರೆ. ಮಾರಾಟಗಾರರು ಸೂಚಿಸಿದ ಸ್ಥಳಕ್ಕೆ ಡ್ರಗ್ಸ್ ತುಂಬಿದ ಚೀಲಗಳನ್ನು ಎಸೆದು (ಡ್ರಾಪ್ ವಿಧಾನ) ಪರಾರಿ ಆಗುತ್ತಿದ್ದಾರೆ. ಸಿಸಿಟಿವಿ ಕ್ಯಾಮೆರಾಗಳು ಇಲ್ಲದ ಹಾಗೂ ಖಾಲಿ ಪ್ರದೇಶಗಳಲ್ಲೂ ಚೀಲಗಳನ್ನು ಹಾಕಿ ಹೋಗುತ್ತಿದ್ದಾರೆ. ಸ್ವಲ್ಪ ಸಮಯದ ನಂತರ ಮಾರಾಟಗಾರರು ಹಾಗೂ ಗ್ರಾಹಕರು ಆ ಸ್ಥಳಕ್ಕೆ ಬಂದು ಆ ಚೀಲವನ್ನು ಕೊಂಡೊಯ್ಯುತ್ತಾರೆ. ಇನ್ನು ಕೆಲವರು ಗುಜರಿಗಳನ್ನು ಸಂಗ್ರಹಿಸುವ ನೆಪದಲ್ಲಿ ಸೈಕಲ್‌ನಲ್ಲಿ ಮಾದಕ ವಸ್ತುಗಳನ್ನು ಪೂರೈಸುತ್ತಿರುವುದು ತನಿಖೆಯಿಂದ ಪತ್ತೆಯಾಗಿದೆ ಎಂದು ಪೊಲೀಸರು ಅಧಿಕಾರಿಯೊಬ್ಬರು ತಿಳಿಸಿದರು.

> ಆಗಸ್ಟ್ 18ರಂದು ಒಂದೇ ದಿನ 10ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಿ ₹5.50 ಕೋಟಿ ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ
> **ಸೀಮಂತ್ ಕುಮಾರ್ ಸಿಂಗ್,** ನಗರ ಪೊಲೀಸ್ ಕಮಿಷನರ್

ಸಿಂಥೆಟಿಕ್ ಡ್ರಗ್ಸ್

ಮೈಸೂರು ಹೊರವಲಯದಲ್ಲಿ ಮುಂಬೈ ಪೊಲೀಸರು ಕಾರ್ಯಾಚರಣೆ ನಡೆಸಿದಾಗ ಎಂಡಿಎಂಎ ಸೇರಿದಂತೆ ವಿವಿಧ ಮಾದರಿಯ ₹100 ಕೋಟಿ ಮೌಲ್ಯದ ಸಿಂಥೆಟಿಕ್ ಡ್ರಗ್ಸ್ ಅನ್ನು ಪೊಲೀಸರು ಜಪ್ತಿ ಮಾಡಿದ್ದರು. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಅಂತಹದ್ದೇ ಘಟಕವೇನಾದರೂ ಕಾರ್ಯಾಚರಿಸುತ್ತಿದೆಯೇ ಎಂಬುದನ್ನು ಪತ್ತೆಹಚ್ಚಲು ಶೋಧ ತೀವ್ರಗೊಳಿಸಲಾಗಿದೆ. ಅಂತಹ ಯಾವುದೇ ಕುರುಹು ಪತ್ತೆಯಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಹಾರ ಪೊಟ್ಟಣಗಳಲ್ಲಿ ಸಾಗಿಸುತ್ತಿದ್ದ ಡ್ರಗ್ಸ್

ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ, ಸಂಪಿಗೆಹಳ್ಳಿ, ಯಲಹಂಕ, ಹೊಸಕೋಟೆ, ನೆಲಮಂಗಲ, ಮಾದನಾಯಕನಹಳ್ಳಿ, ಬಾಗಲೂರು, ಸೋಲದೇವನಹಳ್ಳಿ, ಆರ್.ಟಿ. ನಗರ, ಕೆಂಗೇರಿ ಭಾಗದಲ್ಲಿ ಕಾರ್ಯಾಚರಣೆ ತೀವ್ರಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಶೈಕ್ಷಣಿಕ ಉದ್ದೇಶಕ್ಕೆ ವೀಸಾ ಪಡೆದು ನೈಜೀರಿಯಾ ದೇಶದಿಂದ ಹಲವು ಮಂದಿ ನಗರಕ್ಕೆ ಬರುತ್ತಾರೆ. ಅವರಲ್ಲಿ ಕೆಲವರು ವೀಸಾದ ಅವಧಿ ಮುಕ್ತಾಯವಾದ ಮೇಲೂ ಅಕ್ರಮವಾಗಿ ನಗರದಲ್ಲಿ ನೆಲಸಿ ಡ್ರಗ್ಸ್ ಮಾರಾಟ ದಂಧೆಯಲ್ಲಿ ತೊಡಗುತ್ತಿದ್ದಾರೆ. ಅಂತಹ ಆರೋಪಿಗಳನ್ನು ಪತ್ತೆಹಚ್ಚಿ ವಶಕ್ಕೆ ಪಡೆದುಕೊಳ್ಳಲಾಗುತ್ತಿದೆ. ಈ ರೀತಿಯ ಕೃತ್ಯದಲ್ಲಿ ಭಾಗಿಯಾಗುತ್ತಿದ್ದ ಆರೋಪದಡಿ ಒಂದು ತಿಂಗಳಲ್ಲಿ 10 ಮಂದಿ ವಿದೇಶಿಯರನ್ನು ಬಂಧಿಸಲಾಗಿದೆ. ನಗರದಲ್ಲಿ ವಿದೇಶಿ ಪ್ರಜೆಗಳು ವಾಸಿಸುವ ಪ್ರದೇಶಗಳ ಮೇಲೆ ನಿಗಾ ವಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡ್ರಗ್ಸ್ ಮಾರಾಟಗಾರರು, ಪೆಡ್ಲರ್‌ಗಳು (ಪೂರೈಕೆದಾರರು) ಹಾಗೂ ಖರೀದಿದಾರರ ವಿರುದ್ಧ ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ. ಒಂದು ತಿಂಗಳಲ್ಲಿ 100ಕ್ಕೂ ಅಧಿಕ ಆರೋಪಿಗಳನ್ನು ಬಂಧಿಸಿ, ಕಾರಾಗೃಹಕ್ಕೆ ಕಳುಹಿಸಲಾಗಿದೆ. ಕಳೆದ ಏಳು ತಿಂಗಳಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳಲ್ಲಿ 326 ಡ್ರಗ್ಸ್ ಪೆಡ್ಲರ್‌ಗಳು ಹಾಗೂ ಮಾರಾಟಗಾರರನ್ನು ಬಂಧಿಸಲಾಗಿತ್ತು. ಡ್ರಗ್ಸ್ ಸೇವನೆ ಮಾಡಿದ್ದ ಆರೋಪದಡಿ 155 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ತಗ್ಗಿದ ಗ್ರಾಹಕರ ಸಂಖ್ಯೆ

ಎನ್‌ಡಿಪಿಎಸ್ ಅಡಿ ದಾಖಲಾದ ಪ್ರಕರಣಗಳ ವಿವರ



ನಿಯಂತ್ರಣಕ್ಕೆ ಕ್ರಮಗಳು

- ಡ್ರಗ್ಸ್ ಪೆಡ್ಲರ್‌ಗಳ ಸ್ಥಿರಾಸ್ತಿ, ಚರಾಸ್ತಿ ಮುಟ್ಟುಗೋಲು
- ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ಬಂಧಿತರಾದ ವಿದೇಶಿಯರನ್ನು ವಿದೇಶಿ ಪ್ರಜೆಗಳ ಕಾಯ್ದೆ ಅಡಿ ಗಡಿಪಾರು
- ಮಾದಕ ವಸ್ತುಗಳ ನಾಶ, ವ್ಯಸನಿಗಳ ಪತ್ತೆ ಹಾಗೂ ನಿರ್ಮೂಲನೆಗೆ ನಗರ ಪೊಲೀಸ್ ಸಿಬ್ಬಂದಿಗೆ ಎನ್‌ಸಿಬಿಯಿಂದ ಆನ್‌ಲೈನ್ ತರಬೇತಿ

ರಾಜಧಾನಿಗೆ ಎಲ್ಲಿಂದ ಪೂರೈಕೆ?

ರಾಜಧಾನಿಗೆ ವಿವಿಧೆಡೆಯಿಂದ ಮಾದಕ ವಸ್ತುಗಳು ಪೂರೈಕೆ ಆಗುತ್ತಿವೆ. ನೈಸರ್ಗಿಕವಾಗಿ ಬೆಳೆಯುವ ಗಾಂಜಾವನ್ನು ಸ್ಥಳೀಯ ಪೆಡ್ಲರ್‌ಗಳೇ ಪೂರೈಸುತ್ತಿದ್ದಾರೆ. ಆಂಧ್ರಪ್ರದೇಶ, ತೆಲಂಗಾಣ ಹಾಗೂ ಒಡಿಶಾದಿಂದ 'ಸಿಂಥೆಟಿಕ್' ಡ್ರಗ್ಸ್ ಅನ್ನು ಬಸ್ ಹಾಗೂ ರೈಲುಗಳ ಮೂಲಕ ನಗರಕ್ಕೆ ಪೂರೈಸಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

'ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ಮಾದಕ ವಸ್ತುಗಳ ನಿಯಂತ್ರಣಕ್ಕಾಗಿ ಗಡಿ ಜಿಲ್ಲೆಗಳಾದ ಬೀದರ್, ರಾಯಚೂರು, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಯ ಪೊಲೀಸರಿಗೆ ವಿಶೇಷ ಸೂಚನೆ ನೀಡಲಾಗಿದೆ. ಒಡಿಶಾದ ಪೆಡ್ಲರ್‌ಗಳು ಆಂಧ್ರಪ್ರದೇಶದ ಮೂಲಕ ಬೆಂಗಳೂರಿಗೆ ಕಳ್ಳ ಸಾಗಣೆ ಮೂಲಕ ಡ್ರಗ್ಸ್ ಪೂರೈಸುತ್ತಿದ್ದಾರೆ ಎಂಬುದು ತನಿಖೆಯಿಂದ ಪತ್ತೆಯಾಗಿದೆ. ಒಡಿಶಾ ಹಾಗೂ ಆಂಧ್ರಪ್ರದೇಶದ ಪೊಲೀಸರಿಗೂ ಮಾಹಿತಿ ನೀಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ನಿರ್ದೇಶಕ ಪ್ರೇಮ್‌ಗೆ ವಂಚನೆ

ಪ್ರಜಾವಾಣಿ ವಾರ್ತೆ

ಪ್ರೇಮ್

ಬೆಂಗಳೂರು: ಚಿತ್ರ ನಿರ್ದೇಶಕ ಪ್ರೇಮ್ ಅವರಿಂದ ₹4.50 ಲಕ್ಷ ಪಡೆದು ವಂಚಿಸಲಾಗಿದ್ದು, ಚಂದ್ರಾಲೇಔಟ್ ಪೊಲೀಸ್ ಠಾಣೆಯಲ್ಲಿ ಗುಜರಾತ್‌ನ ವ್ಯಕ್ತಿಯ ವಿರುದ್ಧ ಈ ಸಂಬಂಧ ಪ್ರಕರಣ ದಾಖಲಾಗಿದೆ.

ಪ್ರೇಮ್ ಅವರ ವ್ಯವಸ್ಥಾಪಕ ದಶಾವರ ಚಂದ್ರು ಅವರು ನೀಡಿದ ದೂರು ಆಧರಿಸಿ ಗುಜರಾತ್‌ನ ವಘೇಲಾ ವನರಾಜ್ ಭಾಯ್ ಎಂಬಾತನ ವಿರುದ್ಧ ವಂಚನೆ ಪ್ರಕರಣ ದಾಖಲಿಸಲಾಗಿದೆ.

ಪ್ರೇಮ್ ಅವರು ಹೈನುಗಾರಿಕೆ ನಡೆಸಲು ಗುಜರಾತ್ ರಾಜ್ಯದಲ್ಲಿ ಎಮ್ಮೆಗಳನ್ನು ಖರೀದಿಸಲು ನಿರ್ಧರಿಸಿದ್ದರು. ಈ ನಡುವೆ ವಘೇಲಾ ವನರಾಜ್ ಭಾಯ್ ಎಂಬಾತನ ಪರಿಚಯವಾಗಿತ್ತು. ಎಮ್ಮೆಗಳ ಖರೀದಿ ಸಂಬಂಧ ವನರಾಜ್ ಜತೆ ಮಾತುಕತೆ ನಡೆಸಿದ್ದ ಪ್ರೇಮ್ ಅವರು, ಆತನಿಗೆ ಮುಂಗಡವಾಗಿ ಜುಲೈನಲ್ಲಿ ₹25 ಸಾವಿರ ಪಾವತಿಸಿದ್ದರು. ಬಳಿಕ ಆತನ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ ₹ 4.50 ಲಕ್ಷ ವರ್ಗಾಯಿಸಿದ್ದರು ಎಂದು ದಶಾವರ ಚಂದ್ರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹಣ ಪಾವತಿಯ ಬಳಿಕ ವಾಟ್ಸ್ ಆ್ಯಪ್‌ನಲ್ಲಿ ಎರಡು ಎಮ್ಮೆಗಳ ವಿಡಿಯೊವನ್ನು ಪ್ರೇಮ್ ಅವರಿಗೆ ಆರೋಪಿ ಕಳುಹಿಸಿದ್ದ. ಆ ಎಮ್ಮೆಗಳನ್ನು ಕಳುಹಿಸುತ್ತಿರುವುದಾಗಿಯೂ ಆರೋಪಿ ತಿಳಿಸಿದ್ದ. ಆದರೆ, ವಾರ ಕಳೆದರೂ ಎಮ್ಮೆಗಳು ಬಂದಿರಲಿಲ್ಲ. ಅನುಮಾನಗೊಂಡು ದಶಾವರ ಚಂದ್ರು ಅವರು ಆರೋಪಿಗೆ ಕರೆ ಮಾಡಿದ್ದರು. ಆತ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಮಾತುಕತೆ ವೇಳೆ ವನರಾಜ್ ಭಾಯ್ ನೀಡಿದ್ದ ಗುಜರಾತ್‌ನ ವಿಳಾಸಕ್ಕೆ ಪರಿಚಿತರನ್ನು ಕಳುಹಿಸಿ ವಿಚಾರಿಸಿದಾಗ ಆತ ಆ ವಿಳಾಸದಲ್ಲೇ ಇಲ್ಲ ಎಂಬುದು ಗೊತ್ತಾಗಿದೆ. ಹಣವನ್ನು ಹಿಂದಿರುಗಿಸದೆ ಮೋಸ ಮಾಡಿರುವ ವನರಾಜ್ ಭಾಯ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ ಎಂದು ದಶಾವರ ಚಂದ್ರು ಮೂಲಕ ಪ್ರೇಮ್ ದೂರು ನೀಡಿದ್ದಾರೆ.

ರೌಡಿ 'ಹೂವು' ಮಂಜ ಬಂಧನ

ಬೆಂಗಳೂರು: ಈಶಾನ್ಯ ವಿಭಾಗದ ಯಲಹಂಕ ಉಪನಗರ ವ್ಯಾಪ್ತಿಯಲ್ಲಿ ಸಹಚರರೊಂದಿಗೆ ಕಾನೂನು ಬಾಹಿರ ಕೃತ್ಯಗಳನ್ನು ಎಸಗಿದ್ದ ರೌಡಿ ಮಂಜುನಾಥ್ ಅಲಿಯಾಸ್ 'ಹೂವು' ಮಂಜನನ್ನು ಪೊಲೀಸರು ಬಂಧಿಸಿದ್ದಾರೆ.

2013ರಿಂದಲೂ ಕೊಲೆ, ಕೊಲೆ ಪ್ರಯತ್ನ, ಹಲ್ಲೆ, ದೊಂಬಿ, ಕಳವು, ಬೆದರಿಕೆಯಂತಹ ಕೃತ್ಯಗಳಲ್ಲಿ ಮಂಜುನಾಥ್ ಭಾಗಿಯಾಗುತ್ತಿದ್ದ. ಈತನ ವಿರುದ್ಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ರೌಡಿ, ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ. ಜಾಮೀನಿನ ಷರತ್ತು ಉಲ್ಲಂಘಿಸಿ ಓಡಾಟ ನಡೆಸುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೌಡಿಯ ಕೃತ್ಯದಿಂದ ಸಾರ್ವಜನಿಕರು ಭೀತಿಗೆ ಒಳಗಾಗಿದ್ದರು. ಶಾಂತಿ ಸುವ್ಯವಸ್ಥೆ ಕಾಪಾಡಲು ಮಂಜುನಾಥ್‌ನನ್ನು ಗೂಂಡಾ ಕಾಯ್ದೆ ಅಡಿ ಬಂಧಿಸಲು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದರು. ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಸ್‌ನ ಚಕ್ರ ಹರಿದು ವೃದ್ಧ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ ಬಿಎಂಟಿಸಿ ಬಸ್ ಟರ್ಮಿನಲ್‌ನಲ್ಲಿ ಬುಧವಾರ ಬೆಳಿಗ್ಗೆ ಎಲೆಕ್ಟ್ರಿಕ್ ಬಸ್‌ನ ಚಕ್ರಕ್ಕೆ ಸಿಲುಕಿ ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

ಜಯನಗರ 9ನೇ ಬ್ಲಾಕ್ ನಿವಾಸಿ ಸಂಪಂಗಿ(64) ಮೃತಪಟ್ಟವರು.

ಕೆ.ಆರ್.ಮಾರುಕಟ್ಟೆಯಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದ ಸಂಪಂಗಿ ಅವರು ಬೆಳಿಗ್ಗೆ 9ರ ಸುಮಾರಿಗೆ ಮಾರುಕಟ್ಟೆಗೆ ಹೋಗಲು ಜಯನಗರದ ಬಿಎಂಟಿಸಿ ಬಸ್ ಟರ್ಮಿನಲ್‌ನಲ್ಲಿ ಓಡಿ ಬಂದು ಎಲೆಕ್ಟ್ರಿಕ್ ಬಸ್ ಹತ್ತಲು ಯತ್ನಿಸಿದರು. ಅದನ್ನು ಗಮನಿಸದ ಚಾಲಕ ಏಕಾಏಕಿ ಬಸ್‌ನ ಬಾಗಿಲು ಮುಚ್ಚಿದ್ದರು. ಕೆಳಗೆ ಬಿದ್ದ ಸಂಪಂಗಿ ಅವರ ಮೇಲೆ ಬಸ್‌ನ ಹಿಂಭಾಗದ ಚಕ್ರ ಹರಿದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಜಯನಗರದ ಡಿಪೊ–4ರ ಚಾಲಕ ಮಧ್ವರಾಜ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಸಂಚಾರ ಪೊಲೀಸರು, ತನಿಖೆ ಕೈಗೊಂಡಿದ್ದಾರೆ. ಜಯನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಿಂಗಳಲ್ಲಿ ಏಳು ಮಂದಿ ಸಾವು: ನಗರದ ವಿವಿಧೆಡೆ ಜುಲೈ 18ರಿಂದ ಆಗಸ್ಟ್ 20ರವರೆಗೆ ಬಿಎಂಟಿಸಿ ಬಸ್‌ಗಳಿಂದ ಸಂಭವಿಸಿದ ಅಪಘಾತಗಳಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಡೀಸೆಲ್ ಬಸ್‌ಗಳಿಗಿಂತ ವಿದ್ಯುತ್ ಚಾಲಿತ ಎಲೆಕ್ಟ್ರಿಕ್ ಬಸ್‌ಗಳಿಂದಲೇ ಹೆಚ್ಚಿನ ಅಪಘಾತಗಳು ಸಂಭವಿಸಿವೆ ಎಂದು ಸಂಚಾರ ಪೊಲೀಸರು ಹೇಳಿದರು.

ವಿದ್ಯುತ್ ಆಘಾತ: ಇಬ್ಬರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಷೋರೂಂ ಎದುರು ಟೆಂಟ್ ತೆಗೆಯುವ ಸಂದರ್ಭದಲ್ಲಿ ಕಬ್ಬಿಣದ ಕಂಬಗಳಿಗೆ ಹೈಟೆನ್ಶನ್ ವಿದ್ಯುತ್ ತಂತಿ ತಗುಲಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

ಅಸನ್ ಅಲಿ (40) ಹಾಗೂ ಅಬ್ದುಲ್ ಖಯಂ (42) ಮೃತ ಕಾರ್ಮಿಕರು.

ಮೊಮ್‌ರೋಜ್ ಅಲಿ ಹಾಗೂ ಮೊಹಿದುಲ್ ಇಸ್ಲಾಂ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿಯ ಬಿಎಂಎಸ್ ಟೆಂಟ್ ಹೌಸ್‌ನಲ್ಲಿ ನಾಲ್ವರು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಸಿಂಗಸಂದ್ರದ ಸರ್ವೀಸ್ ರಸ್ತೆಯಲ್ಲಿರುವ ದಕ್ಷಿಣ ಹೋಂಡಾ ಷೋರೂಂ ಎದುರು ಹಾಕಲಾಗಿದ್ದ ಟೆಂಟ್ ಅನ್ನು ತೆಗೆಯುವ ಕೆಲಸಕ್ಕೆಂದು ಕಾರ್ಮಿಕರು ಆಗಸ್ಟ್ 18ರಂದು ತೆರಳಿದ್ದರು. ಟೆಂಟ್ ತೆಗೆಯುವ ಸಂದರ್ಭದಲ್ಲಿ ಕಬ್ಬಿಣದ ಕಂಬಕ್ಕೆ ತಂತಿ ತಗುಲಿ ನಾಲ್ವರು ಕಾರ್ಮಿಕರು ಅಸ್ವಸ್ಥಗೊಂಡಿದ್ದರು. ನಾಲ್ವರನ್ನು ಅಭಿರಾಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ಪೈಕಿ ಇಬ್ಬರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಗಾಯಾಳು ಮೊಮ್ ರೋಜ್ ಅಲಿ ಅವರ ಹೇಳಿಕೆ ಆಧರಿಸಿ ನಿರ್ಲಕ್ಷ್ಯ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ದಕ್ಷಿಣ ಹೋಂಡಾ ಷೋರೂಂನ ವ್ಯವಸ್ಥಾಪಕ ಸ್ವತಂತ್ರ ಗುಪ್ತ ಮತ್ತು ಬಿಎಂಎಸ್ ಟೆಂಟ್ ಹೌಸ್‌ನ ಮಾಲೀಕ ಇದಾಯತ್ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

'ಟೆಂಟ್ ಹೌಸ್ ಹಾಗೂ ಷೋರೂಂ ಮಾಲೀಕರು ಕಾರ್ಮಿಕರಿಗೆ ಯಾವುದೇ ಸುರಕ್ಷತಾ ಸಲಕರಣೆ ನೀಡಿರಲಿಲ್ಲ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಟ್ಯಾಕ್ಸಿ: ನೀತಿ ರೂಪಿಸಲು ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೈಕ್ ಟ್ಯಾಕ್ಸಿ ಸೇವೆಯನ್ನು ಮುಂದುವರೆಸುವುದಕ್ಕೆ ಸಂಬಂಧಿಸಿದಂತೆ ನಿಯಮ ರೂಪಿಸುವ ಬಗ್ಗೆ ಮುಂದಿನ ಒಂದು ತಿಂಗಳಲ್ಲಿ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಗಡುವು ನೀಡಿದೆ.

ಈ ಸಂಬಂಧ 'ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)' ಕಂಪನಿ ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರ ವಾದ ಆಲಿಸಿದ ನ್ಯಾಯಪೀಠ, 'ಬೈಕ್ ಟ್ಯಾಕ್ಸಿ ಸೇವೆಗೆ ಶಾಸನಬದ್ಧ ಅನುಮತಿ ಇರುವಾಗ ಸದ್ಯ ಹೇರಲಾಗಿರುವ ನಿಷೇಧವನ್ನು ಅನಿರ್ದಿಷ್ಟ ಅವಧಿಗೆ ಮುಂದುವರಿಸಲೂ ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

'ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ನೀತಿ ನಿಯಮಾವಳಿ ರೂಪಿಸಬೇಕು. ಇದಕ್ಕಾಗಿ ನಿಮಗೆ ಸಮಯ ನೀಡಲಾಗುತ್ತಿದೆ. ಅಷ್ಟರೊಳಗೆ ಈ ಬಗ್ಗೆ ನಿಮ್ಮ ನಿಲುವು ಏನೆಂಬುದನ್ನು ತಿಳಿಸಿ' ಎಂಬ ನ್ಯಾಯಪೀಠದ ಸೂಚನೆಗೆ ಶಶಿಕಿರಣ್ ಶೆಟ್ಟಿ, 'ನಾಲ್ಕು ವಾರಗಳಲ್ಲಿ ಸರ್ಕಾರ ತನ್ನ ನಿಲುವು ತಿಳಿಸಲಿದೆ' ಎಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಸೆಪ್ಟೆಂಬರ್ 22ರೊಳಗೆ ಸರ್ಕಾರದ ತನ್ನ ನಿಲುವು ತಿಳಿಸಬೇಕು ಎಂದು ಸೂಚಿಸಿ ವಿಚಾರಣೆ ಮುಂದೂಡಿತು.

ಕರ್ನಾಟಕ ಜನಮುಖಿ ಚಿಂತಕರು ಮತ್ತು ಸಾಂಸ್ಕೃತಿಕ ದನಿಗಳ ವೇದಿಕೆ ಆಯೋಜಿಸಿದ್ದ ಸಭೆ

'ಸಮಗ್ರ ಭೂಸ್ವಾಧೀನ ಕಾಯ್ದೆ ರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಸಮಗ್ರವಾದ ಭೂಸ್ವಾಧೀನ ನೀತಿಯನ್ನು ಕಾಲಮಿತಿಯೊಳಗೆ ಜಾರಿಗೊಳಿಸಬೇಕು. ಅಲ್ಲಿಯವರೆಗೂ ಹೊಸದಾಗಿ ಭೂಸ್ವಾಧೀನಕ್ಕೆ ಅವಕಾಶ ನೀಡಬಾರದು' ಎಂದು ಬುಧವಾರ ಇಲ್ಲಿ ಆಗ್ರಹಿಸಲಾಯಿತು.

ಕರ್ನಾಟಕ ಜನಮುಖಿ ಚಿಂತಕರು ಮತ್ತು ಸಾಂಸ್ಕೃತಿಕ ದನಿಗಳ ವೇದಿಕೆ ನಗರದಲ್ಲಿ ಹಮ್ಮಿಕೊಂಡಿದ್ದ 'ಕರ್ನಾಟಕದ ಸಮತೋಲನ ಅಭಿವೃದ್ಧಿಗೆ ಸಮಗ್ರ ಭೂಸ್ವಾಧೀನ ನೀತಿ ನಿಲುವುಗಳು' ಕುರಿತ ಚಿಂತನಾ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆದ ಬಳಿಕ, ಮೂರು ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು.

ದೇವನಹಳ್ಳಿ, ಆನೇಕಲ್, ನೆಲಮಂಗಲ, ಬಿಡದಿ, ಬಳ್ಳಾರಿ, ಕಲಬುರಗಿ, ಮೈಸೂರು ಸೇರಿದಂತೆ ಹಲವು ಕಡೆ ನಡೆದಿರುವ ಕೃಷಿ ಜಮೀನುಗಳ ಸ್ವಾಧೀನ, ನಂತರದ ಬೆಳವಣಿಗೆಗಳ ಕುರಿತು ಹಲವರು ಪ್ರಸ್ತಾಪಿಸಿ, 'ಭೂಮಿ ಕಳೆದುಕೊಂಡವರ ಬದುಕು ನರಕವಾಗುತ್ತಿದೆ. ಇದನ್ನು ತಡೆಯಲು ಸರ್ಕಾರ ಕೃಷಿ, ಕೈಗಾರಿಕೆ ಹಾಗೂ ಭೂಸ್ವಾಧೀನ ನೀತಿಗಳನ್ನು ಪೂರಕವಾಗಿ ರೂಪಿಸಬೇಕು' ಎಂದು ಸಲಹೆ ನೀಡಿದರು.

ನೀತಿ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸದ್ಯದಲ್ಲೇ ಭೇಟಿ ಮಾಡಿ ಭೂಸ್ವಾಧೀನ ನೀತಿಯ ರೂಪುರೇಷೆಗಳ ಕುರಿತು ಚರ್ಚಿಸಿ, ಹೊಸ ನೀತಿ ಜಾರಿಗೆ ಒತ್ತಡ ಹಾಕುವ ನಿರ್ಧಾರವನ್ನು ವೇದಿಕೆ ಸಂಚಾಲಕರಾದ ಪ್ರಕಾಶ್ ಕಮ್ಮರಡಿ ಪ್ರಕಟಿಸಿದರು.

'ಕೃಷಿ, ಕೈಗಾರಿಕೆ ಮತ್ತು ನಗರೀಕರಣಕ್ಕೂ ಮಹತ್ವ ಕೊಡಬೇಕಿದೆ. ಆದರೆ, ಭೂ-ಸ್ವಾಧೀನ ಪ್ರಕ್ರಿಯೆ ಆರಂಭಿಸುವ ಮೊದಲು ಸರ್ಕಾರ ರೈತರೊಡನೆ ಸಮಾಲೋಚಿಸಿ ಅವರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಬೇಕು' ಎಂದು ಅತೀಕ್ ಸಲಹೆ ನೀಡಿದರು.

'ಕೃಷಿಯಿಂದ ಜೀವನ ಕಟ್ಟಿಕೊಳ್ಳುವುದು ಕಷ್ಟಕರವಾಗುತ್ತಿದೆ ಎಂದು ಸ್ವತಃ ರೈತರೇ ತಮ್ಮ ಜಮೀನುಗಳನ್ನು ರಿಯಲ್ ಎಸ್ಟೇಟ್‌ನವರ ಕೈಗೆ ನೀಡುತ್ತಿದ್ದಾರೆ. ಇದು ನಿಲ್ಲಬೇಕು' ಎಂದು ಕ್ಯಾಪ್ಟನ್ ಜಿ.ಆರ್.ಗೋಪಿನಾಥ್ ಹೇಳಿದರು.

'ಬಿಡದಿ ಭಾಗದಲ್ಲಿ ಮತ್ತೆ 9,500 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳುವ ಚಟುವಟಿಕೆಗಳನ್ನು ಸರ್ಕಾರ ಆರಂಭಿಸುತ್ತಿದೆ. ಕೆಐಎಡಿಬಿ ಬಳಿಕ ಈಗ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ಇದಕ್ಕಾಗಿ ಬಳಸಿಕೊಳ್ಳುವ ಆತಂಕವಿದೆ' ಎಂದು ಬಿಡದಿ ಭಾಗದ ರೈತರು ಆತಂಕ ವ್ಯಕ್ತಪಡಿಸಿದರು.

ಮಾದರಿ ನೀತಿ ರೂಪಿಸಲು ಸಕಾಲ: ಬಿ.ಆರ್.ಪಾಟೀಲ

ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಸ್ಪಷ್ಟ ನೀತಿ ಇಲ್ಲ, ಗುರಿಯೂ ಇಲ್ಲ. ಮಾದರಿ ನೀತಿ ರೂಪಿಸಲು ಸರ್ಕಾರದ ಮೇಲೆ ಒತ್ತಡ ಹೇರಬೇಕು ಎಂದು ರಾಜ್ಯದ ನೀತಿ ಹಾಗೂ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಹೇಳಿದರು.

ಸಭೆಯಲ್ಲಿ ಮಾತನಾಡಿದ ಅವರು, 'ಕರ್ನಾಟಕದಲ್ಲಿ ನೀತಿ ಆಯೋಗ ಇದ್ದರೂ ಅದಕ್ಕೆ ಅಧಿಕಾರಗಳೇ ಇಲ್ಲ. ಜಿಲ್ಲಾ ಮಟ್ಟದಲ್ಲಿ ಯೋಜನಾ ಸಮಿತಿ ರಚಿಸಬೇಕು ಎಂದು ಇದೆ. ಆದರೆ, ಆ ಕೆಲಸ ಆಗಿಲ್ಲ. ಸರ್ಕಾರವೆಂದರೆ ಹುಚ್ಚರ ಸಂತೆ ಎನ್ನುವಂತೆ ಆಗಿದೆ ಎಂದು ಆಕ್ರೋಶ ಹೊರ ಹಾಕಿದರು.

ಹಕ್ಕೊತ್ತಾಯಗಳೇನು

- ರೈತರೊಂದಿಗೆ ಚರ್ಚಿಸಿ ಭೂ ಸ್ವಾಧೀನ ನೀತಿಯನ್ನು ಕಾಲಮಿತಿ ಒಳಗೆ ರೂಪಿಸಬೇಕು
- ಕೆಐಎಡಿಬಿ ಸೇರಿದಂತೆ ಇತರೆ ಸಂಸ್ಥೆಗಳ ಮೂಲಕ ಇದುವರೆಗೆ ಕೈಗೊಂಡಿರುವ ಭೂಸ್ವಾಧೀನದ ಸಂಪೂರ್ಣ ವಿವರ, ಯಾವ ಉದ್ದೇಶಕ್ಕೆ ಬಳಕೆ, ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ಎನ್ನುವ ಕುರಿತು ಶ್ವೇತ ಪತ್ರ ಹೊರಡಿಸಬೇಕು
- ಆಡಳಿತಾರೂಢ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೊಟ್ಟ ಮಾತಿನಂತೆ ಹಿಂದಿನ ಸರ್ಕಾರ ಭೂಸುಧಾರಣೆ ಕಾಯ್ದೆಗೆ ತಂದಿರುವ ಬದಲಾವಣೆಗಳನ್ನು ತಕ್ಷಣವೇ ಹಿಂಪಡೆಯಬೇಕು

> ಕೃಷಿ ಯೋಗ್ಯ ಜಮೀನು ಸ್ವಾಧೀನ ಮಾಡುತ್ತಾ ಹೋದರೆ ಆಹಾರಕ್ಕೆ ತುಕ್ಕು ಬರಬಹುದು. 2013ರಲ್ಲಿ ಯುಪಿಎ ಸರ್ಕಾರ ಜಾರಿಗೊಳಿಸಿದ ಮಾಲೀಕರ ಅನುಮತಿ ಪಡೆದು ಸ್ವಾಧೀನ ಮಾಡಿಕೊಳ್ಳುವ ಕಾನೂನನ್ನು ಜಾರಿಗೆ ತರಬೇಕು
> **ಕೆ.ನಾರಾಯಣ ಗೌಡ,** ವಿಶ್ರಾಂತ ಕುಲಪತಿ

> ಭೂಸ್ವಾಧೀನಕ್ಕಾಗಿ ಒಪ್ಪಂದ ಮಾಡಿಕೊಂಡರೂ ಅದು ನಿಗದಿತ ಉದ್ದೇಶ ಈಡೇರಿಸುವುದಿಲ್ಲ. ನೆರೆಯ ಆಂಧ್ರಪ್ರದೇಶದಂತೆ ನಮ್ಮಲ್ಲೂ ಬಂಜರು ಭೂಮಿಯನ್ನು ಕೈಗಾರಿಕೆಗಳಿಗೆ ನೀಡುವುದು ಹೆಚ್ಚಬೇಕು
> **ಎಸ್.ಜಿ.ಸಿದ್ದರಾಮಯ್ಯ,** ಸಾಹಿತಿ

> ಕೃಷಿ, ಕೈಗಾರಿಕೆ ಹಾಗೂ ಭೂಸ್ವಾಧೀನ ನೀತಿಗಳನ್ನು ಒಂದಕ್ಕೊಂದು ಪೂರಕ ಎನ್ನುವಂತೆ ರೂಪಿಸಿದರೆ ಮಾತ್ರ ಉಳಿಗಾಲವಿದೆ. ಸರ್ಕಾರವೇ ತಪ್ಪು ಹೆಜ್ಜೆ ಇಟ್ಟಾಗ ಪ್ರಶ್ನಿಸಿ ಸರಿಯಾದ ನೀತಿ ರೂಪಿಸುವಂತೆ ಒತ್ತಾಯಿಸಬೇಕು
> **ಬಡಗಲಪುರ ನಾಗೇಂದ್ರ,** ರೈತಸಂಘದ ನಾಯಕ

ಸಿ.ಎಂ ಕಟೌಟ್‌ಗೆ ಹಾಲಿನ ಅಭಿಷೇಕ

ಒಳಮೀಸಲಾತಿ ಜಾರಿ: ಕೃತಜ್ಞತೆ ಸಲ್ಲಿಸಿದ ಮಾದಿಗ ಸಮುದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗೊಳಿಸಿದ್ದಕ್ಕಾಗಿ ಕಾವೇರಿ ನಿವಾಸದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೃಹತ್ ಭಾವಚಿತ್ರಕ್ಕೆ ಮಾಜಿ ಸಚಿವ ಎಚ್. ಆಂಜನೇಯ ನೇತೃತ್ವದಲ್ಲಿ ಹೂವಿನ ಸುರಿಮಳೆ, ಹಾಲಿನ ಅಭಿಷೇಕ ಮಾಡಲಾಯಿತು.

ಬಳಿಕ ಕಾವೇರಿ ನಿವಾಸದ ಒಳಗೆ ಮುಖ್ಯಮಂತ್ರಿಯವರಿಗೆ ಬೃಹತ್ ಹಾರ ಹಾಕಿ ಅಭಿನಂದಿಸಲಾಯಿತು.

ಪರಿಶಿಷ್ಟ ಜಾತಿಯೊಳಗಿನ ಬಲಾಢ್ಯ ಸಮುದಾಯಗಳ ನಡುವೆ ಸರ್ಕಾರಿ ಸೌಲಭ್ಯ, ಉನ್ನತ ಶಿಕ್ಷಣ, ಉದ್ಯೋಗ ಪಡೆಯುವುದು ಮಾದಿಗ ಹಾಗೂ ಸಂಬಂಧಿತ ಸಮುದಾಯಗಳಿಗೆ ಸವಾಲಾಗಿತ್ತು. ಪೌರಕಾರ್ಮಿಕ, ಸಫಾಯಿ ಕರ್ಮಚಾರಿ ನೌಕರಿ ಪಡೆಯಲಷ್ಟೇ ಸೀಮಿತರಾಗಿದ್ದರು. ಸಿದ್ದರಾಮಯ್ಯ ಕಾಳಜಿ ವಹಿಸಿ ಗಟ್ಟಿ ನಿರ್ಧಾರ ಕೈಗೊಂಡಿದ್ದರಿಂದ ಮಾದಿಗರು ಸಂಭ್ರಮಿಸುವಂತಾಗಿದೆ ಎಂದು ಎಚ್.ಆಂಜನೇಯ ತಿಳಿಸಿದರು.

'ನ್ಯಾ.ನಾಗಮೋಹನ ದಾಸ್ ಆಯೋಗ ವರದಿ ಸಲ್ಲಿಸಿದ ಬಳಿಕ ಒಳಮೀಸಲಾತಿ ಜಾರಿ ಆಗದಂತೆ ಅನೇಕ ಶಕ್ತಿಗಳು ಅಡ್ಡಗಾಲು ಹಾಕಿದವು. ಆದರೂ, ಭರವಸೆ ನೀಡಿದಂತೆ ಮಾದಿಗ ಸಮುದಾಯಕ್ಕೆ ಶೇ 6ರಷ್ಟು ಮೀಸಲಾತಿ ಒದಗಿಸಿದ್ದೀರಿ' ಎಂದು ಶ್ಲಾಘಿಸಿದರು.

ಅಲೆಮಾರಿ ಸಮುದಾಯಗಳನ್ನು ಪ್ರತ್ಯೇಕ ಗುಂಪುಗಳನ್ನಾಗಿಸಿ ಶೇ 1ರಷ್ಟು ಮೀಸಲಾತಿಯನ್ನು ಆಯೋಗ ಕಲ್ಪಿಸಿತ್ತು. ಆಂಧ್ರಪ್ರದೇಶ, ತೆಲಂಗಾಣದಲ್ಲಿ ಇದೇ ನೀತಿ ಅನುಸರಿಸಲಾಗಿತ್ತು. ಇದನ್ನು ಕೈಬಿಟ್ಟು ಬೇರೆ ವರ್ಗದಲ್ಲಿ ಸೇರಿಸಿರುವುದು ಸಾಮಾಜಿಕ ನ್ಯಾಯದ ವಿರುದ್ಧವಾಗಿದೆ. ಈ ಸಂಬಂಧ ಅಲೆಮಾರಿ ಸಮುದಾಯದ ಮುಖಂಡರೊಂದಿಗೆ ಚರ್ಚಿಸಿ ಅವರಿಗೆ ಪ್ರತ್ಯೇಕ ಮೀಸಲಾತಿ ನೀಡಲು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಕೀಲ ರವೀಂದ್ರ, ಮುಖಂಡರಾದ ಕೊಪ್ಪಳದ ಗುಳೇಪ್ಪ, ಕಲಬುರಗಿಯ ಶ್ಯಾಮ್ ನಾಟಿಕೇರ್, ಬೀದರ್‌ನ ಚಂದ್ರಕಾಂತ್ ಇಪ್ಪಾಳ್ಗ, ಹೊಸಕೋಟೆ ಸುಬ್ಬಣ್ಣ, ಮಹದೇವಪುರದ ಚಿಮ್ಮಿ, ಹಾಸನದ ಶಂಕರ್‌ರಾಜ್, ಚಿತ್ರದುರ್ಗ ಶರಣಪ್ಪ, ನರಸಿಂಹರಾಜ್, ಮಾಗಡಿ ಮಂಜೇಶ್, ಬೆಂಗಳೂರಿನ ಮುತ್ತುರಾಜ್, ರಾಯಚೂರಿನ ಶರಣು ಭಾಗವಹಿಸಿದ್ದರು.

ನ್ಯಾಯಬದ್ಧ ಸೂತ್ರ: ಡಿಎಸ್‌ಎಸ್

ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ. ನಾಗಮೋಹನದಾಸ್ ವರದಿಯಲ್ಲಿದ್ದ ನ್ಯೂನತೆ ಸರಿಪಡಿಸಿ, ಪರಿಷ್ಕರಿಸಿ ನ್ಯಾಯಬದ್ಧವಾಗಿ ಸರ್ಕಾರ ಜಾರಿಗೆ ತಂದಿದೆ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಮಿತಿ ತಿಳಿಸಿದೆ.

ಮೂರು ಗುಂಪುಗಳಲ್ಲಿ ಹಂಚಿಹೋಗಿರುವ ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿ ಮತ್ತು ಅರೆ ಅಲೆಮಾರಿ ವಿಮುಕ್ತ ಬುಡಕಟ್ಟು ಸಮುದಾಯಗಳು ಪ್ರಬಲ ಸಮುದಾಯಗಳೊಂದಿಗೆ ಸೆಣಸಲಾರದೆ ಅವಕಾಶ ವಂಚಿತರಾಗುವ ಅಪಾಯ ಎದುರಾಗಿದೆ.

ಅಲೆಮಾರಿಗಳು ಎದುರಿಸುತ್ತಿರುವ ಸಮಸ್ಯೆಗಳ ನಿವಾರಣೆಗಾಗಿ ಆಯೋಗ ರಚಿಸಬೇಕು ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಸಂಘಟನಾ ಸಂಚಾಲಕರಾದ ಇಂದೂಧರ ಹೊನ್ನಾಪುರ, ಮರಿಯಪ್ಪ ಹಳ್ಳಿ, ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಆಗ್ರಹಿಸಿದ್ದಾರೆ.

ತಾರ್ಕಿಕ ಅಂತ್ಯ: ಒಕ್ಕೂಟ

ಒಳಮೀಸಲಾತಿ ಜಾರಿಗೊಳಿಸುವ ಮೂಲಕ 35 ವರ್ಷಗಳ ಹೋರಾಟವು ತಾರ್ಕಿಕ ಅಂತ್ಯ ಮುಟ್ಟಿದ್ದು, ಸಿದ್ದರಾಮಯ್ಯ ಅವರು ಸಾಮಾಜಿಕ ನ್ಯಾಯ ಎತ್ತಿ ಹಿಡಿದ್ದಾರೆ ಎಂದು ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ ಅಭಿಪ್ರಾಯ ವ್ಯಕ್ತಪಡಿಸಿದೆ.

ಅತಿ ಹಿಂದುಳಿದಿರುವ ಅಲೆಮಾರಿ ಸಮುದಾಯಗಳನ್ನು ಸ್ಪರ್ಶ ಬಲಾಢ್ಯ ಸಮುದಾಯಗಳ ಗುಂಪಿಗೆ ಸೇರಿಸಿರುವುದು ಅನ್ಯಾಯ. ತಬ್ಬಲಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ಕಲ್ಪಿಸಬೇಕು ಎಂದು ಒಕ್ಕೂಟದ ಎಸ್. ಮಾರಪ್ಪ, ಅಂಬಣ್ಣ ಅರೋಲಿಕರ, ಬಸವರಾಜ ಕೌತಾಳ್, ಶಿವರಾಯ ಅಕ್ಕರಕಿ, ಜೇಬಿ ರಾಜು, ಹೆಣ್ಣೂರು ಶ್ರೀನಿವಾಸ್, ಕರಿಯಪ್ಪ ಗುಡಿಮನಿ ಇನ್ನಿತರರು ಆಗ್ರಹಿಸಿದ್ದಾರೆ.

ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ದಕ್ಷಿಣ ವಲಯ ವ್ಯಾಪ್ತಿಯ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಹೊಸದಾಗಿ ಚಿಮಣಿ ಹಾಗೂ ಇತರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗಾಗಿ ಚಿತಾಗಾರದ ಫರ್ನೇಸ್ ಅನ್ನು ಆಗಸ್ಟ್ 22ರಿಂದ 28ರವರೆಗೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತಿದೆ ಎಂದು ದಕ್ಷಿಣ ವಲಯ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಮಾಹಿತಿಗಾಗಿ ಕಾರ್ಯಪಾಲಕ ಎಂಜಿನಿಯರ್ ಉಮೇಶ್ (9480688539) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನ

ರಾಸಾಯನಿಕ ಬಳಸಿದರೆ ಕ್ರಿಮಿನಲ್ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ತಯಾರಿಸುವ ಮೂರ್ತಿಗಳಲ್ಲಿ ಪರಿಸರಕ್ಕೆ ಮಾರಕವಾದ ರಾಸಾಯನಿಕ ಬಳಕೆ ಮಾಡಿದರೆ ಕ್ರಿಮಿನಲ್ ಮೊಕದ್ದಮೆ ಹೂಡಲು ಬಿಬಿಎಂಪಿ ನಿರ್ಧರಿಸಿದೆ.

ಗೌರಿ ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ನಡೆಸಲು ಬಿಬಿಎಂಪಿ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಲಾಯಿತು.

ಹಬ್ಬಕ್ಕೆ ಸಂಬಂಧಿಸಿದಂತೆ ಗಣೇಶ ಮೂರ್ತಿಗಳ ತಯಾರಿಕೆ ಪ್ರಾರಂಭವಾಗಿದೆ. ರಾಸಾಯನಿಕ ಬಣ್ಣಗಳು, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿಒಪಿ) ಬಳಕೆಯನ್ನು ನಿರ್ಬಂಧಿಸಬೇಕು. ಇಂಥ ಮೂರ್ತಿಗಳು ಕಂಡು ಬಂದರೆ ವಶಪಡಿಸಿಕೊಂಡು, ತಯಾರಿಸಿದವರ, ಮಾರಾಟ ಮಾಡುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ, ದಂಡ ವಿಧಿಸಲು ನಿರ್ಧರಿಸಲಾಯಿತು.

ತೀರ್ಮಾನಗಳು: ವಶಪಡಿಸಿಕೊಳ್ಳಲಾದ ವಸ್ತುಗಳನ್ನು ನಿಯಮಾನುಸಾರ ವಿಲೇವಾರಿ ಮಾಡಬೇಕು. ಸಾರ್ವಜನಿಕರು ಬಕೆಟ್‌ಗಳಲ್ಲಿ ವಿಸರ್ಜನೆಗೊಳಿಸಿ, ಅದರ ಮಣ್ಣನ್ನು ಕೈತೋಟಗಳಿಗೆ ಬಳಸಲು ಅರಿವು ಮೂಡಿಸಬೇಕು.

ದೊಡ್ಡ ಗಾತ್ರದ ಮೂರ್ತಿಗಳ ವಿಸರ್ಜನೆಗೆ ಬಿಬಿಎಂಪಿ ವ್ಯಾಪ್ತಿಯ ವಾರ್ಡ್‌ಗಳಲ್ಲಿ ವಿಸರ್ಜನೆ ಸ್ಥಳಗಳನ್ನು ಗುರುತಿಸಿ, ಸ್ಥಳಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಚುರಪಡಿಸಬೇಕು. ಪಾಲಿಕೆ ವ್ಯಾಪ್ತಿಯ ಕೆರೆ/ಕಲ್ಯಾಣಿಗಳಲ್ಲಿ ಗಣೇಶ ಮೂರ್ತಿ ವಿಸರ್ಜನೆಯಿಂದ ಉಂಟಾಗುವ ಮಾಲಿನ್ಯವನ್ನು ತಡೆಗಟ್ಟಲು ಸಮೀಪದಲ್ಲಿ ತಾತ್ಕಾಲಿಕವಾಗಿ ವಿಸರ್ಜನಾ ಸ್ಥಳಗಳನ್ನು ಗುರುತಿಸಬೇಕು.

ವಲಯ ಆಯುಕ್ತರು, ವಲಯಕ್ಕೆ ಒಬ್ಬರನ್ನು ಮೇಲುಸ್ತುವಾರಿ ಅಧಿಕಾರಿಯನ್ನಾಗಿ ನೇಮಿಸಿ, ಗಣೇಶ ವಿಸರ್ಜನೆಗೆ ಸಂಬಂಧಿಸಿದಂತೆ ವಾರ್ಡ್‌ಗೆ ಒಬ್ಬರಂತೆ ನೋಡಲ್ ಅಧಿಕಾರಿಯನ್ನು ನೇಮಿಸಬೇಕು. ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆ ಕಂಡುಬಂದಲ್ಲಿ ದಂಡ ವಿಧಿಸಬೇಕು ಎಂದು ತೀರ್ಮಾನಿಸಲಾಯಿತು.

75 ಏಕಗವಾಕ್ಷಿ ಕೇಂದ್ರ ಸ್ಥಾಪನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಗಣೇಶ ಪ್ರತಿಷ್ಠಾಪನೆಗಾಗಿ ಅನುಮತಿ ನೀಡಲು 75 ಉಪ ವಿಭಾಗ ಕಚೇರಿಗಳಲ್ಲಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿದೆ. ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಹಾಗೂ ಅಗ್ನಿಶಾಮಕ ಅಧಿಕಾರಿಗಳು ಒಂದೇ ಸ್ಥಳದಲ್ಲಿದ್ದು, ಅನುಮತಿ ಪತ್ರವನ್ನು ನೀಡಲಿದ್ದಾರೆ ಎಂದು ಮಹೇಶ್ವರ ರಾವ್ ಮಾಹಿತಿ ನೀಡಿದರು. ಸಾರ್ವಜನಿಕವಾಗಿ ಮೂರ್ತಿಗಳ ಪ್ರತಿಷ್ಠಾಪನೆಗಾಗಿ ಅನುಮತಿ ಪಡೆಯಲು ನೋಡಲ್ ಅಧಿಕಾರಿಗಳಾಗಿ ನೇಮಿಸಲಾದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ಕಾರ್ಯಾಲಯದಲ್ಲಿ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ನೀವು ನಿದ್ರಿಸುವಾಗಲೂ ಹಣ ಸಂಪಾದಿಸುತ್ತಿರಬೇಕು. ಈ ಮಾರ್ಗ ತಿಳಿದುಕೊಳ್ಳದಿದ್ದರೆ, ಜೀವನಪರ್ಯಂತ ನೀವು ಕೆಲಸ ಮಾಡುತ್ತಲೇ ಇರಬೇಕಾಗುತ್ತದೆ
ವಾರನ್ ಬಫೆಟ್, ಹೂಡಿಕೆದಾರ

ದುಡ್ಡಿನಂಥಾ ಮಾತು

ನಿವೃತ್ತಿ ಅಂದರೆ 60 ವರ್ಷ ವಯಸ್ಸಾದವರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಯೋಜನಾಬದ್ಧ ಹೂಡಿಕೆ ಇದ್ದರೆ ಅವಧಿಗೆ ಮುನ್ನವೇ ನಿವೃತ್ತರಾಗಬಹುದು...

ಅವಧಿಪೂರ್ವ ನಿವೃತ್ತಿ, ಹೊಸದೊಂದರ ಆರಂಭ

• ಮನೀಶ್ ಗೋಯಲ್

ನಿವೃತ್ತಿ ಅಂದರೆ ವೃತ್ತಿಬದುಕಿಗೆ ಬೀಳುವ ಪೂರ್ಣವಿರಾಮ ಎಂಬ ಪರಿಕಲ್ಪನೆ ಬದಲಾಗುತ್ತಿದೆ. ನಿವೃತ್ತಿ ಅಂದರೆ ವೈಯಕ್ತಿಕ ಸ್ವಾತಂತ್ರ್ಯದ ಅವಧಿ ಎಂಬ ಆಲೋಚನೆ ಅರಳುತ್ತಿದೆ. ಅದರಲ್ಲೂ ಮುಖ್ಯವಾಗಿ, ತಮ್ಮ ಖರ್ಚು–ವೆಚ್ಚಗಳಲ್ಲಿ ರಾಜಿ ಮಾಡಿಕೊಳ್ಳಲು ಬಯಸದ ಶ್ರೀಮಂತರಿಗೆ ನಿವೃತ್ತಿಯು ಹೊಸದೊಂದರ ಆರಂಭದಂತೆ ಇರುತ್ತದೆ.

ಕೆಲವರಿಗಷ್ಟೇ ಸೀಮಿತವಾಗಿದ್ದ 'ಅವಧಿಪೂರ್ವ ನಿವೃತ್ತಿ'ಯ ಪರಿಕಲ್ಪನೆಯು ಈಗ ಹೆಚ್ಚು ವ್ಯಾಪಕವಾಗುತ್ತಿದೆ. ಶ್ರೀಮಂತಿಕೆಯೊಂದಿಗೆ ಆರೋಗ್ಯ ಕಾಪಾಡಿಕೊಂಡು, ಬೇಗನೆ ನಿವೃತ್ತರಾಗಿರಿ ಎಂಬ ಪರಿಕಲ್ಪನೆಯು ಹೆಚ್ಚೆಚ್ಚು ಜನಪ್ರಿಯ ಆಗುತ್ತಿದೆ. ಸಾಂಪ್ರದಾಯಿಕವಾಗಿ ಭಾರತದಲ್ಲಿ ನಿವೃತ್ತಿಯು 60 ವರ್ಷ ವಯಸ್ಸಿನವರಿಗೆ ಸಂಬಂಧಿಸಿದ್ದಾಗಿತ್ತು. ನಿವೃತ್ತಿಯ ನಂತರದಲ್ಲಿ ಪಿಂಚಣಿ ಹಾಗೂ ಪಿ.ಎಫ್. ಮಾತ್ರವೇ ಅವರಿಗೆ ಇರುವ ಆಸರೆ ಆಗಿತ್ತು.

ಆದರೆ ನಿವೃತ್ತಿಯು ಈಗ ಜೀವನಶೈಲಿಯ ಒಂದು ಆಯ್ಕೆಯಂತೆ ಆಗಿದೆ. 'ಫೈರ್' (ಹಣಕಾಸಿನ ಸ್ವಾತಂತ್ರ್ಯ, ಬೇಗನೆ ನಿವೃತ್ತಿ) ಪರಿಕಲ್ಪನೆ ಸಹ ಇದಕ್ಕೆ ಪೂರಕವಾಗಿ ಕೆಲಸ ಮಾಡಿದೆ. ಈಗ ಯುವ ವೃತ್ತಿಪರರು ಹಣಕಾಸಿನ ಸ್ವಾತಂತ್ರ್ಯವನ್ನು ಸಾಧಿಸಿ, ಬೇಗನೆ ನಿವೃತ್ತಿ ಪಡೆಯಲು ಬಯಸುತ್ತಿದ್ದಾರೆ. ಬೇಗನೆ ನಿವೃತ್ತಿ ಪಡೆದು ಒಂದು ಉದ್ದೇಶಕ್ಕಾಗಿ ಕೆಲಸ ಮಾಡಲು ಅವರು ಬಯಸುತ್ತಿದ್ದಾರೆ.

ಕೆಲವು ಅಂಶಗಳು ಈ ಬದಲಾವಣೆಗೆ ಆಧಾರಸ್ತಂಭವಾಗಿ ನಿಂತಿವೆ. ಅವು ಹೀಗಿವೆ:

1) ಹಣಕಾಸಿನ ಯೋಜನೆ
2) ಆರೋಗ್ಯದ ಮೇಲೆ ಗಮನ

ಹಣಕಾಸಿನ ಭದ್ರ ಬುನಾದಿ ಹೇಗೆ?

ಬೇಗನೆ ನಿವೃತ್ತಿ ಆಗಲು ಬಯಸುವವರು ಮಾಡಬೇಕಿರುವ ಮುಖ್ಯ ಕೆಲಸ ಮುಂದಿನ ಸಾಧ್ಯತೆಗಳನ್ನು ಊಹಿಸಿ, ಅದಕ್ಕೆ ಅನುಗುಣವಾಗಿ ಹಣಕಾಸಿನ ನಿರ್ವಹಣೆಯಲ್ಲಿ ತೊಡಗುವುದು. ಇದ್ದಕ್ಕಿದ್ದಂತೆ ಸಿಗುವ ಲಾಭಕ್ಕಿಂತ ಇಲ್ಲಿ ಹೆಚ್ಚು ಪ್ರಯೋಜನಕ್ಕೆ ಬರುವುದು ಸ್ಥಿರವಾದ, ಶಿಸ್ತುಬದ್ಧವಾದ ನಡೆಗಳು.

ಹೂಡಿಕೆಯನ್ನು ಬೇಗನೆ ಆರಂಭಿಸಬೇಕು:

ಎ) ಹೂಡಿಕೆಗಳು ಬೇಗನೆ ಆರಂಭವಾದಾಗ ತೊಡಗಿಸಿದ ಹಣದ ಮೇಲಿನ ಬಡ್ಡಿಗೆ ಸಿಗುವ ಚಕ್ರಬಡ್ಡಿಯ ಪ್ರಯೋಜನವು ಬಹಳ ಗಣನೀಯ ಮಟ್ಟದಲ್ಲಿರುತ್ತದೆ.

ಬಿ) **ಜೀವನಶೈಲಿಯ ಮೇಲೆ ಗಮನ:** 25ರಿಂದ 30 ವರ್ಷ ವಯಸ್ಸಿನೊಳಗಿನ, ತಿಂಗಳಿಗೆ ₹1 ಲಕ್ಷದಿಂದ ₹2 ಲಕ್ಷದವರೆಗೆ ವೆಚ್ಚ ಇರುವ ವ್ಯಕ್ತಿಯೊಬ್ಬರ ಉದಾಹರಣೆಯನ್ನು ಪರಿಗಣಿಸೋಣ. ಇವರು 45 ವರ್ಷಕ್ಕೆ ಅಥವಾ 50 ವರ್ಷ ವಯಸ್ಸಾಗುವ ಮೊದಲು ನಿವೃತ್ತಿ ಪಡೆಯಲು ಬಯಸಿದ್ದಾರೆ. ಈಗ ಇರುವ ವೆಚ್ಚಗಳು ಇವರಿಗೆ 45 ಅಥವಾ 50 ವರ್ಷ ವಯಸ್ಸಾಗುವ ವೇಳೆಗೆ ಮೂರುಪಟ್ಟು ಹೆಚ್ಚಾಗಿರುತ್ತವೆ.

ಅಂದರೆ, ವಾರ್ಷಿಕ ಹಣದುಬ್ಬರ ಪ್ರಮಾಣವು ಸರಾಸರಿ ಶೇ 6ರಷ್ಟು ಇರುತ್ತದೆ ಎಂದು ಭಾವಿಸಿ ಲೆಕ್ಕಹಾಕಿದರೆ, ತಿಂಗಳ ವೆಚ್ಚಗಳು ₹3 ಲಕ್ಷದಿಂದ ₹6 ಲಕ್ಷದವರೆಗೆ ತಲುಪಿರುತ್ತವೆ.

ಈ ವ್ಯಕ್ತಿಯು ಇದೇ ಮಟ್ಟದಲ್ಲಿ ವೆಚ್ಚಗಳನ್ನು ತನ್ನ 85ನೇ ವಯಸ್ಸಿನವರೆಗೆ ಕಾಯ್ದುಕೊಳ್ಳಬೇಕು ಎಂದಾದರೆ, ನಿವೃತ್ತಿಯ ಬದುಕಿಗೆ ಅಗತ್ಯವಿರುವ ಇಡುಗಂಟಿನ ಮೊತ್ತ ₹4 ಕೋಟಿಯಿಂದ ₹8 ಕೋಟಿ ಆಗುತ್ತದೆ.

ಸಿ) ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್ಐಪಿ) ಮೂಲಕ ಈಕ್ವಿಟಿ ಆಧಾರಿತ ಹಣಕಾಸಿನ ಉತ್ಪನ್ನಗಳಲ್ಲಿ ಪ್ರತಿ ತಿಂಗಳು ₹25 ಸಾವಿರ ಹಣ ತೊಡಗಿಸುವ ಮೂಲಕ 20 ವರ್ಷಗಳಲ್ಲಿ ₹3.3 ಕೋಟಿಯಿಂದ ₹4.2 ಕೋಟಿಯವರೆಗೆ ಹಣ ಒಗ್ಗೂಡಿಸಲು ಸಾಧ್ಯವಿದೆ. ಹೂಡಿಕೆಯ ಮೇಲೆ ಪ್ರತಿವರ್ಷ ಶೇ 15ರಿಂದ ಶೇ 17ರವರೆಗೆ ಲಾಭ ಸಿಗಬಹುದು ಎಂಬ ಅಂದಾಜು ಇರಿಸಿಕೊಂಡು ಈ ಲೆಕ್ಕ ನೀಡಲಾಗಿದೆ. ಆದರೆ ಈ ವ್ಯಕ್ತಿಯು ಎಸ್ಐಪಿ ಮೊತ್ತವನ್ನು ಪ್ರತಿ ವರ್ಷ ಶೇ 10ರಷ್ಟು ಹೆಚ್ಚು ಮಾಡಿದರೆ, ಇದೇ ಅವಧಿಯಲ್ಲಿ ಅಂದಾಜು ₹6.2 ಕೋಟಿಯಿಂದ ₹7.6 ಕೋಟಿಯಷ್ಟು ಮೊತ್ತವನ್ನು ಹೊಂದಿಸಿಕೊಳ್ಳಲು ಸಾಧ್ಯವಿದೆ. ಈ ಲೆಕ್ಕಾಚಾರವು ಹೂಡಿಕೆಯನ್ನು ಬೇಗನೆ ಆರಂಭಿಸುವುದರ ಮಹತ್ವವನ್ನಷ್ಟೇ ಅಲ್ಲದೆ, ಹೂಡಿಕೆ ಮೊತ್ತವನ್ನು ನಿರಂತರವಾಗಿ ಹೆಚ್ಚಿಸುವುದರ ಮಹತ್ವವನ್ನು ಕೂಡ ಹೇಳುತ್ತಿದೆ. ಹೂಡಿಕೆ ಎಷ್ಟು ಬೇಗ ಶುರುವಾಗುತ್ತದೆಯೋ ಚಕ್ರಬಡ್ಡಿಯ ಪ್ರಯೋಜನವು ಅಷ್ಟರಮಟ್ಟಿಗೆ ಹೆಚ್ಚಿರುತ್ತದೆ.

ಡಿ) ಹೂಡಿಕೆಗಳನ್ನು ಈಕ್ವಿಟಿ, ಸಾಲಪತ್ರಗಳು, ಸರಕುಗಳು, ರಿಯಲ್ ಎಸ್ಟೇಟ್, ಹೊಸ ಉತ್ಪನ್ನಗಳಾದ ಆರ್ಇಐಟಿ (ರಿಯಲ್ ಎಸ್ಟೇಟ್ ಇನ್ವೆಸ್ಟ್‌ಮೆಂಟ್ ಟ್ರಸ್ಟ್) ಮೇಲೆ ಇರುವಂತೆ ಖಾತರಿಪಡಿಸಿಕೊಳ್ಳಿ. ಹೂಡಿಕೆಗಳು ಈ ಬಗೆಯಲ್ಲಿ ಇದ್ದಾಗ ಹೆಚ್ಚಿನ ಪ್ರಮಾಣದಲ್ಲಿ ಲಾಭ ನಿರೀಕ್ಷಿಸಬಹುದು.

• **ಪ್ಯಾಸಿವ್ ಆದಾಯ ಹೊಸ ಬಗೆಯ ಪಿಂಚಣಿ ಇದ್ದಂತೆ**

ಸಂಪತ್ತಿನ ಸೃಷ್ಟಿಯ ಬಗ್ಗೆ ಸಲಹೆ ನೀಡುವವರು ಈಗ ಪ್ಯಾಸಿವ್ ಆದಾಯ ಬಗ್ಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ವೇತನ ಆದಾಯಕ್ಕೆ ಪರ್ಯಾಯವಾಗಿ ಅಥವಾ ಅದಕ್ಕೆ ಪೂರಕವಾಗಿ ಈ ಆದಾಯ ಇರಬೇಕು ಎಂದು ಅವರು ಹೇಳುತ್ತಿದ್ದಾರೆ. ಏಳು ಬಗೆಯ ಆದಾಯಗಳನ್ನು ಹೊಂದಿರಬೇಕು ಎಂಬ ಸಲಹೆಯನ್ನು ಅವರು ನೀಡುತ್ತಾರೆ. ವೇತನ ಆದಾಯ, ಉದ್ಯಮ ವಹಿವಾಟಿನ ಆದಾಯ, ಬಡ್ಡಿ ಆದಾಯ, ಡಿವಿಡೆಂಡ್ ಆದಾಯ, ಬಾಡಿಗೆ ಆದಾಯ, ಬಂಡವಾಳ ವೃದ್ಧಿ ಆದಾಯ, ರಾಯಧನ ಆದಾಯ... ಇವು ಆ ಏಳು ಬಗೆಗಳು.

ಆಸ್ತಿಗಳಲ್ಲಿ, ಚೆನ್ನಾಗಿ ಡಿವಿಡೆಂಡ್ ನೀಡುವ ಷೇರುಗಳಲ್ಲಿ, ಆರ್ಇಐಟಿಗಳಲ್ಲಿ ಹೂಡಿಕೆ ಮೂಲಕ, ಕೌಶಲಗಳನ್ನು ಬೆಳೆಸಿಕೊಳ್ಳುವ ಮೂಲಕ, ಆನ್‌ಲೈನ್ ಮೂಲಕ ಕೆಲವು ಸಣ್ಣಪುಟ್ಟ ವಹಿವಾಟುಗಳನ್ನು ನಡೆಸುವ ಮೂಲಕ ಪರ್ಯಾಯ ಆದಾಯ ಮೂಲಗಳನ್ನು ಸೃಷ್ಟಿಸಿಕೊಳ್ಳಬಹುದು.

• **ಬಜೆಟ್ ಮಾಡುವುದು ಹಾಗೂ ಹೊಣೆಗಾರಿಕೆಯಿಂದ ಖರ್ಚು ಮಾಡುವುದು**

ಅಗತ್ಯಕ್ಕೆ ಸಾಕಾಗುವಷ್ಟು ವಸ್ತುಗಳನ್ನು ಮಾತ್ರವೇ ಇರಿಸಿಕೊಳ್ಳುವುದು, ಬೇಕಾಗುವಷ್ಟು ಮಾತ್ರವೇ ಖರೀದಿಸುವುದು ಈಗ ಜೀವನಶೈಲಿಗೆ ಸಂಬಂಧಿಸಿದ ಒಂದು ಟ್ರೆಂಡ್. ಅಷ್ಟೇ ಅಲ್ಲ ಅದು ಈಗ ಹಣಕಾಸಿನ ತತ್ವವೂ ಹೌದು. ಕಂಡಿದ್ದನ್ನೆಲ್ಲ ಖರೀದಿಸುವ ಅಭ್ಯಾಸವನ್ನು ಕಡಿಮೆ ಮಾಡಿಕೊಳ್ಳುವುದರಿಂದ ನಮಗೆ ಹೆಚ್ಚಿನ ಸಂಪನ್ಮೂಲವನ್ನು ಸಂಪತ್ತು ಸೃಷ್ಟಿಗೆ ವಿನಿಯೋಗಿಸಲು ಆಗುತ್ತದೆ. ಹಣಕಾಸಿನ ಸ್ವಾವಲಂಬನೆಯನ್ನು ಸಾಧಿಸುವುದು ಅಂದರೆ ಹೆಚ್ಚೆಚ್ಚು ಸಂಪಾದಿಸುವುದು ಮಾತ್ರವೇ ಅಲ್ಲ; ಅದು ನಮ್ಮ ಅಗತ್ಯಗಳನ್ನು ಕಡಿಮೆ ಮಾಡಿಕೊಂಡು, ಹೆಚ್ಚಿನ ಹಣವನ್ನು ಹೂಡಿಕೆ ಮಾಡುವುದೂ ಹೌದು.

ಅವಧಿಪೂರ್ವ ನಿವೃತ್ತಿ ಅಂದರೆ ಸಾಕಷ್ಟು ಹಣ ಹೊಂದಿರುವುದಷ್ಟೇ ಅಲ್ಲ. ಅದು ಹಣದ ಜೊತೆ ಆ ಹಣವನ್ನು ಅನುಭವಿಸಲು ಒಂದಿಷ್ಟು ಜೀವನವನ್ನೂ ಉಳಿಸಿಟ್ಟುಕೊಳ್ಳುವುದು. ಹಣಕಾಸಿನ ಕಾರ್ಯತಂತ್ರಗಳನ್ನು ಆರೋಗ್ಯವರ್ಧಕ ಅಭ್ಯಾಸಗಳ ಜೊತೆ ಹೊಂದಿಸಿಕೊಳ್ಳುವ ಮೂಲಕ, ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಸಂಪತ್ತು, ಆರೋಗ್ಯ ಮತ್ತು ಸ್ವಾತಂತ್ರ್ಯವನ್ನು ಸಾಧಿಸಬಹುದು ಎಂಬುದನ್ನು ಇಂದಿನ ವೃತ್ತಿಪರರು ತೋರಿಸಿಕೊಡುತ್ತಿದ್ದಾರೆ.

ನಿವೃತ್ತಿ ಅಂದರೆ ಅಂತ್ಯವಲ್ಲ, ಅದು ಹೊಸದೊಂದರ ಆರಂಭ...

ಲೇಖಕ: ಈಕ್ವೆಂಟಿಸ್ ವೆಲ್ತ್ ಅಡ್ವೈಸರಿ ಸರ್ವಿಸಸ್‌ನ ಸಂಸ್ಥಾಪಕ ಮತ್ತು ಎಂ.ಡಿ

ನಿವೃತ್ತಿ ಮತ್ತು ಆರೋಗ್ಯ

ರಕ್ಷಣೆ ಮೊದಲು, ಸಮೃದ್ಧಿ ಆಮೇಲೆ ಎಂಬ ಮಾತೊಂದು ಇದೆ. ಆರೋಗ್ಯವನ್ನು ಉಪೇಕ್ಷೆ ಮಾಡದೆಯೇ ಸಂಪತ್ತು ಸೃಷ್ಟಿಸಿಕೊಳ್ಳಬೇಕು ಎಂಬುದನ್ನು ಇದು ಹೇಳುತ್ತದೆ.

ರೋಗ ಬಾರದಂತೆ ಕಾಳಜಿ: ಒಳ್ಳೆಯ ಆಹಾರ, ನಿಯಮಿತವಾದ ವ್ಯಾಯಾಮ, ಮುನ್ನೆಚ್ಚರಿಕೆಯಿಂದ ವೈದ್ಯಕೀಯ ತಪಾಸಣೆಗಳನ್ನು ಕೈಗೊಳ್ಳುವುದು ದೀರ್ಘಾಯಸ್ಸಿಗೆ ಕೊಡುಗೆ ನೀಡುತ್ತವೆ. ಇವೇನೇ ಇದ್ದರೂ ಆರೋಗ್ಯದ ವಿಚಾರದಲ್ಲಿ ಒಂದಿಷ್ಟು ಅನಿಶ್ಚಿತತೆಗಳೂ ಇರುತ್ತವೆಯಾದ ಕಾರಣಕ್ಕೆ ಸೂಕ್ತವಾದ ಆರೋಗ್ಯ ವಿಮೆಯೊಂದನ್ನು ಹೊಂದಿರಬೇಕು.

ನಿವೃತ್ತಿ ಬದುಕಿಗೊಂದು ಉದ್ದೇಶ: ಅವಧಿಗೆ ಮೊದಲೇ ನಿವೃತ್ತರಾಗಲು ಮಾನಸಿಕ ಸಿದ್ಧತೆಯೂ ಅಗತ್ಯ. ಉದ್ದೇಶ ಇಲ್ಲದೆ ನಿವೃತ್ತಿ ಪಡೆದವರಲ್ಲಿ ಹಲವರು ಅಸ್ಮಿತೆಯ ಸಮಸ್ಯೆಯನ್ನು ಎದುರಿಸಬಹುದು, ಭಾವನಾತ್ಮಕ ಆರೋಗ್ಯ ಹಾಳುಮಾಡಿಕೊಳ್ಳಬಹುದು. ನಿರ್ದಿಷ್ಟ ಉದ್ದೇಶದೊಂದಿಗೆ ನಿವೃತ್ತರಾಗಿ, ಹವ್ಯಾಸಗಳನ್ನು ಹೊಂದಿದ್ದರೆ ಮಾನಸಿಕವಾಗಿ ತೃಪ್ತರಾಗಿ ಬದುಕು ಸಾಗಿಸಬಹುದು.

ಸಂಪತ್ತನ್ನು ಸೃಷ್ಟಿಸುತ್ತಿರುವ ಹೊಸ ತಲೆಮಾರಿನ ಹಲವರು ನಿವೃತ್ತಿ ಕುರಿತ ಸಂಕಥನಗಳನ್ನು ಬದಲಿಸುತ್ತಿದ್ದಾರೆ. ಈಗ ಒಂದು ಸಂಗತಿಯಂತೂ ಸ್ಪಷ್ಟ. ಅವಧಿಪೂರ್ವ ನಿವೃತ್ತಿ ಎಂಬುದು ಕನಸು ಮಾತ್ರವೇ ಅಲ್ಲ, ವಿವೇಕಯುತವಾಗಿ ಆಲೋಚಿಸಿ ಹೂಡಿಕೆ ಮಾಡುವವರಿಗೆ ಇದು ನನಸು ಮಾಡಿಕೊಳ್ಳಬಹುದಾದ ಕನಸು.

ಟಾಪ್ 30, ಬಿ30 ನಗರಗಳ ಹೂಡಿಕೆ ಹೇಗಿದೆ?

• ಟಾಪ್ 30 ಅಂದರೆ ದೇಶದ ಮುಂಚೂಣಿ 30 ನಗರಗಳು
• ಬಿ30 ಅಂದರೆ ಟಾಪ್ 30 ಆಚೆಗಿನ ಪ್ರದೇಶಗಳು



ಜುಲೈ ವೇಳೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆಯಾಗಿದ್ದ ಮೊತ್ತದಲ್ಲಿ ಶೇಕಡ 18ರಷ್ಟು ಪಾಲು ಟಾಪ್ 30 ನಗರಗಳ ಆಚೆಗಿನವರಿಗೆ ಸೇರಿದ್ದು. ಜೂನ್ ತಿಂಗಳ ವೇಳೆಗೆ ಈ ಪ್ರದೇಶಗಳ ಜನರಿಂದ ಆಗಿದ್ದ ಹೂಡಿಕೆ ಮೊತ್ತಕ್ಕೆ ಹೋಲಿಸಿದರೆ ಇದು ಶೇ 3ರಷ್ಟು ಹೆಚ್ಚು.

ಬಿ30 ಹಾಗೂ ಟಾಪ್ 30: ಹೂಡಿಕೆ ಎಲ್ಲಿ?



ಆಧಾರ: ಎಎಂಎಫ್ಐ

• ಬಿ30 ಪ್ರದೇಶಗಳ ಜನರು ಈಕ್ವಿಟಿ ಆಧಾರಿತ ಯೋಜನೆಗಳಲ್ಲಿ ಮಾಡಿರುವ ಹೂಡಿಕೆ ಹೆಚ್ಚು
• ಈ ಪ್ರದೇಶಗಳಿಂದ ಬಂದಿರುವ ಹೂಡಿಕೆಯಲ್ಲಿ ಶೇಕಡ 86ರಷ್ಟು ಈಕ್ವಿಟಿ ಆಧಾರಿತ ಯೋಜನೆಗಳಲ್ಲಿ ಇದೆ.
• ಟಾಪ್ 30 ಪ್ರದೇಶಗಳಿಂದ ಬಂದಿರುವ ಹೂಡಿಕೆಗಳಲ್ಲಿ ಶೇ 54ರಷ್ಟು ಮಾತ್ರ ಈಕ್ವಿಟಿ ಆಧಾರಿತ ಯೋಜನೆಗಳಲ್ಲಿವೆ. ಇನ್ನುಳಿದ ಶೇ 46ರಷ್ಟು ಪಾಲು ಈಕ್ವಿಟಿಯಷ್ಟೇ ಅಲ್ಲದ ಯೋಜನೆಗಳಲ್ಲಿ ವಿನಿಯೋಗ ಆಗಿದೆ.

ಆ್ಯಂಬರ್ ಎಂಟರ್‌ಪ್ರೈಸಸ್

ಬ್ರೋಕರೇಜ್ ಮಾತು

ಆ್ಯಂಬರ್ ಎಂಟರ್‌ಪ್ರೈಸಸ್ ಕಂಪನಿಯ ಷೇರು ಮೌಲ್ಯವು ₹9,000ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಸಂಸ್ಥೆ ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಜಿಎಸ್‌ಟಿ ವ್ಯವಸ್ಥೆಯಲ್ಲಿ ಸುಧಾರಣೆ ತರುವುದಾಗಿ ಆಗಸ್ಟ್ 15ರಂದು ಹೇಳಿದ್ದಾರೆ, ಪ್ರಸ್ತಾವಿತ ಸುಧಾರಣೆಯು ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು ಮಾಡಲಿದೆ ಎಂದು ಸಂಸ್ಥೆ ಹೇಳಿದೆ.

ಹವಾನಿಯಂತ್ರಕಗಳ ಪ್ರಮುಖ ಪೂರೈಕೆದಾರ ಕಂಪನಿಯಾದ ಆ್ಯಂಬರ್ ಎಂಟರ್‌ಪ್ರೈಸಸ್, ಎ.ಸಿಗಳ ಮೇಲಿನ ತೆರಿಗೆಯ ಪ್ರಮಾಣವು ಶೇ 28 ಇರುವುದನ್ನು ಶೇ 18ಕ್ಕೆ ಇಳಿಕೆ ಮಾಡಿದರೆ ಅವುಗಳ ಬೇಡಿಕೆಯಲ್ಲಿ ಆಗುವ ಹೆಚ್ಚಳದ ಪ್ರಯೋಜನ ಪಡೆಯಲಿದೆ. ಎ.ಸಿ ಹಾಗೂ ಗ್ರಾಹಕ ಬಳಕೆ ಉಪಕರಣಗಳ ಮಾರುಕಟ್ಟೆಯಲ್ಲಿ ಕಂಪನಿಯು ಹೆಚ್ಚಿನ ಗ್ರಾಹಕರನ್ನು ಪಡೆದುಕೊಳ್ಳುತ್ತಿದೆ. ಕಂಪನಿಯು ಗ್ರಾಹಕ ಬಳಕೆ ಉಪಕರಣಗಳ ವಿಭಾಗದಲ್ಲಿ ಸುಸ್ಥಿರ ಬೆಳವಣಿಗೆ ಕಾಣಲಿದೆ ಎಂದು ಬ್ರೋಕರೇಜ್ ಸಂಸ್ಥೆ ಹೇಳಿದೆ.

ಕಂಪನಿಯ ವರಮಾನ ಹಾಗೂ ತೆರಿಗೆ ನಂತರ ಲಾಭದ ಸಂಯುಕ್ತ ವಾರ್ಷಿಕ ಬೆಳವಣಿಗೆ ಪ್ರಮಾಣವು 2024–25ರಿಂದ 2027–28ರವರೆಗೆ ಕ್ರಮವಾಗಿ ಶೇ 24ರಷ್ಟು ಹಾಗೂ ಶೇ 54ರಷ್ಟು ಇರಲಿದೆ ಎಂದು ಸಂಸ್ಥೆ ಅಂದಾಜು ಮಾಡಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಷೇರಿನ ಮೌಲ್ಯವು ₹7,375 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH
Prose
Gentleman of Rio en Medio

7.After the findings of the engineer, the offer was doubled for the old man's land.
a. Did the old man raise the rate?
b. Did the storyteller offer more?

Ans: (a) No, he didn't. The surveyor found out that the old man possessed almost twice as muchas what he thought he did. The property was much more than eight acres.
(b) No, the Americans who were the buyers of the property, offered the old man the extramoney for the extra land. The writer only conveyed the message to the old man.

8. Match the following:

'A'	'B'
1. Seller —	People of Spain
2. Some Americans —	Follower of the old-man
3. A young dark boy —	Buyers
	The Story teller
	Don Anselmo

Answer:
1. Seller — Don Anselmo
2. Some Americans — Buyers
3. A young dark boy — Follower of the old-man

9. Don Anselmo took only 12 hundred dollars for the land finally because.
a) the storyteller failed to convince Don Anselmo to make more money than what had been agreed upon.
b) Don Anselmo was a man of principles (Tick the correct Answer)
Ans: (b) Don Anselmo was a man of principles.

10. What did Don Anselmo do as he left the place With money?
Ans: The old man shook hands of all, put on his ragged gloves, took his stick and walked out with the boy behind him, when he left the place with money

Share your Responses
Refer to Text(Part-I) Page No. 50 & 51:

1.Fill in the blanks with a suitable word/s to describe the land and the house sold by the oldman.

Before it was sold	After it was solda.
a) peeled off plaster	....
b)…. ………….	pruned treesc.
c) torn fence	…………….

Answer:

Before it was sold	After it was solda.
a) peeled off plaster	Replastered the house.
b) Small and wrtched	pruned treesc.
c) torn fence	patched the fence

2.From the list given below, tick the activities with which the children of Rio en Medio were involved, after the Americans occupied the house and the land sold by Don Anselmo
i) pruning the trees
ii) renovating the house
iii) playing in the orchard
iv) speaking harsh words to the Americans in Spanish
v) plucking flowers from the trees
vi) putting fences around their play area.
vii) laughing whenever they were spoken to
viii) running around the land

Answer:
iii) playing in the orchard
v) plucking flowers from the trees
vi) putting fences around their play area
vii) laughing whenever they were spoken to

3.The possibilities for a week-long delay for another meeting are given. Which of them do youagree with? Discuss with your partner. The old man.

deliberately delayed | was slow | was not in station | was ill

Ans:The old man was slow

4.Don Anselmo repeated certain things whenever he met the story teller and took leave of him. Write them down. One is done for you.
a. the old man shakes hands
b. ____
c. ____
d. ____
e. ____

Ans:
b. put on his ragged gloves/he removed his hat and gloves.
c. take his stick/handed his things to the boy.
d. walked out/sit on the chair.
e. the boy followed behind him/the boy stood behind the chair.

Share your Responses:
Refer to Text(Part-I) Page No. 52:

1. ***Fill in the blanks/choose the most appropriate answer***
1.Don Anselmo sold his land but he didn't sell his ____
Ans: Trees.
2.The children of Rio en Medio were Don Anselmo's ____ and ____
Ans: Sobrinos, nietos, [nieces and nephews and grand children]. *(Contd……..)*

Biology

PRINCIPLES OF INHERITANCE AND VARIATION

31. Two heterozygous parents are crossed. If two loci are linked what would be the distribution of phenotypic features in F_1 generation for a dihybrid cross.
Ans:- There will be reshuffling of Chromosomes but no reshuffling of genes.
Phenotypically dominants and recessives appear in the ratio of 3 : 1.



32. When a cross is made between hybrid tall plant with yellow seeds (TtYy) and tall plant with green seed (Ttyy), what proportions of phenotype in offspring could be expected to be (a) tall and green (b) dwarf and green.
Ans:-



33. A child has blood group O. If the father has blood group A and mother has blood group B, work out the genotypes of parent and the possible genotypes of other offspring.
Ans:- Blood group **O** is a recessive trait which can appear only when two recessive alleles come together. $I^O I^O$ or *ii*, Therefore, a child can have blood group **O** only when each parent contributes an I^O allele. For this the father with blood group A must be heterozygous, $I^A I^O$ while the mother should be heterozygous B, $I^B I^O$.
Genotype of the offspring (also other than **O**) can be known from the following checker board.



Other offspring can have A, B or AB blood groups.

34. What is point mutation? Give one example.
Ans:- Point Mutation - is a gene mutation that occurs due to change in a single base pair of DNA. It may result in incorporation of different amino acid in the polypeptide, e.g., valine instead of glutamic acid in b-peptide in sickle cell anaemia.

35. Who had proposed the chromosomal theory of inheritance?
Ans:- Sutton and Boveri (1902).

36. The gene I that controls the ABO blood grouping in human beings has three alleles- I^A, I^B and i.
(a) How many different genotypes are likely to be present in the human population?
(b) Also, how many phenotypes are likely to be present in the human population?
Ans:- (a) Genotypes - Six
(I^AI^A, I^AI^B, I^Ai, I^BI^B, I^Bi and ii)
(b) Phenotypes – Four (A, B, AB and O).

37. When red flowered *Antirrhinum* plant was crossed with a flowered *Antirrhinum* plant, the F_1 offspring had pink flowers. Mention
(a) the genotype of F_1 plants and
(b) the reason why it did not bear the parental red or white flower colour.
Ans:- (a) **Genotype of F_1 Offspring.**
Rr (or) RW (Pink Flower).
(b) The two alleles of red flower and white flower traits show incomplete dominance resulting in the appearance of pink flower.

38. If a true breeding homozygous Pea plant with green pods and axial flowers as dominant characters is crossed with a recessive homozygous Pea plant with yellow pods and terminal flowers, what would be the
(a) Genotype of the two parents
(b) Phenotype and genotype of F_1 offspring
(c) Phenotypic distribution ratio in F_2 population.
Ans:- Symbol for (i) Green Pod-G
(ii) Yellow pod-g.
Symbol for (i) Axial Flower-A
(ii) Terminal Flower-a.
(a) **Genotype of Parents GGAA, ggaa**
(b) **Phenotype of F_1 Offspring,** Green pod and axial pod
Genotype of F_1 Offspring. Gg Aa.
(c) **Phenotypic Ratio in F_2 Generation.**
9 (green axial) : 3 (green terminal) : 3 (yellow axial) : 1 (yellow terminal).



ಚಿಕ್ಕ ನಿವೇಶನದ ಕಟ್ಟಡಗಳಿಗೆ ಒಸಿ, ಸಿಸಿ ಅಗತ್ಯವಿಲ್ಲ

30 ಅಡಿ x 40 ಅಡಿ ನಿವೇಶನದವರೆಗಿನ ಕಟ್ಟಡಗಳಿಗೆ ವಿನಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲವಾಗಲು 30 x 40 ಅಡಿ ನಿವೇಶನದವರೆಗಿನ ಕಟ್ಟಡಗಳಿಗೆ ಪ್ರಾರಂಭಿಕ ಪ್ರಮಾಣಪತ್ರ (ಸಿಸಿ) ಮತ್ತು ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆಯುವುದಕ್ಕೆ ವಿನಾಯಿತಿ ನೀಡಲಾಗುತ್ತದೆ' ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ 'ಕರ್ನಾಟಕ ಪಾಲಿಕೆಗಳ ತಿದ್ದುಪಡಿ ಮಸೂದೆ-2025' ಮಂಡಿಸಿದ ಸಚಿವರು, 'ಕಡಿಮೆ ಅಪಾಯವಿರುವ ಕಟ್ಟಡಗಳಿಗೆ ಒಸಿ ಮತ್ತು ಸಿಸಿ ಪಡೆಯುವುದನ್ನು ತೆಗೆದುಹಾಕಲಾಗಿದೆ. 50 x 80 ಅಡಿಯವರೆಗಿನ ನಿವೇಶನದಲ್ಲಿರುವ ಕಟ್ಟಡಗಳಿಗೆ ಒಸಿ, ಸಿಸಿ ಬೇಡ ಎಂಬುದು ನನ್ನ ಸಲಹೆಯಾಗಿದೆ. ಆದರೆ, ಸರ್ಕಾರ 30 x 40 ಅಡಿ ನಿವೇಶನದವರೆಗೆ ನಿಗದಿಪಡಿಸುವ ಸಾಧ್ಯತೆ ಇದೆ' ಎಂದು ಮಾಹಿತಿ ನೀಡಿದರು.

'ನಗರ ಪಾಲಿಕೆಗಳಲ್ಲಿ ಕಟ್ಟಡಗಳ ನಕ್ಷೆ ಮಂಜೂರು ಮಾಡುವ ಪ್ರಾಥಮಿಕ ಹಂತದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು 'ವೃತ್ತಿಪರರನ್ನು' ನಿಯೋಜಿಸಲಾಗುತ್ತದೆ. ನಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅವರು ಅಪ್‌ಲೋಡ್ ಮಾಡುವುದರಿಂದ ತ್ವರಿತವಾಗಿ ನಕ್ಷೆ ಲಭ್ಯವಾಗುತ್ತದೆ. ಆರ್ಕಿಟೆಕ್ಟ್, ಎಂಜಿನಿಯರ್‌ಗಳು, ರಚನಾ ವಿನ್ಯಾಸ ಸಮಾಲೋಚಕರು, ಎಂಇಪಿ ಸಲಹೆಗಾರರು, ಪರಿಸರ ಸಮಾಲೋಚಕರು, ಪಟ್ಟಣ ಯೋಜಕರು ವೃತ್ತಿಪರರು ಪಟ್ಟಿಯಲ್ಲಿರುತ್ತಾರೆ. ಡಿಪ್ಲೊಮಾ ಎಂಜಿನಿಯರ್‌ಗಳಿಗೂ ಅವಕಾಶ ಸಿಗಲಿದೆ' ಎಂದು ಸಚಿವರು ಹೇಳಿದರು.

'ಪಾಲಿಕೆ ವ್ಯಾಪ್ತಿಯಲ್ಲಿ ವ್ಯಾಪಾರ ಪರವಾನಗಿ ಪಡೆಯಲು ಕನಿಷ್ಠ ಹಾಗೂ ಗರಿಷ್ಠ ಶುಲ್ಕವನ್ನು ನಿಗದಿ ಮಾಡಲಾಗುತ್ತದೆ. ಪಾಲಿಕೆಗಳ ಆಸ್ತಿಯನ್ನು ಸರ್ಕಾರಿ ಇಲಾಖೆಗಳಿಗೆ ನೀಡುವ ಗುತ್ತಿಗೆ ಅವಧಿಯನ್ನು ಐದು ವರ್ಷದಿಂದ 30 ವರ್ಷಕ್ಕೆ ಹೆಚ್ಚಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

ಧ್ವನಿಮತದ ಮೂಲಕ 'ಕರ್ನಾಟಕ ಪಾಲಿಕೆಗಳ ತಿದ್ದುಪಡಿ ಮಸೂದೆ-2025'ಗೆ ಅಂಗೀಕಾರ ನೀಡಲಾಯಿತು.

ಆಯುಕ್ತಾಲಯ: ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ಪಟ್ಟಣ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರಗಳನ್ನು ಒಟ್ಟುಗೂಡಿಸಿ, ಆಯುಕ್ತಾಲಯವನ್ನಾಗಿಸಿ, ಐಎಎಸ್ ಅಧಿಕಾರಿಗಳನ್ನು ಆಯುಕ್ತರನ್ನಾಗಿ ನೇಮಿಸುವ 'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ತಿದ್ದುಪಡಿ ಮಸೂದೆ- 2025'ಕ್ಕೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರ ನೀಡಲಾಯಿತು.

ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯನ್ನು ಈ ಮಸೂದೆಯಡಿ ತರಲಾಗಿದ್ದು, 1227 ಚದರ ಕಿ.ಮೀ ವಿಸ್ತಾರ ಹೊಂದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವ್ಯಾಪ್ತಿಯನ್ನು 500 ಚದರ ಕಿ.ಮೀ.ಗೆ ಇಳಿಸಿ, 716 ಚದರ ಕಿ.ಮೀ. ವಿಸ್ತೀರ್ಣದ ಯೋಜನಾ ಪ್ರಾಧಿಕಾರದ ಅಧಿಕಾರವನ್ನು ಬಿಬಿಎಂಪಿಗೆ ನೀಡಲಾಗುತ್ತದೆ ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ ತಿಳಿಸಿದರು.

ಮುಖ್ಯಾಂಶಗಳು

- ಪಾಲಿಕೆಗಳಲ್ಲಿ ಕಟ್ಟಡ ನಕ್ಷೆ ಮಂಜೂರಾತಿಗೆ ವೃತ್ತಿಪರರ ನೇಮಕ
- ಯೋಜನಾ ಪ್ರಾಧಿಕಾರಿಗಳನ್ನು ಒಗ್ಗೂಡಿಸಿ ಆಯುಕ್ತಾಲಯ ರಚನೆ
- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿ 500 ಕಿ.ಮೀ.ಗೆ ಇಳಿಕೆ

ವಿಂಡೋ-ಟ್ರೈಲಿಂಗ್ ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಋತ್ಯ ರೈಲ್ವೆಯ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ಕೆ.ಎಸ್. ಜೈನ್ ವಿಂಡೋ-ಟ್ರೈಲಿಂಗ್ ತಪಾಸಣೆ ನಡೆಸುವ ಮೂಲಕ ಕೆಎಸ್‌ಆರ್ ಬೆಂಗಳೂರು-ಮಂಡ್ಯ ನಡುವಿನ ಕಾರ್ಯಾಚರಣೆ ಮತ್ತು ಸುರಕ್ಷತಾ ಮಾನದಂಡಗಳನ್ನು ಪರಿಶೀಲಿಸಿದರು.

ಅಮೃತ ಭಾರತ ನಿಲ್ದಾಣ ಯೋಜನೆಯಡಿಯಲ್ಲಿ ಕೆಂಗೇರಿ, ರಾಮನಗರ, ಚನ್ನಪಟ್ಟಣ ಮತ್ತು ಮಂಡ್ಯ ನಿಲ್ದಾಣಗಳಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯ ಪ್ರಗತಿ ಪರಿಶೀಲಿಸಿದರು. ಪ್ರಯಾಣಿಕರಿಗೆ ಸುಧಾರಿತ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪ್ರವೀಣ್ ಕಾತರಕಿ, ಮುಖ್ಯ ಯೋಜನಾ ವ್ಯವಸ್ಥಾಪಕ (ಗತಿ ಶಕ್ತಿ) ಗುಲ್ ಅಶ್ಫಾಕ್ ಮಹಮ್ಮದ್, ಹಿರಿಯ ವಿಭಾಗೀಯ ಎಂಜಿನಿಯರ್‌ರಾದ ಸಂಚಿತ್ ಶ್ರೀವಾಸ್ತವ, ಬಿ.ಎಸ್. ಶಿವಪ್ರಸಾದ್ ಭಾಗವಹಿಸಿದ್ದರು.

ಕೆರೆ ಸಂರಕ್ಷಣೆ ಮಸೂದೆಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆಗಳ ಬಫರ್ ಝೋನ್ ಕಡಿಮೆ ಮಾಡಲು ಅವಕಾಶ ಮಾಡಿಕೊಡುವ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆ'ಯನ್ನು ವಿರೋಧ ಪಕ್ಷಗಳ ಸದಸ್ಯರ ಸಭಾತ್ಯಾಗದ ನಡುವೆಯೇ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲಾಯಿತು.

ಸಭಾ ನಾಯಕ ಎನ್.ಎಸ್. ಬೋಸರಾಜು ಮಸೂದೆ ಮಂಡಿಸಿದರು. 'ಬೆಂಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸಣ್ಣ ಜಲಮೂಲಗಳ ಸಂರಕ್ಷಣೆಯ ಜತೆಗೆ ಅಭಿವೃದ್ಧಿ ಚಟುವಟಿಕೆಗಳನ್ನೂ ನಡೆಸಲು ಬಫರ್ ವಲಯವನ್ನು ಕಡಿಮೆ ಮಾಡಬೇಕು ಎಂಬ ಒತ್ತಾಯವಿತ್ತು' ಎಂದರು.

ಬೆಂಗಳೂರು ವ್ಯಾಪ್ತಿಯ ಕೆರೆಗಳ ಬಫರ್ ವಲಯವನ್ನು ಕಡಿಮೆ ಮಾಡುವುದಕ್ಕೆ ವಿರೋಧ ಪಕ್ಷಗಳ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ತಿದ್ದುಪಡಿಯಿಂದ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಅನುಕೂಲವಾಗುತ್ತದೆ. ಕೆರೆಗಳು ಹಾಳಾಗುತ್ತವೆ ಎಂದು ಕಳವಳ ವ್ಯಕ್ತಪಡಿಸಿದರು. ಸಚಿವ ಬೋಸರಾಜು ಅವರು ನೀಡಿದ ಉತ್ತರಗಳಿಗೆ ತೃಪ್ತರಾಗದ ಸದಸ್ಯರು, 'ಬೆಂಗಳೂರಿನ ಕೆರೆಗಳಿಗೆ ಸಂಬಂಧಿಸಿದ ಸೆಕ್ಷನ್‌ಗಳನ್ನು ವಾಪಸ್ ಪಡೆಯಬೇಕು. ಇಲ್ಲವೇ ಮಸೂದೆಯನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಬೇಕು' ಎಂದು ಒತ್ತಾಯಿಸಿದರು.

ಈ ಮಧ್ಯೆಯೇ ಬೋಸರಾಜು ಅವರು ಮಸೂದೆಯನ್ನು ಅಂಗೀಕರಿಸುವಂತೆ ಕೋರಿದರು. ಆಗ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಆರೋಗ್ಯ ಸಿಬ್ಬಂದಿಗೆ ಕೌನ್ಸೆಲಿಂಗ್ ಮೂಲಕವಷ್ಟೇ ವರ್ಗಾವಣೆ

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆಯನ್ನು ವಿಧಾನಪರಿಷತ್ ಅಂಗೀಕರಿಸಿತು. ಆರೋಗ್ಯ ಇಲಾಖೆಯ ಸಿಬ್ಬಂದಿಯನ್ನು ಕೌನ್ಸೆಲಿಂಗ್ ಮೂಲಕ ಮಾತ್ರ ವರ್ಗಾವಣೆ ಮಾಡಲು ಈ ಮಸೂದೆ ಅವಕಾಶ ಮಾಡಿಕೊಡುತ್ತದೆ.

ಬೆಂಗಳೂರು ನಗರದಲ್ಲಿ ದೀರ್ಘಾವಧಿ ಸೇವೆಯಲ್ಲಿ ಇರುವವರನ್ನು ಹೊರ-ಜಿಲ್ಲೆಗಳಿಗೆ, ತಜ್ಞ ವೈದ್ಯರನ್ನು ತಜ್ಞರ ಹುದ್ದೆಗಳಿಗಷ್ಟೇ ವರ್ಗಾವಣೆ ಮಾಡಲು ಅವಕಾಶ ಮಾಡಿಕೊಡುವ ಅಂಶಗಳು ಮಸೂದೆಯಲ್ಲಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Manager

ELECTRONICS CITY INDUSTRIAL TOWNSHIP AUTHORITY
ELCITA
No. 7 (P), West Phase, Electronics City, Bangalore-560100
Website: www.elcita.in; Phone: 080-4660 2222
ELCITA invites applications from suitable candidates for the position of
MANAGER - TOWN PLANNING
Candidate should be a graduate in civil engineering or architecture with 6-8 years of experience in in the areas of building plan approvals & license, and commencement, completion & building occupancy certificates with working knowledge of Karnataka Municipalities Act, 1964; Karnataka Town & Country Planning Act, 1961; and byelaws of Bangalore Development Authority (BDA). Fluency in reading, writing & speaking of Kannada and English is essential.
To download JD and Biodata Form, visit : www.elcita.in
Send applications along with CV and ELCITA Biodata form to Email ID: franklin.b@elcita.in
Last date for receipt: 06-09-2025 before 5 PM

Teachers/ Professors

WANTED COMPUTER TEACHER 1st to 10th Std Male or Femlae State Syllabus New Carmel English School, Divanarapalya, Yeshwanthpur, Bangalore. Mob:- 9379191544.

PERSONAL

Lost

LOST
I, **M. Nagaraj,** residing at Belathur Village, Bidarahalli Hobli, Kodugodi Post Bengalore East Taluk, Bangalore-560067, have lost my **Original General Power of Attorney, Document / Identification No. (BK-IV282/2012-2013), Partition Deed Document / Identification No. (17870/2018-19), Sharing Agreement Document / Identification : No. (7297/2012-2013), Kadugodi, Bangalore** while in shifting the house. Finders please **Contact No: 6364147138**

DOCUMENT LOST
I, Manjula W/o. Mallesh Nagarbhavi, Mudulpalya, Sanjeevini Nagar, 3rd Main Road, No 71. Bangalore 72 have lost original sale deed document No. BK_I 2932/2016/17, Survey No. 15/1 katha No. 186 site No. 36 Kubarahalli, Bangalore-560090 While in Transit. Finders Please
Contact : 8197105738

Change of Name

I, SHAKER KESHAV IYANGER, residing at Bengaluru-91, have changed my name as SHAKER KESHAV IYENGAR, vide affidavit dated 20/08/2025 before Notary K.S. Bammappanavar, Bengaluru

I, NITHILA ASHOK, D/o Ashok Babu Thangaraj, aged about 19 years, Residing at No.4043,Casa Serenita Sobha City,Thanisandra Main Road, R.K. Hegede Nagar, Bengaluru-560077. Have Changed my Name NITHILA ASHOK BABU to NITHILA ASHOK vide affidavit Dated:24.07.2025 before Notary K.V.Mani,Bengaluru.

I, DWARAKA S/o Jairamalu have changed my name to DWARAKA J vide affidavit dated: 20/8/2025 Before Notary Shreeshail B.Gobbani Bangalore

CHANGE OF NAME
I, **DEESHA PHUTANE** D/o Gnandev Phutane, residing at No.155, Jakkasandra Block, 8th Main Road, 3rd Block, Koramangala, Bengaluru-560034, have changed my name to **DEESHA GNANDEV PHUTANE** vide affidavit dated 18-08-2025 sworn before advocate and notary B.M. Chandrashekar, Bengaluru.

NAME CHANGE NOTICE I, Suraj Shivaji Kathare, aged 27 years, S/o Shivaji Kathare, residing at Aland, Kalaburagi District, Karnataka, state that my name has been recorded as "Suraj Shivaji" in some of my educational documents. My correct name is "Suraj Shivaji Kathare" and henceforth I shall be known by this name for all official and legal purposes.

CHANGE OF NAME
I, **SOPHIA,** residing at # 88, 4th Cross, G.R. Homes, Meenakshi Layout, Rayasandra, Hosa Road, Bengaluru-560099, have changed my name to **SOPHIA CYRIL VINCENT** vide affidavit dated 04.08.2025 before notary V Rangaraju, Bengaluru. Henceforth I shall be called **SOPHIA CYRIL VINCENT** only

I, MANI R/at No.10, 9th Cross, Kanshiramnagar, Vidyarnyapura Post Bangalore- 560097, have changed my name to MANI.R vide affidavit dated: 20/8/2025 Before Notary Renuka.C Bangalore.

CHANGE OF NAME
I, **ARCHISHA** D/o Anil Kumar residing at No. E/279/201, Maithri Residency, 11th Main, 5th Cross, Malleshapalaya New Thippsandra Post Bengaluru-560075, have changed my name to **ARCHISHA MAURYA** vide affidavit dated 06.08.2025 before notary A.R. Muneer Ahmed., Bengaluru.

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

PUBLIC NOTICE
TO WHOMSOEVER IT MAY CONCERN
This is to inform the general public that we have cancelled both the agreement to sale dated 06.02.2024, general power of attorney dated 25.10.2024 and the supplementary agreement of sale dated 25.10.2024 with Mr. R. Ranga Prasad, Proprietor, M/s. Saar Assets Management on 07/08/2025 with respect to the following schedule property:

ITEM NO. 1:
All that piece and parcel of the immovable property being non-agricultural undeveloped converted land situated in Sy. No. 170/5 of Hulikere Gunnur Village, Kailancha Hobli, Ramanagara Taluk, measuring 05 acres 26 guntas and bounded on the:
East by : Land in Sy. No.160, **West by :** Land in Sy. No.170/4, **North by :** Land in Sy. No.203, **South by :** Land in Sy. No.169.

ITEM NO. 2:
All that piece and parcel of the immovable property being non-agricultural undeveloped converted land situated in Sy. No. 170/3 of Hulikere Gunnur Village, Kailancha Hobli, Ramanagara Taluk, measuring 11 guntas and bounded on the:
East by : Land in Sy. No.170/4, **West by :** Land in Sy. No.170/2, **North by :** Land in Sy. No.203, **South by :** Land in Sy. No.170/6.

ITEM NO. 3:
All that piece and parcel of the immovable property being non-agricultural undeveloped converted land situated in Sy. No. 170/4 of Hulikere Gunnur Village, Kailancha Hobli, Ramanagara Taluk, measuring 02 acres and bounded on the:
East by : Land in Sy. No.170/5, **West by :** Land in Sy. No.170/6, **North by :** Land in Sy. No.203, **South by :** Land in Sy. No.168/2.

ITEM NO. 4:
All that piece and parcel of the immovable property being non-agricultural undeveloped converted land situated in Old Sy. No.168, Re-Sy. No.168/2 of Hulikere Gunnur Village, Kailancha Hobli, Ramanagara Taluk, measuring 03 acres and bounded on the:
East by : Land in Sy. No.169, **West by :** Land in Sy. No.172 & 173, **North by:** Land in Sy. No.170/2 & 6, **South by:** Land in Sy. No.168/1.

ITEM NO. 5:
All that piece and parcel of the immovable property being non-agricultural undeveloped converted lands situated in Sy. No. 368/1, measuring 01 acre 15 guntas, situated at Hulikere Gunnur Village, Kailancha Hobli, Ramanagara Taluk and bounded on the:
East by : Land in Sy. No.203, **West by :** Land in Sy. No.368/3, **North by :** Land in Sy.No.209, **South by :** Oni &Land in Sy. No.170/2 & 3.

ITEM NO. 6:
All that piece and parcel of the immovable property being non-agricultural undeveloped converted lands situated in Sy. No. 368/3, measuring 01 acre 29¼ guntas, situated at Hulikere Gunnur Village, Kailancha Hobli, Ramanagara Taluk and bounded on the:
East by : Land in Sy. No.368/1, **West by :** Land in Sy. No.368/2, **North by :** Road & Land in Sy.No.209, **South by :** Oni & Land in Sy. No.170/2 & 3.

ITEM NO. 7:
All that piece and parcel of the immovable property being non-agricultural undeveloped converted land situated in Sy. No. 170/3, Re-Sy. No.170/6 of Hulikere Gunnur Village, Kailancha Hobli, Ramanagara Taluk, measuring 04 acres 13 guntas and bounded on the:
East by : Land in Sy. No.170/4, **West by :** Land in Sy. No.170/2 & 168/2, **North by :** Land in Sy. No.170/3, **South by :** Land in Sy. No.168/2.

Please note, any transaction that would be done with Mr. R. Ranga Prasad, Proprietor, M/s. Saar Assets Management is at your own sole cost and risk and that we Kodanda Ram P and Bharathi. B would not be held responsible for the same.
Kodanda Ram P & Bharathi B

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಕೆಎಚ್‌ಬಿ: 10 ಸಾವಿರ ಫ್ಲ್ಯಾಟ್

ಮಧ್ಯಮ ವರ್ಗದವರಿಗೆ ರಾಜಧಾನಿಯಲ್ಲಿ ಕೈಗೆಟಕುವ ದರದಲ್ಲಿ ಲಭ್ಯ

• ಎ.ಎಂ.ಸುರೇಶ

ಫ್ಲ್ಯಾಟ್ ದರ (ತಾತ್ಕಾಲಿಕ)

₹25 ಲಕ್ಷದಿಂದ ₹30 ಲಕ್ಷ
1 ಬಿಎಚ್‌ಕೆ

₹35 ಲಕ್ಷದಿಂದ ₹40 ಲಕ್ಷ
2 ಬಿಎಚ್‌ಕೆ

ಬೆಂಗಳೂರು: ಬಡವರು ಹಾಗೂ ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟು ಕೈಗೆಟಕುವ ದರದಲ್ಲಿ ಲಭ್ಯವಾಗುವ ಹತ್ತು ಸಾವಿರ ಫ್ಲ್ಯಾಟ್‌ಗಳನ್ನು ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ.

ಬೆಂಗಳೂರಿನಲ್ಲಿ ಫ್ಲ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆರಂಭಿಕ ಹಂತದಲ್ಲಿ ಸೂರ್ಯನಗರ ನಾಲ್ಕನೇ ಹಂತ ಮತ್ತು ಬ್ಯಾಲಾಳು ಬಳಿ ಫ್ಲ್ಯಾಟ್‌ಗಳನ್ನು ನಿರ್ಮಿಸುವ ಯೋಚನೆ ಇದೆ. ಬೇಡಿಕೆ ಹಾಗೂ ಜಮೀನಿನ ಲಭ್ಯತೆ ಆಧರಿಸಿ ನಗರದ ಬೇರೆ ಬೇರೆ ಭಾಗಗಳಲ್ಲಿ ಫ್ಲ್ಯಾಟ್‌ಗಳನ್ನು ನಿರ್ಮಿಸುವ ಉದ್ದೇಶವಿದೆ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಐದೂವರೆ ಚದರ ವಿಸ್ತೀರ್ಣದ 1 ಬಿಎಚ್‌ಕೆ ಹಾಗೂ ಏಳೂವರೆ ಚದರ ವಿಸ್ತೀರ್ಣದ 2 ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ಜಿ + 3 ಮಾದರಿಯಲ್ಲಿ ನಿರ್ಮಿಸಲಾಗುತ್ತದೆ. ಸದ್ಯಕ್ಕೆ ಬೆಂಗಳೂರಿನಲ್ಲಿ ಫ್ಲ್ಯಾಟ್ ನಿರ್ಮಾಣ ಯೋಜನೆಯನ್ನು ಕಾರ್ಯಗತಗೊಳಿಸುತ್ತೇವೆ. ಮುಂದಿನ ದಿನಗಳಲ್ಲಿ ರಾಜ್ಯದ ಬೇರೆ ಯಾವುದಾದರೂ ಭಾಗದಿಂದ ಬೇಡಿಕೆ ಬಂದರೆ, ಅಲ್ಲೂ ನಿರ್ಮಾಣ ಮಾಡುವ ಬಗ್ಗೆ ಚಿಂತನೆ ನಡೆಸುತ್ತೇವೆ ಎಂದು ವಿವರಿಸಿದರು.

ಹೊಸ ಬಡಾವಣೆ: ಬಿ.ಎಂ. ಕಾವಲ್‌ನಲ್ಲಿ 314 ಎಕರೆ ಜಾಗದಲ್ಲಿ ಹೊಸ ಬಡಾವಣೆ ನಿರ್ಮಿಸಲು ಗೃಹ ಮಂಡಳಿ ತೀರ್ಮಾನಿಸಿದೆ. ರೈತರಿಂದ ಜಮೀನು ಪಡೆದು 50:50 ಅನುಪಾತದಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಒಪ್ಪಂದದ ಪ್ರಕಾರ ಶೇ 50ರಷ್ಟು ನಿವೇಶನಗಳನ್ನು ರೈತರಿಗೆ ನೀಡಲಾಗುತ್ತದೆ. ಇನ್ನುಳಿದ 50ರಷ್ಟು ನಿವೇಶನಗಳನ್ನು ಲಾಟರಿ ಮೂಲಕ ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುತ್ತದೆ.

ಈಗಾಗಲೇ ಪ್ರಾಥಮಿಕ ಪ್ರಕ್ರಿಯೆಗಳು ಶುರುವಾಗಿವೆ. ಡಿಸೆಂಬರ್ ವೇಳೆಗೆ ಬಡಾವಣೆ ನಿರ್ಮಾಣ ಕಾರ್ಯ ಆರಂಭವಾಗಲಿದೆ. ಸಿವಿಲ್ ಕಾಮಗಾರಿ ಆರಂಭವಾದ ಬಳಿಕ, ನಿವೇಶನಗಳ ಹಂಚಿಕೆಗೆ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗುತ್ತದೆ ಎಂದು ಅವರು ವಿವರಿಸಿದರು.

'ಸುಮಾರು ಐದು ಸಾವಿರ ನಿವೇಶನಗಳು ಲಭ್ಯವಾಗಲಿವೆ. ಮೂಲೆ ನಿವೇಶನಗಳನ್ನು ರೈತರಿಗೆ ನೀಡುವುದಿಲ್ಲ. ಒಪ್ಪಂದದ ಪ್ರಕಾರ ಮೂಲೆ ನಿವೇಶನಗಳನ್ನು ಮಂಡಳಿಯೇ ಹರಾಜು ಮೂಲಕ ಹಂಚಿಕೆ ಮಾಡಲಿದೆ. ಮಂಡಳಿಗೆ ಸರ್ಕಾರದಿಂದ ಅನುದಾನ ಬರುವುದಿಲ್ಲ. ಸಿಬ್ಬಂದಿ ಸಂಬಳ ಸೇರಿದಂತೆ ಎಲ್ಲ ರೀತಿಯ ವೆಚ್ಚಗಳಿಗೆ ಮಂಡಳಿಯೇ ಸಂಪನ್ಮೂಲಗಳ ವ್ಯವಸ್ಥೆ ಮಾಡಿಕೊಳ್ಳಬೇಕು. ಮೂಲೆ ನಿವೇಶನಗಳ ಹರಾಜಿನಿಂದ ಬರುವ ಹಣವನ್ನು ಇದಕ್ಕೆ ಬಳಸಿಕೊಳ್ಳುತ್ತೇವೆ' ಎಂದು ಅವರು ತಿಳಿಸಿದರು.

ನಿವೇಶನಗಳಿಗೆ ಹೆಚ್ಚಿನ ಬೇಡಿಕೆ

ಗೃಹ ಮಂಡಳಿಯ ನಿವೇಶನಗಳಿಗೆ ಸಾರ್ವಜನಿಕರಿಂದ ಹೆಚ್ಚಿನ ಬೇಡಿಕೆ ಇದೆ. ಆದರೆ, ಹೊಸ ಬಡಾವಣೆಗಳ ನಿರ್ಮಾಣಕ್ಕೆ ಮೊದಲಿನ ಹಾಗೆ ಜಾಗ ಸಿಗುವುದಿಲ್ಲ. ಜಮೀನು ನೀಡಲು ರೈತರು ಸುಲಭವಾಗಿ ಒಪ್ಪುವುದಿಲ್ಲ. ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣಗಳು ನ್ಯಾಯಾಲಯಕ್ಕೆ ಹೋದರೆ ಬೇಗ ಇತ್ಯರ್ಥವಾಗುವುದಿಲ್ಲ. ಹೀಗಾಗಿ ಹೊಸ ಬಡಾವಣೆಗಳ ನಿರ್ಮಾಣ ಸುಲಭವಾಗಿ ಆಗುವುದಿಲ್ಲ ಎಂದು ಮಂಡಳಿಯ ಎಂಜಿನಿಯರ್ ವಸ್ತುಸ್ಥಿತಿಯನ್ನು ವಿವರಿಸಿದರು.

ನಿವೇಶನಕ್ಕೆ ಸಂಬಂಧಿಸಿ, ವಿವಾದಗಳು ಇರುವುದಿಲ್ಲ ಎಂಬ ಕಾರಣಕ್ಕೆ ನಾಗರಿಕರು ಕೆಎಚ್‌ಬಿ ನಿವೇಶನ ಖರೀದಿಗೆ ಮುಂದೆ ಬರುತ್ತಾರೆ. ನಿವೇಶನಗಳ ಸಂಖ್ಯೆಗಿಂತ ಅರ್ಜಿಗಳ ಸಂಖ್ಯೆ ಅಧಿಕವಾಗಿರುವ ಕಾರಣ ಲಾಟರಿ ಮೂಲಕ ಹಂಚಿಕೆ ಮಾಡುತ್ತಿದ್ದೇವೆ. ಹೀಗಾಗಿ ಅರ್ಜಿ ಹಾಕಿದ ಎಲ್ಲರಿಗೂ ಸಿಗುವುದಿಲ್ಲ, ಬೇರೆ ಕಡೆ ಬಡಾವಣೆ ನಿರ್ಮಿಸಿದಾಗ ಮತ್ತೆ ಪ್ರಯತ್ನ ಮಾಡಬಹುದು ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನೆ

'ದೊಡ್ಡ ಗೌಡರ ಕೊಡುಗೆ ಏನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್‌ನ ದೊಡ್ಡ ಗೌಡರು, ಅವರ ಮಕ್ಕಳು ಮತ್ತು ಮೊಮ್ಮಕ್ಕಳು ದೇಶಕ್ಕಾಗಿ ಯಾವ ತ್ಯಾಗ ಮಾಡಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ರಾಜೀವ್ ಗಾಂಧಿ ಮತ್ತು ದೇವರಾಜ ಅರಸು ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಲ್ಲ ಸಮುದಾಯಗಳಿಗೂ ತೃಪ್ತಿಯಾಗುವಂತೆ ನಮ್ಮ ಸರ್ಕಾರ ಒಳ ಮೀಸಲಾತಿ ನೀಡಿದೆ. ಇದು ದೇವರಾಜ ಅರಸು ಅವರಿಗೆ ನಮ್ಮ ಸರ್ಕಾರ ಸಲ್ಲಿಸುತ್ತಿರುವ ನಮನ
ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

'ವಿದ್ಯಾರ್ಥಿಯಾಗಿದ್ದಾಗ ನಾನು ಜನರಲ್ ಹಾಸ್ಟೆಲ್‌ನಲ್ಲಿದ್ದೆ. ನಮ್ಮ ಊರಿನಲ್ಲಿ ಆಗ ದೂರವಾಣಿ ಸಂಪರ್ಕ ಇರಲಿಲ್ಲ. ಅದನ್ನು ಪಡೆಯಬೇಕಾದರೆ ಮೂರರಿಂದ ನಾಲ್ಕು ವರ್ಷ ಕಾಯಬೇಕಿತ್ತು. ಆದರೆ, ಇಂದು ಪ್ರತಿಯೊಬ್ಬರೂ ಎರಡು ಮೂರು ಫೋನ್ ಇಟ್ಟುಕೊಂಡಿದ್ದಾರೆ. ಈ ದೇಶಕ್ಕೆ ಕಂಪ್ಯೂಟರ್ ಹಾಗೂ ದೂರವಾಣಿ ತಂತ್ರಜ್ಞಾನದ ಕ್ರಾಂತಿ ತಂದವರು ರಾಜೀವ್ ಗಾಂಧಿ' ಎಂದರು.

'ಜೆಡಿಎಸ್‌ನವರ ಕೊಡುಗೆ ಏನು? ಸ್ವಾತಂತ್ರ್ಯ ಹೋರಾಟಕ್ಕೆ ಬಿಜೆಪಿಯವರ ಕೊಡುಗೆ ಏನು? ಅಧಿಕಾರಕ್ಕೆ ಬಂದ ನಂತರ ಬಡವರಿಗೆ ಹೊಟ್ಟೆ ತುಂಬಿಸಿದ್ದಾರಾ? ಜಮೀನು ಕೊಟ್ಟಿದ್ದಾರಾ' ಎಂದು ಪ್ರಶ್ನಿಸಿದರು.

ಸೆಪ್ಟೆಂಬರ್ 24ರಂದು ನಗರದ ಅರಮನೆ ಮೈದಾನದಲ್ಲಿ ನಡೆಯಲಿರುವ ಕರ್ನಾಟಕ ರೆಡ್ಡಿ ಜನಸಂಘದ ಶತಮಾನೋತ್ಸವ ಸಮಾರಂಭಕ್ಕೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರನ್ನು ರಾಜ್ಯಸಭೆಯ ಮಾಜಿ ಸದಸ್ಯ ಕೆ.ಸಿ.ರಾಮಮೂರ್ತಿ, ರೆಡ್ಡಿ ಜನಸಂಘದ ಅಧ್ಯಕ್ಷ ಜಯರಾಮರೆಡ್ಡಿ, ಪ್ರಧಾನ ಕಾರ್ಯದರ್ಶಿ ಶೇಖರ್ ರೆಡ್ಡಿ ಆಹ್ವಾನಿಸಿದರು

'₹190 ಕೋಟಿ ಮೌಲ್ಯದ ಜಮೀನು ಖಾಸಗಿಗೆ ಗುತ್ತಿಗೆ'

ಬೆಂಗಳೂರು: ಜಾಲಹಳ್ಳಿ ಗ್ರಾಮದ ಸರ್ವೆ ನಂಬರ್ 73ರಲ್ಲಿ ತುಮಕೂರು–ಬಳ್ಳಾರಿ ವರ್ತುಲ ರಸ್ತೆಗೆ ಹೊಂದಿಕೊಂಡಿರುವ, ಮುತ್ಯಾಲಮ್ಮ ದೇವಸ್ಥಾನಕ್ಕೆ ಸೇರಿದ ₹190 ಕೋಟಿ ಮೌಲ್ಯದ 1.32 ಎಕರೆ ಜಮೀನನ್ನು ಖಾಸಗಿ ಸಂಸ್ಥೆಗೆ 20 ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಬಿಜೆಪಿಯ ಮುನಿರತ್ನ ಆರೋಪಿಸಿದರು.

'ಮೆಟ್ರೊ ಸೇರಿದಂತೆ ಸರ್ಕಾರದ ಯೋಜನೆಗಳಿಗೆ ಅದೇ ಜಾಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗಿದೆ. ಅದೇ ಜಾಗವನ್ನು ಯೋಜನೆಗಳಿಗೆ, ವಾಹನಗಳ ನಿಲುಗಡೆಗೆ ಬಳಸಿಕೊಳ್ಳಬಹುದಿತ್ತು. ಕಡಿಮೆ ಮೊತ್ತಕ್ಕೆ ಗುತ್ತಿಗೆ ನೀಡಿರುವುದರ ಹಿಂದೆ ಅವ್ಯವಹಾರ ನಡೆದಿರುವ ಸಾಧ್ಯತೆ ಇದೆ. ಸದನದಲ್ಲಿ ಹಿಂದೆ ಈ ವಿಚಾರ ಪ್ರಸ್ತಾಪವಾದಾಗ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಖಾಸಗಿಗೆ ಗುತ್ತಿಗೆ ನೀಡುವುದಿಲ್ಲ ಎಂದಿದ್ದರು. ಸದನಕ್ಕೆ ಸುಳ್ಳು ಮಾಹಿತಿ ನೀಡಿದ್ದು ಹಕ್ಕುಚ್ಯುತಿ ಆಗುವುದಿಲ್ಲವೇ' ಎಂದು ಆರ್. ಅಶೋಕ ಪ್ರಶ್ನಿಸಿದರು.

ವಾರ್ಷಿಕ ₹20 ಸಾವಿರಕ್ಕೆ ಗುತ್ತಿಗೆ ನೀಡಲಾಗಿತ್ತು. ಆಕ್ಷೇಪ ವ್ಯಕ್ತವಾದ ನಂತರ ಜಿಲ್ಲಾಧಿಕಾರಿ ಸ್ಥಳ ಪರಿಶೀಲನೆ ನಡೆಸಿ, ₹2.5 ಕೋಟಿ ನಮೂದಿಸಿ, ಶಿಫಾರಸು ಮಾಡಿದ್ದಾರೆ. ಕೊನೆಗೆ ಇದು ಮುಜರಾಯಿ ಇಲಾಖೆಗೆ ಸೇರಿದ್ದು ಎಂದು ಕಡತ ವರ್ಗಾಯಿಸಿ, ಆ ಇಲಾಖೆ ಮೂಲಕ ಖಾಸಗಿಗೆ ಗುತ್ತಿಗೆ ನೀಡಲಾಗಿದೆ. ಈ ವಿಷಯ ಮುಜರಾಯಿ ಸಚಿವರ ಗಮನಕ್ಕೂ ಬಂದಿಲ್ಲ. ಜಾಗವನ್ನು ಸರ್ಕಾರ ಮರಳಿ ಪಡೆದು, ದೇವಸ್ಥಾನಕ್ಕೆ ನೀಡಬೇಕು ಎಂದು ಒತ್ತಾಯಿಸಿದರು.

'ಸೆಂಚುರಿ ಸ್ಪೋರ್ಟ್ಸ್ ವಿಲೇಜ್' ಹೆಸರಿನಲ್ಲಿ 700 ನಿವೇಶನಗಳ ಹಂಚಿಕೆ

ಅರಣ್ಯ ಭೂಮಿ ಒತ್ತುವರಿ ತೆರವಿಗೆ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 51 ಎಕರೆ 4 ಗುಂಟೆ ಜಮೀನು ಒತ್ತುವರಿ
- ಸಾವಿರ ಕೋಟಿ ರೂಪಾಯಿಗಳಿಗೂ ಮಿಗಿಲಾದ ಮೌಲ್ಯ ಹೊಂದಿದ ಜಮೀನು
- ಕಾಲಮಿತಿಯಲ್ಲಿ ಒತ್ತುವರಿ ತೆರವುಗೊಳಿಸುವಂತೆ ಹೈಕೋರ್ಟ್ ಆದೇಶ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪ ಇರುವ ಸಾವಿರ ಕೋಟಿ ರೂಪಾಯಿಗೂ ಹೆಚ್ಚಿನ ಮೌಲ್ಯ ಹೊಂದಿರುವ 51 ಎಕರೆಗೂ ಅಧಿಕ ಅರಣ್ಯ ಭೂಮಿ ಅತಿಕ್ರಮಣ ತೆರವುಗೊಳಿಸಲು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಒತ್ತುವರಿ ತೆರವಿಗೆ ಆದೇಶಿಸಿ ಬೆಂಗಳೂರು ಗ್ರಾಮಾಂತರ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾವಕನಹಳ್ಳಿ ಗೇಟ್, ದೇವನಹಳ್ಳಿ ತಾಲ್ಲೂಕು) ನೀಡಿದ್ದ ನೋಟಿಸ್ ಪ್ರಶ್ನಿಸಿ 'ಮೆಸರ್ಸ್ ಪ್ರಕೃತಿ ಸೆಂಚುರಿ ಪ್ರಾಪರ್ಟೀಸ್'ನ ಅಧಿಕೃತ ಪ್ರತಿನಿಧಿ ಎಸ್.ಚೇತನ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನ ಭೂವನಹಳ್ಳಿ ವ್ಯಾಪ್ತಿಯ ಚಿಕ್ಕಸಣ್ಣೆ ಗ್ರಾಮದಲ್ಲಿ ಕಾಯ್ದಿಟ್ಟ ರಾಜ್ಯ ಅರಣ್ಯ ಪ್ರದೇಶದಲ್ಲಿನ ವಿವಿಧ ಸರ್ವೆ ನಂಬರ್‌ಗಳಲ್ಲಿ ಒಟ್ಟು 51 ಎಕರೆ 4 ಗುಂಟೆ ಜಮೀನು ಒತ್ತುವರಿಯಾಗಿದ್ದು, ಈ ಜಮೀನನ್ನು ಕರ್ನಾಟಕ ಅರಣ್ಯ ಕಾಯ್ದೆ–1963ರ ಕಲಂ 64ಎ ಅನುಸಾರ ತೆರವುಗೊಳಿಸಬೇಕು' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಪ್ರತಿವಾದಿಗಳಿಗೆ ನೋಟಿಸ್ ನೀಡಿದ್ದರು.

ಈ ನೋಟಿಸ್ ಅನ್ನು ಪ್ರತಿವಾದಿಗಳಾದ ಚಿಕ್ಕಸಣ್ಣೆ ಗ್ರಾಮದ ಎಂ.ಎ.ಮೊಹಮದ್ ಸನಾವುಲ್ಲಾ, ಎಂ.ಎ.ಸನಾವುಲ್ಲಾ, ಮೊಹಮದ್ ಅತಾವುಲ್ಲಾ, ಎಂ.ಎ.ಮೊಹಮದ್ ಖಲೀಲುಲ್ಲಾ ಪ್ರಶ್ನಿಸಿದ್ದರು. ಅಂತೆಯೇ, 'ಈ ಜಮೀನನ್ನು ನಾವು ನೋಂದಾಯಿತ ಪಾಲುದಾರಿಕಾ ವ್ಯವಹಾರ ಸಂಸ್ಥೆಯ ಅಡಿಯಲ್ಲಿ 2007ರ ಜುಲೈನಿಂದ ಈಚೆಗೆ ವಿವಿಧ ದಿನಾಂಕಗಳಲ್ಲಿ, ಜಂಟಿ ಅಭಿವೃದ್ಧಿ ಒಪ್ಪಂದ ಮಾಡಿಕೊಂಡಿದ್ದೇವೆ' ಎಂದು ಇನ್‌ಫ್ಯಾಂಟ್ರಿ ರಸ್ತೆ ನಿವಾಸಿ ಮೊಹಮದ್ ಶೋಯೆಬ್ ಮತ್ತೊಂದು ಪ್ರತ್ಯೇಕ ರಿಟ್ ಅರ್ಜಿ ಸಲ್ಲಿಸಿದ್ದರು.

ಎರಡೂ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು ಮಂಡಿಸಿದ ವಾದವನ್ನು ಪುರಸ್ಕರಿಸಿದ್ದು, ಅರ್ಜಿದಾರರ ಮನವಿಯನ್ನು ವಜಾಗೊಳಿಸಿದೆ. ಸರ್ಕಾರ ಕಾಲಮಿತಿಯಲ್ಲಿ ಒತ್ತುವರಿ ತೆರವುಗೊಳಿಸುವಂತೆ ತೀರ್ಪು ಪ್ರಕಟಿಸಿದೆ.

ಸಾವಿರ ಕೋಟಿ ರೂಪಾಯಿಗಳಿಗೂ ಮಿಗಿಲಾದ ಮೌಲ್ಯ ಹೊಂದಿದ ಈ ಜಮೀನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಣ್ಣಳತೆಯಲ್ಲಿ ಇದ್ದು, ಇಲ್ಲೀಗ 'ಸೆಂಚುರಿ ಸ್ಪೋರ್ಟ್ಸ್ ವಿಲೇಜ್' ಹೆಸರಿನಲ್ಲಿ 700 ನಿವೇಶನಗಳ ನಿವಾಸಿ ಲೇ ಔಟ್ ನಿರ್ಮಾಣ ಮಾಡಲಾಗಿದೆ.

ನಗರದಲ್ಲಿ ಇಂದು

ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಿ ಸಮಾವೇಶ, 50 ಲಕ್ಷ ಸಹಿ ಸಂಗ್ರಹ ಅಭಿಯಾನದ ಸಮಾರೋಪ: **ಉದ್ಘಾಟನೆ:** ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಎ. ಮುರಿಗೆಪ್ಪ, ಕಿಶೋರ್, ಶಿಬಾಶಿಷ್ ಪ್ರಹರಾಜ್, ಅಜಯ್ ಕಾಮತ್, ಅಧ್ಯಕ್ಷತೆ: ಅಶ್ವಿನಿ ಕೆ.ಎಸ್., ಆಯೋಜನೆ: ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಬರಗೂರು ರಾಮಚಂದ್ರಪ್ಪ

ಸ್ವಾತಂತ್ರ್ಯ ದಿನಾಚರಣೆ, ಡಾ. ಜೀವರಾಜ್ ಆಳ್ವ ದತ್ತಿನಿಧಿ ಸ್ಪರ್ಧೆಗಳ ಬಹುಮಾನ ವಿತರಣಾ ಸಮಾರಂಭ: ಉದ್ಘಾಟನೆ: ಎಸ್. ನಂಜುಂಡರಾವ್, ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಅತಿಥಿ: ಪಿ. ರಮೇಶ್ ದೊಡ್ಡಪುರ, ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಚಾಮರಾಜಪೇಟೆ, ಮಧ್ಯಾಹ್ನ 3.30

'25 ಮಹಿಳಾ ಪುಸ್ತಕಗಳ' ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಉದ್ಘಾಟನೆ: ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ, ಅಧ್ಯಕ್ಷತೆ: ಕರೀಗೌಡ ಬೀಚನಹಳ್ಳಿ, ಅತಿಥಿಗಳು: ಕೆ.ಎಚ್. ಪುಟ್ಟಸ್ವಾಮಿಗೌಡ, ಮಾನಸ, ವಿಜಯಾ, ಕೆ.ಟಿ. ಶಾಂತಲಾ, ಧರಣಿದೇವಿ ಮಾಲಗತ್ತಿ, ಪಲ್ಲವಿ ಹೊನ್ನಾಪುರ, ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ರುಕ್ಮಿಣಮ್ಮ, ಸೀತಾರಾಮರಾವ್ ದತ್ತಿ 'ಡಿ.ವಿ.ಜಿ. ಅವರ ಉಮರನ ಒಸಗೆ' ಉಪನ್ಯಾಸ: ಸತ್ಯೇಶ್ ಬೆಳ್ಳೂರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ದಾಸವಾಣಿ: ಗಾಯನ: ಶಿಶಿರ್ ಕೆ.ಪಿ., ಹಾರ್ಮೋನಿಯಂ: ಸಂಸ್ಕೃತಿ ಕೆ. ಬಾಣಾವರ, ತಬಲಾ: ಧ್ರುವ ಆಚಾರ್ಯ, ತಾಳ: ಇಂಚರ ಎಸ್.ಆರ್., ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.15

ಸಮತಾ ಬಿ. ದೇಶಮಾನೆ ಸಂಪಾದಿಸಿದ ಸಂಸ್ಕೃತಿ ಜಾತ್ರೆ: ಉದ್ಘಾಟನೆ: ಶಿವರಾಜ ತಂಗಡಗಿ, ನಾಗತಿಹಳ್ಳಿ ಚಂದ್ರಶೇಖರ್, ಅಧ್ಯಕ್ಷತೆ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿಗಳು: ಝೂನ್ ಮಾರ್ಕ್ ದುಪೆಯೆ, ನಾಗೇಶ್ ಬೆಟ್ಟಕೋಟೆ, ಮಾಮಿಡಿ ಹರಿಕೃಷ್ಣ, ಕೆ.ಎಂ. ವಸುಂಧರಾ, ಶಿಹಾಬುದ್ದೀನ್ ಪೊಯ್ತುಮ್‌ಕಡವು, ಎಸ್. ರಾಮಕೃಷ್ಣನ್, ಆಯೋಜನೆ: ನೆಲಾ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ವಚನ ಶ್ರಾವಣ: ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಸಮೀವುಲ್ಲಾಖಾನ್, ಅಧ್ಯಕ್ಷತೆ: ರಾಜಾ ನಂಜುಂಡಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಅನಸೂಯ, ಮಂಜುನಾಥ ಅವರ ಮನೆ, ಯಶವಂತಪುರ, ಸಂಜೆ 6

'ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ' ಕುರಿತು ಉಪನ್ಯಾಸ: ಯಶೋದಾ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿದಾಸ ಗಾಯನ: ಸಿಂಧು ಚಿರದೀಪ್, ವಿಷ್ಣು ವಸಿಷ್ಠ, ಪಿಟೀಲು: ಕೇಶವಪ್ರಸಾದ್ ಎಚ್.ಎಸ್., ಮೃದಂಗ: ವರದರಾಜ್ ಬಿ.ಎಸ್., ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಎಸ್‌ಐಟಿ: ಸ್ವಚ್ಛತೆ ಕಾರ್ಮಿಕರ ವಿಚಾರಣೆ

ಧರ್ಮಸ್ಥಳ ಗ್ರಾಮ ಪಂಚಾಯಿತಿಯಿಂದ ಮೃತದೇಹಗಳ ವಿಲೇ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ಮುಂದುವರಿದಿದ್ದು, ಧರ್ಮಸ್ಥಳ ಗ್ರಾಮ ಪಂಚಾಯಿತಿಯಲ್ಲಿ ಈ ಹಿಂದೆ ಸ್ವಚ್ಛತಾ ಕಾರ್ಮಿಕರಾಗಿ ಕೆಲಸ ನಿರ್ವಹಿಸಿದ್ದ ಕೆಲವರನ್ನು ವಿಶೇಷ ತನಿಖಾ ತಂಡವು ವಿಚಾರಣೆಗೆ ಒಳಪಡಿಸಿದೆ.

ಧರ್ಮಸ್ಥಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಚಿನ ದಶಕಗಳಲ್ಲಿ ಗುರುತು ಪತ್ತೆಯಾಗದ ಶವಗಳನ್ನು ಹೂಳುವ ಕಾರ್ಯದಲ್ಲಿ ಭಾಗಿಯಾದ ಸ್ವಚ್ಛತಾ ಕಾರ್ಮಿಕರನ್ನು ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಯನ್ನು ಕರೆಸಿ ಮಾಹಿತಿ ಕಲೆ ಹಾಕಲಾಗಿದೆ. ಗುರುತು ಪತ್ತೆಯಾಗದ ಮೃತದೇಹಗಳನ್ನು ನಿಯಮಬಾಹಿರವಾಗಿ ವಿಲೇ ಮಾಡಿರುವ ಆರೋಪಗಳ ಬಗ್ಗೆಯೂ ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಇನ್ನೊಂದೆಡೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ (ಈಗಿನ ಧರ್ಮಸ್ಥಳ ಪೊಲೀಸ್ ಠಾಣೆಯ ವ್ಯಾಪ್ತಿಯ ಪ್ರದೇಶವು ಈ ಹಿಂದೆ ಬೆಳ್ತಂಗಡಿ ಠಾಣೆಯ ವ್ಯಾಪ್ತಿಯಲ್ಲಿತ್ತು) ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ಎರಡೂವರೆ ದಶಕಗಳಿಂದ ಈಚೆಗೆ ದಾಖಲಾಗಿರುವ ಅಸಹಜ ಸಾವು, ಕೊಲೆ ಪ್ರಕರಣಗಳ ದಾಖಲೆಗಳನ್ನು ಪಡೆದುಕೊಂಡಿರುವ ಎಸ್‌ಐಟಿ ಅಧಿಕಾರಿಗಳು ಅವುಗಳ ಅಧ್ಯಯನ ನಡೆಸುತ್ತಿದ್ದಾರೆ. ಸಾಕ್ಷಿ ದೂರುದಾರ ಇದುವರೆಗೆ ತೋರಿಸಿರುವ ಜಾಗಗಳಲ್ಲಿ ನಡೆದಿರುವ ಶೋಧ ಕಾರ್ಯದ ದಾಖಲೀಕರಣ ಪ್ರಕ್ರಿಯೆಯು ಮುಂದುವರಿದಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಅವರು ಬೆಳ್ತಂಗಡಿಗೆ ಬುಧವಾರ ಭೇಟಿ ನೀಡಿ ತನಿಖೆಗೆ ಮಾರ್ಗದರ್ಶನ ಮಾಡಿದರು.

ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟೆಣ್ಣನವರ ವಿಚಾರಣೆ

ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟೆಣ್ಣನವರ, ಬೇರೊಂದು ಮೃತದೇಹ ಹೂತು ಹಾಕಿದ ಬಗ್ಗೆ ಎಸ್‌ಐಟಿಗೆ ದೂರು ನೀಡಿರುವ ಜಯಂತ್ ಟಿ. ಸೇರಿದಂತೆ ಆರೇಳು ಮಂದಿಯನ್ನು ಧರ್ಮಸ್ಥಳ ಪೊಲೀಸರು ಠಾಣೆಗೆ ಕರೆಸಿಕೊಂಡು ಬುಧವಾರ ವಿಚಾರಣೆಗೆ ಒಳಪಡಿಸಿದರು.

ಈಚೆಗೆ ಧರ್ಮಸ್ಥಳದ ಪಾಂಗಾಳ ರಸ್ತೆ ಬಳಿ ಆ.6ರಂದು ಹಲ್ಲೆಗೊಳಗಾದ ಯೂಟ್ಯೂಬರ್‌ಗಳು ಉಜಿರೆಯ ಬೆನಕ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದರು. 'ಆಸ್ಪತ್ರೆ ಬಳಿ ಈ ಕುರಿತು ಗಿರೀಶ್ ಮಟ್ಟೆಣ್ಣವರ ಅವರಲ್ಲಿ ಹೇಳಿಕೆ ನೀಡುವಂತೆ ಕೇಳಿದಾಗ ಅಲ್ಲಿದ್ದ ಮಹೇಶ್ ಶೆಟ್ಟಿ ತಿಮರೋಡಿ ಮತ್ತಿತರರು ಹಲ್ಲೆ ನಡೆಸಿದ್ದರು' ಎಂದು ಆರೋಪಿಸಿ ಟಿ.ವಿ ಸುದ್ದಿ ವಾಹಿನಿಯ ವರದಿಗಾರ ಹರೀಶ್ ಆರ್. (34) ಎಂಬುವರು ದೂರು ನೀಡಿದ್ದು, ಈ ಬಗ್ಗೆ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಧರ್ಮಸ್ಥಳದ ಪಾಂಗಾಳ ರಸ್ತೆ ಬಳಿ ಅಕ್ರಮ ಕೂಟ ಸೇರಿದ ಗಲಾಟೆ ಮಾಡಿದ ಆರೋಪ ಜಯಂತ್ ಟಿ. ಅವರ ಮೇಲಿದೆ.

ಪೂರ್ಣ ಪ್ರಮಾಣದ ತನಿಖೆಗೆ ಒತ್ತಾಯ

ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಸಾಕ್ಷಿ ದೂರುದಾರ ಮಾಡಿರುವ ಆರೋಪಗಳ ಕುರಿತು ಎಲ್ಲಾ ಆಯಾಮಗಳಲ್ಲಿ ಪ್ರಾಮಾಣಿಕವಾಗಿ ತನಿಖೆ ನಡೆಯಬೇಕು ಎಂದು ಸಮಾನ ಮನಸ್ಕ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿವೆ.

ಮಂಗಳೂರಲ್ಲಿ ಬುಧವಾರ ನಡೆದ ಸಮಾನ ಮನಸ್ಕ ಸಂಘಟನೆಗಳ ದುಂಡು ಮೇಜಿನ ಸಭೆಯಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

'ಎಸ್‌ಐಟಿ ಮೇಲೆ ಜನರಿಗೆ ವಿಶ್ವಾಸ ಇದೆ. ಬಿಜೆಪಿ ಹಾಗೂ ಇತರ ಪಟ್ಟಭದ್ರ ಹಿತಾಸಕ್ತಿಗಳು ಈ ತನಿಖೆಯನ್ನು ಸ್ಥಗಿತಗೊಳಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿವೆ. ಸಾಕ್ಷಿದಾರರನ್ನು, ಎಸ್‌ಐಟಿಗೆ ದೂರು ನೀಡಿದವರನ್ನು ಬೆದರಿಸುವ ಯತ್ನಗಳೂ ನಡೆದಿವೆ. ಇಂತಹ ಪಿತೂರಿ, ಒತ್ತಡಗಳಿಗೆ ಮಣಿಯದೇ ಸರ್ಕಾರವು ಎಸ್‌ಐಟಿಯು ಪೂರ್ಣ ಪ್ರಮಾಣದಲ್ಲಿ ತನಿಖೆ ನಡೆಸಲು ಅನುವು ಮಾಡಿಕೊಡಬೇಕು' ಎಂದು ಒತ್ತಾಯಿಸಿವೆ.

'1986ರಲ್ಲಿ ನಡೆದಿದ್ದ ಪದ್ಮಲತಾ ಕೊಲೆ ಪ್ರಕರಣ, 1979ರಲ್ಲಿ ನಡೆದಿದ್ದ ವೇದವಲ್ಲಿ ಹತ್ಯೆ, 2012ರಲ್ಲಿ ನಡೆದ ಮಾವುತ ನಾರಾಯಣ ಮತ್ತು ಆತನ ಸೋದರಿ ಯಮುನಾ ಹತ್ಯೆ ಪ್ರಕರಣಗಳನ್ನು ಮುಚ್ಚಿ ಹಾಕಲಾಗಿದೆ. ಸೌಜನ್ಯಾ ಪ್ರಕರಣದಲ್ಲೂ ಕೃತ್ಯ ನಡೆಸಿದವರು ಯಾರೆಂದು ಪತ್ತೆಯಾಗಿಲ್ಲ. ಧರ್ಮಸ್ಥಳ ಗ್ರಾಮದಲ್ಲಿ ನಡೆದ ಅಸಹಜ ಸಾವು ಪ್ರಕರಣಗಳಲ್ಲಿ ಮೃತದೇಹಗಳ ವಿಲೇವಾರಿ ನಿಯಮ ಪ್ರಕಾರ ನಡೆದಿಲ್ಲ. ಈ ಬಗ್ಗೆಯೂ ಎಸ್‌ಐಟಿಯಿಂದ ತನಿಖೆ ನಡೆಸಬೇಕು' ಎಂದು ಆಗ್ರಹಿಸಿವೆ.

'ಅನನ್ಯಾ ಹೆಸರು ಕೆಎಂಸಿ ದಾಖಲೆಯಲ್ಲಿ ಇಲ್ಲ'

'ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜಿನ (ಕೆಎಂಸಿ) ದಾಖಲೆಗಳಲ್ಲಿ ಅನನ್ಯಾ ಭಟ್ ಎಂಬ ಹೆಸರಿನವರು 2003ರಲ್ಲಿ ಮೊದಲ ವರ್ಷದ ಎಂಬಿಬಿಎಸ್ ಕೋರ್ಸ್‌ಗೆ ಪ್ರವೇಶ ಪಡೆದಿದ್ದರ ವಿವರಗಳು ಲಭ್ಯವಿಲ್ಲ' ಎಂದು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ಮೂಲಗಳು ತಿಳಿಸಿವೆ.

ಅನನ್ಯಾ ಭಟ್ ಎಂಬ ಹೆಸರಿನ ವೈದ್ಯಕೀಯ ವಿದ್ಯಾರ್ಥಿನಿಯು 2003ರಲ್ಲಿ ಧರ್ಮಸ್ಥಳ ದೇವಸ್ಥಾನದ ವತಾರದಿಂದ ಕಣ್ಮರೆಯಾಗಿರುವ ಬಗ್ಗೆ ಯುವತಿಯ ತಾಯಿ ಎಂದು ಹೇಳಿಕೊಂಡ ಸುಜಾತಾ ಭಟ್ ಎಂಬುವರು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಗೆ ಹಾಗೂ ಧರ್ಮಸ್ಥಳ ಪೊಲೀಸ್ ಠಾಣೆಗೆ ಜುಲೈ 15ರಂದು ದೂರು ನೀಡಿದ್ದರು.

'ನನ್ನ ಮಗಳು ಅನನ್ಯಾ ಭಟ್ ಮಣಿಪಾಲದ ಕೆಎಂಸಿಯಲ್ಲಿ ಮೊದಲ ವರ್ಷದ ಎಂಬಿಬಿಎಸ್ ವಿದ್ಯಾಭ್ಯಾಸ ನಡೆಸುತ್ತಿದ್ದಳು. ಸಹಪಾಠಿಗಳ ಜೊತೆಗೆ ಧರ್ಮಸ್ಥಳಕ್ಕೆ ಪ್ರವಾಸಕ್ಕೆ ತೆರಳಿದ್ದ ಆಕೆ 2003ರಲ್ಲಿ ನಾಪತ್ತೆಯಾಗಿದ್ದಳು' ಎಂದು ಸುಜಾತಾ ಭಟ್ ಆರೋಪಿಸಿದ್ದರು.

ಎಸ್‌ಐಟಿಗೆ ಹಸ್ತಾಂತರ: 'ಧರ್ಮಸ್ಥಳಕ್ಕೆ ಹೋಗಿದ್ದ ಮಗಳು ಅನನ್ಯಾ ಭಟ್ 2003ರಲ್ಲಿ ನಾಪತ್ತೆಯಾದ ಬಗ್ಗೆ ಸುಜಾತಾ ಭಟ್ ನೀಡಿದ್ದ ದೂರನ್ನು ಮುಂದಿನ ವಿಚಾರಣೆಗಾಗಿ ಆ.19ರಂದು ಎಸ್‌ಐಟಿಗೆ ಹಸ್ತಾಂತರಿಸಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ಪ್ರಕಟಣೆ ತಿಳಿಸಿದೆ.

'ಅಲೆಮಾರಿಗಳಿಗೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿ ಮಾಡುವಾಗ ಅಲೆಮಾರಿಗಳಿಗೆ ಅನ್ಯಾಯ ಮಾಡಲಾಗಿದೆ. ಅಲೆಮಾರಿಗಳಿಗೆ ಪ್ರತ್ಯೇಕ ಗುಂಪು ರಚಿಸಿ ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿ ಕರ್ನಾಟಕ ಪರಿಶಿಷ್ಟ ಜಾತಿ ಅಲೆಮಾರಿ ಅಭಿವೃದ್ಧಿ ವೇದಿಕೆ ಅನಿರ್ದಿಷ್ಟಾವಧಿ ಮುಷ್ಕರವನ್ನು ಬುಧವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಆರಂಭಿಸಿದೆ.

ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗವು ಒಳಮೀಸಲಾತಿಗೆ ಸಂಬಂಧಿಸಿದ ವರದಿ ನೀಡುವಾಗ 59 ಅಲೆಮಾರಿ ಸಮುದಾಯಗಳನ್ನು ಒಂದು ಗುಂಪು ಮಾಡಿ ಶೇ 1 ಮೀಸಲಾತಿ ಶಿಫಾರಸು ಮಾಡಿತ್ತು. ಆದರೆ, ಸರ್ಕಾರ ಈ ಗುಂಪನ್ನೇ ರದ್ದು ಮಾಡಿ ಬಲಿಷ್ಠ, ಸ್ಪೃಶ್ಯ ಜಾತಿಗಳೊಂದಿಗೆ ಸೇರ್ಪಡೆ ಮಾಡಿ ಅನ್ಯಾಯ ಮಾಡಿದೆ ಎಂದು ಮುಖಂಡರು ಹೇಳಿದರು.

ಎಸ್‌ಸಿಯಲ್ಲಿರುವ 49 ಅಲೆಮಾರಿ ಸಮುದಾಯಗಳನ್ನು ಅತಿಸೂಕ್ಷ್ಮ ಸಮುದಾಯಗಳು ಎಂದು 2017-18ರಲ್ಲಿ ಸಿದ್ದರಾಮಯ್ಯ ಅವರ ಸರ್ಕಾರವೇ ಗುರುತಿಸಿತ್ತು. ಆನಂತರ ಬಂದ ಸರ್ಕಾರವು ಈ ಅತಿಸೂಕ್ಷ್ಮ ಸಮುದಾಯಗಳಿಗೆ ಕೊರಚ ಮತ್ತು ಕೊರಮ ಸಮುದಾಯಗಳನ್ನು ಸೇರಿಸಿ ಅನ್ಯಾಯ ಮಾಡಿತ್ತು. ಒಳಮೀಸಲಾತಿ ಜಾರಿಗೆ ಬರುವಾಗ ಅಲೆಮಾರಿ ಸಮುದಾಯಗಳಿಗೆ ನ್ಯಾಯ ಸಿಗುವ ನಿರೀಕ್ಷೆ ಇತ್ತು. ಅದು ಹುಸಿಯಾಗಿದೆ ಎಂದು ಆರೋಪಿಸಿದರು.

'ಅಲೆಮಾರಿಗಳಿಗೆ ಅನ್ಯಾಯವಾಗಿರುವ ಬಗ್ಗೆ ಮಾದಿಗ ಸಮುದಾಯ ಕನಿಷ್ಠ ಕನಿಕರವನ್ನಾದರೂ ವ್ಯಕ್ತಪಡಿಸುತ್ತಿದೆ. ಹೊಲೆಯ ಸಮುದಾಯ ಏನೂ ಮಾತನಾಡುತ್ತಿಲ್ಲ. ಲಂಬಾಣಿ, ಭೋವಿ, ಕೊರಚ, ಕೊರಮ ಸಮುದಾಯದವರು ಅವರ ಜೊತೆಗೆ ಅಲೆಮಾರಿಗಳನ್ನು ಸೇರಿಸಿರುವುದಕ್ಕೆ ಖುಷಿಯಾಗಿದ್ದಾರೆ. ಭಿಕ್ಷೆ ಬೇಡಿ ಜೀವನ ನಡೆಸುವ ಅಲೆಮಾರಿ ಸಮುದಾಯಗಳು ಇವರ ಮಧ್ಯೆ ನಲುಗಿ ಹೋಗುವಂತಾಗಿದೆ' ಎಂದರು.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಲೋಕೇಶ್, ಸುಡುಗಾಡು ಸಿದ್ಧ ಸಮುದಾಯದ ಲೋಹಿತಾಕ್ಷ, ಶಿಳ್ಳೆಕ್ಯಾತ ಸಮುದಾಯದ ಬಿ.ಎಚ್. ಮಂಜುನಾಥ್, ಬುಡುಗ ಜಂಗಮ ಸಮುದಾಯದ ಸಣ್ಣಮಾರಪ್ಪ, ಚನ್ನದಾಸ ಸಮುದಾಯದ ಬಸವರಾಜ ನಾರಾಯಣ್ಕರ, ಕಾನೂನು ಸಲಹೆಗಾರ ವೀರೇಶ್ ಭಾಗವಹಿಸಿದ್ದರು. ಎಚ್. ಆಂಜನೇಯ ಅವರು ಸಮುದಾಯದ ಮುಖಂಡರನ್ನು ಮುಖ್ಯಮಂತ್ರಿ ಬಳಿ ಕರೆದುಕೊಂಡು ಹೋಗಿ ಚರ್ಚೆ ನಡೆಸಿದರು. ಮಾದಿಗ ಸಮುದಾಯದ ಅಂಬಣ್ಣ ಅರೋಲಿಕರ ಜತೆಗಿದ್ದರು.

'ದಲಿತ ಸಿಎಂ ಕೂಗು ತಪ್ಪಿಸಲು ಒಳಮೀಸಲು'


ಬಸವರಾಜ ಬೊಮ್ಮಾಯಿ

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಹಾಗೂ ದಲಿತ ಮುಖ್ಯಮಂತ್ರಿ ಕೂಗು ತಪ್ಪಿಸಲು ಸುಪ್ರೀಂ ಕೋರ್ಟ್ ಆದೇಶ ತಿರಸ್ಕಾರ ಮಾಡಿ ಅವಕಾಶ ವಂಚಿತ ಸಮುದಾಯಗಳಿಗೆ ಅನ್ಯಾಯ ಮಾಡಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜನಸಂಖ್ಯೆ ಆಧಾರದಲ್ಲಿ ಕಾಲಕಾಲಕ್ಕೆ ಮೀಸಲಾತಿ ಪರಿಷ್ಕರಿಸುವಂತೆ ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ರಾಜ್ಯದಲ್ಲಿ ಕೇವಲ ಆರು ಜಾತಿಯಿಂದ ಪ್ರಾರಂಭವಾದಂತಹ ಪರಿಶಿಷ್ಟ ಜಾತಿ ಪಟ್ಟಿಗೆ ಈಗ 101 ಜಾತಿಗಳು ಸೇರಿವೆ. ಕಾಂಗ್ರೆಸ್ ಸರ್ಕಾರ ಜಾತಿಗಳನ್ನು ಸೇರಿಸಿಕೊಂಡು ಹೋಯಿತು. ಆದರೆ, ಅದಕ್ಕೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡುವ ಪ್ರಯತ್ನ ಮಾಡಲಿಲ್ಲ. ಇದು ಸಮುದಾಯಕ್ಕೆ ಮಾಡಿರುವ ದೊಡ್ಡ ದ್ರೋಹ' ಎಂದರು.

ರಾಜ್ಯ ಸರ್ಕಾರ ಜಾರಿ ಮಾಡಿರುವ ಒಳ ಮೀಸಲಾತಿಯಿಂದ ಆದಿ ಕರ್ನಾಟಕ, ಆದಿ ದ್ರಾವಿಡ, ಅಲೆಮಾರಿ ಸಮುದಾಯಗಳಿಗೆ ಒಂದು ಪರ್ಸೆಂಟೂ ಮೀಸಲಾತಿ ಸಿಗುವುದಿಲ್ಲ. ಆದಿ ಕರ್ನಾಟಕ, ಆದಿ ದ್ರಾವಿಡ ಸಮುದಾಯದವರು ಮೈಸೂರು ಭಾಗದಲ್ಲಿಯೇ ಹೆಚ್ಚಾಗಿದ್ದಾರೆ. ಅವರಿಗೆ ಸಿದ್ದರಾಮಯ್ಯ ಭಾರಿ ಅನ್ಯಾಯ ಮಾಡಿದ್ದಾರೆ ಎಂದರು.

'ನಾನು ಮಾಡಿರುವ ಒಳ ಮೀಸಲಾತಿ ಆದೇಶ ಈಗಾಗಲೇ ಜಾರಿಯಲ್ಲಿದೆ. ಅದರ ಆಧಾರದಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಸೀಟುಗಳು ಸಿಕ್ಕಿವೆ. ವಿಧಾನಮಂಡಲದಲ್ಲಿ ಮಸೂದೆ ಮಂಡಿಸಿ ಒಪ್ಪಿಗೆ ಪಡೆದು ಒಳಮೀಸಲಾತಿ ಜಾರಿ ಮಾಡಿದ್ದೆವು. ನಮ್ಮ ಆದೇಶವನ್ನೇ ಜಾರಿ ಮಾಡಿ ಸಮುದಾಯಗಳಿಗೆ ನ್ಯಾಯ ಒದಗಿಸಿ' ಎಂದು ಅವರು ಆಗ್ರಹಿಸಿದರು.

'ಶವಗಳು ನೇತಾಡುತ್ತಿದ್ದವು, ಇಳಿಸಿದ್ದೆ'

ಪ್ರಜಾವಾಣಿ ವಾರ್ತೆ

ರಾಜು

ಮದ್ದೂರು (ಮಂಡ್ಯ ಜಿಲ್ಲೆ): 'ಧರ್ಮಸ್ಥಳದಲ್ಲಿ ನೂರಾರು ಮೃತದೇಹಗಳನ್ನು ಹೂತಿರುವುದಾಗಿ ಹೇಳಿರುವ ಮುಸುಕುಧಾರಿ ಹಾಗೂ ನಾನು ಅಕ್ಕಪಕ್ಕದ ಮನೆಯಲ್ಲಿದ್ದೆವು. ಆ ಸಂದರ್ಭದಲ್ಲಿ ಮರದಲ್ಲಿ ನೇತಾಡುತ್ತಿದ್ದ ಪುರುಷ-ಮಹಿಳೆಯ ಕೊಳೆತ ಮೃತದೇಹಗಳನ್ನು ನೋಡಿ ಕೆಳಗೆ ಇಳಿಸಿದ್ದೆ. ಆದರೆ ಹೂತು ಹಾಕಿರಲಿಲ್ಲ. ಆಂಬುಲೆನ್ಸ್ ಬಂದು ತೆಗೆದುಕೊಂಡು ಹೋಯಿತು' ಎಂದು ಆತನ ಸ್ನೇಹಿತ, ತಾಲ್ಲೂಕಿನ ವೈದ್ಯನಾಥಪುರದ ನಿವಾಸಿ ರಾಜು ತಿಳಿಸಿದ್ದಾರೆ.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಮುಸುಕುಧಾರಿಯ ಹೇಳಿಕೆಗಳು ಸತ್ಯಕ್ಕೆ ದೂರ. ಹಣದ ಆಸೆಗೋ ಏನೋ ಗೊತ್ತಿಲ್ಲ, ಸಾವಿರಾರು ಜನರಿಗೆ ಅನ್ನ ಹಾಕಿದ ಧಣಿಯವರ ಬಗ್ಗೆ ಹೀಗೆ ಹೇಳಿಕೆ ಕೊಡುತ್ತಿದ್ದಾನೆ' ಎಂದು ಪ್ರತಿಪಾದಿಸಿದರು.

'ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ಅಧಿಕಾರಿಗಳು ನನ್ನನ್ನು ಅರ್ಧ ಗಂಟೆ ವಿಚಾರಣೆ ನಡೆಸಿದರು. ಗೊತ್ತಿರುವ ಮಾಹಿತಿಯನ್ನು ನೀಡಿದ್ದೇನೆ. ಹತ್ತು ವರ್ಷಗಳ ಹಿಂದೆ, ಧರ್ಮಸ್ಥಳದಲ್ಲಿ 4 ವರ್ಷ ಕಸ ಗುಡಿಸುವ ಕೆಲಸ ಮಾಡಿಕೊಂಡಿದ್ದೆ. ಧರ್ಮಸ್ಥಳದ ಸ್ನಾನಘಟ್ಟ, ಬಾಹುಬಲಿ ಬೆಟ್ಟ, ದೇವಸ್ಥಾನದ ಬಳಿಯೂ ಕೆಲಸ ಮಾಡಿದ್ದೇನೆ. ಧಣಿಯವರು ಅನ್ನ ಹಾಕಿ, ಕೈತುಂಬ ಸಂಬಳ ಕೊಡುತ್ತಿದ್ದರು' ಎಂದರು.

'ಅನನ್ಯಾ ಫೋಟೊ ನನ್ನ ತಂಗಿಯದ್ದು'

ಮಡಿಕೇರಿ: '2003ರಲ್ಲಿ ತಮ್ಮ ಮಗಳು ಅನನ್ಯಾ ಭಟ್ ಧರ್ಮಸ್ಥಳದಿಂದ ನಾಪತ್ತೆಯಾಗಿದ್ದು ಈವರೆಗೆ ಪತ್ತೆಯಾಗಿಲ್ಲ ಎಂದು ಮಹಿಳೆಯೊಬ್ಬರು ಬಿಡುಗಡೆ ಮಾಡಿರುವ ಫೋಟೊ ನನ್ನ ತಂಗಿ ವಸಂತಿಯದ್ದು' ಎಂದು ವಿರಾಜಪೇಟೆ ನಿವಾಸಿ ವಿಜಯ್ ಎಂಬುವವರು ಆರೋಪಿಸಿದ್ದಾರೆ. '2007ರಲ್ಲಿ ವಸಂತಿ ಮೃತದೇಹವು ಇಲ್ಲಿನ ಕೆದಮುಳ್ಳೂರು ಸಮೀಪದ ಹೊಳೆಯಲ್ಲಿ ಪತ್ತೆಯಾಗಿತ್ತು. ಈಗ ಮಹಿಳೆಯೊಬ್ಬರು ಆಕೆಯ ಫೋಟೊ ತೋರಿಸಿ ತಮ್ಮ ಮಗಳು ಎನ್ನುತ್ತಿರುವುದು ನೋವು ತರಿಸಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, (ಕೆರೆಗಳು-ದಕ್ಷಿಣ ವಲಯ ಮತ್ತು BC), ಕೊಠಡಿ ಸಂಖ್ಯೆ.309, 3ನೇ ಮಹಡಿ, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬೆಂಗಳೂರು-560002.
ಸಂಖ್ಯೆ:ಕಾಪಾಅ(ಕೆರೆಗಳು-ದಕ್ಷಿಣ ವಲಯ & BC/ಟೆಂಡರ್-06/2025-26 ದಿನಾಂಕ: 20-08-2025
ಟೆಂಡರ್ ಪ್ರಕಟಣೆ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in
ಕಾರ್ಯಪಾಲಕ ಅಭಿಯಂತರರು, (ಕೆರೆಗಳು-ದಕ್ಷಿಣ ವಲಯ ಮತ್ತು BC), ಬೃಬೆಂಮಪಾ ರವರು ಕೆಳಕಂಡ ಕಾಮಗಾರಿಗಳಿಗೆ ಬಿ.ಬಿ.ಎಂ.ಪಿ/ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ಎಂಇಎಸ್/ರೈಲ್ವೇಸ್ ಅಥವಾ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ದೀಪಾಂಜಲಿ ಕೆರೆಯ ನೀರಿನ ಮೂಲಕ್ಕೆ ಸುಧಾರಣಾ ಕಾಮಗಾರಿಗಳು. ಪ್ರಸ್ತಾವಿತ ಕೆಲಸದ ವೆಚ್ಚ (ಲಕ್ಷ ರೂ.ಗಳಲ್ಲಿ): 200.00. ಇಎಂಡಿ (ರೂ.ಗಳಲ್ಲಿ): 3,00,000/-.

ಟೆಂಡರ್‌ನ ಕಾರ್ಯಸೂಚಿ: 1. ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳ ಲಭ್ಯತೆ: 25/08/2025 ರಿಂದ. 2. ಬಿಡ್ ಪೂರ್ವ ಸಭೆಯ ದಿನಾಂಕ: 28/08/2025 ಸಂಜೆ 4.00 ಗಂಟೆಗೆ. 3. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10/09/2025 ಸಂಜೆ 4.00 ಗಂಟೆಯವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 11/09/2025 ಸಂಜೆ 4.15 ಗಂಟೆಗೆ. 5. ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ಅರ್ಹ ಟೆಂಡರ್‌ದಾರರಿಗೆ ತಿಳಿಸಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು,
(ದಕ್ಷಿಣ ವಲಯ ಮತ್ತು BC) ಕೆರೆಗಳು ವಿಭಾಗ, ಬೃಬೆಂಮಪಾ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರ್‌ಆರ್.ನಗರ ಅಭಿಯಂತರರ ಕಛೇರಿ, ಡಿಡಬ್ಲ್ಯೂಸಿ ಸೆಂಟರ್, ರಾಮ್ಕೋ ಲೇಔಟ್, ಜವರೇಗೌಡನದೊಡ್ಡಿ ಮುಖ್ಯರಸ್ತೆ, ರಾಜರಾಜೇಶ್ವರಿನಗರ, ಬೆಂಗಳೂರು-560098
ನಂ.: ಕಾಅ/ಆರ್‌ಐ/ಆರ್‌ಆರ್‌ನಗರ/ಟೆಂಡರ್/03/2025-26 ದಿನಾಂಕ : 20.08.2025
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಸೂಚನೆ) (ದ್ವಿ-ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಆರ್‌ಐ- ಆರ್‌ಆರ್ ನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ ರೈಲ್ವೆಗಳು/ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	ಉಲ್ಲಾಳ ಗ್ರೇಡ್ ಸಪರೇಟರ್ ಪೂರ್ಣಗೊಳಿಸಲು ಅನುಕೂಲವಾಗುವಂತೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕ್ವಾರ್ಟರ್ಸ್‌ನ ನಿರ್ಮಾಣ ಕಾಮಗಾರಿ. **ಟೆಂಡರ್‌ಗಿಟ್ಟ ಮೊತ್ತ : ರೂ. 696.22 ಲಕ್ಷಗಳು, (18%ಜಿಎಸ್‌ಟಿ ಹೊರತುಪಡಿಸಿ)**, ಇಎಂಡಿ ಮೊತ್ತ : (ಕೆಪಿಪಿ ಪೋರ್ಟಲ್ ಮೂಲಕ 1 ಲಕ್ಷ ರೂಪಾಯಿ, ಉಳಿದ ರೂ.5.69 ಲಕ್ಷವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ.)

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳ ಲಭ್ಯತೆ: 25.08.2025 ರಿಂದ (2) ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 01.09.2025, 14.00 ಗಂಟೆಗಳು, (3) ಬಿಡ್ ಪೂರ್ವ ಸಭೆಯ ದಿನಾಂಕ ಮತ್ತು ಸಮಯ: 01.09.2025, 15.30 ಗಂಟೆಗಳು (4) ಭರ್ತಿ ಮಾಡಿದ ಪ್ರಸ್ತಾವನೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 06.09.2025, ಸಂಜೆ 16.00 ಗಂಟೆಗಳು (5) ತಾಂತ್ರಿಕ ಪ್ರಸ್ತಾವನೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 08.09.2025, 16.00 ಗಂಟೆಗಳು (6) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕವಾಗಿ ಅರ್ಹ ಬಿಡ್‌ದಾರರಿಗೆ ತಿಳಿಸಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಆರ್‌ಐ-ರಾಜರಾಜೇಶ್ವರಿನಗರ ವಲಯ

ತುಮಕೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ರಾ.ಹೆ.-206, ಬಿ.ಹೆಚ್. ರಸ್ತೆ, ಮಲ್ಲಸಂದ್ರ, ತುಮಕೂರು-572107.
ದೂ: 0816-2206464/2206472 ಇಮೇಲ್: tumul.bmc@gmail.com
ಸಂಖ್ಯೆ: ತುಹಾಒ/ಶೇ&ತಾಂ/ಬಿಎಂಸಿ-DGAMC-03/2025-26 ದಿನಾಂಕ:19.08.2025
ಇ-ಟೆಂಡರ್ ಪ್ರಕಟಣೆ
ತುಮಕೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವ್ಯಾಪ್ತಿಯ 10 ತಾಲ್ಲೂಕಿನಲ್ಲಿ ಚಾಲನೆಯಲ್ಲಿರುವ ಬಿಎಂಸಿ ಕೇಂದ್ರಗಳ ಡಿಜಿ ಸೆಟ್‌ಗಳ ನಿರ್ವಹಣೆಗೆ (AMC) ದ್ವೈವಾರ್ಷಿಕ ಅವಧಿಗೆ ಇ-ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ದರಖಾಸ್ತನ್ನು ಇ.ಎಂ.ಡಿ ಹಣದ ಸಮೇತ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿದ ರೀತಿಯಲ್ಲಿ ಮತ್ತು ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ವೇಳೆಯ ಒಳಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು.
ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿರುವ ಮಾಹಿತಿಗಳ ರೀತ್ಯಾ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರ.ಸಂ	ವಿವರ	ದಿನಾಂಕ/ವೇಳೆ
1	ಇ-ಟೆಂಡರ್‌ನಲ್ಲಿ ಟೆಂಡರ್ ಪ್ರಕಟಿಸುವ ದಿನಾಂಕ	ದಿನಾಂಕ: 19.08.2025
2	ಇ-ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ / ವೇಳೆ	ದಿನಾಂಕ: 03.09.2025 ರಂದು ಸಂಜೆ 05.00 ಗಂಟೆಯವರೆಗೆ
2	ಇ-ಟೆಂಡರ್‌ನಲ್ಲಿ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ / ವೇಳೆ	ದಿನಾಂಕ: 06.09.2025 ರಂದು ಬೆಳಿಗ್ಗೆ 11.00 ಗಂಟೆಗೆ
3	ಇ-ಟೆಂಡರ್‌ನಲ್ಲಿ ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ / ವೇಳೆ	ದಿನಾಂಕ: 08.09.2025 ರಂದು ಬೆಳಿಗ್ಗೆ 11.00 ಗಂಟೆಗೆ
4	ಇ-ಟೆಂಡರ್ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳು	ವ್ಯವಸ್ಥಾಪಕರು(ಶೇ&ತಾಂ): 9380860462, ಸ.ವ್ಯ(ಡಿ.ಟಿ/ಬಿಎಂಸಿ): 9380863795 ತು.ಸ.ಹಾ.ಉ.ಸಂ.ಒ
5	ಇ-ಟೆಂಡರ್ ವೆಬ್‌ಸೈಟ್ ವಿಳಾಸ	www.kppp.karnataka.gov.in

ತು.ಸ.ಹಾ.ಉ.ಸ.ಒಕ್ಕೂಟದ ಪರವಾಗಿ,
ಸಹಿ/- ವ್ಯವಸ್ಥಾಪಕ ನಿರ್ದೇಶಕರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.3, ಅರಸೀಕೆರೆ, ಹಾಸನ ಜಿಲ್ಲೆ.
ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ-04/2025-26/619
ದಿನಾಂಕ:08.08.2025
ತಿದ್ದುಪಡಿ ಪ್ರಕಟಣೆ ಸಂ:ಕಾಇಂ/ವಿಜನಿನಿ/ಎಯೋವಿ.3/ಅ/ಟೆಂ.ಪ್ರ-04(1)/2025-26/662 ದಿನಾಂಕ: 19.08.2025 (ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ. ಕ್ರ.ಸಂ.1)ಕಾಮಗಾರಿ ವಿವರ: Construction of gravity pipe network for filling up of tanks for drinking water purpose in Arasikere taluk under yettinahole gravity main canal in the reach from ch.72.210 km to ch.91.840 km comprising of supply, installation, testing and commissioning of gravity MS/HDPE/OPVC pipes including structures and improvements to 9 no of tanks. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)11687.19 ಗುತ್ತಿಗೆದಾರರ ದರ್ಜೆ: ಕೆ.ಪಿ.ಡಬ್ಲ್ಯೂ..ಡಿ/ಸಿ.ಪಿ.ಡಬ್ಲ್ಯೂ..ಡಿ 1ನೇ ದರ್ಜೆ ಸಿವಿಲ್ ಗುತ್ತಿಗೆದಾರರು ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಷರತ್ತುಗಳು/ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಬಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ:19.08.2025 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆಂದು ಈ ಹಿಂದೆ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಸದರಿ ದಿನಾಂಕವನ್ನು ತಾಂತ್ರಿಕ ತೊಂದರೆಯಿಂದ ಮುಂದೂಡಲಾಗಿದ್ದು, ದಿನಾಂಕ:20.08.2025 ರಿಂದ ಎಂದು ಓದಿಕೊಳ್ಳತಕ್ಕದ್ದು. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ-ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, http://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3, ಅರಸೀಕೆರೆ, ದೂರವಾಣಿ ಸಂಖ್ಯೆ:08174-233111 e-mail: eeypd3ask@gmail.com
ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.3 ಅರಸೀಕೆರೆ
ವಾಸಾಸಂಇ/ಹಿಸನಿ/ಹಾಸನ/469/ಕೆಎಸ್‌ಎಂಸಿಎ/2025-26

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಾದೇಶಿಕ ಕಛೇರಿ: ಶೆಡ್ ನಂ. ಎ-54(ಎ) 2ನೇ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು-58,
e-mail : khdcvvs@gmail.com | Web: khdcltd.com, Mob: 8970893384
ಸಂಖ್ಯೆ:ಕ.ಕೈ.ಅ.ನಿ.ನಿ/ವ್ಯ.ನಿ/ವ್ಯ.ಮಾ(ಸಗಟು)/2025-26/68 ದಿನಾಂಕ:20.08.2025
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ.ಎಲ್) ರವರು ಶಾಲಾ ಮಕ್ಕಳಿಗೆ ಸಮವಸ್ತ್ರಗಳನ್ನು ಹೊಲಿಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಮತ್ತು ನಿಯಮ 2000ದ ಅನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಹಣಕಾಸಿನ ಬಿಡ್) ಟೆಂಡರನ್ನು ಆಹ್ವಾನಿಸಲಾಗಿದೆ. ದಸ್ತಾವೇಜನ್ನು ಕರ್ನಾಟಕ ಸರ್ಕಾರದ https://kppp.karnataka.gov.in ಅಂತರ್ಜಾಲದಲ್ಲಿ ಪಡೆಯಬಹುದಾಗಿದೆ. ನಿಗದಿತ ಭದ್ರತಾ ಠೇವಣಿ (ಇ.ಎಂ.ಡಿ)ಯೊಂದಿಗೆ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04.09.2025 ಸಂಜೆ 5:30** ಗಂಟೆಯವರೆಗೆ ಕೊನೆಯ ದಿನವಾಗಿರುತ್ತದೆ. ಟೆಂಡರ್‌ಗಳನ್ನು ಯಾವುದೇ ಸೂಚನೆಯಿಲ್ಲದೇ ಪೂರ್ತಿ ಅಥವಾ ಭಾಗಶಃ ಪರಿಗಣಿಸುವ ಅಥವಾ ತಿರಸ್ಕರಿಸುವ ಪರಿಮಿತಿ/ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
ಸಹಿ/-
ವ್ಯವಸ್ಥಾಪಕ ನಿರ್ದೇಶಕರು.
ವಾಸಾಸಂಇ/ವಾಪ್ರ/ಜಿಎ/2397/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂ(ವಿ)-2/2025-26/4623-43 ದಿನಾಂಕ: 20.08.2025
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ **ಭಾಗಶಃ ಟರ್ನ್‌ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆಗಳು/ ಕಾಮಗಾರಿಗಳ ವಿವರ
1) ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2561
ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು **ಹಿರೆಕೋಗಲೂರಿನಲ್ಲಿ** 2X20ಎಂವಿಎ, 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 66ಕೆವಿ ದಾವಣಗೆರೆ-ಕುಕ್ಕವಾಡ-ಲಿಂಗದಹಳ್ಳಿ ಡಿಸಿ(DC) ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 66/11ಕೆವಿ ಹಿರೆಕೋಗಲೂರು ಉಪಕೇಂದ್ರದವರೆಗೆ ಕೊಯೋಟ್(Coyote) ವಾಹಕದಿಂದ **8.37ಕಿ.ಮೀ.**ಗಳ ಉದ್ದಕ್ಕೆ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
2) ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2556
ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು **ಅಂತಾಪುರದಲ್ಲಿ** 1x20ಎಂ.ವಿ.ಎ, 110/33ಕೆ.ವಿ. ಮತ್ತು 2x20ಎಂ.ವಿ.ಎ, 110/11ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಕೆ.ಐ.ಎ.ಡಿ.ಬಿ ಕುಡುತಿನಿ ಉಪಕೇಂದ್ರದಲ್ಲಿ 02 ಸಂಖ್ಯೆಯ ಟರ್ಮಿನಲ್ ಬೇ ಗಳನ್ನು ನಿರ್ಮಿಸುವುದು ಹಾಗೂ ಹಾಲಿಯಿರುವ ಕೆ.ಐ.ಎ.ಡಿ.ಬಿ ಕುಡುತಿನಿ ಉಪಕೇಂದ್ರದಿಂದ ಪ್ರಸ್ತಾವಿತ ಅಂತಾಪುರ ಉಪಕೇಂದ್ರಕ್ಕೆ 110ಕೆ.ವಿ ಡಿಸಿ (DC) ಗೋಪುರಗಳ ಮೇಲೆ ಪ್ಯಾಂಥರ್ (Panther) ವಾಹಕದಿಂದ **14.980 ಕಿ.ಮೀ.**ಗಳ ಉದ್ದಕ್ಕೆ 110ಕೆ.ವಿ ಡಿಸಿ (DC) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
3) ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2557
ವಿಜಯಪುರ ಜಿಲ್ಲೆ, ಸಿಂದಗಿ ತಾಲ್ಲೂಕು **ಕೊರಳ್ಳಿ(ಹಿಕ್ಕನಗುಟ್ಟಿ)ಯಲ್ಲಿ** 2X20ಎಂವಿಎ, 110/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಲಿಯಿರುವ 110ಕೆವಿ ಅಹೇರಿ(ಸಿಂದಗಿ)-ಅಲ್‌ಮೇಲ್ ಡಿಸಿ(DC) ಪ್ರಸರಣ ಮಾರ್ಗದ ಒಂದು ಸರ್ಕ್ಯೂಟ್‌ನಿಂದ ಪ್ರಸ್ತಾವಿತ 110/11ಕೆವಿ ಕೊರಳ್ಳಿ (ಹಿಕ್ಕನಗುಟ್ಟಿ) ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **3.063ಕಿ.ಮೀ.**ಗಳ ಉದ್ದಕ್ಕೆ 110ಕೆವಿ ಲಿಲೋ(LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
4) ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2559
ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕು **ಯಲಿಹಡಲಗಿ**ಯಲ್ಲಿ 2x20ಎಂ.ವಿ.ಎ, 110/11ಕೆವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಅಥಣಿ-ಐಗಳಿ ಪ್ರಸರಣ ಮಾರ್ಗದಿಂದ ಪ್ರಸ್ತಾವಿತ 110/11ಕೆ.ವಿ ಯಲಿಹಡಲಗಿ ಉಪಕೇಂದ್ರದವರೆಗೆ ಲಿಂಕ್ಸ್ (Lynx) ವಾಹಕದಿಂದ **3.472 ಕಿ.ಮೀ.**ಗಳ ಉದ್ದಕ್ಕೆ 110ಕೆ.ವಿ ಲಿಲೋ (LILO) ಪ್ರಸರಣ ಮಾರ್ಗವನ್ನು ನಿರ್ಮಿಸುವುದು.
5) ಕೆಪಿಟಿಸಿಎಲ್/2025-26/ಎಸ್‌ಎಸ್/ವರ್ಕ್_ಇಂಡೆಂಟ್2560
ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕು **ತೆಲಸಂಗದಲ್ಲಿ** 2x20 ಎಂ.ವಿ.ಎ, 110/11ಕೆವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವುದು ಹಾಗೂ ಹಾಲಿಯಿರುವ 110ಕೆ.ವಿ ಕಾಕಮರಿ ಉಪಕೇಂದ್ರದಿಂದ ಪ್ರಸ್ತಾವಿತ 110/11ಕೆ.ವಿ ತೆಲಸಂಗ ಉಪಕೇಂದ್ರದವರೆಗೆ ಪ್ಯಾಂಥರ್ (Panther) ವಾಹಕದಿಂದ **7.903 ಕಿ.ಮೀ**ಗಳ ಉದ್ದಕ್ಕೆ 110ಕೆ.ವಿ ಡಿ.ಸಿ (DC) ಪ್ರಸರಣ ಮಾರ್ಗವನ್ನು ನಿರ್ಮಿಸುವುದು ಹಾಗೂ ಉದ್ದೇಶಿತ 110/11ಕೆ.ವಿ ಕಾಕಮರಿ ಉಪಕೇಂದ್ರದಲ್ಲಿ 2 ಸಂಖ್ಯೆಗಳ 110ಕೆ.ವಿ ಟರ್ಮಿನಲ್ ಬೇ ಗಳನ್ನು ನಿರ್ಮಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **25.08.2025 ರಂದು 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಮೇಲೆ ತಿಳಿಸಿರುವ ಕಾಮಗಾರಿಗಳಿಗೆ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **15.09.2025 ರಂದು 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್),
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕ.ವಿ.ಪ್ರ.ನಿ.ನಿ,
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560009.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು - 560002. ಫೋನ್: 080-22870060, ಫ್ಯಾಕ್ಸ್: 080-22875798
ಇ-ಮೇಲ್: dmekarnataka@yahoo.com
No: ME/Tender/07/2025-26 Date: 18-08-2025
ಇ-ಟೆಂಡರ್ ಅಧಿಸೂಚನೆ - ಎರಡು ಕವರ್ ಪದ್ಧತಿ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ **ಗದಗ, ಕೊಪ್ಪಳ ಮತ್ತು ಚಾಮರಾಜನಗರ** ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ ಆಸ್ಪತ್ರೆಗಳ **450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗಳಿಗೆ** ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಟೆಂಡರ್‌ನ್ನು ಪ್ರತಿಷ್ಠಿತ ತಯಾರಕರು / ಅಧಿಕೃತ ಪ್ರತಿನಿಧಿಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇಎಂಡಿ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: https://www.kppp.karnataka.gov.in ನಲ್ಲಿ ವೀಕ್ಷಿಸಿ, ಡೌನ್‌ಲೋಡ್ ಮಾಡಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು.

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 20-08-2025.
ಪೂರ್ವಭಾವಿ ಸಮಿತಿ ಸಭೆ ದಿನಾಂಕ: 03-09-2025 ಪೂರ್ವಾಹ್ನ 11.30 ಗಂಟೆಗೆ.
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 19-09-2025 ಅಪರಾಹ್ನ 5.00 ಗಂಟೆಗಿಂತಲೂ ಮುಂಚಿತವಾಗಿ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 22-09-2025 ಪೂರ್ವಾಹ್ನ 11.30 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು - 560002 ಇವರನ್ನು ಸಂಪರ್ಕಿಸಬಹುದು.
ಸಹಿ/- ನಿರ್ದೇಶಕರು
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
ವಾಸಾಸಂಇ/ವಾ.ಪ್ರ/2388/ಅಡ್ವಟೋರ್/2025-26

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಂ. 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ಸಂಖ್ಯೆ: KSEDCL/ITS/GOODS-004/2025-26 ದಿನಾಂಕ: 20.08.2025
ಇ-ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **Tender for Empanelment of Vendors for Supply, Installation, Testing, Commissioning and Warranty of Printers at Karnataka State Electronics Development Corporation Limited (KEONICS) for a period of 01 Year (Call-3)**"ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 20 ದಿನಗಳ ಅವಧಿಗೆ ಓಪನ್ ಇ-ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.inನಲ್ಲಿ ವಿವರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ
1	KEONICS/ 2025-26/ IND0293	Tender for Empanelment of Vendors for Supply, Installation, Testing, Commissioning and Warranty of Printers at Karnataka State Electronics Development Corporation Limited (KEONICS) for a period of 01 Year (Call-3)".	09.09.2025

DIPR/CP/2402/SA/2025-26 ಸಹಿ/- ನಿರ್ದೇಶಕರು (ಹಣಕಾಸು)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ, ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವಿ:ಸಇಂ-1:ಟೆಂಡರ್13/2025-26
ದಿನಾಂಕ : 18.08.2025
ಟೆಂಡರ್ ಪ್ರಕಟಣೆ ಸಂ.13/2025-26 ದಿನಾಂಕ: 18.08.2025
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 13/2025-26 ದಿನಾಂಕ 18-08-2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಮತ್ತು 5054-ರಾಜ್ಯ ಹೆದ್ದಾರಿ ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 03 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.245.26 ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.116.89 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.3,67,894/- ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ ರೂ.2,00,000/- , ಅರ್ಹ ಗುತ್ತಿಗೆದಾರರು 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 01-09-2025 ರ 17-30 ಗಂಟೆಗೆ, KPPP-Portal ಮೂಲಕ ಟೆಂಡರ್‌ಅನ್ನು ದಿನಾಂಕ 19-08-2025 ರಿಂದ 02-09-2025 ರ 16.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 02-09-2025 ರ 16-00 ಗಂಟೆವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 03-09-2025 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 04-09-2025 ರ 16-00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು
ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/257/KSMCA/2025-26

ಕೋವಿಡ್ ಪರೀಕ್ಷೆ: ₹258 ಕೋಟಿ ಅಕ್ರಮ

ಆರ್ಥಿಕ ಇಲಾಖೆ ಸೂಚನೆ ಕಡೆಗಣಿಸಿದ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ: ಸಿಎಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಅವಧಿಯಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ತಪಾಸಣೆ ಹೆಸರಿನಲ್ಲಿ ₹258.80 ಕೋಟಿಯನ್ನು ಅಕ್ರಮವಾಗಿ ವೆಚ್ಚ ಮಾಡಿದೆ ಎಂದು ಭಾರತದ ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾದ 'ಕಟ್ಟಡ ಮತ್ತು ಇತರ ಕಲ್ಯಾಣ ಕಾರ್ಮಿಕರ ಕಲ್ಯಾಣ ವರದಿ'ಯಲ್ಲಿ ಈ ಮಾಹಿತಿ ಇದೆ. 2020ರಿಂದ 2022ರ ಮಧ್ಯೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಅಕ್ರಮ ನಡೆದಿದೆ.

ಕೋವಿಡ್‌ನ ಮೊದಲ ಅಲೆಯ ಸಂದರ್ಭದಲ್ಲಿ (2020ರ ಜುಲೈ) ಮಂಡಳಿಯು ತನ್ನ ಸದಸ್ಯ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಲು ಸುಮಾರು ₹258.80 ಕೋಟಿ ಮೊತ್ತದ ಯೋಜನೆ ರೂಪಿಸಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಿತ್ತು. ಈ ಪ್ರಸ್ತಾವದಲ್ಲಿ ಹಲವು ನ್ಯೂನತೆಗಳಿವೆ ಎಂದು ಇಲಾಖೆಯು ಪ್ರಸ್ತಾವವನ್ನು ತಿರಸ್ಕರಿಸಿತ್ತು ಎಂಬ ಮಾಹಿತಿ ವರದಿಯಲ್ಲಿದೆ.

2020ರ ಡಿಸೆಂಬರ್‌ನಲ್ಲಿ ಮಂಡಳಿಯು ಮತ್ತೆ ಸಲ್ಲಿಸಿದ್ದ ಪ್ರಸ್ತಾವವನ್ನು ಆರ್ಥಿಕ ಇಲಾಖೆಯು ಎರಡನೇ ಬಾರಿ ತಿರಸ್ಕರಿಸಿತ್ತು. ಜತೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯ (ಕೆಟಿಪಿಪಿ) 4(ಜಿ) ಸೆಕ್ಷನ್ ಅಡಿಯಲ್ಲಿ ಪ್ರಸ್ತಾವ ಸಲ್ಲಿಸುವಂತೆ ಸೂಚಿಸಿತ್ತು. ₹10 ಕೋಟಿ ಮೊತ್ತ ಮೀರುವ ಪ್ರಸ್ತಾವಗಳಿಗೆ ಸಂಪುಟ ಸಭೆಯ ಒಪ್ಪಿಗೆ ಅಗತ್ಯ ಎಂದೂ ಹೇಳಿತ್ತು ಎಂದು ಸಿಎಜಿ ವಿವರಿಸಿದೆ.

ಸಂಪುಟ ಸಭೆಯ ಒಪ್ಪಿಗೆ ಪಡೆಯುವುದನ್ನು ತಪ್ಪಿಸುವ ಸಲುವಾಗಿ ಮಂಡಳಿಯು ₹258.80 ಕೋಟಿಯ ಯೋಜನೆಯನ್ನು, ತಲಾ ₹8.62 ಕೋಟಿ ಮೊತ್ತದ 30 ಯೋಜನೆಗಳಾಗಿ ವಿಂಗಡಿಸಿತು. ಕೆಟಿಪಿಪಿ ಕಾಯ್ದೆಯ 4(ಜಿ) ಸೆಕ್ಷನ್ ಅನ್ನು ಉಲ್ಲಂಘಿಸಿ, ಏಜೆನ್ಸಿಗಳಿಂದ ಕೊಟೇಷನ್ ಆಹ್ವಾನಿಸಿತು. ಯೋಜನೆಯ ಒಟ್ಟು ವೆಚ್ಚದಲ್ಲಿ ಶೇ50ರಷ್ಟನ್ನು ನಿಯಮ ಬಾಹಿರವಾಗಿ ಮುಂಗಡ ನೀಡಿತು. ಏಜೆನ್ಸಿಗಳು ಸಲ್ಲಿಸಿದ ಬಿಲ್‌ಗಳನ್ನು ಪರಿಶೀಲಿಸದೆಯೇ ಹಣವನ್ನು ಬಿಡುಗಡೆ ಮಾಡಿತು ಎಂದು ಆರೋಪಿಸಿದೆ.

ನೋಂದಾಯಿತ ಕಾರ್ಮಿಕರಿಗೆ ಕೋವಿಡ್ ಪರೀಕ್ಷೆ ನಡೆಸುವ ಈ ಯೋಜನೆಯಲ್ಲಿ ಸಾಲು–ಸಾಲು ಅಕ್ರಮಗಳು ನಡೆದಿದ್ದು, ಸರ್ಕಾರವು ಅಗತ್ಯ ಪರಿಶೀಲನೆ ನಡೆಸಬೇಕು. ಅಕ್ರಮದ ಮೊತ್ತ ವಸೂಲಿಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಶಿಫಾರಸು ಮಾಡಿದೆ.

ಮುಖ್ಯಾಂಶಗಳು

- ಕೆಟಿಪಿಪಿ ಕಾಯ್ದೆಯ 4(ಜಿ) ಸೆಕ್ಷನ್ ಉಲ್ಲಂಘಿಸಿ, ಏಜೆನ್ಸಿಗಳಿಂದ ಕೊಟೇಷನ್ ಆಹ್ವಾನ
- ನಿಯಮ ಬಾಹಿರವಾಗಿ ಶೇ 50ರಷ್ಟು ಮುಂಗಡ ಪಾವತಿ

ಸಾಂದರ್ಭಿಕ ಚಿತ್ರ

ಅಂಕಿ ಅಂಶಗಳು

₹250.47 ಕೋಟಿ 8.49 ಲಕ್ಷ ತಪಾಸಣೆಗಳನ್ನು ನಡೆಸಲು ಮಂಡಳಿಯು ಮಾಡಿದ ವೆಚ್ಚ

₹37.65 ಕೋಟಿ ದಿನಾಂಕ ಮತ್ತು ಫಲಾನುಭವಿಗಳ ವಿವರ ತಾಳೆಯಾಗದ 1.27 ಲಕ್ಷ ತಪಾಸಣೆಗಳಿಗೆ ಮಾಡಿದ ವೆಚ್ಚ

₹23.38 ಕೋಟಿ ಅನರ್ಹ ಮತ್ತು ವಿವರ ಇಲ್ಲದ 79,280 ವ್ಯಕ್ತಿಗಳ ತಪಾಸಣೆಗೆ ಮಾಡಿದ ವೆಚ್ಚ

ಅಕ್ರಮಕ್ಕೆ ಹಲವು ದಾರಿ

- ಕೊಟೇಷನ್ ಆಹ್ವಾನಿಸಿ ಹೊರಡಿಸಿದ ಅಧಿಸೂಚನೆಯನ್ನು ಪ್ರತಿ ಜಿಲ್ಲಾ ಕಾರ್ಮಿಕ ಭವನಗಳ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದೆ. ದಿನಪತ್ರಿಕೆ ಮತ್ತು ಇ–ಪೋರ್ಟಲ್‌ನಲ್ಲಿ ಅಧಿಸೂಚನೆ ಪ್ರಕಟಿಸದಿದ್ದರೂ ದೆಹಲಿ ಮತ್ತು ಮುಂಬೈನ ಕಂಪನಿಗಳು ಕೊಟೇಷನ್ ಸಲ್ಲಿಸಿವೆ
- ಕಂಪನಿಗಳ ಲೆಟರ್‌ಹೆಡ್, ಸಹಿ ಮತ್ತು ಮುದ್ರೆ ಇಲ್ಲದ ಎರಡು ಕೊಟೇಷ-ನ್‌ಗಳನ್ನು ಮಂಡಳಿಯು ಪರಿಗಣಿಸಿದೆ. ಭದ್ರತಾ ಠೇವಣಿ ಪಡೆಯದೆಯೇ ಕೆಲವು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ
- ಗುತ್ತಿಗೆ ಪಡೆದ ಕಂಪನಿಗಳು ಬ್ಯಾಂಕ್ ಗ್ಯಾರಂಟಿಗಳನ್ನು ಸಲ್ಲಿಸದೇ ಇರುವ ಸಂದರ್ಭದಲ್ಲೂ ಶೇ50ರಷ್ಟು ಮುಂಗಡ ನೀಡಲಾಗಿದೆ. ಕೆಲವು ಕಂಪನಿಗಳು ಗುತ್ತಿಗೆ ಒಪ್ಪಂದ ಪತ್ರಕ್ಕೆ ಸಹಿ ಹಾಕುವುದಕ್ಕೆ ಹಲವು ದಿನ ಮೊದಲೇ ಮುಂಗಡ ಪಡೆದಿವೆ
- ಕೋವಿಡ್ ತಪಾಸಣೆಯಲ್ಲಿ ಅನುಭವ ಇಲ್ಲದ, ತಾಂತ್ರಿಕ ಸಾಮರ್ಥ್ಯ ಇಲ್ಲದ ಕಂಪನಿಗಳಿಗೂ ಗುತ್ತಿಗೆ ನೀಡಲಾಗಿದೆ. ಜಿಲ್ಲಾ ಕಾರ್ಮಿಕ ಭವನಗಳಲ್ಲಿ ಅಧಿಸೂಚನೆ ಪ್ರಕಟಿಸುವುದಕ್ಕೂ ಮೊದಲೇ ಕೆಲವು ಕಂಪನಿಗಳು ಕೊಟೇಷನ್ ಸಲ್ಲಿಸಿವೆ. ಅಕ್ರಮ ನಡೆದಿರುವುದನ್ನು ಇದು ಸೂಚಿಸುತ್ತದೆ.

ಒಬ್ಬನಿಗೆ 29 ಬಾರಿ ತಪಾಸಣೆ

ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಈ ಯೋಜನೆ ಅಡಿ ಒಟ್ಟು 8.49 ಲಕ್ಷದಷ್ಟು ತಪಾಸಣೆಗಳನ್ನು ನಡೆಸಿದೆ. ಒಬ್ಬರೇ ವ್ಯಕ್ತಿಗಳನ್ನು ಹಲವು ಬಾರಿ ತಪಾಸಣೆಗೆ ಒಳಪಡಿಸಿದ 1.27 ಲಕ್ಷದಷ್ಟು ಪ್ರಕರಣಗಳು ಪತ್ತೆಯಾಗಿದ್ದು, ಅವುಗಳ ದಿನಾಂಕ ತಾಳೆಯಾಗುತ್ತಿಲ್ಲ ಎಂದು ಸಿಎಜಿ ಅಭಿಪ್ರಾಯಪಟ್ಟಿದೆ.

ಈ ತಪಾಸಣೆಗಳ ನಡುವಣ ಅಂತರ ತೀರಾ ಕಡಿಮೆ ಇದೆ. ಕೆಲವು ತಪಾಸಣೆಗಳು ಒಂದೇ ದಿನದಲ್ಲಿ ನಡೆದಿವೆ. ಒಬ್ಬ ವ್ಯಕ್ತಿಗೆ ಕೆಲವೇ ದಿನಗಳ ಅಂತರದಲ್ಲಿ ಒಟ್ಟು 29 ಬಾರಿ ತಪಾಸಣೆ ನಡೆಸಲಾಗಿದೆ. ಈ ಸಂಬಂಧ ಸರ್ಕಾರ ನೀಡಿರುವ ವಿವರಣೆ ತೃಪ್ತಿದಾಯಕವಾಗಿಲ್ಲ ಎಂದು ಹೇಳಿದೆ.

ವಿಧಾನಸಭೆ

ಪ್ರಶ್ನೋತ್ತರ

ವಿವಿಧ ಇಲಾಖೆಗಳಲ್ಲಿ ಗೌರವಧನದಡಿ ಕಾರ್ಯ ನಿರ್ವಹಿಸುತ್ತಿರುವ ಅಂಗವಿಕಲರನ್ನು ಕಾಯಂಗೊಳಿಸುವ ಅಥವಾ ಕನಿಷ್ಠ ವೇತನದ ವ್ಯಾಪ್ತಿಗೆ ತರಲು ಸಾಧ್ಯವಿಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಇವರಿಗೆ ಈಗಾಗಲೇ ತಿಂಗಳ ಗೌರವಧನದ ಮೊತ್ತವನ್ನು ಹೆಚ್ಚಿಸಲಾಗಿದೆ. ಪ್ರಸ್ತುತ 5,601 ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು,450 ನಗರ ಪುನರ್ವಸತಿ ಕಾರ್ಯಕರ್ತರು ಹಾಗೂ 172 ವಿವಿಧ ಉದ್ದೇಶ ಪುನರ್ವಸತಿ ಕಾರ್ಯಕರ್ತರು ಕಾರ್ಯನಿರ್ವಹಿಸುತ್ತಿದ್ದಾರೆ.

ಲಕ್ಷ್ಮಿ ಹೆಬ್ಬಾಳಕರ, ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವೆ (ಪ್ರಶ್ನೆ: ಶ್ರೀವತ್ಸ ಟಿ.ಎಸ್, ಬಿಜೆಪಿ)

ಅನಾಥ ಮಕ್ಕಳಿಗೆ ಶಿಕ್ಷಣದಲ್ಲಿ ಮತ್ತು ಭವಿಷ್ಯದಲ್ಲಿ ಮೀಸಲಾತಿ ಕೊಡಬೇಕು ಎಂಬ ಬೇಡಿಕೆ ಬಗ್ಗೆ ಕೇಂದ್ರ ಸರ್ಕಾರದ ಜತೆ ಚರ್ಚೆ ಮಾಡಬೇಕು. ಈ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಕಾರ್ಯ ನಿರ್ವಹಿಸಬೇಕು. ರಾಜ್ಯದಲ್ಲಿ 17 ಸಾವಿರ ಅನಾಥ ಮಕ್ಕಳಿದ್ದಾರೆ. ಒಟ್ಟು 712 ಮಕ್ಕಳ ಪಾಲನಾ ಸಂಸ್ಥೆಗಳಿವೆ. ಪಿಯು ಶಿಕ್ಷಣದವರೆಗೆ ಮಕ್ಕಳ ಶಾಲಾ ದಾಖಲಾತಿ ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ಈ ಮಕ್ಕಳ ಜಾತಿ ಹಿನ್ನೆಲೆ ಬಗ್ಗೆ ಯಾವುದೇ ಮಾಹಿತಿ ಇಲ್ಲದ ಕಾರಣ ಪದವಿ ಶಿಕ್ಷಣಕ್ಕೆ ಪ್ರವೇಶದ ವೇಳೆ ಸಾಮಾನ್ಯ ವರ್ಗದ ಮಗು ಎಂದು ಪರಿಗಣಿಸಿ ದಾಖಲಾತಿ ಮಾಡಲಾಗುತ್ತಿದೆ.

ಲಕ್ಷ್ಮಿ ಹೆಬ್ಬಾಳಕರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ (ಪ್ರಶ್ನೆ: ನಯನಾ ಮೋಟಮ್ಮ, ಕಾಂಗ್ರೆಸ್)

ಮಾತು ಗಮ್ಮತ್ತು

'ನೀವು ಏನು ಸಾಕ್ಷಿ ಗುಡ್ಡೆ ಇಡುತ್ತೀರಾ'

'ಡಿ.ಕೆ. ಶಿವಕುಮಾರ್ ಯಾವಾಗಲೂ ಸಾಕ್ಷಿ ಗುಡ್ಡೆ ಬಿಟ್ಟು ಹೋಗಬೇಕು ಅಂತಾ ಹೇಳುತ್ತಾರೆ. ಹಾಗೇ ಸ್ಪೀಕರ್ ಅವ್ರೇ, ನೀವು ಏನು ಸಾಕ್ಷಿ ಗುಡ್ಡೆ ಇಡುತ್ತೀರಾ' ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ಒಳ ಮೀಸಲಾತಿ ಕುರಿತು ಮುಖ್ಯಮಂತ್ರಿ ಸದನದಲ್ಲಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಲು ಅವಕಾಶ ನೀಡದ ಸಭಾಧ್ಯಕ್ಷರನ್ನು ಕೆಣಕಿದ ಅಶೋಕ, 'ನೀವು ಕಾಂಗ್ರೆಸ್ ಪರವಾಗಿ ಇರದೇ, ಮಾತನಾಡಲು ಅವಕಾಶ ಕೊಡಿ' ಎಂದರು.

ಸಂಪುಟದಿಂದ ವಜಾಗೊಂಡ ನಂತರ ಕಲಾಪಕ್ಕೆ ಹಾಜರಾಗದ ಕೆ.ಎನ್. ರಾಜಣ್ಣ ಹೆಸರು ಪ್ರಸ್ತಾಪಿಸಿದ ಅಶೋಕ, 'ರಾಜಣ್ಣ ಹೋದ ಮೇಲೆ ಡಿಕೆಶಿ ಫುಲ್ ಆಕ್ಟೀವ್ ಆಗಿದ್ದಾರೆ. ಮುಖದಲ್ಲಿ ನೋಡಿ ಕಳೆ. ಎಲ್ಲ ದಲಿತರು ಅವರ ಪರ ಬಂದಿದ್ದಾರೆ ಎಂದು ಖುಷಿಗೊಂಡಿದ್ದಾರೆ' ಎಂದು ಶಿವಕುಮಾರ್ ಅವರನ್ನು ಕಿಚಾಯಿಸಿದರು.

ಆಗ ಸಭಾಧ್ಯಕ್ಷ ಯು.ಟಿ. ಖಾದರ್, 'ಸ್ಪೀಕರ್ ತೀರ್ಮಾನ ಸರಿ ತಪ್ಪು ಅನ್ನೋದು ಇಲ್ಲ. ಸ್ಪೀಕರ್ ತೀರ್ಮಾನ ಅಂತಿಮ' ಎಂದರು.

ಅದಕ್ಕೆ ಅಶೋಕ, 'ಎರಡು ಕಣ್ಣಲ್ಲಿ ಒಂದು ಕಣ್ಣು ಹೋದರೆ ಒಂಟಿ ಕಣ್ಣು ಎನ್ನುತ್ತಾರೆ. ಎಡ, ಬಲ ಕಣ್ಣು ಅಂತ ಹೇಳೋದಿಲ್ಲ. ನೀವು ಅಷ್ಟೇ. ಒಂದು ಕಡೆ ನಡೆದುಕೊಂಡರೆ ಎಡ ಬಲ ಎನ್ನಲ್ಲ. ಒನ್ ಸೈಡ್ ಎಂದೇ ಹೇಳುತ್ತಾರೆ' ಎಂದರು.

'ಶಿಫಾರಸು ಇಲ್ಲ ಎಂದಿದ್ದಕ್ಕೆ ಬೇಸರವಾಯಿತೇ?'

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ತಿದ್ದುಪಡಿ ಮಸೂದೆ' ಮೇಲಿನ ಚರ್ಚೆಯ ವೇಳೆ ಕೆಲ ಸದಸ್ಯರು, 'ಇದರಿಂದ ನಮಗೆ ಶಿಫಾರಸು ಪತ್ರ ಒತ್ತಡ ಕಡಿಮೆ ಆಗುತ್ತದೆ' ಎಂದರು.

ತಮ್ಮ ಉತ್ತರದ ವೇಳೆ ಈ ಬಗ್ಗೆ ಪ್ರಸ್ತಾಪಿಸಿದ ದಿನೇಶ್, 'ಈ ಹಿಂದೆ ಶಿಫಾರಸು ಪತ್ರಗಳ ಆಧಾರದಲ್ಲೇ ವರ್ಗಾವಣೆ ನಡೆಯುತ್ತಿತ್ತು. ಈಗ ಅದೆಲ್ಲಾ ನಿಂತುಹೋಗಲಿದೆ' ಎಂದರು. ಆಗ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಶಿಫಾರಸು ಪತ್ರಗಳ ಮೇಲೆ ವರ್ಗಾವಣೆ ಆಗುತ್ತಿತ್ತು ಎಂಬುದನ್ನು ಸದನದ ಮುಂದೆ ಹೇಳಿದ್ದೀರಿ. ಅದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂಬುದನ್ನು ಸ್ಪಷ್ಟಪಡಿಸಿ' ಎಂದು ಸಚಿವರನ್ನು ಮಾತಿಗೆ ಸಿಲುಕಿಸಲು ಯತ್ನಿಸಿದರು.

ಸಚಿವ ಬೈರತಿ ಸುರೇಶ್, 'ಆ ಕಡೆಯಿಂದ ನಮಗೆಲ್ಲಾ ಬಂದಿರುವ ಶಿಫಾರಸು ಪತ್ರಗಳ ರಾಶಿಯೇ ಇದೆ' ಎಂದು ಕೂಗಿದರು. ದಿನೇಶ್ ಗುಂಡೂರಾವ್, 'ಶಿಫಾರಸು ಪತ್ರ ನಡೆಯುವುದಿಲ್ಲ ಎಂದಿದ್ದಕ್ಕೆ ನಿಮಗೆ ಬೇಸರವಾಯಿತೇ' ಎಂದು ಕುಟುಕಿದರು.

'ಸೂಟ್‌ಕೇಸ್‌ನ ಅನುಭವ'

ವಿಧಾನ ಪರಿಷತ್ತಿನಲ್ಲಿ ಮಂಡಿಸಲಾದ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಮಸೂದೆ'ಯ ಮೇಲಿನ ಚರ್ಚೆಯ ವೇಳೆ, 'ಕೆರೆಗಳ ಬಫರ್ ಝೋನ್ ವಿಚಾರದಲ್ಲಿ ನಮ್ಮ ಸರ್ಕಾರದ ಅವಧಿಯಲ್ಲಿ ಸೂಟ್‌ಕೇಸ್ ಬಂದಿತ್ತು. ಅದನ್ನು ವಾಪಸ್ ಕಳುಹಿಸಿದ್ದೆವು. ಈಗ ಸೂಟ್‌ಕೇಸ್‌ಗಳು ಹೆಚ್ಚು ಪ್ರಭಾವಿ ಆಗಿರಬೇಕು. ಸರ್ಕಾರ ತನ್ನನ್ನು ಮಾರಿಕೊಂಡಿದೆ' ಎಂದು ಬಿಜೆಪಿಯ ಸಿ.ಟಿ.ರವಿ ಆರೋಪಿಸಿದರು.

ಮಸೂದೆಯಲ್ಲಿನ ಅಂಶಗಳ ಬಗ್ಗೆ ಎತ್ತಲಾದ ಪ್ರಶ್ನೆಗಳಿಗೆ ಉತ್ತರಿಸಿದ ಸಭಾ ನಾಯಕ ಎನ್.ಎಸ್.ಬೋಸರಾಜು, 'ನಮಗೆ ಯಾವ ಸೂಟ್‌ಕೇಸ್‌ಗಳ ಅನುಭವ ಇಲ್ಲ. ನಿಮಗೆ ಅಂತಹ ಅನುಭವ ಇರಬೇಕು. ಅದಕ್ಕಾಗಿಯೇ ಸೂಟ್‌ಕೇಸ್ ಬಗ್ಗೆ ಮಾತನಾಡಿದಿರಿ' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಆಗ ಸಿ.ಟಿ.ರವಿ ಅವರು ಎದ್ದುನಿಂತರೂ ಮಾತು ಮುಂದುವರೆಸಿದ ಸಚಿವರು, 'ನೀವು ಸದನದ ಹಿರಿಯ ಸದಸ್ಯರಿದ್ದೀರಿ. ಇಂಥದ್ದನ್ನೆಲ್ಲಾ ಮಾತನಾಡುತ್ತಾರೆಯೇ' ಎಂದು ಕಟುವಾಗಿ ಹೇಳಿದರು.

ಎಸ್‌ಸಿಗೆ ಶಾಶ್ವತ ಆಯೋಗ

ಒಂದನೇ ಪುಟದಿಂದ...

'ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಎಲ್ಲ ಜಾತಿಗಳಿಗೆ ಶಿಕ್ಷಣ, ಉದ್ಯೋಗ ಮತ್ತು ಇತರೆ ವಿಷಯಗಳಲ್ಲಿ ಅವಕಾಶಗಳನ್ನು ಒದಗಿಸುವಾಗ ಸಮಾನತೆ ಮತ್ತು ನ್ಯಾಯ ಸಮ್ಮತಿಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಮರ್ಥನೆ ನೀಡಿದರು.

'ಸದ್ಯ ತೆಗೆದುಕೊಂಡಿರುವ ತೀರ್ಮಾನದಲ್ಲಿ ಯಾವುದಾದರೂ ಬದಲಾವಣೆಯ ಅಗತ್ಯ ಕಂಡುಬಂದರೆ ಮುಂದೆ ನಡೆಯಲಿರುವ ರಾಷ್ಟ್ರೀಯ ಜನ ಗಣತಿಯಲ್ಲಿನ ಅಂಕಿ-ಅಂಶ ಆಧರಿಸಿ ಬದಲಾವಣೆಗೆ ಒಳಪಡಿಸುವ ಷರತ್ತಿಗೆ ಸರ್ಕಾರ ಬದ್ಧವಾಗಿದೆ' ಎಂದೂ ಹೇಳಿದರು.

ಅವಕಾಶ ನೀಡದ ಸಭಾಧ್ಯಕ್ಷ: ಸಭಾತ್ಯಾಗ

ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಮಾತು ಮುಗಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟಿ ಸ್ವಾಗತಿಸಿದರು. ಹೇಳಿಕೆಗೆ ಪ್ರತಿಕ್ರಿಯಿಸಲು ಅವಕಾಶ ನೀಡಲಿಲ್ಲವೆಂದು ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿ ಸದಸ್ಯರು ಹೇಳಿಕೆ ನೀಡಲು ಮುಂದಾಗುತ್ತಿದ್ದಂತೆಯೇ ಮುಖ್ಯಮಂತ್ರಿ, 'ನಿಮ್ಮ ಕೈಯಲ್ಲಿ (ಒಳ ಮೀಸಲು) ಮಾಡಲು ಆಗಿಲ್ಲ ಎಂದೇ ನಾವು ಮಾಡಿದ್ದೇವೆ' ಎಂದು ಹೇಳಿ ಸದನದಿಂದ ಹೊರಡಲು ಮುಂದಾದರು. ಆಗ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಪಲಾಯನ ಮಾಡಿ ಹೋಗುತ್ತಿದ್ದಾರೆ' ಎಂದರು. ಅದಕ್ಕೆ ಮುಖ್ಯಮಂತ್ರಿ, 'ನನ್ನ ರಾಜಕೀಯ ಜೀವನದಲ್ಲಿ ನಾನು ಎಂದಿಗೂ ಪಲಾಯನ ಮಾಡಿಲ್ಲ. ನಿಮಗೆ ಹಿಂದೆ ಅಲ್ಲ, ಈಗಲೂ ಹೆದರುವುದಿಲ್ಲ' ಎಂದು ತಿರುಗೇಟು ನೀಡಿ ತೆರಳಿದರು.

ಈ ವೇಳೆ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಕ್ಸಮರ ನಡೆಯಿತು. 'ನಮಗೂ ಮಾತನಾಡಲು ಅವಕಾಶ ಕೊಡಿ' ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದರು. ಆಗ ಸಭಾಧ್ಯಕ್ಷ ಯು.ಟಿ. ಖಾದರ್, 'ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ನಿಯಮದಲ್ಲಿಲ್ಲ' ಎಂದರು.

ಮಧ್ಯಪ್ರವೇಶಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, 'ಪ್ರಶ್ನೆ ಕೇಳಲು ಅವಕಾಶ ಇದೆ. ನೀವು ಅವಕಾಶ ಕೊಡುತ್ತಿಲ್ಲ' ಎಂದು ನಿಯಮ ಓದಿದರು. 'ನಾನು ವಿರೋಧ ಪಕ್ಷದ ನಾಯಕ, ನನಗೇ ಪ್ರಶ್ನೆ ಕೇಳಲು ಅವಕಾಶ ನೀಡು-ವುದಿಲ್ಲವೆಂದರೆ ಏನರ್ಥ' ಎಂದು ಆರ್. ಅಶೋಕ ಪ್ರಶ್ನಿಸಿದರು. ಆಗ ಸಭಾಧ್ಯಕ್ಷರು, 'ಮುಖ್ಯಮಂತ್ರಿ ಪರಿಷತ್‌ಗೆ ಹೋಗಿದ್ದಾರೆ' ಎಂದರು.

'ಮುಖ್ಯಮಂತ್ರಿ ಹೋಗಲಿ. ನಮಗೆ ಡಿ.ಕೆ. ಶಿವಕುಮಾರ್ ಇದ್ದರೆ ಸಾಕು. ಅವರೇ ಮುಖ್ಯಮಂತ್ರಿ ಅಂದುಕೊಳ್ಳುತ್ತೇವೆ' ಎಂದ ಆರ್. ಅಶೋಕ, 'ಮಾತನಾಡಲು ಅವಕಾಶ ನೀಡಲೇಬೇಕು' ಎಂದು ಪಟ್ಟುಹಿಡಿದರು. ಆದರೆ, ಸಭಾಧ್ಯಕ್ಷರು ಅವಕಾಶ ನೀಡಲಿಲ್ಲ. ಹೀಗಾಗಿ, ಬಿಜೆಪಿ, ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು.

ಆಗ ಕಾನೂನು ಸಚಿವ ಎಚ್.ಕೆ. ಪಾಟೀಲ, 'ಒಳ ಮೀಸಲಾತಿ ಹಂಚಿಕೆ ಐತಿಹಾಸಿಕ ನಿರ್ಣಯ. ಹೇಗಾದರೂ ಮಾಡಿ ಗೊಂದಲ ಸೃಷ್ಟಿಸಿ, ರಾಜಕೀಯ ಮಾಡಬೇಕೆಂಬುದು ಬಿಜೆಪಿಯವರ ಉದ್ದೇಶ. ನಮ್ಮ ಸೂತ್ರ ಎಲ್ಲರಿಗೂ ಒಪ್ಪಿಗೆ ಆಗಿದೆ. ವಿಪಕ್ಷಗಳ ಸಭಾತ್ಯಾಗ ರಾಜಕೀಯ ನಾಟಕವೇ ಹೊರತು ವಿವೇಕದ ನಡೆ ಅಲ್ಲ' ಎಂದು ಟೀಕಿಸಿದರು.

ಬಳಕೆಗೆ ಕಾಯ್ದೆಯ ಬಲವಿದೆ: ಸಚಿವ ಎಚ್‌.ಸಿ.ಮಹದೇವಪ್ಪ ಸಮರ್ಥನೆ; ಬಿಜೆಪಿ ಶಾಸಕರಿಂದ ತೀವ್ರ ಆಕ್ಷೇಪ

'ಗ್ಯಾರಂಟಿ'ಗೆ ಪರಿಶಿಷ್ಟರ ನಿಧಿಯಿಂದ ₹13,433 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಗ್ಯಾರಂಟಿ ಯೋಜನೆಗಳಿಗಾಗಿ 2025–26 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಗಿರಿಜನ ಉಪ ಯೋಜನೆ (ಟಿಎಸ್‌ಪಿ) ಅನುದಾನದಲ್ಲಿ ಒಟ್ಟು ₹13,433 ಕೋಟಿ ಬಳಕೆ ಮಾಡಿರುವ ಬಗ್ಗೆ ವಿಧಾನಸಭೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. 'ಪರಿಶಿಷ್ಟರಿಗೆ ಮೀಸಲಾದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸುತ್ತಿರುವುದು, ದಲಿತರಿಗೆ ಮಾಡುತ್ತಿರುವ ದ್ರೋಹ' ಎಂದು ಕಿಡಿಕಾರಿದರು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಂ.ಚಂದ್ರಪ್ಪ ಅವರ ಪ್ರಶ್ನೆಗೆ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ನೀಡಿದ ಉತ್ತರಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ದಲಿತ ಸಮುದಾಯದ ನಿರಂತರ ಧ್ವನಿಯಾಗಿ ಬಂದಿದ್ದ, ಮಹದೇವಪ್ಪ ಅವರೇ ಅನ್ಯಾಯ ಮಾಡಿದ್ದಾರೆ ಎಂದು ಹರಿಹಾಯ್ದರು.

ಚಂದ್ರಪ್ಪ ಮಾತನಾಡಿ, ₹42,017.5 ಕೋಟಿ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನದಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಕೇವಲ ₹5,104 ಕೋಟಿಯನ್ನು ನೀಡಿದ್ದು, ಉಳಿದ ಮೊತ್ತವನ್ನು 33 ಇಲಾಖೆಗಳಿಗೆ ಹಂಚಲಾಗಿದೆ. ಅಷ್ಟೂ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಗೆ ನೀಡಬೇಕಿತ್ತು ಎಂದು ಹೇಳಿದರು.

'ಬಿಜೆಪಿ ಸರ್ಕಾರ ಶೇ 40 ರಷ್ಟು ಕಮಿಷನ್ ಪಡೆಯುತ್ತಿದೆ ಎಂದು ದೂರಿದ್ದ ನೀವು ಅದನ್ನು ನಿಲ್ಲಿಸಿ, ಅದರಿಂದ ಸಿಗುವ ಮೊತ್ತವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸುವುದಾಗಿ ಹೇಳಿದ್ದೀರಿ. ಈಗ ಗ್ಯಾರಂಟಿಗಳಿಗೆ ₹13,433 ಕೋಟಿ ಬಳಕೆ ಮಾಡಿದ್ದೀರಿ? ಯಾವ ಪುರುಷಾರ್ಥಕ್ಕೆ ಇಷ್ಟು ಹಣ ಕೊಟ್ಟಿದ್ದೀರಿ' ಎಂದು ಪ್ರಶ್ನಿಸಿದರು.

ವಿಧಾನಸಭೆ ಕಲಾಪದಲ್ಲಿ ಮಾತನಾಡಿದ ಸಚಿವ ಮಹದೇವಪ್ಪ –ಪ್ರಜಾವಾಣಿ ಚಿತ್ರ

ಅನುದಾನ ಹಂಚಿಕೆ (₹ ಕೋಟಿಗಳಲ್ಲಿ)

ಯೋಜನೆ	ಎಸ್‌ಸಿಎಸ್‌ಪಿ	ಟಿಎಸ್‌ಪಿ	ಒಟ್ಟು
ಗೃಹಲಕ್ಷ್ಮಿ	5,364	2,074.08	7,438.08
ಅನ್ನಭಾಗ್ಯ	1,156.68	514.08	1,670.76
ಗೃಹಜ್ಯೋತಿ	1,818	808	2,626
ಶಕ್ತಿ	1,060	477	1,537
ಯುವನಿಧಿ	114	48	162
ಒಟ್ಟು	9,512.68	3,921.16	13,433.84

'ಪರಿಶಿಷ್ಟ ಫಲಾನುಭವಿಗಳ ಪಟ್ಟಿ ಕೇಳಿದ್ದೇನೆ'

ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಕಾಯ್ದೆ ಸೆಕ್ಷನ್ 7 ಸಿ ಅಡಿಯಲ್ಲಿ ಈ ಅನುದಾನ ಬಳಸಲಾಗಿದೆ. ಬಳಕೆಗೆ ಅವಕಾಶವೂ ಇದೆ ಎಂದು ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಸಮಜಾಯಿಷಿ ನೀಡಿದರು.

ಹಿಂದೆ ಸೆಕ್ಷನ್ 7 ಡಿ ಅಡಿ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿತ್ತು. ಬಿಜೆಪಿ ಅವಧಿಯಲ್ಲಿ ₹8,000 ಕೋಟಿ ಮತ್ತು ಕಾಂಗ್ರೆಸ್‌ನ ಈ ಹಿಂದಿನ ಅವಧಿಯಲ್ಲಿ ₹4,000 ಕೋಟಿ ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿತ್ತು. ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಲು ಇದ್ದ ಸೆಕ್ಷನ್ 7 ಡಿ ಅನ್ನು ತೆಗೆದು ಹಾಕಲಾಗಿದೆ ಎಂದರು.

'ಐದು ಗ್ಯಾರಂಟಿ ಯೋಜನೆಗಳಡಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಎಷ್ಟು ಫಲಾನುಭವಿಗಳಿಗೆ ಇದರ ಪ್ರಯೋಜನ ಸಿಕ್ಕಿದೆ ಎಂಬುದರ ಪಟ್ಟಿ ನೀಡುವಂತೆ ಕೇಳುತ್ತೇವೆ. ಪ್ರತಿಯೊಂದು ಇಲಾಖೆಯೂ ಪಟ್ಟಿ ಕೊಡಬೇಕು ಇಲ್ಲವಾದರೆ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುತ್ತೇವೆ. ನಾನು ಆತ್ಮಸಾಕ್ಷಿಗೆ ಅನುಗುಣವಾಗಿಯೇ ನಡೆದುಕೊಂಡಿದ್ದೇನೆ' ಎಂದು ಮಹದೇವಪ್ಪ ಹೇಳಿದರು.

'ಪರಿಶಿಷ್ಟರ ಟಿಕೆಟ್ ಸಂಗ್ರಹಿಸುತ್ತೀರಾ?'

'ಶಕ್ತಿ' ಯೋಜನೆಯಡಿ ಬಸ್‌ಗಳಲ್ಲಿ ಟಿಕೆಟ್ ಕೊಡುವಾಗ ಸಾಮಾನ್ಯ ವರ್ಗ ಮತ್ತು ಪರಿಶಿಷ್ಟ ವರ್ಗದವರು ಯಾರು ಎಂದು ಕೇಳಿ ಟಿಕೆಟ್ ಕೊಡುತ್ತೀರಾ? ಎಷ್ಟು ಜನ ಪರಿಶಿಷ್ಟರಿಗೆ ಟಿಕೆಟ್ ನೀಡಿದ್ದೀರಿ ಎಂಬುದನ್ನು ಹೇಗೆ ಪರೀಕ್ಷಿಸುತ್ತೀರಿ' ಎಂದು ಬಿಜೆಪಿ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದರು.

'ಗ್ಯಾರಂಟಿ ಯೋಜನೆಯಡಿ ಐದು ಯೋಜನೆಗಳಿಗೆ ಸಂಬಂಧಿಸಿದ ಇಲಾಖೆಯಿಂದ ಫಲಾನುಭವಿಗಳ ಪಟ್ಟಿ ಪಡೆಯುತ್ತೇನೆ' ಎಂದು ಹೇಳಿದ ಸಚಿವ ಮಹದೇವಪ್ಪ ಅವರಿಗೆ ಸುನಿಲ್ ಕುಮಾರ್ ಈ ಪ್ರಶ್ನೆ ಕೇಳಿದರು.

ಪರಿಶಿಷ್ಟ ಹುಲಿಗಳೂ ಇವೆಯಾ: ಅಶೋಕ

ಪರಿಶಿಷ್ಟರಿಗೆ ಮೀಸಲಾದ ಅನುದಾನವನ್ನು ಹುಲಿ ಯೋಜನೆಗೆ ನೀಡಿದ್ದಾರೆ, ಹುಲಿಗಳಲ್ಲೂ ಪರಿಶಿಷ್ಟ ಹುಲಿಗಳೆಂದು ಇವೆಯೇ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

'ಈ ಅನುದಾನವನ್ನು ಪರಿವೀಕ್ಷಣಾ ಬಂಗಲೆಗೆ (ಐಬಿ) ನೀಡಲಾಗಿದೆ. ದಲಿತರು ಅಲ್ಲಿ ಹೋಗಿ ಕೂರುತ್ತಾರೆಯೇ? ನೀವು ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಬೇಕು ದಲಿತರ ಹಣವನ್ನು ಸದ್ದುಗದ್ದಲವಿಲ್ಲದೇ ನುಂಗುವ ಕೆಲಸ ಆಗುತ್ತಿದೆ. ದಲಿತರ ಹಣ ನುಂಗಲು ಎಷ್ಟು ಧೈರ್ಯ' ಎಂದು ಅವರು ಕೇಳಿದರು.

₹3,352.57 ಕೋಟಿ ಪೂರಕ ಅಂದಾಜು ಮಂಡನೆ

ಸಾಧನಾ ಸಮಾವೇಶಕ್ಕೆ ₹10 ಕೋಟಿ, ನಂದಿ ಸಂಪುಟ ಸಭೆಗೆ ₹3.69 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯಲ್ಲಿ ನಡೆದ ಸಾಧನಾ ಸಮಾವೇಶಕ್ಕೆ ಹೆಚ್ಚುವರಿಯಾಗಿ ₹10 ಕೋಟಿ, ಚಿಕ್ಕಬಳ್ಳಾಪುರದ ನಂದಿ ಗಿರಿಧಾಮದಲ್ಲಿ ನಡೆದ ಸಚಿವ ಸಂಪುಟದ ಸಭೆಯ ವೆಚ್ಚಕ್ಕಾಗಿ ಹೆಚ್ಚುವರಿಯಾಗಿ ₹3.69 ಕೋಟಿ ಅನುದಾನ ಸೇರಿ ₹3,352.57 ಕೋಟಿ ಮೊತ್ತದ ಪೂರಕ ಅಂದಾಜನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಮುಖ್ಯಮಂತ್ರಿ ಪರವಾಗಿ ಗೃಹ ಸಚಿವ ಜಿ.ಪರಮೇಶ್ವರ ಅವರು ಬುಧವಾರ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಂಡಿಸಿದರು.

ಮುಖ್ಯಾಂಶಗಳು:

- ಕಪಿಲ್ ಸಿಬಲ್ ಮತ್ತು ಇತರ ವಿಶೇಷ ವಕೀಲರ ಸಂಭಾವನೆ ಪಾವತಿಗೆ ಹೆಚ್ಚುವರಿಯಾಗಿ ₹2.30 ಕೋಟಿ, ಕೇರಳದಲ್ಲಿ ಪ್ರವಾಹ ಸಂತ್ರಸ್ತರಿಗೆ 100 ಕುಟುಂಬಗಳಿಗೆ ಮನೆಗಳನ್ನು ಕಟ್ಟಿಕೊಡಲು ಹೆಚ್ಚುವರಿಯಾಗಿ ₹10 ಕೋಟಿ
- ಶಾಸಕರು ಕಾರುಗಳನ್ನು ಖರೀದಿಸಲು ಮುಂಗಡ ಮಂಜೂರು ಮಾಡಲು ಹೆಚ್ಚುವರಿಯಾಗಿ ₹3.20 ಕೋಟಿ, ವಿಧಾನಪರಿಷತ್ ವಿರೋಧಪಕ್ಷದ ಮುಖ್ಯ ಸಚೇತಕರು ಹೊಸ ವಾಹನ ಖರೀದಿಸಲು ಹೆಚ್ಚುವರಿಯಾಗಿ ₹31 ಲಕ್ಷ ಮತ್ತು ವಿರೋಧ ಪಕ್ಷ ನಾಯಕರ ಬಳಕೆಗೆ ಹೊಸ ವಾಹನ ಖರೀದಿಸಲು ಹೆಚ್ಚುವರಿಯಾಗಿ ₹30 ಲಕ್ಷ
- ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಮಾಧ್ಯಮ ಕೋಶದ ಹೊರಗುತ್ತಿಗೆ ಸಿಬ್ಬಂದಿ ವೇತನ ಪಾವತಿಗೆ ಹೆಚ್ಚುವರಿಯಾಗಿ ₹32.90 ಲಕ್ಷ
- ಬೆಂಗಳೂರಿನ ಕೆ.ಆರ್.ಪುರದಲ್ಲಿ ಕೆಎಸ್‌ಆರ್‌ಟಿಸಿ ಸಂಸ್ಥೆ ಭಾರತೀಯ ದೂರಸಂಪರ್ಕ ಉದ್ಯಮಕ್ಕೆ ಸೇರಿದ ಜಮೀನು ಖರೀದಿಸಲು ಬಡ್ಡಿ ರಹಿತ ಸಾಲ ಒದಗಿಸಲು ಹೆಚ್ಚುವರಿಯಾಗಿ ₹47 ಕೋಟಿ
- ಮೈಶುಗರ್ಸ್ ಸಕ್ಕರೆ ಕಂಪನಿಗೆ 2025–26 ನೇ ಸಾಲಿನ ಹಂಗಾಮಿಗೆ ಕಬ್ಬು ಅರೆಯಲು ಅಗತ್ಯವಿರುವ ದುಡಿಯುವ ಬಂಡವಾಳಕ್ಕಾಗಿ ಹೆಚ್ಚುವರಿಯಾಗಿ ₹10 ಕೋಟಿ
- ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಡಿ ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ನಿವೇಶನ ಖರೀದಿಗೆ ₹1 ಕೋಟಿ ಹೆಚ್ಚುವರಿ ಅನುದಾನ
- ಬೆಂಗಳೂರಿನಲ್ಲಿ ನಡೆಯಲಿರುವ 11 ನೇ ಕಾಮನ್‌ವೆಲ್ತ್ ಸಂಸದೀಯ ಸಂಘದ ಭಾರತ ವಿಭಾಗದ ಸಮ್ಮೇಳನ ವೆಚ್ಚಗಳಿಗಾಗಿ ಹೆಚ್ಚುವರಿಯಾಗಿ ₹10 ಕೋಟಿ
- ವಿಧಾನಪರಿಷತ್ ಸಚಿವಾಲಯದ ಅಧಿಕಾರಿ– ಸಿಬ್ಬಂದಿ ಪ್ರಯಾಣ ವೆಚ್ಚ ಪಾವತಿಸಲು ₹1.31 ಕೋಟಿ.

'ಸರ್ಕಾರದಿಂದ ತೆರಿಗೆ ಭಯೋತ್ಪಾದನೆ'

ಅನುದಾನ ಇಲ್ಲ, ಅಭಿವೃದ್ಧಿ ಶೂನ್ಯ– ವಿಪಕ್ಷಗಳು ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಜನರಿಂದ ಹೆಚ್ಚುವರಿಯಾಗಿ ₹ 56 ಸಾವಿರ ಕೋಟಿ ತೆರಿಗೆ ವಸೂಲಿ ಮಾಡುತ್ತಿದೆ. ಇದೊಂದು ರೀತಿಯಲ್ಲಿ ತೆರಿಗೆ ಭಯೋತ್ಪಾದನೆ' ಎಂದು ವಿರೋಧ ಪಕ್ಷದ ಆರ್. ಅಶೋಕ ಚಾಟಿ ಬೀಸಿದರು.

ವಿಧಾನಸಭೆಯಲ್ಲಿ 'ಅನುದಾನ, ಅಭಿವೃದ್ಧಿ' ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಸರ್ಕಾರ ಹೆಚ್ಚಿಸಿರುವ ವಿವಿಧ ತೆರಿಗೆಗಳ ವಿವರ ಬಿಚ್ಚಿಟ್ಟರು. ತೆರಿಗೆ, ಶುಲ್ಕ ಹೆಚ್ಚಿಸಿ ಭಾರಿ ಮೊತ್ತವನ್ನು ಸರ್ಕಾರ ಸಂಗ್ರಹಿಸುತ್ತಿದ್ದರೂ, ಆ ಹಣವನ್ನು ಅಭಿವೃದ್ಧಿಗೆ ಬಳಸುತ್ತಿಲ್ಲ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

'ಕಸದ ಸೆಸ್ ದುಪ್ಪಟ್ಟು ಮಾಡಲಾಗಿದೆ. ಹಾಲಿನ ದರ ಎರಡು ಬಾರಿ ಏರಿಸಲಾಗಿದೆ. ಬಸ್ ಪ್ರಯಾಣ ದರ, ವಾಹನ ನೋಂದಣಿ ಶುಲ್ಕ, ಕಾವೇರಿ ನೀರು ಶುಲ್ಕ ಏರಿಕೆ, ಒಳಚರಂಡಿ ಶುಲ್ಕ, ಮದ್ಯದ ದರ, ಮದ್ಯದಂಗಡಿ ಪರವಾನಗಿ ಶುಲ್ಕ, ವಿದ್ಯುತ್ ಶುಲ್ಕ, ಮೆಟ್ರೊ ದರ, ಆಸ್ತಿ ಮಾರ್ಗಸೂಚಿ ದರ, ವೃತ್ತಿ ತೆರಿಗೆ, ಸರ್ಕಾರಿ ಆಸ್ಪತ್ರೆಗಳ ಸೇವಾ ಶುಲ್ಕ ಹೀಗೆ ಎಲ್ಲವನ್ನೂ ಸರ್ಕಾರ ಹೆಚ್ಚಿಸಿದೆ. ಆದರೆ, ಅಭಿವೃದ್ಧಿ ಮಾತ್ರ ಶೂನ್ಯ' ಎಂದರು.

ವಿಧಾನ ಸಭೆಯ ಕಲಾಪದಲ್ಲಿ ಆರ್. ಅಶೋಕ ಮಾತನಾಡಿದರು

'ಬೆಂಗಳೂರಿನಲ್ಲಿ ಸುರಂಗ ರಸ್ತೆ ಯೋಜನೆಯನ್ನು ₹ 17 ಸಾವಿರ ಕೋಟಿ ವೆಚ್ಚ ಎಂದು ಪ್ರಸ್ತಾಪಿಸಲಾಗಿದೆ. ಇದಕ್ಕೆ ಟೋಲ್ ವಿಧಿಸಿದರೆ ಯಾರೂ ಬರುವುದಿಲ್ಲ. ಆಗ ಸುರಂಗದಲ್ಲೇ ಕಸವನ್ನು ತುಂಬಬಹುದು. ನಾನು ಅಭಿವೃದ್ಧಿಯ ವಿರೋಧಿಯಲ್ಲ. ಆದರೆ, ಸುರಂಗಕ್ಕಾಗಿ ಹಣ ಹಾಳು ಮಾಡಿದರೆ ನಗರದ ಅಭಿವೃದ್ಧಿ ಅಸಾಧ್ಯ' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್‌ಬಾಬು, 'ಶಾಸಕರಿಗೆ ಅನುದಾನ ನೀಡುವ ಭರವಸೆ ನೀಡಿ, ಕಾಮಗಾರಿಗಳಿಗೆ ಟೆಂಡರ್ ಕರೆಯುವಂತೆ ಸರ್ಕಾರ ಸೂಚಿಸಿದೆ' ಎಂದರು. 'ತಾರತಮ್ಯ ಮಾಡದೆ ಅನುದಾನ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ಡಾ. ಸಿ.ಎನ್. ಅಶ್ವತ್ಥ ನಾರಾಯಣ, 'ಯಾವ ಕಾಯ್ದೆಯಲ್ಲೂ 'ಎ' ಖಾತಾ 'ಬಿ' ಖಾತಾ ಎನ್ನುವುದೇ ಇಲ್ಲ. ಆದರೆ, ಸರ್ಕಾರ ಈ ಖಾತೆ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿದೆ. ತೆರಿಗೆ ಹಣದಲ್ಲಿ ಹುಡುಗಾಟಿಕೆ ಮಾಡುತ್ತಿದೆ' ಎಂದು ದೂರಿದರು.

'ಉತ್ತರ ಕರ್ನಾಟಕದಲ್ಲಿ ಮಳೆಯಿಂದ ಬೆಳೆಗಳು ನಾಶವಾಗಿದೆ, ರೈತರು ಕಂಗಾಲಾಗಿದ್ದಾರೆ. ಎಷ್ಟು ಪ್ರಮಾಣದ ಬೆಳೆ ಹಾನಿಯಾಗಿದೆ ಎಂದು ಅಧ್ಯಯನ ನಡೆಸಿ ಪರಿಹಾರ ನೀಡುವಂತೆ ಅಧಿಕಾರಿಗಳಿಗೆ ಸರ್ಕಾರ ಆದೇಶ ಕೊಡಬೇಕು' ಎಂದು ಆಗ್ರಹಿಸಿದ ಕಾಂಗ್ರೆಸ್‌ನ ಬಿ.ಆರ್. ಪಾಟೀಲ, 'ರೈತರಿಗೆ ವಿಮೆ ಬಿಡುಗಡೆ ಆಗಿಲ್ಲ. ಈ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕು' ಎಂದು ಒತ್ತಾಯಿಸಿದರು.

ಬಿಜೆಪಿಯ ಶರಣು ಸಲಗರ, ಸುರೇಶ್ ಗೌಡ, ಜೆಡಿಎಸ್‌ನ ಶರಣಗೌಡ ಕಂದಕೂರ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದರು.

ವಿಭಜನೆ ಮತ: ಸರ್ಕಾರಕ್ಕೆ ಮುಖಭಂಗ

ಸೌಹಾರ್ದ ಸಹಕಾರಿ ಮಸೂದೆಗೆ ಮೇಲ್ಮನೆಯಲ್ಲಿ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಹಾರ್ದ ಸಹಕಾರಿ ಮಂಡಳಿಗಳ ಸದಸ್ಯರು ಪ್ರತಿ ವರ್ಷ ತಮ್ಮ ಕುಟುಂಬದ ಆಸ್ತಿ ವಿವರ ಸಲ್ಲಿಸು-ವುದನ್ನು ಕಡ್ಡಾಯ ಮಾಡಲು ಸರ್ಕಾರ ತಂದಿದ್ದ 'ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ'ಯು ವಿಧಾನ ಪರಿಷತ್ತಿನಲ್ಲಿ ಸೋಲು ಕಂಡಿತು.

ವಿಧಾನ ಪರಿಷತ್ತಿನ ಬುಧವಾರದ ಕಲಾಪದ ಅವಧಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸದರಿ ಮಸೂದೆ ಮಂಡಿಸಿದರು.

ಚರ್ಚೆ ಬಳಿಕ ಮಸೂದೆಗೆ ಅನುಮೋದನೆ ಪಡೆಯುವ ವೇಳೆ, ಆಡಳಿತ ಪಕ್ಷದ ಸದಸ್ಯರ ಸಂಖ್ಯೆ ಕಡಿಮೆ ಇರುವುದನ್ನು ಗಮನಿಸಿದ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಭಜನೆ ಮತಕ್ಕೆ ಆಗ್ರಹಿಸಿದರು.



ಪರಿಷತ್ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ವಾಗ್ವಾದದಲ್ಲಿ ತೊಡಗಿದರು– ಚಿತ್ರ: ಪ್ರಶಾಂತ್ ಎಚ್‌.ಜಿ.

ಮಸೂದೆಯನ್ನು ಮತಕ್ಕೆ ಹಾಕುವುದಾಗಿ ಪ್ರಕಟಿಸಿದ ಸಭಾಪತಿ ಬಸವರಾಜ ಹೊರಟ್ಟಿ ಅವರು, ಹೊರಹೋಗಿರುವ ಸದಸ್ಯರು ಸದನಕ್ಕೆ ಮರಳಲು ಎರಡು ನಿಮಿಷ ಅವಕಾಶ ನೀಡಿದರು. ಈ ವೇಳೆ ಆಡಳಿತ ಪಕ್ಷದ ಮೂವರು ಸದಸ್ಯರಷ್ಟೇ ಸದನಕ್ಕೆ ಮರಳಿದರು.

ಆಗ ಮಾತನಾಡಿದ ಸಚಿವ ಎಚ್.ಕೆ.ಪಾಟೀಲ ಅವರು, 'ರಿಜಿಸ್ಟ್ರಾರ್ ಅವರ ಪೂರ್ವಾನುಮತಿ ಪಡೆದು ಸಹಕಾರಿ ಬ್ಯಾಂಕ್‌ಗಳಲ್ಲೂ ಎಸ್‌ಎಲ್‌ಆರ್ ಠೇವಣಿ ಇರಿಸಬಹುದು ಮತ್ತು ಸೌಹಾರ್ದ ಸಹಕಾರಿ ಮಂಡಳಿ ಸದಸ್ಯರು ಆಸ್ತಿ ವಿವರ ಸಲ್ಲಿಸಬೇಕಾದ ಅವಧಿಯನ್ನು ಎರಡು ವರ್ಷಕ್ಕೆ ಹೆಚ್ಚಿಸುವ ತಿದ್ದುಪಡಿ ತರುತ್ತೇವೆ. ಈಗಲೂ ಮಸೂದೆಯನ್ನು ಮತಕ್ಕೆ ಹಾಕಬೇಕೆ' ಎಂದು ಪ್ರಶ್ನಿಸಿದರು.

ಮತಕ್ಕೆ ಹಾಕಲೇಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಪಟ್ಟು ಹಿಡಿದರು. 'ಮೇಲ್ಮನೆಯಲ್ಲಿ ಮಸೂದೆಗೆ ಸಂಬಂಧಿಸಿದಂತೆ ಈ ರೀತಿಯ ರಾಜಕಾರಣ ಸರಿಯಲ್ಲ. ವಿಧಾನ ಪರಿಷತ್ತಿಗೆ ಇದು ಶೋಭೆ ತರುವುದಿಲ್ಲ' ಎಂದು ಎಚ್.ಕೆ.ಪಾಟೀಲರು ಅಸಮಾಧಾನ ವ್ಯಕ್ತಪಡಿಸಿದರು.

ಮಸೂದೆಯನ್ನು ಮತಕ್ಕೆ ಹಾಕಿದಾಗ, ಅದರ ಪರವಾಗಿ 23 ಮತಗಳಷ್ಟೇ ಬಂದವು. ವಿರುದ್ಧವಾಗಿ 26 ಮತಗಳು ಬಂದವು. ಮತ ವಿಭಜನೆಯಿಂದಾಗಿ ಮಸೂದೆಯು ತಿರಸ್ಕೃತವಾಯಿತು.

ಸೌಹಾರ್ದ ಸಹಕಾರಿ ಮಂಡಳಿಗಳ ಸದಸ್ಯರು ತಮ್ಮ ಮತ್ತು ತಮ್ಮ ಕುಟುಂಬದವರ ಹೆಸರಿನಲ್ಲಿ ಇರುವ ಎಲ್ಲ ಸ್ವರೂಪದ ಆಸ್ತಿಗಳ ವಿವರವನ್ನು ಪ್ರತಿ ವರ್ಷ ಸರ್ಕಾರಕ್ಕೆ ಸಲ್ಲಿಸಬೇಕು ಎಂಬ ಷರತ್ತನ್ನು ಮಸೂದೆಯು ಒಳಗೊಂಡಿದೆ.

₹2 ಕೋಟಿ ಒಳಗಿನ ಕಾಮಗಾರಿ: ಸುತ್ತೋಲೆ ಮಾರ್ಪಾಡಿಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಬೇಕು. ಆದ್ದರಿಂದ, ₹2 ಕೋಟಿಯೊಳಗಿನ ಕಾಮಗಾರಿಗಳನ್ನು 'ಪ್ಯಾಕೇಜ್ ಅಡಿ ಮಾಡಬಾರದು ಎಂದು ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಬೇಕು ಎಂದು ಎಸ್‌ಸಿಎಸ್‌ಟಿ ಕಲ್ಯಾಣ ಸಮಿತಿ ಶಿಫಾರಸು ಮಾಡಿದೆ.

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ವರದಿಯನ್ನು ಸಮಿತಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದರು.

2025–26 ನೇ ಸಾಲಿನ ಬಜೆಟ್‌ನಲ್ಲಿ ₹2 ಕೋಟಿಗಳವರೆಗಿನ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ಒದಗಿಸುವುದನ್ನು ಘೋಷಿಸಲಾಗಿತ್ತು. ಈ ಸಂಬಂಧ ವಿವಿಧ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸುವಾಗ ಶೇ 23.01 ರಷ್ಟು ಮೀಸಲಾತಿ ನೀಡಲಾಗುತ್ತದೆ. ಆಗ ಕೆಳ ವರ್ಗದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಎಂದು ಸೂಚಿಸಿದೆ.

ಪ್ರಮುಖ ಅಂಶಗಳು:

- ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಡಿ ಬರುವ ಅಭಿವೃದ್ಧಿ ನಿಗಮಗಳ ಅನುದಾನವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನಸಂಖ್ಯೆಗೆ ಪೂರಕವಾಗಿ ಹಂಚಿಕೆ ಆಗಿಲ್ಲ.
- ದಶಕಗಳ ಹಿಂದಿನ ಯೋಜನೆಗಳೇ ಅಭಿವೃದ್ಧಿ ನಿಗಮಗಳಲ್ಲಿ ಮುಂದುವರೆದಿವೆ. ಇವುಗಳನ್ನು ವೈಜ್ಞಾನಿಕ ತಳಹದಿಯ ಹಿನ್ನೆಲೆಯಲ್ಲಿ ಪರಿಷ್ಕರಣೆ ಮಾಡಬೇಕು.
- ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳಲ್ಲಿನ ಹಾಸ್ಟೆಲ್‌ಗಳ ನಿರ್ವಹಣೆಯಲ್ಲಿ ವಾರ್ಡನ್‌ಗಳ ಕೊರತೆ ಮತ್ತು ಮೂಲಸೌಕರ್ಯ ಕೊರತೆಯಿಂದಾಗಿ ಶೈಕ್ಷಣಿಕ ಹಾಗೂ ವಸತಿ ವ್ಯವಸ್ಥೆಗೆ ಅನನುಕೂಲವಾಗುತ್ತದೆ. ಇದನ್ನು ಸರ್ಕಾರ ಆದಷ್ಟು ಬೇಗ ಮಾರ್ಪಾಡು ಮಾಡಬೇಕು.

38 ಸೇತುವೆ ಜಲಾವೃತ, ಸಂಪರ್ಕ ಕಡಿತ

ಗೋಕಾಕ: 200 ಮನೆಗಳಿಗೆ ನುಗ್ಗಿದ ನೀರು, ಚಾವಣಿ ಕುಸಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬೆಳಗಾವಿ ಜಿಲ್ಲೆಯಲ್ಲಿ ಬುಧವಾರ ಮಳೆ ಬಿಡುವು ನೀಡಿದ್ದರೂ ನದಿಗಳ ನೀರಿನ ಮಟ್ಟ ಏರುತ್ತಲೇ ಇದೆ. ರಾಮದುರ್ಗದಲ್ಲಿ ಮನೆ ಚಾವಣಿ ಕುಸಿದು, ವಾಮನರಾವ್ ಬಾಪೂ ಪವಾರ್ (75) ಎಂಬುವರುಮೃತಪಟ್ಟಿದ್ದಾರೆ.

ಘಟಪ್ರಭಾ ನದಿಯ ಪ್ರವಾಹದಿಂದ ಗೋಕಾಕ ನಗರದ 200 ಮನೆಗಳಿಗೆ ನೀರು ನುಗ್ಗಿದೆ. ಸಂತ್ರಸ್ತರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲೂ ಮಳೆ ಕಡಿಮೆಯಾಗಿದೆ. ಕೊಯ್ನಾ ಜಲಾಶಯ ಹಾಗೂ ರಾಜಾಪುರ ಬ್ಯಾರೇಜ್‌ನಿಂದ ನೀರು ಹರಿಸಲಾಗುತ್ತಿದ್ದು, ಚಿಕ್ಕೋಡಿ ತಾಲ್ಲೂಕಿನ ಕೃಷ್ಣಾ ನದಿಯಲ್ಲಿ 1.81 ಲಕ್ಷ ಕ್ಯೂಸೆಕ್ ನೀರು ಹರಿಯುತ್ತಿದೆ. ಮಹಾರಾಷ್ಟ್ರದಿಂದ ಸದ್ಯ 1.40 ಲಕ್ಷ ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಇದನ್ನು 2 ಲಕ್ಷ ಕ್ಯೂಸೆಕ್‌ಗೆ ಏರಿದರೆ ಪ್ರವಾಹ ಉಂಟಾಗಲಿದೆ.

ಗೋಕಾಕ, ರಾಯಬಾಗ, ಕಾಗವಾಡ, ಚಿಕ್ಕೋಡಿ, ಅಥಣಿ ಹಾಗೂ ಖಾನಾಪುರ ತಾಲ್ಲೂಕು ಸೇರಿ 38 ಸೇತುವೆಗಳು ಮುಳುಗಿವೆ.

ಮೂಡಲಗಿ ತಾಲ್ಲೂಕಿನ ಮಸಗುಪ್ಪಿಯ ಮಹಾಲಕ್ಷ್ಮಿ ದೇವಸ್ಥಾನವನ್ನು ಘಟಪ್ರಭಾ ನದಿ, ಹುಕ್ಕೇರಿ ತಾಲ್ಲೂಕಿನ ಕೊಟಬಾಗಿಯ ದುರ್ಗಾದೇವಿ ದೇವಸ್ಥಾನದ ಸುತ್ತ ಮಾರ್ಕಂಡೇಯ ನದಿ ನೀರು ಆವರಿಸಿದೆ.

ಹಾವೇರಿ ಜಿಲ್ಲೆಯಲ್ಲಿ ವರದಾ, ಧರ್ಮಾ, ತುಂಗಭದ್ರಾ ನದಿಗಳಲ್ಲಿ ನೀರು ತುಂಬಿ ಹರಿಯುತ್ತಿದೆ. ಜಿಲ್ಲೆಯ ಎಂಟು ಕಡೆಗಳಲ್ಲಿ ಸೇತುವೆಗಳು ಮುಳುಗಡೆಯಾಗಿವೆ. ಇದರಿಂದಾಗಿ ಹಲವು ಗ್ರಾಮಗಳ ರಸ್ತೆ ಸಂಪರ್ಕ ಕಡಿತಗೊಂಡಿದೆ.

ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಹೊರಹರಿವು ಬುಧವಾರ 2.5 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದ್ದು, ಜಲಾಶಯದ ಮುಂಭಾಗದ ಕೃಷ್ಣಾ ತೀರದ ಗ್ರಾಮಸ್ಥರಿಗೆ ನೆರೆ ಆತಂಕ ಮೂಡಿಸಿದೆ. ಘಟಪ್ರಭಾ ನದಿಯಿಂದ ವ್ಯಾಪಕ ನೀರು ಆಲಮಟ್ಟಿ ಜಲಾಶಯದತ್ತ ಹರಿದು ಬರುತ್ತಿದ್ದು, ಬುಧವಾರ ಜಲಾಶಯದ ಒಳಹರಿವು 1,60,694 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಜಲಾಶಯದ ಕೆಳಭಾಗದ ಅರಳದಿನ್ನಿ, ಯಲಗೂರು, ಯಲ್ಲಮ್ಮನಬೂದಿಹಾಳ, ಮಸೂತಿ ಗ್ರಾಮದ ಹಲವಾರು ಜಮೀನುಗಳ ಅಂಚಿಗೆ ನೀರು ಬಂದಿದೆ.

ಉತ್ತರ ಕನ್ನಡ ಜಿಲ್ಲೆಯ ಜೊಯಿಡಾ ತಾಲ್ಲೂಕಿನ ಸೂಪಾ ಜಲಾಶಯದ ಪ್ರದೇಶದಲ್ಲಿ ಸತತ ಸುರಿಯುತ್ತಿರುವ ಮಳೆಗೆ ಸೂಪಾ ಜಲಾಶಯಕ್ಕೆ ನೀರನ್ನು ಹರಿಸಲು ನಿರ್ಮಿಸಿರುವ ಅಪ್ಪರ ಕಾನೇರಿ ಜಲಾಶಯ ತುಂಬಿದೆ. ಕುಂಡಲ ಭಾಗಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಬುಧವಾರ ಮುಳುಗಡೆಯಾಗಿದೆ.

ಸೇತುವೆ ಜೊತೆಗೆ ಅರ್ಧ ಕಿಲೋಮೀಟರ್‌ನಷ್ಟು ದೂರದ ರಸ್ತೆಯವರೆಗೆ ನೀರು ಆವರಿಸಿಕೊಂಡಿದೆ. ಕುಂಡಲ ಸೇರಿ ಕುರಾವಲಿ, ಕೆಲೋಲಿ, ಘಟ್ಟಾವ ಸೇರಿದಂತೆ ಹಲವು ಹಳ್ಳಿಗಳಿಗೆ ಸಂಪರ್ಕ ರಸ್ತೆ ಕಡಿತಗೊಂಡಿದೆ.

ರಾಯಬಾಗ ತಾಲ್ಲೂಕಿನ ಕುಡಚಿ ಸೇತುವೆ ಕೃಷ್ಣಾ ನದಿ ನೀರಿನಲ್ಲಿ ಬುಧವಾರ ಮುಳುಗಿತು

ಇಳಿಯದ ನದಿ ನೀರಿನ ಮಟ್ಟ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಕೆಲವು ದಿನಗಳಿಂದ ಅಬ್ಬರಿಸುತ್ತಿದ್ದ ಮಳೆಯು ಬುಧವಾರ ತಗ್ಗಿದೆ. ಆದರೆ, ನದಿಗಳಲ್ಲಿ ನೀರಿನಮಟ್ಟ ಇನ್ನೂ ಇಳಿಕೆಯಾಗಿಲ್ಲ.

ಯಾದಗಿರಿ ಜಿಲ್ಲೆಯ ನಾರಾಯಣಪುರ ಬಸವಸಾಗರ ಜಲಾಶಯಕ್ಕೆ ಒಳಹರಿವು ಅಧಿಕವಾಗಿದ್ದು, 30 ಕ್ರೆಸ್ಟ್‌ಗೇಟ್‌ಳಿಂದ 2.60 ಲಕ್ಷ ಕ್ಯೂಸೆಕ್ ನೀರು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ನದಿ ತೀರದ ಛಾಯಾ ಭಗವತಿ ದೇವಸ್ಥಾನಕ್ಕೆ ನೀರು ನುಗ್ಗಿದೆ. ಶಹಾಪುರ ತಾಲ್ಲೂಕಿನ ಕೊಳ್ಳುರ ಗ್ರಾಮದ ಹತ್ತಿರದ ಸೇತುವೆಗೆ ಹೊಂದಿಕೊಂಡು ನದಿ ನೀರು ಹರಿಯುತ್ತಿದೆ. ದೇವದುರ್ಗ ಶಹಾಪುರ ನಡುವಣ ಈ ಸೇತುವೆಯಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ.

ಮಹಾರಾಷ್ಟ್ರದ ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ ಹರಿಸುತ್ತಿರುವ ನೀರಿನ ಪ್ರಮಾಣ 1.10 ಲಕ್ಷ ಕ್ಯೂಸೆಕ್‌ಗೆ ಹೆಚ್ಚಿಸಲಾಗಿದ್ದು, ಅಫಜಲಪುರ ಭಾಗದಲ್ಲಿ ಪ್ರವಾಹ ಎದುರಾಗುವ ಸಾಧ್ಯತೆಗಳಿವೆ.

ಕೊಪ್ಪಳ, ಬೀದರ್ ನಗರ ಸೇರಿ ದಂತೆ ಗ್ರಾಮೀಣ ಭಾಗದಲ್ಲಿ ದಿನವಿಡೀ ಜಿಟಿಜಿಟಿ ಮಳೆಯಾಗಿದೆ.

ಹೊಸಪೇಟೆ/ಬಾಗಲಕೋಟೆ (ವರದಿ): ತುಂಗಭದ್ರಾ ಜಲಾಶಯಕ್ಕೆ 1.30 ಲಕ್ಷ ಕ್ಯೂಸೆಕ್‌ನಷ್ಟು ನೀರು ಹರಿದುಬರುತ್ತಿದೆ. ಹೀಗಾಗಿ ಅಣೆಕಟ್ಟೆಯ 26 ಗೇಟ್‌ಗಳನ್ನು ತೆರೆದು, 1.16 ಲಕ್ಷ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಜಲಾಶಯದಲ್ಲಿ ಈಗ 74.68 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ಹರಪನಹಳ್ಳಿ ತಾಲ್ಲೂಕಿನ ಹಲುವಾಗಲು- ಗರ್ಭಗುಡಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬುಧವಾರ ತುಂಗಭದ್ರಾ ನೀರಿನಿಂದ ಜಲಾವೃತಗೊಂಡಿದೆ. ಹೂವಿನಹಡಗಲಿ ತಾಲ್ಲೂಕಿನ ಬ್ಯಾಲಹುಣ್ಸೆ, ಹಿರೇಬನ್ನಿಮಟ್ಟಿ, ಮರಕಬ್ಬಿ, ಕೋಟಿಹಾಳ, ಅಂಗೂರು ಗ್ರಾಮಗಳಲ್ಲಿ ಹೊಲಗದ್ದೆಗಳು ಜಲಾವೃತವಾಗಿವೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮಿರ್ಜಿ ಗ್ರಾಮದಲ್ಲಿ ಪ್ರವಾಹ ಸಂತ್ರಸ್ತರಿಗಾಗಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, 12 ಕುಟುಂಬಗಳ 62 ಜನರನ್ನುಅಲ್ಲಿಗೆ ಸ್ಥಳಾಂತರಿಸಲಾಗಿದೆ. ಜಿಲ್ಲೆಯ 11 ಬ್ಯಾರೇಜ್ ಮುಳುಗಡೆಯಾಗಿವೆ. ಮಲಪ್ರಭಾ ಹಾಗೂ ಘಟಪ್ರಭಾದಲ್ಲಿ ನೀರಿನ ಹರಿವಿನ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಪ್ರವಾಹದ ಆತಂಕ ಮುಂದುವರೆದಿದೆ.

‘ಬಡವರ ಪರ ಕಾರ್ಯಕ್ರಮ ಏಕಿಲ್ಲ’

ಅರಸು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಿ.ಎಂ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡವರ ಪರವಾಗಿ ನಾವು ಜಾರಿಗೆ ತಂದ ಕಾರ್ಯಕ್ರಮಗಳ ಬಗ್ಗೆ ಅದೇನು ಅವರ ಅಪ್ಪನ ಮನೆಯಿಂದ ತಂದ್ರಾ ಎಂದು ಕೆಲವರು ಟೀಕಿಸುತ್ತಾರೆ. ಹಾಗಾದರೆ ಬೇರೆಯವರು ಅಧಿಕಾರ ಸಿಕ್ಕಿದಾಗ ಯಾಕೆ ಅವರು ಬಡಜನರ ಪರವಾಗಿ ಕಾರ್ಯಕ್ರಮ ರೂಪಿಸಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬುಧವಾರ ಹಮ್ಮಿಕೊಂಡಿದ್ದ ಡಿ. ದೇವರಾಜ ಅರಸು ಅವರ 110ನೇ ಜನ್ಮ ದಿನಾಚರಣೆಯನ್ನು ಉದ್ಘಾಟಿಸಿ, ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಬಡವರಿಗೆ ನೆರವಾಗುವ ಆಲೋಚನೆ, ಮನಸ್ಸು ಅಧಿಕಾರದಲ್ಲಿ ಇರುವವರಿಗೆ ಇದ್ದಾಗ ಮಾತ್ರ ಜನಪರ ಯೋಜನೆ ರೂಪಿಸಲು ಸಾಧ್ಯ. ಉಪಕಾರ ಮಾಡಿದವರನ್ನು ನಾವು ಯಾವತ್ತೂ ಮರೆಯಬಾರದು’ ಎಂದರು.

ಅರಸು ಅವರು ಎಲ್ಲ ವಿರೋಧಗಳ ನಡುವೆ ‘ಉಳುವವನೇ ಒಡೆಯ’ ಭೂಸುಧಾರಣೆ ಕಾಯ್ದೆ ಜಾರಿ ಮಾಡಿದ್ದರು. ಮಲಹೊರುವ ಪದ್ಧತಿ, ಜೀತ ಪದ್ಧತಿ ನಿಷೇಧಿಸಿದ್ದರು ಎಂದು ನೆನಪು ಮಾಡಿಕೊಂಡರು.

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, ‘ಅರಸು ಅವರ ಕಾಲದಲ್ಲಿಯೇ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಯಿತು. ಅದರ 50ನೇ ವರ್ಷವನ್ನು ಹಿಂದಿನ ಸರ್ಕಾರ ಮರೆತುಬಿಟ್ಟಿತ್ತು. ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ಬಳಿಕ ವರ್ಷವಿಡೀ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು’ ಎಂದು ಹೇಳಿದರು.

ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರಿಗೆ ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಲಾಯಿತು. ಅವರ ಭಾಷಣವನ್ನು ಅವರ ಮಗ ಅಜಿತ್ ಕಲ್ಲೆ ವಾಚಿಸಿದರು.

ರಾಜೀವ್ ಗಾಂಧಿ ಅವರ ಜನ್ಮ ದಿನದ ಪ್ರಯುಕ್ತ ಸ್ಮರಿಸಲಾಯಿತು.

ಸಿದ್ದರಾಮಯ್ಯ ಅವರು ಕಲ್ಲೆ ಶಿವೋತ್ತಮರಾವ್ ಅವರಿಗೆ ಡಿ. ದೇವರಾಜ ಅರಸು ಪ್ರಶಸ್ತಿ ನೀಡಿ ಗೌರವಿಸಿದರು. ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಶಾಸಕ ರಿಜ್ವಾನ್ ಅರ್ಷದ್, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್.ತಂಗಡಗಿ, ವಿಧಾನ ಪರಿಷತ್‌ನ ಮುಖ್ಯ ಸಚೇತಕ ಸಲೀಂ ಅಹಮದ್ ಉಪಸಿತರಿದ್ದರು ಪ್ರಜಾವಾಣಿ ಚಿತ್ರ

ಅರಸು ನಂತರ ನಾನೇ ದೀರ್ಘಕಾಲದ ಮುಖ್ಯಮಂತ್ರಿ: ಸಿದ್ದರಾಮಯ್ಯ

‘ಡಿ. ದೇವರಾಜ ಅರಸು ಎಂಟು ವರ್ಷ ದೀರ್ಘಕಾಲ ಮುಖ್ಯಮಂತ್ರಿ ಆಗಿದ್ದರು. ಅವರ ನಂತರದ ದೀರ್ಘಕಾಲ ಆಡಳಿತ ನಡೆಸಿರುವುದು ನಾನೇ. ಅವರು ಮುಖ್ಯಮಂತ್ರಿಯಾಗಿ ಐದು ವರ್ಷ ಅವಧಿಯನ್ನು ಪೂರ್ಣಗೊಳಿಸಿದ್ದರು. ನಾನೂ ಐದು ವರ್ಷದ ಅವಧಿಯನ್ನು ಪೂರ್ಣಗೊಳಿಸಿದ್ದೇನೆ. ಇದಿಷ್ಟು ನಮ್ಮ ನಡುವೆ ಇರುವ ಸಾಮ್ಯತೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.50	38,705	34,562
ಹಾರಂಗಿ	2,859	2,857.35	4,704	3,583
ಕಬಿನಿ	2,284.00	2,283.59	20,709	20,888
ಹೇಮಾವತಿ	2,922	2,921.35	18,754	18,700
ಲಿಂಗನಮಕ್ಕಿ	1,819	1,816.55	29,784	17,150
ಸೂಪಾ (ಮೀ)	564	555.75	49,002	-
ಮಾಣಿ	595	592.50	2,642.8	-
ತುಂಗಭದ್ರಾ	1,633	1,624.44	1,30,649	1,30,721
ಮಲಪ್ರಭಾ	2,079.5	2,078.20	16,752	12,794
ಘಟಪ್ರಭಾ	2175	2,174.46	30,308	35,462
ಭದ್ರಾ *	186	184.3	25,638	29,238
ಆಲಮಟ್ಟಿ (ಮೀ)	519.6	518.64	1,14,591	2,50,000
ನಾರಾಯಣಪುರ (ಮೀ)	492.25	490.96	2,50,000	2,60,280

* ನೆಲಮಟ್ಟದಿಂದ

ನೀಟ್, ಸಿಇಟಿ: 29ಕ್ಕೆ ಎರಡನೇ ಸುತ್ತಿನ ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ಇತರ ಎಲ್ಲ ವೃತ್ತಿಪರ ಕೋರ್ಸ್‌ಗಳ ಎರಡನೇ ಸುತ್ತಿನ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಅಭ್ಯರ್ಥಿಗಳು ಆ.21ರಿಂದ 25ರವರೆಗೆ ಆಯ್ಕೆಗಳನ್ನು ಬದಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹೇಳಿದೆ.

ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶ ಆ.29ರಂದು ಪ್ರಕಟಿಸಲಾಗುವುದು. ಆಯುರ್ವೇದ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿಯನ್ನು ಪ್ರಕಟಿಸಿದ್ದು, ಈ ಕೋರ್ಸ್‌ಗೆ ಮಾತ್ರ ಆಯ್ಕೆಗಳನ್ನು ದಾಖಲು ಮಾಡಲು ಅವಕಾಶ ನೀಡಲಾಗಿದೆ. ಮೊದಲ ಸುತ್ತಿನಲ್ಲಿ ಛಾಯ್ಸ್-1 ಆಯ್ಕೆ ಮಾಡಿಕೊಂಡು ಪ್ರವೇಶ ಪಡೆದವರನ್ನು ಹೊರತುಪಡಿಸಿ, ಛಾಯ್ಸ್-2 ಹಾಗೂ 3 ಆಯ್ಕೆ ಮಾಡಿಕೊಂಡವರರೂ ಆಯುರ್ವೇದ ಕೋರ್ಸ್‌ಗಳ ಪ್ರವೇಶಕ್ಕೆ ಆಯ್ಕೆಗಳನ್ನು ದಾಖಲಿಸಬಹುದು.

ಎರಡನೇ ಸುತ್ತಿನಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಹಾಗೂ ಆಯುಷ್ ಕೋರ್ಸ್‌ಗಳಿಗೆ ಸೀಟು ಹಂಚಿಕೆಯಾದವರು ಕಡ್ಡಾಯವಾಗಿ ಕಾಲೇಜಿಗೆ ಹೋಗಿ ಪ್ರವೇಶ ಪಡೆಯಬೇಕು. ಅಂಥವರಿಗೆ ಛಾಯ್ಸ್- 2 ಮತ್ತು ಛಾಯ್ಸ್-3ಗೆ ಅವಕಾಶ ಇರುವುದಿಲ್ಲ ಎಂದು ಪ್ರಾಧಿಕಾರ ಹೇಳಿದೆ.

ಈಗಿನ ಸರ್ಕಾರದಲ್ಲಿ ಶೇ 40ಕ್ಕಿಂತ ಹೆಚ್ಚು ಕಮಿಷನ್: ಆರ್ ಮಂಜುನಾಥ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಸರ್ಕಾರಿ ಕಾಮಗಾರಿಗಳಲ್ಲಿ ಹಿಂದಿನ ಸರ್ಕಾರಕ್ಕಿಂತ ಈಗಿನ ಸರ್ಕಾರದಲ್ಲೇ ಕಮಿಷನ್ ಪ್ರಮಾಣ ಹೆಚ್ಚಾಗಿದೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಆರೋಪಿಸಿದರು.

ಮಲೆನಾಡು ಗುತ್ತಿಗೆದಾರರ ಸಂಘದಿಂದ ಬುಧವಾರ ಇಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ‘₹ 32,000 ಕೋಟಿ ಬಾಕಿ ಪಾವತಿಯಾಗದೇ ರಾಜ್ಯದಲ್ಲಿ ಈಗ ಗುತ್ತಿಗೆದಾರರು ಸಂಕಷ್ಟದಲ್ಲಿದ್ದಾರೆ. ನಮ್ಮ ಸಹಾಯ ಪಡೆದು ಅಧಿಕಾರಕ್ಕೆ ಬಂದ ಸರ್ಕಾರ ಈಗ ನಮ್ಮನ್ನೇ ಮರೆತಿದೆ’ ಎಂದರು.

‘ಹಿಂದಿನ ಸರ್ಕಾರದಲ್ಲಿ ಪೂಜೆಯಿಂದ ಮೊದಲುಗೊಂಡು ಬಿಲ್ ಪಡೆಯುವವರೆಗೂ ಶೇ 40 ಕಮಿಷನ್ ಕೊಡಬೇಕಿತ್ತು. ಈಗ ಅದಕ್ಕಿಂತ ಹೆಚ್ಚಾಗಿದೆ’ ಎಂದು ಹೇಳಿದ ಮಂಜುನಾಥ್, ಅದು ಎಷ್ಟು ಹೆಚ್ಚಾಗಿದೆ ಎಂದು ಸ್ಪಷ್ಟಪಡಿಸಲಿಲ್ಲ. ‘ಸ್ಥಳೀಯ ಜನಪ್ರತಿನಿಧಿಗಳನ್ನು ಆಧರಿಸಿ ಕಮಿಷನ್ ಪ್ರಮಾಣ ನಿಗದಿ ಆಗುತ್ತದೆ. ಕೆಲವರಂತೂ ಕಮಿಷನ್ ನಿರ್ಧಾರವಾದ ನಂತರವೇ ಕಾಮಗಾರಿ ಪೂಜೆಗೆ ಬರುತ್ತಾರೆ’ ಎಂದರು.

‘ಗುತ್ತಿಗೆದಾರರ ವಿರುದ್ಧ ಮೂಗರ್ಜಿ ಹೆಚ್ಚಾಗಿವೆ. ಹೀಗಾಗಿ ಕೆಲಸ ಮಾಡುವುದೇ ಕಷ್ಟ. ಕೆಲಸ ಆದ ನಂತರ ಅಧಿಕಾರಿಗಳು ನುಣುಚಿಕೊಳ್ಳುತ್ತಾರೆ. ಈ ವೇಳೆ ಹೋರಾಟ ಮಾಡಿಯೇ ನಾವು ಬಿಲ್ ಪಡೆಯಬೇಕಿದೆ’ ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಬೆಂಗಳೂರಿನಲ್ಲಿ ಕೆಲವು ಆಯ್ದ ಗುತ್ತಿಗೆದಾರರಿಗೆ ಮಾತ್ರ ಕೆಲಸ ಕೊಡುತ್ತಿದ್ದಾರೆ. ಆ ಬಗ್ಗೆ ಅವರೊಂದಿಗೆ ಚರ್ಚಿಸಿದ್ದೇವೆ

ಆರ್.ಮಂಜುನಾಥ್
ಅಧ್ಯಕ್ಷರು, ರಾಜ್ಯ ಗುತ್ತಿಗೆದಾರರ ಸಂಘ

ನಿಧನ ವಾರ್ತೆ

ಶ್ರೀನಿವಾಸ ಪ್ರಭು



ಬೈಂದೂರು (ಉಡುಪಿ): ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಉದ್ಯೋಗಿ, ರಂಗಭೂಮಿಯ ಸಂಘಟಕ ಯು. ಶ್ರೀನಿವಾಸ ಪ್ರಭು (73) ವಯೋಸಹಜ ಅನಾರೋಗ್ಯದಿಂದ ಬುಧವಾರ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ.

53 ವರ್ಷಗಳಿಂದ ಕಲಾರಂಗದಲ್ಲಿ ತೊಡಗಿಕೊಂಡಿದ್ದ ಅವರು ನಟ, ನಿರ್ದೇಶಕ, ಸಂಗೀತಗಾರರಾಗಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದರು. ಲಾವಣ್ಯದ ಸ್ಥಾಪಕಾಧ್ಯಕ್ಷರಾಗಿದ್ದರು.

ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ನೋಡಲ್ ಅಧಿಕಾರಿಗಳು, ಪದನಿಮಿತ್ತ ಕಾರ್ಯದರ್ಶಿಗಳು (ಆರ್ಥಿಕ ಅಪರಾಧಗಳು)ರವರ ಕಾರ್ಯಾಲಯ.
2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27. ದೂರವಾಣಿ : 080-22109670, ಇಮೇಲ್ : rcb27bangalore@gmail.com
ಸಂಖ್ಯೆ : ಪ್ರಾಆಕ/ಕೆಪಿಐಡಿಎಫ್.ಇ/ಗು.ಸಾ./ಸಿಆರ್/10/2024–25 ದಿನಾಂಕ : 20–08–2025
ಪ್ರಕಟಣೆ
ಈ ಪ್ರಾಧಿಕಾರದ ವತಿಯಿಂದ ಕೆ.ಪಿ.ಐ.ಡಿ ಕಾಯ್ದೆ 2004 ಅನ್ವಯ ವಶಪಡಿಸಿಕೊಂಡಿರುವ ಸ್ಥಿರಾಸ್ತಿ ಸ್ವತ್ತುಗಳ ಇ–ಹರಾಜು ಸಂಬಂಧ ಈ ಕಛೇರಿಯ ಪ್ರಕಟಣೆ ಸಂ: ಪ್ರಾಆಕ/ಕೆಪಿಐಡಿಎಫ್.ಇ/ಗು.ಸಾ./ಸಿಆರ್/10/2024–25, ದಿನಾಂಕ : 01–08–2025 ರಂತೆ ಹೊರಡಿಸಲಾಗಿತ್ತು ಹಾಗೂ ದಿನಾಂಕ : 06–08–2025 ರ ಪ್ರಜಾವಾಣಿ ಮತ್ತು The Times of India ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿರುತ್ತದೆ.
ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 18879/2025 ರ ಪ್ರಕರಣದಲ್ಲಿ ಯಥಾಸ್ಥಿತಿ ಕಾಪಾಡಲು ಆದೇಶಿಸಿರುವುದರಿಂದ, ಘನ ನ್ಯಾಯಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ಸದರಿ ಇ–ಹರಾಜು ಪ್ರಕಟಣೆಯನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.
ಸಹಿ/–
ಅಪರ ಪ್ರಾದೇಶಿಕ ಆಯುಕ್ತರು, ಹಾಗೂ ಸಕ್ಷಮ ಪ್ರಾಧಿಕಾರಿ,
ಶ್ರೀ ಗುರುಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ,
ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು.
DIPR/CP/2401/Zen/2025-26

ಕರ್ನಾಟಕ ಸರಕಾರ
ಕರ್ನಾಟಕ ರಾಜ್ಯ ಪೋಲಿಸ್
ಪೊಲೀಸ್ ಆಯುಕ್ತರವರ ಕಚೇರಿ ಕಲಬುರಗಿ ನಗರ
No.ACT/STORE/ITMS/KK/11/25-26(P-2-CALL-2) ದಿನಾಂಕ: 19.08.2025
:: ಟೆಂಡರ ಪ್ರಕಟಣೆ ::
ಸಂಚಾರಿ ಪೋಲಿಸ್ ಠಾಣೆ ಕಲಬುರಗಿ ನಗರ ವ್ಯಾಪ್ತಿಗೆ SUPPLY, INSTALLATION AND MAINTENANCE OF RLVD WITH ITMS SOLUTIONS AND ICCC FOR KALABURGI CITY ಯೋಜನೆ ಸಲುವಾಗಿ ಅವಶ್ಯಕವಿರುವ ಸಿಸಿಟಿವಿಗಳು ಮತ್ತು ಅದರ ಸಾಧನ ಸಾಮಾಗ್ರಿಗಳನ್ನು ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು www.kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.
1) ಟೆಂಡರ ಪ್ರಕಟಣೆ ಸಂಖ್ಯೆ: Tender No. ACT/STORE/ITMS/KK/11/25-26 (P-2-CALL-2), 2) ಟೆಂಡರ ಪ್ರಕಟಣೆ ದಿನಾಂಕ: 19.08.2025 5:00 PM, 3) ಅನಲೈನ್‌ನಲ್ಲಿ ಪ್ರಶ್ನೆಗಳು ಸಲ್ಲಿಸಲು ಕೊನೆಯ ದಿನಾಂಕ: 22.08.2025 5:00PM ಗಂಟೆಗೆ storeseckbc@ksp.gov.in, 4) ಪ್ರಿ–ಬಿಡ್ ಮಿಟಿಂಗ್ ದಿನಾಂಕ: 25.08.2025 11:00 AM ಗಂಟೆಗೆ, 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ–Procurment portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 02.09.2025 ಸಾಯಂಕಾಲ 5:00 PM ಗಂಟೆಗೆ, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 03.09.2025 TIME:5:00 PM, 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: 06.09.2025 TIME:11:30 AM, 8) ಟೆಂಡರನ ಅಂದಾಜು ಮೊತ್ತ ರೂ. : 2,50,00,000/-, 9) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ.: 2,50,000/– 10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ರಜಾ ದಿನಗಳನ್ನು ಹೊರತುಪಡಿಸಿ: Commissioner of Police, Kalaburagi City, Kalaburagi Ph:08472-248500 storeseckbc@ksp.gov.in
ಸಹಿ/– ಪೊಲೀಸ್ ಆಯುಕ್ತರು
ಕಲಬುರಗಿ ನಗರ
ವಾ.ಸಾ.ಸಂ.ಇ/ಕಲಬುರಗಿ/413/ಕೆ.ಎಸ್.ಎಂ.ಸಿ.&ಎ/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.
ಮುಖ್ಯ ಅಭಿಯಂತರರ ಕಚೇರಿ(ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ / ಇಎಂಡಿ
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ವಿ.ವಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/965/2025–26 ದಿನಾಂಕ: 20.8.2025		
1.	ಸಕಾನಿಅ(ತ್ಯಾನೀನಿ–ಎಸ್‌ಟಿಪಿ–ಹೆಚ್&ಎ.ವಿ–1) ಉಪ–ವಿಭಾಗದಡಿ ಬರುವ 40 ಎಂಎಲ್‌ಡಿ ರಾಜಾಕೆನಾಲ್ ಫೇಸ್ 2 ಯುಡಬ್ಲ್ಯೂಟಿಪಿನಲ್ಲಿ ಜೆಹೆಚ್‌ಎ ಫಂಡ್ಸ್‌ನಡಿ ಒರಟಾದ ಪರದೆ (ಕೋರ್ಸ್ ಸ್ಕ್ರೀನ್) ಅನುಷ್ಠಾನ ಮತ್ತು ಯುಎಫ್ 1 ಎಂಎಲ್‌ಡಿ ಒಳಗೊಂಡ ಕಾಮಗಾರಿಗಳು. (4ನೇ ಕರೆ).	ರೂ. 387.70 ಲಕ್ಷಗಳು / ರೂ. 5.81 ಲಕ್ಷಗಳು
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.08.2025 ರಂದು ಸಂಜೆ 5:30 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 01.09.2025 ರಂದು ಬೆಳಿಗ್ಗೆ 11:00 ಗಂಟೆಗೆ.		
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ವಿ.ವಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/967/2025–26 ದಿನಾಂಕ: 20.8.2025		
2.	ಬೆಂಗಳೂರಿನ ಮಾಗಡಿ ರಸ್ತೆಯ ಕೆಂಪಾಪುರ ಅಗ್ರಹಾರದವರೆಗೆ 5ನೇ ಅಡ್ಡರಸ್ತೆಯ ಭುವನೇಶ್ವರಿನಗರದಿಂದ ಎಸ್‌ಡಬ್ಲ್ಯೂಡಿ ಚರಂಡಿಯುದ್ದಕ್ಕೂ (ವಿ100) 600ಮಿ.ಮೀ. ವ್ಯಾಸದ ಡಿಡಬ್ಲ್ಯೂಸಿ ಎಸ್‌ಎನ್–8 ದರ್ಜೆಯ ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ. (6ನೇ ಕರೆ).	ರೂ. 207.09 ಲಕ್ಷಗಳು / ರೂ. 3.11 ಲಕ್ಷಗಳು
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04.09.2025 ರಂದು ಬೆಳಿಗ್ಗೆ 11:00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 06.09.2025 ರಂದು ಬೆಳಿಗ್ಗೆ 11:30 ಗಂಟೆಗೆ. ಸಹಿ/– ಮುಖ್ಯ ಅಭಿಯಂತರರು(ತ್ಯಾನೀನಿ–ಪಶ್ಚಿಮ).		
ಮುಖ್ಯ ಅಭಿಯಂತರರ ಕಚೇರಿ(ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.		
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ(ಉ)–I/ಉಮುಅ(ನಿ)–II/ತಾಂಸ(ಉ)/2804/2025–26 ದಿನಾಂಕ: 19.08.2025		
3.	ಬೆಂಜಮಂ ಸಕಾನಿಅ(ಸಿ–1–2) ಉಪ–ವಿಭಾಗದ ಮಚಲೀಬೆಟ್ಟ ಸೇವಾ ಠಾಣೆಯಡಿ ಬರುವ ಕಲ್ಲಪಲ್ಲಿ ಮುಖ್ಯ ರಸ್ತೆಯಿಂದ ಬಾಣಸವಾಡಿ ಮುಖ್ಯ ರಸ್ತೆಯವರೆಗೆ 300ಮಿ.ಮೀ. ವ್ಯಾಸದ ಎಂಎಸ್ ನೀರು ಸರಬರಾಜು ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಮೂಲಕ ಬೈಯಪ್ಪನಹಳ್ಳಿ ಮುಖ್ಯರಸ್ತೆಯಲ್ಲಿ 300ಮಿ.ಮೀ. ವ್ಯಾಸದ ಕೊಳವೆ ಮಾರ್ಗಕ್ಕೆ ಸಂಪರ್ಕಗೊಳಿಸುವ ಕಾಮಗಾರಿ.	ರೂ. 315.48 ಲಕ್ಷಗಳು / ರೂ. 4.73 ಲಕ್ಷಗಳು
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.09.2025 ರಂದು ಸಂಜೆ 4:00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 08.09.2025 ರಂದು ಸಂಜೆ 04:00 ಗಂಟೆಯ ನಂತರ. ಸಹಿ/– ಮುಖ್ಯ ಅಭಿಯಂತರರು(ಉತ್ತರ).		

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಮೇಲಿನ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ವಾ.ಸಾ.ಸಂ.ಇ/ವಾ.ಪ್ರ/ರೆ.ಅ/2396/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. Website: www.kiadb.in
ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–11/525/2025–26 ದಿನಾಂಕ:20.08.2025
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಅನುಭವ ಹೊಂದಿರುವ ದರ್ಜೆ–2 ಮತ್ತು ಮೇಲ್ಪಟ್ಟ (ಎಲೆಕ್ಟ್ರಿಕಲ್) ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ಟೆಂಡರನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ವಿವರ: ಕಲಬುರಗಿ ಜಿಲ್ಲೆಯ ಕಪ್ನೂರ್ 1ನೇ, 2ನೇ ಮತ್ತು 3ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ರೀ–ಕಂಡೀಷನಿಂಗ್, ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣಾ ಕಾಮಗಾರಿ (ಪ.ಜಾತಿಗೆ ಮೀಸಲಿರಿಸಿದೆ) (2ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.09.2025, ಸಂಜೆ 4.00 ಗಂಟೆಯವರೆಗೆ.
ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/–
ಮುಖ್ಯ ಅಭಿಯಂತರರು–2
ವಾಸಾಸಂಇ/ವಾಪ್ರ/ಜಿಎ/2394/2025–26

SAINIK SCHOOL BIJAPUR - 586 108 (KARNATAKA)
(Under Ministry of Defence)
WALK-IN INTERVIEW
1. Suitable/ Interested candidates are invited for the following post on Temporary Appointment for the academic year 2025-26:

Sl.	No of Post & Cat	Name of the post	Age as on 01 Sep 2025
(a)	PGT (English) 01 (One)	(a) Two years Integrated Post Graduate M.A Course of Regional College of Education of NCERT in the concerned subject. (or) (b) Master Degree from recognized university with atleast 50% marks in aggregate in English. (c) Excellent expression and teaching in Hindi & English medium. Proficiency in Games & Sports. (d) B.Ed or equivalent degree from recognised university. (e) Knowledge of computer applications. (f) Experienced candidate will be preferred.	21-40 years

Note : Consolidated Salary will be paid based on the qualification and experience
2. Interested candidates may walk-in for the interview at 0900 hrs on 26 Aug 2025 (Tuesday) along with their resume for interview. No TA/DA will be paid for attending the interview.
3. The post is Temporary Appointment and the teacher hired can be removed on filling up of regular vacancy or for administrative reasons. The school administration reserves the right to cancel the vacancy due to administrative/ policy reasons.
Telephone: 08352-270638
Sd/-
Principal
Sainik School Bijapur

ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕೊಪ್ಪಳ
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ, ಕೊಪ್ಪಳ, ಇ–ಮೇಲ್ : eepredkpl@gmail.com
ಸಂಖ್ಯೆ : ಪಂ.ರಾ.ಇಂ./ವಿ.ಕೊ./ತಾ.ಶಾ./ಕಿ.ಇಂ./ಟೆಂಡರ್/2025–26/1214 ದಿನಾಂಕ : 20–08–2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1, 2, 3 ಮತ್ತು 4ರ ಪ್ರಕಾರ ನಿಯಮಗಳನ್ವಯ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2023–24 ನೇ ಸಾಲಿನ ಕೆ.ಜಿ.ಬಿ.ವಿ (ಟೈಪ್–1 ಡಾರ್ಮಿಟರಿ–22) ಅನುದಾನದಡಿ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ, ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ : http://kppp.karnataka.gov.in ಮುಖಾಂತರ ಭಾಗವಹಿಸಬಹುದು.
1) ಕೆಟಗರಿ : ಸಾಮಾನ್ಯ , ಕಾಮಗಾರಿ ಹೆಸರು : Construction of Dormitary Hostel to KGBV Girls Hostel (50 Childrens) at Alwandi Village in Koppal tq, Koppal Dist (Indent No. 17033), (Type 1 Dormitary-22), ಮೊತ್ತ (ಲಕ್ಷ) : 108.00, ಇ.ಎಂ.ಡಿ. : ರೂ. 200000.00, ದರ್ಜೆ : 1ನೇ ದರ್ಜೆ, ಕಾಲಾವಧಿ : 09 ತಿಂಗಳು.
1) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿತ ಕಾಲಾವಧಿ : 09 ತಿಂಗಳು, 2) ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗಧಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯದ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು : 22–08–2025 ಸಮಯ 10.00 ಗಂಟೆ ನಂತರ ದಿಂದ 06–09–2025 ಸಮಯ 16.00 ಗಂಟೆವರೆಗೆ, 3) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ : 22–08–2025 ಸಮಯ 10.00 ಗಂಟೆ ನಂತರ ದಿಂದ 06–09–2025 ಸಮಯ 16.30 ಗಂಟೆವರೆಗೆ, 4) ಟೆಂಡರ್ ತೆರೆಯುವ ದಿನಾಂಕ : 08–09–2025 ಕಛೇರಿ ಸಮಯದಲ್ಲಿ, 5) ಕೆ.ಡಬ್ಲೂ. 4 ರ ಆರ್ಥಿಕ ಬಿಡ್ ತೆರೆಯುವ ದಿನಾಂಕ : ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ತೆರೆಯಲಾಗುವುದು.
ಟಿಪ್ಪಣಿ : ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಬಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ. ಮೂಲ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.
ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗಧಿತ ಇ.ಎಮ್.ಡಿ. ಹಣವನ್ನು ಆನ್‌ಲೈನ್ ಮೂಲಕ ನಿಗಧಿಪಡಿಸಿದಂತೆ ಸಂದಾಯ ಮಾಡಬೇಕು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ : 08539–220845 ರಿಂದ ಮಾಹಿತಿ ಪಡೆಯುವುದು ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ : http://kppp.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟ್‌ನಲ್ಲಿ ದಿನಾಂಕ : 21–08–2025 ರ ನಂತರದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/283/ಮಣಿಪಾಲ್/2025–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಕಾಲ ಕೆಟ್ಟು ಹೋಯಿತು ಎನ್ನುತ್ತಾರೆ. ಕಾಲ ಕೆಟ್ಟು ಹೋಯಿತೋ? ನಾವೇ ಕೆಟ್ಟು ಹೋದೆವೋ?

–ಎ.ಆರ್. ಕೃಷ್ಣಶಾಸ್ತ್ರಿ

ಸಂಪಾದಕೀಯ

ಒಳಮೀಸಲು: ಚಾರಿತ್ರಿಕ ನಿರ್ಣಯ ಜಾರಿಗೊಳಿಸುವ ಬದ್ಧತೆ ಅಗತ್ಯ

ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸಬೇಕು ಎಂಬ ಮೂರು ದಶಕಗಳಿಗೂ ಹೆಚ್ಚಿನ ಸುದೀರ್ಘ ಹೋರಾಟ ಕೊನೆಗೂ ಫಲಿಸಿದೆ. ಈ ಚಾರಿತ್ರಿಕ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡಿದೆ. ರಾಜ್ಯದಲ್ಲಿ ಗುರುತಿಸಲಾಗಿರುವ 101 ಪರಿಶಿಷ್ಟ ಜಾತಿಗಳಿಗೆ ಲಭ್ಯ ಇರುವ ಶೇ 17ರಷ್ಟು ಮೀಸಲಾತಿಯನ್ನು ಎಡಗೈ ಸಂಬಂಧಿತ ಜಾತಿಗಳಿಗೆ ಪ್ರವರ್ಗ 'ಎ' ಅಡಿ ಶೇ 6, ಬಲಗೈ ಜಾತಿಗಳಿಗೆ ಪ್ರವರ್ಗ 'ಬಿ' ಅಡಿ ಶೇ 6 ಹಾಗೂ ಅಲೆಮಾರಿಗಳೂ ಸೇರಿದಂತೆ ಸ್ಪೃಶ್ಯ ಜಾತಿಗಳಿಗೆ ಶೇ 5ರಷ್ಟು ಪ್ರಮಾಣವನ್ನು ಉಪವರ್ಗೀಕರಣ ಮಾಡುವ ನಿರ್ಧಾರವನ್ನು ಮಂಗಳವಾರ ಇದಕ್ಕಾಗಿಯೇ ನಡೆದ ಸಚಿವ ಸಂಪುಟದ ವಿಶೇಷ ಸಭೆ ಕೈಗೊಂಡಿತು. ಮಹತ್ವದ ತೀರ್ಮಾನದ ವಿವರ ನೀಡಿರುವ ಮುಖ್ಯಮಂತ್ರಿ, 'ಒಳ ಮೀಸಲಾತಿಯ ಆದೇಶ ಹೊರಡಿಸಿದ ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು, ಒಂದು ಬಾರಿಗೆ ವಯೋಮಿತಿ ಸಡಿಲಿಸಲು ತೀರ್ಮಾನಿಸಲಾಗಿದೆ' ಎಂದಿದ್ದಾರೆ. ತೆಲಂಗಾಣದ ಬಳಿಕ ದೇಶದಲ್ಲಿಯೇ ಒಳಮೀಸಲಾತಿ ಜಾರಿಯ ದಿಟ್ಟ ನಿರ್ಧಾರವನ್ನು ಕೈಗೊಂಡ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯ ಫಲವನ್ನು ಕೆಲವೇ ಜಾತಿಗಳು ದಕ್ಕಿಸಿಕೊಂಡಿದ್ದು, ಮೀಸಲಾತಿಯ ಚಿಮ್ಮುಹಲಗೆಯನ್ನು ಬಳಸಿಕೊಂಡು ಜೀವನಮಟ್ಟ ಸುಧಾರಿಸಿಕೊಳ್ಳುವ ಅವಕಾಶ, ಅಂಚಿನಲ್ಲಿರುವ ಜಾತಿಗಳಿಗೆ ಸಿಕ್ಕಿರಲಿಲ್ಲ ಎಂಬ ಕೂಗಿತ್ತು. ವಿವಿಧ ಸಂಘಟನೆಗಳು ಒಳಮೀಸಲಾತಿಯ ಬೇಡಿಕೆ ಮುಂದಿಟ್ಟುಕೊಂಡು ಹೋರಾಟವನ್ನು ನಡೆಸುತ್ತಲೇ ಬಂದಿದ್ದವು. ಒಳಮೀಸಲಾತಿ ವಿಷಯವು ಚುನಾವಣೆಯ ಹೊತ್ತಿನ ಭರವಸೆಯಾಗಿಯೂ ಉಳಿದುಬಂದಿತ್ತು. 2023ರ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್ ಪಕ್ಷ, ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ, ಪಕ್ಷ ಅಧಿಕಾರಕ್ಕೆ ಬಂದರೆ ಒಳಮೀಸಲಾತಿ ಜಾರಿ ಮಾಡುವುದಾಗಿ ಘೋಷಿಸಿತ್ತು. ಅದನ್ನು ತನ್ನ ಪ್ರಣಾಳಿಕೆಯಲ್ಲೂ ಪ್ರಕಟಿಸಿತ್ತು.

ಒಳಮೀಸಲು ಜಾರಿಗೊಳಿಸುವ ಚಾರಿತ್ರಿಕ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಆದರೆ, ಜನಪದರಿಗೆ ನ್ಯಾಯ ದೊರಕಿಸಿಕೊಡುವ ಕೆಲಸವಿನ್ನೂ ಅಪೂರ್ಣವಾಗಿ ಉಳಿದಿದೆ.

ಒಳಮೀಸಲಾತಿಗೆ ಸಂಬಂಧಿಸಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗವನ್ನು 2024ರ ನವೆಂಬರ್ 12ರಂದು ಸರ್ಕಾರ ರಚಿಸಿತು. ಸಮೀಕ್ಷೆ ನಡೆಸಿದ ಆಯೋಗ 2025ರ ಆಗಸ್ಟ್ 1ರಂದು ತನ್ನ ವರದಿ ಸಲ್ಲಿಸಿತು. 101 ಮೂಲ ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿದ ಆಯೋಗ, ಪ್ರವರ್ಗ 'ಎ'ಗೆ ಶೇ 1 (59 ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಜಾತಿಗಳು), ಪ್ರವರ್ಗ 'ಬಿ'ಗೆ ಶೇ 6 (18 ಎಡಗೈ ಜಾತಿಗಳು), ಪ್ರವರ್ಗ 'ಸಿ'ಗೆ ಶೇ 5 (17 ಬಲಗೈ ಜಾತಿಗಳು), ಪ್ರವರ್ಗ 'ಡಿ'ಗೆ ಶೇ 4 (ಭೋವಿ, ಲಂಬಾಣಿ, ಕೊರಮ, ಕೊರಚ), ಪ್ರವರ್ಗ 'ಇ'ಗೆ ಶೇ 1ರಂತೆ (3 ಜಾತಿಗಳು) ಹಂಚಿಕೆ ಮಾಡಿತ್ತು. ಸಚಿವ ಸಂಪುಟ ಸಭೆಯಲ್ಲಿ ಆಯೋಗದ ವರದಿಯನ್ನು ಮಂಡಿಸಿದ ಬಳಿಕ, ಅದರ ಮಾಹಿತಿಯು ಬಹಿರಂಗವಾಯಿತು. ವರದಿಯ ಅನ್ವಯಾನುಸಾರವಾಗಿ ಬಲಗೈ ಸಂಬಂಧಿತ ಜಾತಿ ಸಂಘಟನೆಗಳು, ಪರಿಶಿಷ್ಟರಿಂದ ಜಾರಿ ಮಾಡಕೂಡದು ಎಂದು ಹೋರಾಟದ ಹಾದಿ ಹಿಡಿದವು. ವರದಿ ಜಾರಿಗೊಳಿಸಬೇಕೆಂದು ಎಡಗೈ ಸಂಬಂಧಿತ ಜಾತಿಯವರು ಪಟ್ಟು ಹಿಡಿದರು. ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ಐದು ಪ್ರವರ್ಗಗಳಾಗಿ ಉಪವರ್ಗೀಕರಣ ಮಾಡುವ ಆಯೋಗದ ಶಿಫಾರಸನ್ನು ಪರಿಷ್ಕರಿಸಿದ ಸರ್ಕಾರ, ಮೂರು ಪ್ರವರ್ಗಗಳಾಗಿ ವಿಂಗಡಣೆ ಮಾಡುವ ನಿರ್ಧಾರ ಕೈಗೊಂಡಿದೆ. ಅಲೆಮಾರಿ ಸಮುದಾಯಗಳಿಗೆ ಶಿಫಾರಸು ಮಾಡಿದ್ದ ಪ್ರವರ್ಗ 'ಎ' ಅಡಿ ಇದ್ದ ಶೇ 1ರಷ್ಟನ್ನು ಪ್ರವರ್ಗ 'ಸಿ' ಅಡಿ ತಂದು ಸ್ಪೃಶ್ಯ ಜಾತಿಗೆ ವರ್ಗಾಯಿಸಲಾಗಿದೆ. ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಜಾತಿಗಳಿಗೆ ಪ್ರವರ್ಗ 'ಇ' ಅಡಿ ಶಿಫಾರಸು ಮಾಡಿದ್ದ ಶೇ 1ರಷ್ಟು ಮೀಸಲಾತಿಯನ್ನು ಬಲಗೈ ಸಂಬಂಧಿತ ಜಾತಿಗಳಿಗೆ ಮರು ಹಂಚಿಕೆ ಮಾಡಿ ಶೇ 6ಕ್ಕೆ ಹೆಚ್ಚಿಸಲಾಗಿದೆ. ತಾಂತ್ರಿಕ ಕಾರಣಗಳಿಗಾಗಿ ಕೆಲವು ಜಾತಿಗಳನ್ನು ಉಪ ವರ್ಗೀಕರಣ ಮಾಡಿ, ಮೂರೇ ಪ್ರವರ್ಗದಡಿ ಒಳಮೀಸಲಾತಿ ಹಂಚಿಕೆ ಮಾಡುವುದನ್ನು ಸರ್ಕಾರ ಸಮರ್ಥಿಸಿಕೊಂಡಿದೆ.

ನಾಗಮೋಹನದಾಸ್ ಆಯೋಗ ಅತಿ ಹಿಂದುಳಿದವರೆಂದು ಗುರುತಿಸಲಾಗಿದ್ದ ಅಲೆಮಾರಿ, ಅರೆ ಅಲೆಮಾರಿ ಸಮುದಾಯದವರನ್ನು ಭೋವಿ, ಲಂಬಾಣಿ ಜಾತಿಯವರು ಇರುವ ಪ್ರವರ್ಗ 'ಸಿ'ಗೆ ಸೇರ್ಪಡೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ತಮಗೆ ನ್ಯಾಯ ಸಿಕ್ಕಿಲ್ಲ ಎಂದು ಅಲೆಮಾರಿಗಳು ಹೋರಾಟ ಮುಂದುವರಿಸಿದ್ದಾರೆ. ನಿಜವಾಗಿಯೂ ತಬ್ಬಲಿಗಳಾಗಿರುವ ಈ ಸಮುದಾಯವನ್ನು ಗುರುತಿಸಿರುವ ವಿಧಾನ ಸಮರ್ಥನೀಯವಲ್ಲ. ತಳಸ್ತರದ ನೋವು ಆಲಿಸಿ ನ್ಯಾಯ ಕೊಡಿಸುವ ಕೆಲಸವನ್ನು ಸರ್ಕಾರ ಆದ್ಯತೆ ಮೇರೆಗೆ ಮಾಡಬೇಕಿದೆ. ಒಳಮೀಸಲಾತಿ ಜಾರಿಯ ನಿರ್ಧಾರ ಪ್ರಕಟಿಸಿರುವ ಮುಖ್ಯಮಂತ್ರಿಯವರು, 'ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆ ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿ ವರದಿ ನೀಡಲು ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗ ರಚಿಸುವುದಾಗಿ ಹೇಳಿದ್ದಾರೆ. ಸರ್ಕಾರದ ತೀರ್ಮಾನದಲ್ಲಿ ಮಾರ್ಪಾಡುಗಳ ಅಗತ್ಯ ಕಂಡುಬಂದರೆ ರಾಷ್ಟ್ರೀಯ ಜನಗಣತಿಯಲ್ಲಿನ ಅಂಕಿ-ಅಂಶಗಳನ್ನು ಆಧರಿಸಿ ಬದಲಾವಣೆಗೆ ಒಳಪಡಿಸುವ ಷರತ್ತಿಗೆ ಬದ್ಧವಾಗಿದೆ' ಎಂದೂ ಹೇಳಿದ್ದಾರೆ. ಶಿಫಾರಸು ಜಾರಿಯಿಂದ ತಮಗೆ ಘೋರ ಅನ್ಯಾಯವಾಗಿದೆ ಎಂಬ ಭಾವಿಸಿರುವ ಜನಪದರಿಗೆ ಶಾಶ್ವತ ಆಯೋಗ ಹಾಗೂ ರಾಷ್ಟ್ರೀಯ ಜನಗಣತಿಯ ದತ್ತಾಂಶಗಳ ಮೂಲಕ ನ್ಯಾಯ ಕೊಡಿಸುವ ಕೆಲಸ ಆಗಬೇಕಿದೆ. ಆಗಷ್ಟೆ, ಸಾಮಾಜಿಕ ನ್ಯಾಯ ನೈಜವಾಗಿ ಸಾಕಾರಗೊಂಡಂತೆ ಆಗುತ್ತದೆ. ಶಿಕ್ಷಣ, ಉದ್ಯೋಗ ಮತ್ತಿತರ ಸೌಲಭ್ಯ ಕಲ್ಪಿಸುವ ಮೂಲಕ ಉಪವರ್ಗೀಕರಣದ ಲಾಭ ಆಯಾ ಸಮುದಾಯಗಳಿಗೆ ದಕ್ಕುವಂತೆ ನೋಡಿಕೊಳ್ಳಬೇಕಾದ ಹೊಣೆಯೂ ಸರ್ಕಾರದ ಮೇಲಿದೆ.

ಉನ್ಮಾದ ಸ್ಥಿತಿಯ 'ಎಸ್ಐಆರ್'

ವಿಶ್ಲೇಷಣೆ

ಯೋಗೇಂದ್ರ ಯಾದವ್

> 'ವಿಶೇಷ ಸಮಗ್ರ ಪರಿಷ್ಕರಣೆ' ಹೆಸರಿನಲ್ಲಿ ಸಮಗ್ರವಾಗಿ ಹೆಸರುಗಳನ್ನು ತೆಗೆದುಹಾಕುವ ಪ್ರಕ್ರಿಯೆ ಬಿಹಾರದಲ್ಲಿ ನಡೆಯುತ್ತಿದೆ. ದೇಶದಲ್ಲಿ ಉನ್ಮಾದ ಸ್ಥಿತಿಯೊಂದನ್ನು ಪ್ರತಿಪಾದಿಸುತ್ತಿರುವಂತೆ ಭಾಸವಾಗುತ್ತಿರುವ 'ಎಸ್ಐಆರ್', ಸ್ಟಿರಾಯಿಡ್‌ಗಳು ಹಾಗೂ ಆತಂಕಕಾರಿ ಅಂಶಗಳನ್ನು ಬೆರೆಸಿದಂತಹ ಔಷಧ.

ಆಗಸ್ಟ್ 17ರಂದು ನಡೆದ 'ಖ್ಯಾತಿ'ವೆತ್ತ ಸುದ್ದಿಗೋಷ್ಠಿಯಲ್ಲಿ ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ), ಮತದಾರರ ಪಟ್ಟಿಯ ಮೇಲೆ ಪರಿಣಾಮ ಬೀರುತ್ತಿರುವ ಲೋಪಗಳನ್ನೆಲ್ಲ ನೀಗಲು ಇರುವ ಪರಿಹಾರವೇ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್ಐಆರ್) ಎಂಬ ಸವಕಲು ಸಂಗತಿಯನ್ನೇ ಮತ್ತೆ ಮಂಡಿಸಿದರು. ಮಹದೇವಪುರದಲ್ಲಿ ಮತ ಕಳವು ನಡೆದಿದೆ ಎಂದು ರಾಹುಲ್ ಗಾಂಧಿ ಅವರು ಆರೋಪಿಸಿದ ನಂತರವಷ್ಟೇ, ತರ್ಕವೊಂದನ್ನು ಮಂಡಿಸುವ ಭರದಲ್ಲಿ 'ಸಿಇಸಿ' ಅದೇ ಹಳೆಯ ತುತ್ತೂರಿ ಊದಿದರು. ರಾಹುಲ್‌ಗಾಂಧಿ ಈ ವಿಷಯದಲ್ಲಿ ಸಿಲುಕಿಹಾಕಿಕೊಂಡರು ಎಂದೇ ಬಿಜೆಪಿ ಟ್ರೋಲರ್‌ಗಳು ನಂಬಿದರು. ವಾಸ್ತವದಲ್ಲಿ, ಮತದಾರರ ಪಟ್ಟಿಯಲ್ಲಿನ ಲೋಪ ಸರಿಪಡಿಸುವ ಉದ್ದೇಶದಿಂದ 'ಎಸ್ಐಆರ್' ನಡೆದಿದ್ದರೆ ಅದನ್ನು ರಾಹುಲ್ ಯಾಕೆ ವಿರೋಧಿಸುತ್ತಿದ್ದರು?

ಬಹುಶಃ, ಸಿಇಸಿ 'ಯೆಸ್ ಮಿನಿಸ್ಟರ್' ನೋಡಿರಲಿಕ್ಕಿಲ್ಲ. ಬಿಬಿಸಿಯಲ್ಲಿನ ಈ ಸರಣಿಯಲ್ಲಿ, ನಕಲಿ ತರ್ಕದ ಮಂಡನೆಯನ್ನು 'ರಾಜಕಾರಣಿಯ ತರ್ಕ' ಎಂದೇ ಬಣ್ಣಿಸಲಾಗಿದೆ. ಆ ತರ್ಕ ಹೇಗಿರುತ್ತದೆಂದರೆ: ಮೊದಲಿಗೆ, ನಾವು ಏನೋ ಒಂದನ್ನು ಮಾಡಬೇಕು. ಎರಡು, ಅದು ಏನೋ ಒಂದು ಆಗುತ್ತದೆ. ಮೂರು, ಈ ಕಾರಣಕ್ಕಾಗಿ ನಾವು ಏನೋ ಒಂದನ್ನು ಮಾಡಲೇಬೇಕು. ಇಲ್ಲಿನ ಚೋದ್ಯ ಏನೆಂದರೆ, 'ಮಂಡಿಸಲಾಗುತ್ತಿರುವ ಏನೋ ಒಂದು, ನಿಜಕ್ಕೂ ನಾವು ಈಗ ಮಾಡಬೇಕಾದುದೇ' ಎನ್ನುವ ಮೂಲ ಪ್ರಶ್ನೆಯನ್ನೇ ಕೇಳುವುದಿಲ್ಲ. ಮತದಾರರ ಪಟ್ಟಿಯ ಕುರಿತು ರಾಹುಲ್ ಗಾಂಧಿ ಎತ್ತಿರುವ ಪ್ರಶ್ನೆಗಳ ಕುರಿತು ಟ್ರೋಲ್ ಮಾಡುತ್ತಿರುವವರು ಈ ಪ್ರಶ್ನೆ ಕೇಳುವ ಗೊಡವೆಗೇ ಹೋಗುತ್ತಿಲ್ಲ. ಎಸ್ಐಆರ್ ಎನ್ನುವ 'ಏನೋ ಒಂದನ್ನು ಮಾಡುವ ಕೆಲಸ'ವು ಮತದಾರರ ಪಟ್ಟಿಯಲ್ಲಿ ಆಗಿರುವ ಲೋಪಗಳನ್ನೆಲ್ಲ ಸರಿಪಡಿಸಲು 'ಏನೋ ಒಂದನ್ನು ಮಾಡಬೇಕಲ್ಲ... ಆ ಕೆಲಸ ಹೌದೇ' ಎನ್ನುವುದು ನೈಜ ಪ್ರಶ್ನೆ. ಇದಕ್ಕೆ ಉತ್ತರವನ್ನು ಕಲ್ಪಿಸಿಕೊಳ್ಳಲಾಗದು. ಮತದಾರರ ಪಟ್ಟಿಯಲ್ಲಿನ ವ್ಯಾಧಿಗೆ ಎಸ್ಐಆರ್ ಅಗತ್ಯವೂ, ಸಮರ್ಪಕವೂ ಆದ ದಿವ್ಯೌಷಧ ಎನ್ನುವುದನ್ನು ಆಯೋಗ ರುಜುವಾತುಪಡಿಸಬೇಕು.

ಮತದಾರರ ಪಟ್ಟಿಯಲ್ಲಿ ಲೋಪಗಳಿರುವುದು ಹೊಸ ಸಮಸ್ಯೆಯೇನೂ ಅಲ್ಲ. ಲಾಗಾಯ್ತಿನಿಂದ ಇರುವಂಥದ್ದೇ; ಅದರಲ್ಲೂ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ. ವಾಮಮಾರ್ಗದಲ್ಲಿ ಮತದಾರರ ಪಟ್ಟಿಗೆ ಏಕಕಾಲದಲ್ಲಿ ಅನೇಕರ ಸೇರ್ಪಡೆ ಹಾಗೂ ನಿರ್ದಿಷ್ಟ ಸಮುದಾಯದವರನ್ನು ಮತಪಟ್ಟಿಯಿಂದ ಅಳಿಸಿಹಾಕುವುದು, ಇಂಥ ಆರೋಪಗಳು ಈಗಿನಂತೆ ಹಿಂದೆಂದೂ ಮುಂಚೂಣಿಗೆ ಬಂದಿರಲಿಲ್ಲ. ಮಹಾರಾಷ್ಟ್ರ ಹಾಗೂ ಮಹದೇವಪುರದ ವಿದ್ಯಮಾನ ಬಯಲಿಗೆ ಬಂದ ನಂತರ ಸಮಸ್ಯೆಯೊಂದರ ಆಳವು ದೇಶದ ಗಮನಸೆಳೆದಿದೆ.

ಕಳೆದ ಕೆಲವು ವರ್ಷಗಳಿಂದ ಚುನಾವಣಾ ಆಯೋಗ (ಇ.ಸಿ) ಅನುಸರಿಸಿರುವ ಕ್ರಮಗಳಿಂದ ಮತದಾರರ ಪಟ್ಟಿಯಲ್ಲಿನ ಸಮಸ್ಯೆಗಳ ನಿವಾರಣೆ ಸಾಧ್ಯವಾಗಿಲ್ಲ. ಹೆಸರು ಸೇರಿಸಲು, ತೆಗೆದುಹಾಕಲು, ತಿದ್ದುಪಡಿ ಮಾಡಲು ಬಯಸುವ ನಾಗರಿಕರ ಉತ್ಸಾಹವನ್ನು ಪರಿಷ್ಕರಣೆಯ ಯಶಸ್ಸು ಅವಲಂಬಿಸಿರುತ್ತದೆ. ಅದೇ ಇದರ ಮಿತಿಯೂ ಆಗಿದೆ. ಅದರ ಬದಲು ವಾರ್ಷಿಕ ಪರಿಷ್ಕರಣೆಯೇ ಸಮರ್ಪಕವಾದುದು– ಒಟ್ಟಾರೆಯಾಗಿ ಮತದಾರರ ಹೆಸರುಗಳನ್ನು ಸೇರಿಸುವುದು, ತೆಗೆದುಹಾಕುವುದು ಹಾಗೂ ಅದಕ್ಕೆ ತಕರಾರುಗಳಿದ್ದರೆ ಸ್ವೀಕರಿಸುವುದು. ಇದೂ ಸಮಾಧಾನಕರವಾದ ಪರಿಹಾರ ಎನ್ನುವುದು ರುಜುವಾತಾಗಿಲ್ಲ. ಏಕೆಂದರೆ, ಈಗಿನ ವ್ಯವಸ್ಥೆಯಲ್ಲಿ, ಮತದಾರರ ಪಟ್ಟಿಗೆ ಹೆಸರು ಸೇರಿಸುವುದು, ಅಳಿಸುವುದರಲ್ಲಿನ ಲೋಪಗಳು ಸದಾ ಉಳಿದೇ ಇರುತ್ತವೆ. ವರ್ಷಗಳಿಂದ ಜಮೆಯಾಗುತ್ತಲೇ ಬಂದಿರುವ ಲೋಪಗಳು ಇವು.

ಈ ವಾದವನ್ನು ಒಪ್ಪೋಣ. ಹೀಗಾಗಿಯೇ 'ಏನೋ ಒಂದನ್ನು' ಈಗ ಮಾಡಬೇಕಾಗಿದೆ. 'ಏನೋ ಒಂದನ್ನು' ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಹಾಗೂ ಅದೇ ಹೊತ್ತಿಗೆ ಪಾರದರ್ಶಕ–ನ್ಯಾಯಬದ್ಧವಾಗಿ ಮಾಡಬೇಕಾಗಿದೆ. ಕಾಲಕಾಲಕ್ಕೆ ಮತದಾರರ ಪಟ್ಟಿಯ ಪರಿಷ್ಕರಣೆ ಮಾಡುವುದರ ಜೊತೆಗೆ, ಐದು ವರ್ಷಕ್ಕೊಮ್ಮೆಯಾದರೂ ಇನ್ನೂ ತೀವ್ರವಾದ ಪರಿಷ್ಕರಣೆ ಮಾಡಬೇಕಾಗಿದೆ. ಅದನ್ನು ಮನೆ ಮನೆ ಸಮೀಕ್ಷೆಯಿಂದ ನಡೆಸಬೇಕು. ಆಗಷ್ಟೇ ಅಧಿಕೃತವಾಗಿ, ಪ್ರಾಮಾಣಿಕ ರೀತಿಯಲ್ಲಿ ಹೆಸರುಗಳ ಸೇರ್ಪಡೆ, ತೆಗೆದುಹಾಕುವಿಕೆ ಹಾಗೂ ತಿದ್ದುಪಡಿ ಸಾಧ್ಯ. ಈಗ ಎಸ್ಐಆರ್ ದೇಶದಲ್ಲಿ ಉನ್ಮಾದ ಸ್ಥಿತಿಯೊಂದನ್ನು ಪ್ರತಿಪಾದಿಸುತ್ತಿರುವಂತೆ ಭಾಸವಾಗುತ್ತಿದೆ. 'ಎಸ್ಐಆರ್ ಇರುವುದೇ ಹೀಗೆ. ಅದನ್ನೀಗ ಬೆಂಬಲಿಸಬೇಕಷ್ಟೆ' ಎನ್ನುವ ಧಾರ್ಷ್ಟ್ಯದ ಧೋರಣೆ ಆಯೋಗಕ್ಕೆ ಇರುವಂತಿದೆ.

ವಾಸ್ತವ ಏನೆಂದರೆ, ಎಸ್ಐಆರ್, ನಮಗೆ ಅಗತ್ಯವಾಗಿರುವ ಪರಿಷ್ಕರಣೆ ಅಲ್ಲ; ಚುನಾವಣಾ ಕಾನೂನು ರೂಪಿಸಿದವರೂ ಇಂಥ ಪರಿಷ್ಕರಣೆಯನ್ನು ಒಪ್ಪಲಾರರು. ನಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಎಸ್ಐಆರ್ ಇನ್ನಷ್ಟು ಜಟಿಲಗೊಳಿಸಬಹುದು, ಜಟಿಲಗೊಳಿಸುತ್ತಿರುವುದೂ ನಿಜ. ಎಸ್ಐಆರ್ ಪ್ರಕಾರ, ಬಿಎಲ್‌ಒಗಳು ಮನೆ ಮನೆ ಸಮೀಕ್ಷೆ ನಡೆಸಬೇಕು. ಅವರ ಈ ಸಮೀಕ್ಷೆ ಪ್ರಕ್ರಿಯೆಯ ಎರಡು ಅಂಶಗಳಿಗೂ ಮತದಾರರ ಸಮಗ್ರ ಪರಿಷ್ಕರಣೆಯ ಮೂಲತತ್ತ್ವಕ್ಕೂ ಸಂಬಂಧವೇ ಇಲ್ಲ. ಮೊದಲಿಗೆ, ಎಲ್ಲ ಸಂಭಾವ್ಯ ಮತದಾರರೂ ಅರ್ಹತೆಗಾಗಿ ಅರ್ಜಿಯೊಂದನ್ನು ತುಂಬಬೇಕು. ಅದನ್ನು ಮಾಡಲು ವಿಫಲರಾದಲ್ಲಿ, ತಂತಾನೇ ಅನರ್ಹರೆನಿಸಿಕೊಳ್ಳುತ್ತಾರೆ. ಇದಕ್ಕೆ ಯಾವುದೇ ಕಾನೂನಿನ ಬುನಾದಿಯಿಲ್ಲ. ಭಾರತದ ಚುನಾವಣಾ ಇತಿಹಾಸದಲ್ಲಿಯೇ ಎಂದೂ ಹೀಗೆ ಆಗಿಲ್ಲ. ಆಡಳಿತಾತ್ಮಕವಾದ ಈ ಸಣ್ಣ ಅನಿವಾರ್ಯವೇ ಚುನಾವಣಾ ವ್ಯವಸ್ಥೆಯ ಸ್ಥಿತ್ಯಂತರವೊಂದಕ್ಕೆ ಕಾರಣವಾಗಬಲ್ಲ ಮೂಲ ಸಂಗತಿಯಾದೀತು. ಸರ್ಕಾರದಿಂದ ಮತದಾರರ ಪಟ್ಟಿಗೆ ಸೇರ್ಪಡೆ ಎನ್ನುವುದು ಹೋಗಿ, ಸ್ವಯಂ ಮತದಾರರ ಪಟ್ಟಿಗೆ ಸೇರ್ಪಡೆ ಎನ್ನುವ ಮಾದರಿಗೆ ಬದಲಾಗುವ ಪರಿ ಇದು. ಈ ರೀತಿ ತಯಾರಾಗುವ ಮತದಾರರ ಪಟ್ಟಿಯಿಂದ ಬಡವರು, ಅನಕ್ಷರಸ್ಥರು, ವಲಸಿಗರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಹೊರಗುಳಿಯುತ್ತಾರೆ ಎನ್ನುವುದು ಜಾಗತಿಕ ಉದಾಹರಣೆಗಳಿಂದ ಸ್ಪಷ್ಟವಾಗಿದೆ.

ಮಹಿಳೆಯೊಬ್ಬಳು ದಾಖಲೆಗಳನ್ನು ಪೂರೈಸುವ ಮೂಲಕ ತನ್ನ ಅರ್ಹತೆ ಸಾಬೀತುಪಡಿಸಬೇಕು ಎಂದು ಎಸ್ಐಆರ್ ಬಯಸುತ್ತದೆ. ಆ ದಾಖಲೆಗಳನ್ನು ಸಲೀಸಾಗಿ ಲಭ್ಯವಾಗುವಂತೆ ಮಾಡುವ ಪ್ರಕ್ರಿಯೆ ಮಾತ್ರ ಗೈರು. ಇದುವರೆಗೆ ಚುನಾವಣಾ ವ್ಯವಸ್ಥೆ ನೀಡಿರುವ ಪೌರತ್ವವನ್ನೇ ಇದು ಅಲುಗಾಡಿಸುತ್ತದೆ. ಸ್ವಯಂ ಮತದಾರರ ಪಟ್ಟಿಗೆ ಸೇರ್ಪಡೆ ಹಾಗೂ ಮಹಿಳೆಯರು ದಾಖಲೆಗಳನ್ನು ಪೂರೈಸಬೇಕೆನ್ನುವ ನಿಯಮಗಳ ಪರಿಣಾಮದಿಂದಾಗಿ ದೊಡ್ಡ ಸಂಖ್ಯೆಯಲ್ಲಿ ನಾಗರಿಕರು ಮತದಾರರ ಪಟ್ಟಿಯಿಂದ ಹೊರಗುಳಿಯಬೇಕಾಗುತ್ತದೆ.

ಮತದಾರರ ಪಟ್ಟಿಯನ್ನು ನಿಖರವಾಗಿ ರೂಪಿಸಲು ಎಸ್ಐಆರ್ ಏನನ್ನು ಮಾಡಬಹುದು? ಮೊದಲಿಗೆ, ಮನೆ ಮನೆ ಸಮೀಕ್ಷೆಯು ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕುವುದಕ್ಕೆ ನೀಡಿದಷ್ಟೇ ಒತ್ತನ್ನು ಹೊಸ ಮತದಾರರ ಸೇರ್ಪಡೆಗೂ ನೀಡಬೇಕಿತ್ತು. ಬಿಹಾರದಲ್ಲಿ ಜೂನ್ 25ರಿಂದ ಜುಲೈ 25ರ ಅವಧಿಯಲ್ಲಿ 65 ಲಕ್ಷ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಇಸಿ ತಿಳಿಸಿದೆ. ಇದು ಸಮಗ್ರ ಪರಿಷ್ಕರಣೆ ಅಲ್ಲ; ಸಮಗ್ರವಾಗಿ ಹೆಸರುಗಳನ್ನು ತೆಗೆದುಹಾಕುವ ಪ್ರಕ್ರಿಯೆ.

ಎರಡನೆಯದಾಗಿ, ಇಸಿ ಈಗಾಗಲೇ ರೂಪಿಸಿಕೊಂಡಿರುವ ಶಿಷ್ಟಾಚಾರವನ್ನಾದರೂ ಎಸ್ಐಆರ್ ಅನುಸರಿಸಬೇಕಿತ್ತು. ಮತದಾರರು ಮೃತಪಟ್ಟಿದ್ದಾರೆಯೇ, ಶಾಶ್ವತವಾಗಿ ಎಲ್ಲಿಗಾದರೂ ತೆರಳಿದ್ದಾರೆಯೇ ಅಥವಾ ಅವರನ್ನು ಪತ್ತೆ ಮಾಡಲು ಆಗುತ್ತಿಲ್ಲವೇ ಇತ್ಯಾದಿಯನ್ನು ಗೊತ್ತುಪಡಿಸಿಕೊಳ್ಳಬೇಕಿತ್ತು. ಏಕಾಏಕಿ ಪಟ್ಟಿಯಿಂದ ಹೆಸರು ತೆಗೆದುಹಾಕಲಾಗಿದೆ ಎನ್ನುವುದರ ಬದಲು ಪ್ರಮಾಣಿತ ಕಾನೂನಿನ ಪ್ರಕಾರ (ನೋಟಿಸ್ ನೀಡಿ, ವಿಚಾರಣೆ ನಡೆಸಿ, ಅಪೀಲುಗಳಿಗೆ ಕಿವಿಗೊಟ್ಟು) ನಡೆದುಕೊಂಡಿದ್ದಿದ್ದರೆ, 'ಮೃತಪಟ್ಟಿದ್ದಾರೆ' ಎಂದು ಉಲ್ಲೇಖಿಸಲಾದವರೆಲ್ಲ ಹೀಗೆ ಎದುರಲ್ಲಿ ಬಂದು ನಿಲ್ಲುವ ಪ್ರಸಂಗ ಬರುತ್ತಿರಲಿಲ್ಲ.

ಮೂರನೆಯದಾಗಿ, ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಸ್ವತಂತ್ರ ಆಂತರಿಕ ಪರಿಶೀಲನೆಗಾದರೂ ಇಸಿ ಒಳಪಡಿಸಬೇಕಿತ್ತು. 'ಪರಿಪೂರ್ಣತೆ' ಎನ್ನಲಾಗುವ ಮತದಾರರ ಪಟ್ಟಿಯೇನೊ ಸಿಕ್ಕಿದೆ; ಆದರೆ 'ಖಚಿತತೆ' ಬಗ್ಗೆ ಯಾರನ್ನು ಕೇಳುವುದು? ಭಾರತದಂತಹ ದೇಶದಲ್ಲಿ ಇದೊಂದು ಹಗರಣವೆಂದೇ ಹೇಳಬೇಕು. ಬಹಳ ಅಚ್ಚುಕಟ್ಟಾಗಿ ರೂಪಿತವಾದ, ಅತ್ಯುತ್ತಮ ಗುಣಮಟ್ಟದ ಸಾಂಖ್ಯಿಕ ವ್ಯವಸ್ಥೆ ಇರುವ ನಮ್ಮ ದೇಶದಲ್ಲೇ ಇಂಥ ಹಗರಣವಾಗಿದೆ! ಜನನ ಹಾಗೂ ಮರಣ ನೋಂದಣಿಯ 'ಮಾದರಿ ಪರಿಶೀಲನೆ' ನಡೆಸುವಂತೆಯೇ ಇದನ್ನೂ ಮಾಡಬೇಕಲ್ಲವೆ? 'ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ'ಯು (ನ್ಯಾಷನಲ್ ಸ್ಯಾಂಪಲ್ ಸರ್ವೆ ಆರ್ಗನೈಸೇಷನ್) ಮತದಾರರ ಪಟ್ಟಿಯ ಶೇ 0.1 ಮಾದರಿ ಪರೀಕ್ಷೆಯನ್ನಾದರೂ ಮಾಡಬಹುದಲ್ಲವೆ?

ನಾಲ್ಕನೆಯದಾಗಿ, ಮತದಾರರ ಪಟ್ಟಿಯಲ್ಲಿನ ಯಾವುದೇ ಗಂಭೀರ ವಂಚನೆ ಆರೋಪದ ಕುರಿತು ನಡೆಯುವ ಎಸ್ಐಆರ್‌ನಂತಹ ಪ್ರಕ್ರಿಯೆಯು ನ್ಯಾಯಯುತವೂ ವಿಶ್ವಾಸಾರ್ಹವೂ ಆಗಿರಬೇಕು. ಹಿತಾಸಕ್ತಿ ಸಂಘರ್ಷದ ತತ್ವದ ಕಾರಣದಿಂದಾಗಿ ಯಾರು ಪಟ್ಟಿ ಪರಿಷ್ಕರಣೆಯಲ್ಲಿ ತೊಡಗಿರುತ್ತಾರೋ ಅವರ ವಿರುದ್ಧ ತನಿಖೆ ನಡೆಸಲು ಸಾಧ್ಯವಿಲ್ಲ. ಇ.ಸಿ ಸುದ್ದಿಗೋಷ್ಠಿಯ ಶೈಲಿ ಹಾಗೂ ಧ್ವನಿಯನ್ನು ನೋಡಿದರೆ ಇನ್ನಂತೂ ಅದು ಸಾಧ್ಯವೇ ಇಲ್ಲ.



ವಾಚಕರ ವಾಣಿ

ಶಾಸಕರ ಭಕ್ತಿ ದಿಟವೋ ಸಟೆಯೋ...

ಧರ್ಮಸ್ಥಳದ ಬಗ್ಗೆ ಷಡ್ಯಂತ್ರ ನಡೆಯುತ್ತಿದೆ ಎಂದು ವಿಧಾನಸಭಾ ಅಧಿವೇಶನದಲ್ಲಿ ಪಕ್ಷಭೇದ ಮರೆತು ಶಾಸಕರು ಚರ್ಚಿಸಿದ್ದಾರೆ. ಮಂಜುನಾಥ ಸ್ವಾಮಿ ಬಗೆಗಿನ ತಮ್ಮ ಭಕ್ತಿ–ಭಾವ ಪ್ರದರ್ಶಿಸಿರುವ, ಧರ್ಮ ಹಾಗೂ ನೀತಿಯ ಬಗ್ಗೆ ಮಾತನಾಡುತ್ತಿರುವ ಈ ಶಾಸಕರಿಗೊಂದು ಪ್ರಶ್ನೆ: ಚುನಾವಣೆಯಲ್ಲಿ ಇವರು ಮತದಾರರಿಗೆ ಹಣ ಹಂಚದೆ ಗೆದ್ದಿರುವರೇ? ಇವರು ಧರ್ಮಸ್ಥಳಕ್ಕೆ ತೆರಳಿ 'ನಾವು ಹಣ ಹಂಚದೆ ಚುನಾವಣೆ ಗೆದ್ದಿದ್ದೇವೆ' ಎಂದು ಪ್ರಮಾಣ ಮಾಡಿ ಹೇಳಲಿ; ಇವರ ಭಕ್ತಿ ಸತ್ಯವೋ ಕಪಟವೋ ಎನ್ನುವುದು ರಾಜ್ಯಕ್ಕೆ ತಿಳಿಯಲಿ.

ಸುಹಾಸ್ ದುಗ, ಮಂಡ್ಯ

ಉಪರಾಷ್ಟ್ರಪತಿ ಅಭ್ಯರ್ಥಿ: ಚಾಣಾಕ್ಷ ನಡೆ

ಮುಂಬರುವ ತಮಿಳುನಾಡಿನ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ತಮಿಳು ಮೂಲದ ಆರ್‌ಎಸ್‌ಎಸ್ ಕಾರ್ಯಕರ್ತ ಮತ್ತು ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರನ್ನು ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಘೋಷಿಸಿದೆ. 'ಇಂಡಿಯಾ' ಬಣವು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ತೆಲುಗು ಮೂಲದ ಸುದರ್ಶನ ರೆಡ್ಡಿ ಅವರನ್ನು ತನ್ನ ಅಭ್ಯರ್ಥಿಯಾಗಿ ಘೋಷಿಸಿ ಚಾಣಾಕ್ಷ ನಡೆ ಇಟ್ಟಿದೆ.

ಎನ್‌ಡಿಎ ಕೂಟದ ಭಾಗವಾದ ತೆಲುಗು ದೇಶಂ ಪಕ್ಷದ ಜನಪ್ರತಿನಿಧಿಗಳು ಯಾರಿಗೆ ಮತ ಚಲಾಯಿಸಲಿದ್ದಾರೆ ಎಂಬುದು ಕೌತುಕದ ಸಂಗತಿ. ಒಂದೆಡೆ ತೆಲುಗು ಅಸ್ಮಿತೆಯ ಸೆಳೆತ ಇದ್ದರೆ, ಇನ್ನೊಂದೆಡೆ ರಾಜಕೀಯ ಒಗ್ಗಟ್ಟಿನ ಪ್ರಶ್ನೆಯೂ ಆ ಪಕ್ಷಕ್ಕೆ ಎದುರಾಗಿದೆ.

ಪ್ರಕಾಶ ವಿ. ಹೆಬ್ಬಳ್ಳಿ, ಬೆಂಗಳೂರು

ಬಿಸಿಯೂಟದ ಹೊರೆ ತಪ್ಪಿಸಿ

ಮಧ್ಯಾಹ್ನದ ಬಿಸಿಯೂಟ, ಮೊಟ್ಟೆ ಮತ್ತು ಬಾಳೆಹಣ್ಣು ವಿತರಣೆಯ ಲೆಕ್ಕಪತ್ರದ ನಿರ್ವಹಣೆಯು ಶಿಕ್ಷಕರಿಗೆ ಅಕ್ಷರಶಃ ಹೊರೆಯಾಗಿದೆ. ಇದರಿಂದ ಮಕ್ಕಳಿಗೆ ಸರಿಯಾಗಿ ಬೋಧನೆ ಮಾಡಲಾಗುತ್ತಿಲ್ಲ. ಕಾಲಮಿತಿಯೊಳಗೆ ಶೈಕ್ಷಣಿಕ ದಾಖಲೆಗಳ ನಿರ್ವಹಣೆ ಕಷ್ಟಕರವಾಗಿದೆ. ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು ವಿತರಣೆ ಕಾರ್ಯವನ್ನು ಸ್ಥಳೀಯ ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಿದರೆ ಶಿಕ್ಷಕರ ಮೇಲಿನ ಮಾನಸಿಕ ಹಾಗೂ ದೈಹಿಕ ಒತ್ತಡವು ಕೊಂಚ ಕಡಿಮೆಯಾಗಲಿದೆ. ಸರ್ಕಾರ ಈ ದಿಸೆಯಲ್ಲಿ ಯೋಚಿಸಲಿ.

ಸಿದ್ದೇಶ್ ಎ.ಸಿ., ಹಿರೇಕೆರೂರು

ಕೋಳಿಜಗಳಕ್ಕಿಂತ 'ನಾಯಿಜಗಳ' ದೊಡ್ಡದು

ಮನೆಯಂಗಳದಲ್ಲಿ ರಂಗೋಲಿ ಹಾಕುವ ಅನೇಕ ಮಹಿಳೆಯರಿಗೆ ಬೆಳಗ್ಗೆಯೇ ಕಂಡುಬರುವ ದೃಶ್ಯವೆಂದರೆ, ಮನೆಯ ಮುಂದೆ ಬಿದ್ದಿರುವ ನಾಯಿಗಳ ಮಲದ ತುಣುಕುಗಳು! ಜನದಟ್ಟಣೆ ಹೆಚ್ಚಿರುವ ಬಡಾವಣೆಗಳಲ್ಲಿ ನಾಯಿಗಳ ಜಗಳಕ್ಕಿಂತ ನಾಯಿಗಳಿಂದಾಗಿ ಶ್ವಾನಪ್ರಿಯರು ಹಾಗೂ ಸಂತ್ರಸ್ತರು ನಡೆಸುವ ಮಾರಾಮಾರಿ ದೊಡ್ಡದು. ನಸುಕಿನಲ್ಲಿ ವಾಕಿಂಗ್ ಹೆಸರಿನಲ್ಲಿ ನೆಚ್ಚಿನ ನಾಯಿಗಳನ್ನು ಕರೆದೊಯ್ಯುವುದು ಮತ್ತು ಮಲ ವಿಸರ್ಜನೆ ಬಳಿಕ ನಿವಾಸಿಗಳೊಂದಿಗೆ ಜಗಳ ಇಳಿಯುವುದು ಸರ್ವೇ ಸಾಮಾನ್ಯ. ಎಷ್ಟೋ ಬಾರಿ ಈ ನಾಯಿಜಗಳ ಠಾಣೆಯ ಮೆಟ್ಟಿಲೇರಿದ ನಿದರ್ಶನವಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಮಾಲಿನ್ಯ ಮತ್ತು ಜಗಳ ತಪ್ಪಿಸಲು ನಾಯಿ ಸಾಕುವವರು ನೋಂದಾಯಿಸಿಕೊಳ್ಳುವುದು ಮತ್ತು ಅನುಮತಿ ಪಡೆಯುವುದನ್ನು ಸರ್ಕಾರ ಕಡ್ಡಾಯಗೊಳಿಸಬೇಕು. ತಮ್ಮ ಮನೆಗಳಲ್ಲಿಯೇ 'ನಾಯಿ ಶೌಚಾಲಯ' ನಿರ್ಮಿಸುವುದನ್ನು ಪ್ರೋತ್ಸಾಹಿಸುವುದು ಸೇರಿದಂತೆ, ಸಾರ್ವಜನಿಕ ಸ್ಥಳಗಳಲ್ಲಿಯೂ ನಾಯಿಗಳಿಗಾಗಿ ಶೌಚಾಲಯ (ಶುಲ್ಕ ಸಹಿತ) ನಿರ್ಮಿಸುವ ಅಗತ್ಯವಿದೆ. ಈ ಸೌಲಭ್ಯ ಹೊಂದಿದ್ದರಷ್ಟೇ ನಾಯಿ ಸಾಕಲು ಅನುಮತಿ ನೀಡಬೇಕಿದೆ.

ಟಿ. ನಾರಾಯಣ ಗೌಡ, ಬೆಂಗಳೂರು

ಮನುಷ್ಯ ಮನುಷ್ಯನಾಗುವುದು ಯಾವಾಗ?

ಗಾಜಾ ಪಟ್ಟಿಯಲ್ಲಿ ಮಕ್ಕಳ ಹಸಿವಿನ ಆಕ್ರಂದನ (ಪ್ರ.ವಾ., ಆಗಸ್ಟ್ 20) ನೋಡಿದಾಗ ನಾವು ಮನುಷ್ಯ ಪ್ರಪಂಚದಲ್ಲಿ ಬದುಕುತ್ತಿದ್ದೇವೆಯೇ? ಎನ್ನುವ ಪ್ರಶ್ನೆ ಕಾಡುತ್ತದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮುಗ್ಧ ಮಕ್ಕಳ ಹಸಿವು, ತಂದೆ–ತಾಯಿ ಕಳೆದುಕೊಂಡವರ ಅನಾಥ ಸ್ಥಿತಿಯ ಆಕ್ರಂದನವನ್ನು ಗಮನಿಸಲಾರದಷ್ಟು ಸಂವೇದನಾಶೂನ್ಯರೇ? ಆತನ ಮೊಮ್ಮಕ್ಕಳೇ ಈ ಸ್ಥಿತಿಗೆ ತಲುಪಿದ್ದರೆ ಕರುಳು ಚುರ್ ಎನ್ನದೆ ಇರುತ್ತಿತ್ತೆ? ಮಕ್ಕಳ ಕಂಗಾಲಾದ ಮುಖ ಕಂಡು ನಮ್ಮಲ್ಲಿ ಮನುಷ್ಯತ್ವ ಮಿಡಿಯದಿದ್ದರೆ ನಾವು ಮನುಷ್ಯರಾಗಿ ಹುಟ್ಟಿ ಮನುಷ್ಯರಾಗಿ ಬಾಳುತ್ತಿದ್ದೇವೆಯೇ ಎಂಬ ಪ್ರಶ್ನೆ ಕಾಡದಿರದು. ಇದು ಆಳುವ ವರ್ಗಕ್ಕೆ ಅರ್ಥವಾಗುತ್ತಿಲ್ಲ ಏಕೆ?

ಚಂದ್ರಶೇಖರ್ ಎನ್., ಸಿರಿವಂತೆ

ಬಫರ್ ವಲಯ ಕಡಿತ ಸರಿಯಲ್ಲ

ಕೆರೆಗಳ ಬಫರ್ ವಲಯ ಕಡಿತಗೊಳಿಸುವ ಉದ್ದೇಶದ 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿದ್ದುಪಡಿ ಮಸೂದೆ– 2025' ವಿಧಾನಸಭೆಯಲ್ಲಿ ಅಂಗೀಕಾರವಾಗಿರುವುದು ಖೇದಕರ. ಬಫರ್ ವಲಯವೆಂದರೆ ಮಳೆಗಾಲದ ನೆರೆ ನಿಯಂತ್ರಿಸಿ, ನೀರನ್ನು ಇಂಗಿಸಿ ಅಂತರ್ಜಲ ಹೆಚ್ಚಿಸುವ ಸಮೃದ್ಧ ಕೆರೆಯಂಚು. ಪಶು, ಪಕ್ಷಿಗಳಿಗೆ ಆಹಾರ ಒದಗಿಸುವುದು, ಜಲಚರಗಳ ವಂಶಾಭಿವೃದ್ಧಿಗೆ ಆಶ್ರಯ ನೀಡುವುದು ಇತ್ಯಾದಿ ಹಲವು ಪರಿಸರ ಸಂಬಂಧಿ ಸೇವೆಗಳನ್ನು ನಿರ್ವಹಿಸುವ ಜೀವವೈವಿಧ್ಯದ ತಾಣ! ಕಾನೂನು ತಿದ್ದುಪಡಿಯು ಭವಿಷ್ಯದಲ್ಲಿ ಕುಡಿಯುವ ಹಾಗೂ ಕೃಷಿ ನೀರಿನ ಸುರಕ್ಷತೆಗೆ ಇನ್ನಷ್ಟು ಭಂಗ ತರಲಿದೆ. ಭೂಒತ್ತುವರಿ, ಕೈಗಾರಿಕೀಕರಣ, ನಗರೀಕರಣದಿಂದ ನಾಡಿನ ಜೌಗು ಪ್ರದೇಶಗಳೆಲ್ಲ ಈಗಾಗಲೇ ವೇಗವಾಗಿ ಕರಗುತ್ತಿರುವಾಗ, ಇದು ಖಂಡಿತ ವಿವೇಕಯುತ ನಡೆಯಲ್ಲ.

ಕೇಶವ ಎಚ್. ಕೊರ್ಸೆ, ಶಿರಸಿ

ಜಾಲತಾಣ

ಸಂತಸವಿಲ್ಲ, ಸಮಾಧಾನವಷ್ಟೇ...

ಒಳಮೀಸಲಾತಿ ಬಿಕ್ಕಟ್ಟು ಬಗೆಹರಿದಿದ್ದು ಒಂದು ಸಮಾಧಾನ. ಆದರೆ, ಸಂತೋಷ ಪಡಲಾರದಂತೆ ಮಾಡಿತು. ಅಲೆಮಾರಿ ಸಮುದಾಯದ ಹಿತವನ್ನು ಅಲಕ್ಷಿಸುವುದು ಅನ್ಯಾಯವೇ ಸರಿ. ಅಲ್ಪಸಂಖ್ಯಾತ ಅಲೆಮಾರಿಗಳು ದನಿ ಇಲ್ಲದವರು. ಅವರ ಪರವಾಗಿ ದನಿ ಎತ್ತುವುದು ಮತ್ತೆ ಬಾಕಿ ಉಳಿಯಿತು. ಇಷ್ಟು ದಿನ ಎಲ್ಲರೂ ಜೊತೆಗೂಡಿ ಹೇಗೋ ನಡೆಯುತ್ತಿದ್ದರು. ಈಗ ಹಲವರು ಓಡುವಂತಾಯ್ತು, ಕೆಲವರು ಬೀಳುವಂತಾಯ್ತು.

ಬಿ. ಪೀರ್‌ಬಾಷಾ, ಕವಿ–ಸಾಮಾಜಿಕ ಕಾರ್ಯಕರ್ತ, ಫೇಸ್‌ಬುಕ್‌ನಿಂದ

ಕಿಡಿನುಡಿ

ಸಂವಿಧಾನ (130ನೇ ತಿದ್ದುಪಡಿ) ಮಸೂದೆ– 2025 ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶಾಶ್ವತವಾಗಿ ಧ್ವಂಸ ಮಾಡುವ ಮೊದಲ ಹೆಜ್ಜೆಯಾಗಿದೆ. ಇದು ಜನತಂತ್ರ ಮತ್ತು ಒಕ್ಕೂಟ ವ್ಯವಸ್ಥೆಗೆ ಮರಣಮೃದಂಗ ಆಗಲಿದೆ.

ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ, ಪಶ್ಚಿಮ ಬಂಗಾಳ

25 ವರ್ಷಗಳ ಹಿಂದೆ

ಸೋಮವಾರ, 21-8-2000

• ನಕಲಿ ಛಾಪಾ ಕಾಗದ ಜಾಲ ಪತ್ತೆ: 10 ಮಂದಿ ಬಂಧನ

ಬೆಂಗಳೂರು, ಆಗಸ್ಟ್ 20– ನಕಲಿ ಛಾಪಾ ಕಾಗದ ಮತ್ತು ಸರ್ಕಾರಿ ಮುದ್ರಾಂಕಗಳ ಅಕ್ರಮ ಮಾರಾಟದ ಬೃಹತ್ ಜಾಲವನ್ನು ಪತ್ತೆ ಹಚ್ಚಿರುವ ಉಪ್ಪಾರಪೇಟೆ ಪೊಲೀಸರು, ಈ ಸಂಬಂಧ 10 ಮಂದಿಯನ್ನು ಬಂಧಿಸಿದ್ದಾರೆ.

ಬಂಧಿತರಿಂದ ಸುಮಾರು 10 ಕೋಟಿ ರೂಪಾಯಿ ಬೆಲೆಬಾಳುವ ನಕಲಿ ಛಾಪಾ ಕಾಗದ ಮತ್ತು ಮುದ್ರಾಂಕಗಳು ಹಾಗೂ 34.5 ಲಕ್ಷ ರೂಪಾಯಿ ನಗದು, 10 ದ್ವಿಚಕ್ರ ವಾಹನಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

75 ವರ್ಷಗಳ ಹಿಂದೆ

ಸೋಮವಾರ, 21-8-1950

• ನಿರಾಶ್ರಿತರ ಕೆಚ್ಚು

ಅಹ್ಮದಾಬಾದ್, ಆಗಸ್ಟ್ 20– ನಿರಾಶ್ರಿತರ ಗುಂಪೊಂದು ಅಹ್ಮದಾಬಾದ್ ಹೊರವಲಯದಲ್ಲಿರುವ ನಿರಾಶ್ರಿತರ ನಗರ–ಕುಟೀರ ನಗರದ ಬಳಿ ಓಡುತ್ತಿದ್ದ ರೈಲೊಂದನ್ನು ಅಪಾಯದ ಸರಪಳಿ ಎಳೆದು ನಿಲ್ಲಿಸಿ, ಅದರಲ್ಲಿದ್ದ ಇಬ್ಬರು ನಿರಾಶ್ರಿತ ಬಂದಿಗಳೊಡನೆ ಪರಾರಿಯಾಗಿದೆ.

ಈ ಇಬ್ಬರು ಬಂದಿಗಳನ್ನು 211 ಮಣ ತೂಗುವಳಿ ಮೂಟೆ ಸಕ್ಕರೆ ಸಾಗಿಸಿದ ಆಪಾದನೆ ಮೇಲೆ ಬಂಧಿಸಿ ಕೋಳ ಹಾಕಿ ಕರೆದೊಯ್ಯಲಾಗುತ್ತಿತ್ತು. ಬಂದಿಗಳ ಜೊತೆಯಿದ್ದ ಇಬ್ಬರು ಪೊಲೀಸರಿಗೂ ಹೊಡೆದಿದ್ದಾರೆಂದು ವರದಿಯಾಗಿದೆ.

ಚುರುಮುರಿ

ಚಾಟ್ ಜಿಪಿಟಿ ಉತ್ತರ

• ಗುರು ಪಿ.ಎಸ್.

'ರೀ... ಬನ್ನಿ ಇಲ್ಲಿ, ಈ ವಿಡಿಯೊ ನೋಡಿದ್ರಾ?' ಮೊಬೈಲ್ ಫೋನ್ ನೋಡುತ್ತಾ ಕರೆದಳು ಹೆಂಡತಿ.

'ಏನದು? ರೀಲ್ಸಾ?' ಎಂದು ಗೊಣಗುತ್ತಾ ಹತ್ತಿರ ಹೋದೆ.

'ರೀಲ್ಸ್ ಅಲ್ಲ ರೀ ಇದು, ನ್ಯೂಸು. ಬಂಡೀಪುರ ಫಾರೆಸ್ಟ್ ದಾರಿಯಲ್ಲಿ ಹೋಗ್ತಿದ್ದ ವ್ಯಕ್ತಿ ಮೇಲೆ ಆನೆ ಹೇಗೆ ಅಟ್ಯಾಕ್ ಮಾಡಿದೆ ನೋಡ್ರೀ'.

'ಆ ಪುಣ್ಯಾತ್ಮ ಆನೆ ಜೊತೆ ಸೆಲ್ಫಿ ತಗೋಳೋಕೆ ಹೋಗಿದ್ರಂತೆ'.

'ಹೌದಾ! ಏನೋ ಒಂದ್ ಫೋಟೊ ತಗೊಂಡು ಸ್ಟೇಟಸ್ ಹಾಕ್ಕೋಬೇಕು ಅಂದ್ಕೊಂಡಿದ್ರೇನೋ ಪಾಪ'.

'ಏನ್ ಪಾಪ, ಇದನ್ನು ನೋಡು, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಅವರಿಗೆ 25 ಸಾವಿರ ರೂಪಾಯಿ ದಂಡ ಹಾಕಿದ್ದಾರೆ. ಯಾರೂ ನನ್ನ ಹಾಗೆ ಕಾಡಲ್ಲಿ ಹೀಗೆಲ್ಲ ಸೆಲ್ಫಿ ತಗೋಳೋಕೆ ಹೋಗಬೇಡಿ, ಫಾರೆಸ್ಟ್‌ನವರು ಎಲ್ಲಿದ್ದರೂ ನಿಮ್ಮನ್ನ ಹಿಡಿಯದೇ ಬಿಡಲ್ಲ ಅಂತ ಅವರಿಂದ ವಿಡಿಯೊನೂ ಮಾಡಿಸಿದ್ದಾರೆ'.

'ಸೆಲ್ಫಿ ತಗೋಳೋಕೆ ಹೋದರೆ ಇಷ್ಟೆಲ್ಲ ಅನುಭವಿಸಬೇಕಾ?'

'ಸೆಲ್ಫಿ ತಗೊಂಡ್ರೆ ಪ್ರಾಬ್ಲಂ ಇಲ್ಲ. ಯಾರ ಜೊತೆ, ಯಾವಾಗ ತಗೊಳ್ತೀವಿ ಅನ್ನೋದು ಮುಖ್ಯ. ಅದಕ್ಕೇ ಅಲ್ವಾ ದೊಡ್ಡವರು ಹೇಳೋದು, ಹೆಂಡತಿ ಜೊತೆ ಮತ್ತು ಪ್ರಾಣಿಗಳ ಜೊತೆ ವ್ಯವಹರಿಸೋವಾಗ ಹುಷಾರಾಗಿರಬೇಕು ಅಂತ' ಹೆಂಡತಿಯನ್ನು ಕೆಣಕಿದೆ.

'ಅದ್ಯಾವ ದೊಡ್ಡವರು ಈ ಮಾತು ಹೇಳಿದ್ರು ನಿಮಗೆ' ಎಂದು ಸಿಟ್ಟು ಮಾಡಿಕೊಂಡ ಹೆಂಡತಿ, 'ಪಾಪ ಅವರ್‍ಯಾರೋ ಬಡಪಾಯಿ ಸಿಕ್ಕಿದ್ದಾರೆ ಅಂತ ಅವರಿಗೆ ದಂಡ ಹಾಕಿ, ತಪ್ಪೊಪ್ಪಿಗೆ ವಿಡಿಯೊ ಮಾಡಿಸಿದ್ದಾರೆ... ಅದೇ ಪ್ರಭಾವಿಗಳು, ಗಣ್ಯರು ಇಂಥದ್ದೇ ತಪ್ಪು ಮಾಡಿದ್ರೆ ಹೀಗೇ ವಿಡಿಯೊ ಮಾಡಿಸ್ತಿದ್ರಾ?' ಗಂಭೀರವಾಗಿ ಕೇಳಿದಳು.

'ಅದನ್ನ ನೀನು ಚಾಟ್‌ಜಿಪಿಟಿಯಲ್ಲಿ ಪೊಲೀಸ್ ಡಿಪಾರ್ಟ್‌ಮೆಂಟ್‌ನವರನ್ನ ಕೇಳು'.

'ಚಾಟ್‌ಜಿಪಿಟಿಯಲ್ಲೇ ಕೇಳಿದೆ ರೀ...'

'ಏನಂತ ಉತ್ತರ ಬಂತು?'

'ಗೊತ್ತಿಲ್ಲ'.

ಸಂಗತ

ಮೌಢ್ಯಗಳ ವಿರುದ್ಧ ಅವಿರತ ಹೋರಾಟ

ದಾಬೋಲ್ಕರ್, ಪಾನ್ಸರೆ ಸೇರಿದಂತೆ ಹಲವು ಚಿಂತಕರ ಸ್ಮರಣೆಯ ರೂಪದಲ್ಲಿ 'ವೈಜ್ಞಾನಿಕ ಮನೋವೃತ್ತಿ ದಿನಾಚರಣೆ' ನಡೆಯುತ್ತಿದೆ.

• ಈ. ಬಸವರಾಜು

ಜನರನ್ನು ಬಾಧಿಸುತ್ತಿರುವ ಮೌಢ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆಗಳಲ್ಲಿ ಅನೇಕ ಸಂಘಟನೆಗಳು, ವ್ಯಕ್ತಿಗಳು ತೊಡಗಿಕೊಂಡಿದ್ದಾರೆ. ದೇಶದಾದ್ಯಂತ ಇರುವ ಪ್ರಜ್ಞಾವಂತರು ಹಾಗೂ ವಿಜ್ಞಾನ ಸಂಘಟನೆಗಳ ಶ್ರಮದಿಂದಾಗಿ ಜಾಗೃತಿ ಮೂಡಿಸುವ ಕೆಲಸ ಒಂದು ಆಂದೋಲನವಾಗಿ ರೂಪುಗೊಂಡಿದೆ.

ಅಬ್ರಹಾಂ ಕೋವೂರ್, ಪ್ರೇಮಾನಂದ್, ಕರ್ನಾಟಕದ ಎಚ್. ನರಸಿಂಹಯ್ಯ, ಪ್ರೊ. ನರೇಂದ್ರನಾಯಕ್, ಹುಲಿಕಲ್ ನಟರಾಜು ಇವರ ಜೊತೆಗೆ ಅನೇಕ ಕಾರ್ಯಕರ್ತರು ಸಾವಿರಾರು 'ಪವಾಡಗಳ ರಹಸ್ಯ ಬಯಲು' ಕಾರ್ಯಕ್ರಮಗಳನ್ನು ನೀಡಿದ್ದಾರೆ, ನೀಡುತ್ತಿದ್ದಾರೆ. ಇದೆಲ್ಲದರ ಫಲವಾಗಿ ಜನರಲ್ಲಿ ವೈಜ್ಞಾನಿಕ ಜಾಗೃತಿ, ಅರಿವು ಮೂಡಬೇಕೆಂಬ ನಿರೀಕ್ಷೆಯಿತ್ತು. ಆದರೆ, ಮೌಢ್ಯಾಚರಣೆಗಳು ಹೆಚ್ಚುತ್ತಲೇ ಇವೆ.

ಅನಾರೋಗ್ಯವನ್ನು ಸರಿಪಡಿಸುವುದಾಗಿ ಲೈಂಗಿಕ ಶೋಷಣೆ, ಹಣವನ್ನು ದೋಚುವುದು, ಪ್ರಾಣ ಹಾನಿ, ಒಡವೆಗಳನ್ನು ಮತ್ತು ಹಣವನ್ನು ದ್ವಿಗುಣ ಮಾಡುವುದಾಗಿ ಮೋಸ ಮಾಡುವುದು, ಯಾರೋ ಮಾಟ–ಮಂತ್ರ ಮಾಡಿದ್ದಾರೆ ಎಂದು ಜನರನ್ನು ಹೆದರಿಸಿ ಹಣ ಕೀಳುವುದು, ಒಳ್ಳೆಯ ಕಾಲ– ಕೆಟ್ಟ ಕಾಲ ಎಂದು ನಂಬಿಸಿ ಜನರ ಕೆಲಸಗಳಿಗೆ ಅಡ್ಡಿಯುಂಟು ಮಾಡುವುದು, ಹೀಗೆ ನೂರಾರು ರೀತಿಯಲ್ಲಿ ಮೌಢ್ಯಾಚರಣೆಗಳು ಜನರನ್ನು ಕಾಡುತ್ತಿವೆ.

ಯಾವುದೇ ಸಮಸ್ಯೆಗೆ ಸರಿಯಾದ, ವೈಜ್ಞಾನಿಕ ಪರಿಹಾರವನ್ನು ಕಂಡುಕೊಳ್ಳುವಂತೆ ಜನರನ್ನು ಸಶಕ್ತರನ್ನಾಗಿಸುವುದು ವಿಜ್ಞಾನ ಸಂಘಟನೆಗಳ ಹಾಗೂ ವಿಚಾರವಾದಿ ಸಂಘಟನೆಗಳ ಉದ್ದೇಶವಾಗಿದೆ. ಇಲ್ಲಿ ದೇವರು, ಧರ್ಮದ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ಅನಾರೋಗ್ಯ ಪರಿಹಾರಕ್ಕಾಗಿ, ಮನೆ ನಿರ್ಮಾಣ ತಡವಾದರೆ 'ತಡೆ ಹೊಡೆಸುವುದು' ಸಾಮಾನ್ಯ ಆಚರಣೆಯಾಗಿದೆ. ಇದರಿಂದ ಸಮಸ್ಯೆ ಪರಿಹಾರವಾಗುತ್ತದೆಯೇ ಅಥವಾ ಸರಿಯಾದ ಮಾರ್ಗ ಯಾವುದು ಎಂಬುದನ್ನು ಚಿಂತಿಸಿ ಮುಂದುವರಿಯಬೇಕೆ ಎನ್ನುವ ಬಗ್ಗೆ ಜನರನ್ನು ಚಿಂತನೆಗೆ ಹಚ್ಚುವ ಕೆಲಸ ನಿತ್ಯ ನಡೆಯಬೇಕಾಗಿದೆ.

ವೈಜ್ಞಾನಿಕ ಸಂಶೋಧನೆಯ ಕಡೆಗೆ ಪ್ರೇರೇಪಿಸಲು, ವಿಜ್ಞಾನವನ್ನು ಜನಪ್ರಿಯಗೊಳಿಸಲು, ವಿಜ್ಞಾನಾಸಕ್ತಿ ಬೆಳೆಸಲು ಪುಣೆಯ ವೈದ್ಯ ಡಾ. ನರೇಂದ್ರ ದಾಬೋಲ್ಕರ್ 'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಂಸ್ಥೆ' ಸ್ಥಾಪಿಸಿ, ಅದರ ಮೂಲಕ ಮಹಾರಾಷ್ಟ್ರದ ಜನರಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸುವ, ಮೌಢ್ಯಾಚರಣೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದರು. ಮಹಾರಾಷ್ಟ್ರ ಸರ್ಕಾರವನ್ನು 'ಅಂಧಶ್ರದ್ಧಾ ನಿಯಂತ್ರಣ ಕಾನೂನು' ತರುವಂತೆ ಒತ್ತಾಯಿಸುತ್ತಿದ್ದರು. ಮೌಢ್ಯಾಚರಣೆ ವಿರುದ್ಧದ ಜಾಗೃತಿ ಕಾರ್ಯಕ್ರಮಗಳಲ್ಲಿ ದಾಬೋಲ್ಕರ್ ಹೇಳುತ್ತಿದ್ದುದು, 'ಪುರಾವೆ ಇದ್ದಷ್ಟು ನಂಬಿ' ಎಂದು. ಇದರಿಂದ ಫಲ ಜ್ಯೋತಿಷ್ಯ ಹೇಳುವವರು, ಮಾಟ–ಮಂತ್ರ ಹಾಗೂ ವಾಮಾಚಾರ ಮಾಡುವವರಿಗೆ ಕೆಲಸ ಕಡಿಮೆಯಾಯಿತು. ಕೆಲವು ಯಥಾಸ್ಥಿತಿವಾದಿಗಳಿಗೂ ದಾಬೋಲ್ಕರ್ ಸಹ್ಯವಾಗಲಿಲ್ಲ. 2013ರ ಆಗಸ್ಟ್ 20ರಂದು ಮುಂಜಾನೆ ವಾಯುವಿಹಾರದಲ್ಲಿದ್ದಾಗ ದುಷ್ಕರ್ಮಿಗಳು ಅವರಿಗೆ ಗುಂಡಿಕ್ಕಿ ಕೊಂದರು.

ದಾಬೋಲ್ಕರ್ ಅವರ ಕೊಲೆ ದೇಶದಾದ್ಯಂತ ಹಾಗೂ ಪ್ರಪಂಚದ ಹಲವೆಡೆ ಗಮನ ಸೆಳೆಯಿತು. ಪ್ರತಿಭಟನೆಗಳಾದವು. ಮಹಾರಾಷ್ಟ್ರ ಸರ್ಕಾರ ಸುಗ್ರೀವಾಜ್ಞೆ ಮೂಲಕ 'ಮೌಢ್ಯಾಚರಣೆ ಪ್ರತಿಬಂಧಕ ಕಾನೂನು' ಜಾರಿಗೊಳಿಸಿತು. 'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಂಸ್ಥೆ'ಯ ಚಟುವಟಿಕೆಗಳೂ ಮುಂದುವರಿದವು. ದಾಬೋಲ್ಕರ್ ಹತ್ಯೆಯ ಮುಂದುವರಿಕೆಯಂತೆ ಮಹಾರಾಷ್ಟ್ರದ ಎಡಪಂಥೀಯ ಚಿಂತಕ ಗೋವಿಂದ ಪಾನ್ಸರೆ ಅವರ ಕೊಲೆಯಾಯಿತು. ಕರ್ನಾಟಕದಲ್ಲಿ ಎಂ.ಎಂ. ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಹತ್ಯೆಯಾಯಿತು. ಇವೆಲ್ಲವೂ ಒಂದೇ ರೀತಿಯ ಘಟನೆಗಳಾಗಿದ್ದವು.

ಮೌಢ್ಯಾಚರಣೆಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವನ್ನು ಮನಗಂಡು 2017ರಂದು 'ಅಖಿಲ ಭಾರತ ಜನ ವಿಜ್ಞಾನ ಸಂಘಟನೆ'ಗಳ ಜಾಲ ಮತ್ತು ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಂಸ್ಥೆಗಳು ಜನರಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸಲು ಒತ್ತು ನೀಡುವುದಕ್ಕೆ ನಿರ್ದಿಷ್ಟ ದಿನವೊಂದನ್ನು ನಿಗದಿಪಡಿಸಲು ಸಮಾಲೋಚನೆ ನಡೆಸಿದವು. ದಾಬೋಲ್ಕರ್ ಹತ್ಯೆಯಾದ ಆಗಸ್ಟ್ 20ರಂದು 'ರಾಷ್ಟ್ರೀಯ ವೈಜ್ಞಾನಿಕ ಮನೋವೃತ್ತಿ ದಿನಾಚರಣೆ'ಯನ್ನು ಸಂಘಟಿಸಲು ತೀರ್ಮಾನಿಸಿದವು. 2018ರಿಂದ ಸಮಾನ ಮನಸ್ಕ ಸಂಘಟನೆಗಳು ಕೂಡಿಕೊಂಡು ಪ್ರತಿ ವರ್ಷ ಆಗಸ್ಟ್ 20ರಂದು 'ವೈಜ್ಞಾನಿಕ ಮನೋವೃತ್ತಿ ದಿನಾಚರಣೆ'ಯನ್ನು ಸಂಘಟಿಸುತ್ತಿವೆ.

ಕರ್ನಾಟಕದಲ್ಲಿ ವಿವಿಧ ವಿಜ್ಞಾನ–ವೈಚಾರಿಕ ಸಂಘಟನೆಗಳು ಕೂಡಿಕೊಂಡು 'ಕರ್ನಾಟಕ ವೈಜ್ಞಾನಿಕ ಮನೋವೃತ್ತಿ ವೇದಿಕೆ'ಯನ್ನು ರಚಿಸಿಕೊಂಡಿವೆ. ಈ ವೇದಿಕೆಯ ಮೂಲಕ 'ವೈಜ್ಞಾನಿಕ ಮನೋವೃತ್ತಿ ದಿನಾಚರಣೆ'ಯೂ ನಡೆದಿದೆ.

ಮೌಢ್ಯಗಳ ವಿರುದ್ಧದ ಜಾಗೃತಿ ಯಾವುದೋ ಒಂದು ದಿನಕ್ಕೆ ಸೀಮಿತವಾದುದಲ್ಲ. ವೈಜ್ಞಾನಿಕ ಜಾಗೃತಿ ನಿರಂತರವಾಗಿ ನಡೆಯಬೇಕಾದುದು. ಜನರಲ್ಲಿ ಅರಿವು ಮೂಡಿ, ಅವರು ಮೋಸ ಹೋಗದಂತೆ ಹಾಗೂ ತಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಬಲರಾಗಬೇಕಿದೆ. ಆತ್ಮಘನತೆಗೆ ಧಕ್ಕೆ ಉಂಟು ಮಾಡುವ ಹಾಗೂ ಧನ–ಪ್ರಾಣ ಹಾನಿ ಉಂಟು ಮಾಡುವ ಯಾವುದೇ ಆಚರಣೆಗಳ ಬಗ್ಗೆ ಜನರು ಚಿಕಿತ್ಸಕ ದೃಷ್ಟಿಯನ್ನು ಹೊಂದುವುದು ಅಗತ್ಯ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂವಿಧಾನ (130ನೇ ತಿದ್ದುಪಡಿ) ಮಸೂದೆ

ಸತತ 30 ದಿನ ಜೈಲುವಾಸಕ್ಕೆ ಒಳಗಾದರೆ ಪ್ರಧಾನಿ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿ ಮತ್ತು ಸಚಿವರನ್ನು ಹುದ್ದೆಯಿಂದ ವಜಾ ಮಾಡಲು ಅವಕಾಶ ಕಲ್ಪಿಸುವ ಮೂರು ಮಸೂದೆಗಳನ್ನು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದೆ. ಜನರ ಆಶಯ ಮತ್ತು ಆಶೋತ್ತರಗಳನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳ ರಾಜಕೀಯ ಹಿತಾಸಕ್ತಿ ಮೀರಿ ಕೆಲಸ ಮಾಡುವ ದಿಸೆಯಲ್ಲಿ ಕಾಯ್ದೆ ರೂಪಿಸಲು ಮುಂದಾಗಿದ್ದೇವೆ ಎಂದು ಕೇಂದ್ರ ಸರ್ಕಾರ ಪ್ರತಿಪಾದಿಸಿದೆ. ಆದರೆ, ವಿರೋಧ ಪಕ್ಷಗಳು ಮಸೂದೆಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸಿವೆ. ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳನ್ನು ಬಳಸಿ ಚುನಾಯಿತ ಸರ್ಕಾರಗಳನ್ನು ಅಸ್ಥಿರಗೊಳಿಸುವ ಪ್ರಯತ್ನ ಇದಾಗಿದ್ದು, ಇದು ಅಸಾಂವಿಧಾನಿಕ ಎಂದು ಆರೋಪಿಸಿವೆ

ವಿಪಕ್ಷಗಳ ವಿರೋಧ ಏಕೆ?

ಕೇಂದ್ರ ಸರ್ಕಾರವು ಪ್ರಧಾನಿ, ಮುಖ್ಯಮಂತ್ರಿ ಮತ್ತು ಕೇಂದ್ರ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸಚಿವರನ್ನು ಹುದ್ದೆಯಿಂದ ವಜಾಗೊಳಿಸಲು ಸಾಧ್ಯವಾಗುವಂತಹ ಮೂರು ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದೆ. ಸಂವಿಧಾನ (130ನೇ ತಿದ್ದುಪಡಿ) ಮಸೂದೆ 2025, ಕೇಂದ್ರಾಡಳಿತ ಸರ್ಕಾರ ತಿದ್ದುಪಡಿ ಮಸೂದೆ, ಜಮ್ಮು ಮತ್ತು ಕಾಶ್ಮೀರ ಪುನರ್‌ರಚನೆ ತಿದ್ದುಪಡಿ ಮಸೂದೆ–2025 ಅನ್ನು ಗೃಹ ಸಚಿವ ಅಮಿತ್ ಶಾ ಅವರು ಮಂಡಿಸಿದ್ದಾರೆ.

ನೈತಿಕತೆ, ಉತ್ತಮ ಆಡಳಿತ ಮತ್ತು ಸಾರ್ವಜನಿಕ ನಂಬಿಕೆಯನ್ನು ಎತ್ತಿಹಿಡಿಯುವ ಉದ್ದೇಶದಿಂದ ಈ ಮಸೂದೆಗಳನ್ನು ಮಂಡಿಸಲಾಗಿದೆ; ಜನಪ್ರತಿನಿಧಿಗಳು ರಾಜಕೀಯ ಹಿತಾಸಕ್ತಿ ಮೀರಿ, ಅನುಮಾನಕ್ಕೆ ಆಸ್ಪದವಿಲ್ಲದಂತೆ ವರ್ತಿಸಬೇಕು; ಈ ದಿಸೆಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಾಗಿರುವುದಾಗಿ ಕೇಂದ್ರ ಸರ್ಕಾರವು ಪ್ರತಿಪಾದಿಸಿದೆ. ಆದರೆ, ವಿರೋಧ ಪಕ್ಷಗಳು ಕಾಯ್ದೆ ದುರ್ಬಳಕೆಯಾಗುವ ಬಗ್ಗೆ ಆತಂಕ ವ್ಯಕ್ತಪಡಿಸಿವೆ. ಮಸೂದೆಯ ಹಿಂದೆ, ರಾಜ್ಯ ಸರ್ಕಾರಗಳನ್ನು ಅಭದ್ರಗೊಳಿಸುವ ನರೇಂದ್ರ ಮೋದಿ ಸರ್ಕಾರದ ತಂತ್ರಗಾರಿಕೆ ಮತ್ತು ಹುನ್ನಾರ ಅಡಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ವಿರೋಧ ಪಕ್ಷಗಳು ಹೇಳುವುದೇನು?

- ಮಸೂದೆಗಳು ತೀವ್ರ ತುರ್ತುಪರಿಸ್ಥಿತಿಯತ್ತ (ಸೂಪರ್ ಎಮರ್ಜೆನ್ಸಿ) ಇಟ್ಟಿರುವ ಹೆಜ್ಜೆಯಾಗಿದ್ದು, ಭಾರತದಲ್ಲಿ ಎಂದೆಂದಿಗೂ ಪ್ರಜಾಪ್ರಭುತ್ವವನ್ನು ಅಂತ್ಯಗೊಳಿಸುವ ಪ್ರಯತ್ನವಾಗಿದೆ
- ಸರ್ಕಾರದ ಮುಖ್ಯ ಹುದ್ದೆಗಳಲ್ಲಿರುವವರು 30 ದಿನ ಜೈಲುವಾಸ ಅನುಭವಿಸಿದರೆ, ವಿಚಾರಣೆಯ ಹಂತದಲ್ಲೇ ಅವರನ್ನು ಪದಚ್ಯುತಗೊಳಿಸಲು ಮಸೂದೆಯು ಅವಕಾಶ ನೀಡುತ್ತದೆ. ಆದರೆ, ನ್ಯಾಯಾಲಯದಲ್ಲಿ ಅಪರಾಧಿ ಎಂದು ಸಾಬೀತಾಗುವವರೆಗೆ ಅವರು ಕೇವಲ ಆರೋಪಿ ಆಗಿರುತ್ತಾರೆ ಎನ್ನುವುದು ನಮ್ಮ ಸಂವಿಧಾನದ ಮುಖ್ಯ ಅಂಶವಾಗಿದೆ. ಹಾಗಾಗಿ ಈ ಮಸೂದೆ ಸಂವಿಧಾನ ವಿರೋಧಿ
- ಇದು ಅಧಿಕಾರ ವಿಭಜನೆಯ ನಿಯಮಕ್ಕೆ ವಿರುದ್ಧವಾಗಿದ್ದು, ಕಾರ್ಯಾಂಗವೇ ನ್ಯಾಯಾಂಗದಂತೆ ತೀರ್ಪು ನೀಡುವ ಸಂದರ್ಭ ಸೃಷ್ಟಿಗೆ ಕಾರಣವಾಗುತ್ತದೆ. ಚುನಾಯಿತ ಸರ್ಕಾರದ ಮೇಲೆ ಪ್ರಯೋಗಿಸಲಾಗುವ ಮಾರಣಾಂತಿಕ ಪ್ರಹಾರವಾಗಲಿದೆ. ದೇಶದಲ್ಲಿ ಪೊಲೀಸ್ ಪ್ರಭುತ್ವ ಸ್ಥಾಪಿಸಲು ಈ ತಿದ್ದುಪಡಿ ತರಲಾಗುತ್ತಿದೆ
- ಯಾವುದೇ ಸರ್ಕಾರ ಯಾವುದೇ ಸಚಿವರ ಬಗ್ಗೆಯಾದರೂ ಪ್ರಕರಣಗಳನ್ನು ದಾಖಲಿಸಬಹುದು. ಪ್ರಸ್ತುತ, ತನಿಖಾ ಸಂಸ್ಥೆಗಳಾದ ಜಾರಿ ನಿರ್ದೇಶನಾಲಯ, ಸಿಬಿಐ ಅತ್ಯಂತ ವಿವಾದಾಸ್ಪದವಾಗಿವೆ. ಈ ಸಂಸ್ಥೆಗಳು ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ಯಾವುದೇ ರಾಜ್ಯದ ಮುಖ್ಯಮಂತ್ರಿ ಅಥವಾ ಸಚಿವರ ಬಗ್ಗೆ ಬೇಕಿದ್ದರೂ ವಿಚಾರಣೆ ಆರಂಭಿಸಬಹುದು, ಆ ಪ್ರಕರಣಗಳಿಗೆ ಸಂಬಂಧಿಸಿ ಅವರನ್ನು ಜೈಲಿಗೆ ಕಳುಹಿಸಬಹುದು. ಇದು ಕಾನೂನಿನ ಸಹಜ ನ್ಯಾಯದ ತತ್ವಗಳಿಗೆ ವಿರುದ್ಧ
- ದಮನಕಾರಿ ಉದ್ದೇಶದ ಈ ಮಸೂದೆ ಎಲ್ಲ ತತ್ವಗಳಿಗೂ ವಿರುದ್ಧವಾದುದಾಗಿದೆ. ಇದನ್ನು ಭ್ರಷ್ಟಾಚಾರ ವಿರುದ್ಧದ ಕ್ರಮ ಎಂದು ಪ್ರತಿಪಾದಿಸುತ್ತಿರುವುದು ಒಂದು ತಂತ್ರವಷ್ಟೇ. ಪಕ್ಷಪಾತದಿಂದ ಕೂಡಿದ ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿ, ಅಧಿಕಾರದಲ್ಲಿರುವವರನ್ನು ಮನಬಂದಂತೆ ಬಂಧಿಸಿ, ಹುದ್ದೆಯಿಂದ ಕೆಳಗಿಳಿಸುವ ತಂತ್ರ ಇದರ ಹಿಂದಿದೆ
- ಆರ್‌ಎಸ್‌ಎಸ್ ನಿಯಂತ್ರಿತ ಕೇಂದ್ರ ಸರ್ಕಾರವು ಚುನಾಯಿತ ರಾಜ್ಯ ಸರ್ಕಾರಗಳನ್ನು ದುರ್ಬಲಗೊಳಿಸಿದ ಇತಿಹಾಸ ನೋಡಿದರೆ, ಅತ್ಯುನ್ನತ ಮಟ್ಟದಲ್ಲಿ ಅಪರಾಧ ತಡೆಗಟ್ಟುವ ನೆಪದಲ್ಲಿ ಮಂಡಿಸಲಾಗಿರುವ ಮಸೂದೆಗಳ ನಿಜವಾದ ಉದ್ದೇಶ ಏನು ಎನ್ನುವುದು ತಿಳಿಯುತ್ತದೆ. ಮತದಾರರ ಪಟ್ಟಿಯ ವಿಶೇಷ, ಸಮಗ್ರ ಪರಿಷ್ಕರಣೆಯೊಂದಿಗೆ (ಎಸ್‌ಐಆರ್) ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಪ್ರಯತ್ನವೂ ನಡೆಯುತ್ತಿದೆ
- ಇ.ಡಿ., ಸಿಬಿಐ, ಆದಾಯ ತೆರಿಗೆ ಇಲಾಖೆ, ಎನ್‌ಐಎ ಮುಂತಾದ ಕೇಂದ್ರದ ತನಿಖಾ ಸಂಸ್ಥೆಗಳನ್ನು ಆಯುಧಗಳನ್ನಾಗಿ ಬಳಸಿಕೊಂಡು, ರಾಜ್ಯಪಾಲರ ಕಚೇರಿಯನ್ನು ದುರ್ಬಳಕೆ ಮಾಡಿಕೊಂಡು ಕೇಂದ್ರ ಸರ್ಕಾರವು ನಡೆಸಿದ ಸಂಕುಚಿತ, ಪಕ್ಷಪಾತದಿಂದ ಕೂಡಿದ ಕೃತ್ಯಗಳನ್ನು ಹಲವು ಸಂದರ್ಭಗಳಲ್ಲಿ ಸುಪ್ರೀಂ ಕೋರ್ಟ್ ಕೂಡ ಖಂಡಿಸಿದೆ. ಪ್ರಸ್ತುತ ಮಸೂದೆಗಳ ಮೂಲಕ ಅದಕ್ಕೆ ಕಾನೂನಿನ ಮಾನ್ಯತೆ ನೀಡುವ ಪ್ರಯತ್ನ ನಡೆಯುತ್ತಿದೆ
- ತನ್ನ ಸಾಂವಿಧಾನಿಕ ಜವಾಬ್ದಾರಿಗಳನ್ನು ನಿರ್ವಹಿಸುವ ಬದಲು ಈ ಸರ್ಕಾರವು ಉತ್ತರದಾಯಿತ್ವ ಇಲ್ಲದ ಅಧಿಕಾರ, ಸಂಪತ್ತು ಮತ್ತು ನಿಯಂತ್ರಣವನ್ನು ಗಳಿಸುವುದರಲ್ಲಿ ಮಗ್ನವಾಗಿದೆ



ಎಐ ಚಿತ್ರ: ಹರ್ಷನ

ಆಧಾರ: ಪಿಟಿಐ, ಮಾಧ್ಯಮ ವರದಿಗಳು

> ಹುದ್ದೆಯಿಂದ ವಜಾ ಆದವರು ಕಸ್ಟಡಿಯಿಂದ ಬಿಡುಗಡೆಯಾದ ನಂತರ ಮತ್ತೆ ಪ್ರಧಾನಿ, ಕೇಂದ್ರ ಸಚಿವ, ರಾಜ್ಯಗಳಲ್ಲಿ ಮುಖ್ಯಮಂತ್ರಿ, ಸಚಿವರಾಗಿ ನೇಮಕಗೊಳ್ಳುವುದನ್ನು ಈ ತಿದ್ದುಪಡಿಗಳು ತಡೆಯುವುದಿಲ್ಲ. ಅಂದರೆ, ಸತತ 30 ದಿನ ಕಸ್ಟಡಿಯಲ್ಲಿದ್ದ ಕಾರಣಕ್ಕೆ ಅಧಿಕಾರ ಕಳೆದುಕೊಂಡವರು ಜೈಲಿನಿಂದ ಹೊರ ಬಂದವರು ಮೇಲೆ ಮತ್ತೆ ಅದೇ ಹುದ್ದೆಗೆ ಏರಬಹುದು

ಮಸೂದೆಯಲ್ಲೇನಿದೆ?

- **ಸಂವಿಧಾನ (130ನೇ ತಿದ್ದುಪಡಿ) ಮಸೂದೆಯು ಸಂವಿಧಾನದ 75, 164 ಮತ್ತು 239ಎಎ ವಿಧಿಗಳಿಗೆ ತಿದ್ದುಪಡಿ ತರುವ ಉದ್ದೇಶ ಹೊಂದಿದೆ**

  ಕೇಂದ್ರ ಸಚಿವ ಸಂಪುಟಕ್ಕೆ ಪ್ರಧಾನಿ ಸೇರಿದಂತೆ ಸಚಿವರ ನೇಮಕ ಮತ್ತು ಅವರ ಜವಾಬ್ದಾರಿಗಳನ್ನು 75ನೇ ವಿಧಿಯು ವಿವರಿಸುತ್ತದೆ. 164ನೇ ವಿಧಿಯು ರಾಜ್ಯಗಳಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರ ನೇಮಕ ಪ್ರಕ್ರಿಯೆ ಹಾಗೂ ಅವರ ಹೊಣೆಗಾರಿಕೆಗಳೇನು ಎಂಬುದನ್ನು ತಿಳಿಸುತ್ತದೆ. 239ಎಎ ವಿಧಿಯು ರಾಷ್ಟ್ರೀಯ ರಾಜಧಾನಿ ದೆಹಲಿಯ ಆಡಳಿತಕ್ಕೆ ಸಂಬಂಧಿಸಿದಂತೆ ವಿಶೇಷ ಅವಕಾಶಗಳನ್ನು ಕಲ್ಪಿಸುತ್ತದೆ. 1991ರಲ್ಲಿ ಈ ವಿಧಿಯನ್ನು ಸಂವಿಧಾನಕ್ಕೆ ಸೇರ್ಪಡೆಗೊಳಿಸಲಾಗಿದ್ದು, ದೆಹಲಿಯಲ್ಲಿ ವಿಧಾನಸಭೆ ಸ್ಥಾಪನೆ ಮತ್ತು ಸಚಿವ ಸಂಪುಟ ರಚನೆಯ ಅಧಿಕಾರ ನೀಡಿದೆ. ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಮತ್ತು ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು, ಉಳಿದ ವಿಚಾರಗಳಲ್ಲಿ ದೆಹಲಿಗೆ ಸೀಮಿತವಾಗಿ ಕಾನೂನುಗಳನ್ನು ರೂಪಿಸುವ ಅಧಿಕಾರವನ್ನು ಇದು ದೆಹಲಿಯ ವಿಧಾನಸಭೆಗೆ ನೀಡಿದೆ.

- **75ನೇ ವಿಧಿಯ 5ನೇ ಪರಿಚ್ಛೇದ (ಕ್ಲಾಸ್) ನಂತರ 5ಎ ಎಂಬ ಹೊಸ ಪರಿಚ್ಛೇದ ಸೇರ್ಪಡೆಗೊಳಿಸಲು ಈ ಮಸೂದೆ ಪ್ರಸ್ತಾಪಿಸುತ್ತದೆ**

  ಅದರ ಪ್ರಕಾರ, ಐದು ವರ್ಷ ಮತ್ತು ಅದಕ್ಕಿಂತ ಹೆಚ್ಚು ಅವಧಿಗೆ ಜೈಲು ಶಿಕ್ಷೆಗೆ ಅವಕಾಶ ಇರುವ ಅಪರಾಧ ಎಸಗಿರುವ ಆರೋಪದಲ್ಲಿ ಕೇಂದ್ರ ಸಚಿವರೊಬ್ಬರು ಬಂಧನಕ್ಕೆ ಒಳಪಟ್ಟು, ಸತತ 30 ದಿನ ಕಸ್ಟಡಿಯಲ್ಲಿದ್ದರೆ ಪ್ರಧಾನಿ ಅವರ ಶಿಫಾರಸಿನ ಅನ್ವಯ 31ನೇ ದಿನ ಆ ಸಚಿವರನ್ನು ರಾಷ್ಟ್ರಪತಿ ಅವರು ಹುದ್ದೆಯಿಂದ ವಜಾ ಮಾಡಬಹುದು.

  ಒಂದು ವೇಳೆ, ಪ್ರಧಾನಿಯವರು 31ನೇ ದಿನ ಆ ಸಚಿವರನ್ನು ವಜಾಗೊಳಿಸುವಂತೆ ರಾಷ್ಟ್ರಪತಿ ಅವರಿಗೆ ಶಿಫಾರಸು ಮಾಡದಿದ್ದರೂ 32ನೇ ದಿನ ಸಚಿವರು ತಮ್ಮ ಹುದ್ದೆಯನ್ನು ತನ್ನಿಂತಾನೆ ಕಳೆದುಕೊಳ್ಳುತ್ತಾರೆ. ಪ್ರಧಾನಿಯಾಗಿದ್ದವರಿಗೂ ಇದೇ ನಿಯಮ ಅನ್ವಯವಾಗುತ್ತದೆ. 31ನೇ ದಿನ ಅವರಾಗಿಯೇ ತಮ್ಮ ಹುದ್ದೆಗೆ ರಾಜೀನಾಮೆ ನೀಡದಿದ್ದರೆ ಮರುದಿನದಿಂದ ಅನ್ವಯವಾಗುವಂತೆ ಅವರು ಪ್ರಧಾನಿ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ

- **ರಾಜ್ಯಗಳ ಮಟ್ಟದಲ್ಲಿ ಮುಖ್ಯಮಂತ್ರಿಗಳು ಮತ್ತು ಸಚಿವರು ಅಪರಾಧ ಪ್ರಕರಣದಲ್ಲಿ ಸಿಲುಕಿ ಸತತ 30 ದಿನ ಕಸ್ಟಡಿಯಲ್ಲಿದ್ದರೆ, ಅವರನ್ನು ಹುದ್ದೆಯಿಂದ ತೆರವುಗೊಳಿಸುವುದಕ್ಕಾಗಿ ಸಂವಿಧಾನದ 164ನೇ ವಿಧಿಯ 4ನೇ ಪರಿಚ್ಛೇದದ ನಂತರ ಹೊಸದಾಗಿ 4ಎ ಪರಿಚ್ಛೇದ ಸೇರ್ಪಡೆಗೊಳಿಸುವ ಬಗ್ಗೆ ತಿದ್ದುಪಡಿ ಮಸೂದೆ ಪ್ರಸ್ತಾಪಿಸುತ್ತದೆ.**

  ಕೇಂದ್ರ ಸಚಿವರು ಮತ್ತು ಪ್ರಧಾನಿ ಅವರಿಗೆ ಅನ್ವಯವಾಗುವ ನಿಯಮವೇ ರಾಜ್ಯಗಳಲ್ಲಿ ಮುಖ್ಯಮಂತ್ರಿ ಹಾಗೂ ಸಚಿವರಿಗೂ ಅನ್ವಯವಾಗುತ್ತದೆ. ಕೇಂದ್ರ ಸಚಿವರ ವಿಚಾರದಲ್ಲಿ ಪ್ರಧಾನಿ ಅವರು ಸಚಿವರ ವಜಾಕ್ಕೆ ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಿದರೆ, ರಾಜ್ಯಗಳಲ್ಲಿ ಮುಖ್ಯಮಂತ್ರಿಯವರು ರಾಜ್ಯಪಾಲರಿಗೆ ಶಿಫಾರಸು ಮಾಡುತ್ತಾರೆ. ಒಂದುವೇಳೆ, ಶಿಫಾರಸು ಮಾಡದಿದ್ದರೂ, ಕಸ್ಟಡಿಯಲ್ಲಿರುವ ಸಚಿವರು ಅಧಿಕಾರ ಕಳೆದುಕೊಳ್ಳುತ್ತಾರೆ. ಮುಖ್ಯಮಂತ್ರಿಯವರು ಕೂಡ ರಾಜೀನಾಮೆ ನೀಡದೇ ಇದ್ದರೂ ಹುದ್ದೆಯನ್ನು ಕಳೆದುಕೊಳ್ಳುತ್ತಾರೆ

- **ದೆಹಲಿಗೆ ಸಂಬಂಧಿಸಿದ 239ಎಎ ವಿಧಿಯ ಪರಿಚ್ಛೇದ 5ರ ನಂತರ '5ಎ' ಎಂಬ ಹೊಸ ಪರಿಚ್ಛೇದ ಸೇರಿಸಲು ಈ ಮಸೂದೆ ಅವಕಾಶ ನೀಡುತ್ತದೆ. ಕೇಂದ್ರ ಹಾಗೂ ರಾಜ್ಯಗಳಿಗೆ ಅನ್ವಯವಾಗುವ ನಿಯಮಗಳೇ ಇಲ್ಲಿಗೂ ಅನ್ವಯವಾಗುತ್ತವೆ.**

- **ಇನ್ನುಳಿದ ಎರಡು ಮಸೂದೆಗಳು ಕೇಂದ್ರಾಡಳಿತ ಪ್ರದೇಶಗಳು ಹಾಗೂ ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದವು. ಮುಖ್ಯಮಂತ್ರಿ ಹಾಗೂ ಸಚಿವರನ್ನು ವಜಾ ಗೊಳಿಸಲು ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆ 1963 ಹಾಗೂ ಜಮ್ಮು ಮತ್ತು ಕಾಶ್ಮೀರ ಪುನರ್ ರಚನೆ ಕಾಯ್ದೆ–2019ಕ್ಕೆ ತಿದ್ದುಪಡಿ ತರಲು ಈ ಮಸೂದೆಗಳಲ್ಲಿ ಪ್ರಸ್ತಾಪಿಸಲಾಗಿದೆ**

ದುರ್ಬಳಕೆಯ ಆತಂಕ

ಈ ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ, ಕೇಂದ್ರದಲ್ಲಿ ಆಡಳಿತದಲ್ಲಿರುವ ಪಕ್ಷವು ರಾಜ್ಯಗಳಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಧಿಕಾರದಲ್ಲಿರುವ ವಿರೋಧ ಪಕ್ಷಗಳ ಸರ್ಕಾರಗಳನ್ನು ಉರುಳಿಸಲು ಅಥವಾ ತನ್ನ ರಾಜಕೀಯ ದ್ವೇಷ ಸಾಧನೆಗಾಗಿ ಇದನ್ನು ದುರ್ಬಳಕೆ ಮಾಡಿಕೊಳ್ಳಬಹುದು ಎಂದು ಹೇಳಲಾಗುತ್ತಿದೆ.

ಅಪರಾಧ ಪ್ರಕರಣಗಳಲ್ಲಿ ಆರೋಪಿಯಾಗಿ ತಿಂಗಳಿಗಿಂತಲೂ ಹೆಚ್ಚು ಸಮಯ ಜೈಲಿನಲ್ಲಿದ್ದರೂ ಮುಖ್ಯಮಂತ್ರಿ, ಸಚಿವರಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡದೆ, ಜೈಲಿನಿಂದಲೇ ಅಧಿಕಾರ ನಡೆಸಿದ ಉದಾಹರಣೆಗಳಿವೆ.

ದೆಹಲಿಯ ಹಿಂದಿನ ಮುಖ್ಯಮಂತ್ರಿ ಕೇಜ್ರಿವಾಲ್ ಅವರು ಜೈಲಿನಲ್ಲಿದ್ದುಕೊಂಡೇ ಆರು ತಿಂಗಳಿಗಿಂತಲೂ ಹೆಚ್ಚು ಸಮಯ ಆಡಳಿತ ನಡೆಸಿದ್ದರು. ಅಬಕಾರಿ ಹಗರಣದಲ್ಲಿ ಕೇಜ್ರಿವಾಲ್ ಅವರು 2024ರ ಮಾರ್ಚ್‌ನಲ್ಲಿ ಬಂಧನಕ್ಕೆ ಒಳಗಾಗಿದ್ದರು. ಜಾಮೀನಿನ ಮೇಲೆ ಬಿಡುಗಡೆಗೊಂಡ ನಂತರ ಸೆಪ್ಟೆಂಬರ್‌ನಲ್ಲಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ದೆಹಲಿಯ ಎಎಪಿ ಸರ್ಕಾರದಲ್ಲಿ ಸಚಿವರಾಗಿದ್ದ ಸತ್ಯೇಂದ್ರ ಜೈನ್ ಅವರನ್ನು ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ 2022ರಲ್ಲಿ ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಬಂಧನದ ನಂತರವೂ ಒಂಬತ್ತು ತಿಂಗಳು ಅವರು ಕೇಜ್ರಿವಾಲ್ ಸಂಪುಟಕ್ಕೆ ರಾಜೀನಾಮೆ ನೀಡಿರಲಿಲ್ಲ.



ಅಂಗೀಕಾರ ಸಾಧ್ಯತೆ ಕ್ಷೀಣ

ಬುಧವಾರ ಮಂಡಿಸಲಾದ ಮೂರು ಮಸೂದೆಗಳಲ್ಲಿ ಸಂವಿಧಾನ ತಿದ್ದುಪಡಿ ಮಸೂದೆ ಬಿಟ್ಟು ಉಳಿದೆರಡು ಸಾಮಾನ್ಯ ಮಸೂದೆಗಳು. ಆದರೆ, ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರವಾದರಷ್ಟೇ ಉಳಿದವುಗಳಿಗೆ ಮೌಲ್ಯ. ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕಾರವಾಗಲು ಸಂಸತ್ತಿನಲ್ಲಿ ಮೂರನೇ ಎರಡರಷ್ಟು ಮತ ಅಗತ್ಯ. ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಪ್ರತ್ಯೇಕವಾಗಿ ಮಸೂದೆಯನ್ನು ಅಂಗೀಕರಿಸಬೇಕು. ಅದಕ್ಕೆ ಬಹುಮತ ಬೇಕು. ಅಲ್ಲದೇ, ಮಸೂದೆಯನ್ನು ಮತಕ್ಕೆ ಹಾಕುವಾಗ ಸದನಗಳಲ್ಲಿ ಹಾಜರಿರುವ ಸದಸ್ಯರು ಮೂರನೇ ಎರಡಷ್ಟು ಬಹುಮತದಲ್ಲಿ ಅಂಗೀಕರಿಸಬೇಕು. ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದ ಉಲ್ಲೇಖಗಳು ಮಸೂದೆಯಲ್ಲಿದ್ದರೆ, ರಾಜ್ಯ ಶಾಸನಸಭೆಗಳು ಇದಕ್ಕೆ ಒಪ್ಪಿಗೆ ನೀಡಬೇಕು. ದೇಶದಲ್ಲಿರುವ ಒಟ್ಟು ವಿಧಾನಸಭೆಗಳು ಬಹುಮತದಿಂದ (ಅರ್ಧಕ್ಕೂ ಹೆಚ್ಚು ವಿಧಾನಸಭೆಗಳು) ತಿದ್ದುಪಡಿಯನ್ನು ಅನುಮೋದಿಸಬೇಕು. ರಾಷ್ಟ್ರಪತಿಯವರ ಅಂಕಿತವೂ ಬೇಕು. ಸದ್ಯ, ಲೋಕಸಭೆಯಲ್ಲಿ ಎನ್‌ಡಿಎಗೆ ಮೂರನೇ ಎರಡರಷ್ಟು ಬಹುಮತ ಇಲ್ಲ. ಹೀಗಾಗಿ, ಈ ಮಸೂದೆ ಅಂಗೀಕಾರಗೊಳ್ಳುವ ಸಾಧ್ಯತೆ ಕ್ಷೀಣ ಎಂದು ಹೇಳಲಾಗುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ವಾಟ್ಸ್‌ಆ್ಯಪ್‌ನಲ್ಲಿ ಸಂದೇಶವೊಂದು ಹಂಚಿಕೆಯಾಗುತ್ತಿದೆ. 'ಆರ್ಮಿ ವೆಲ್‌ಫೇರ್ ಕ್ಯಾಶುಯಾಲಿಟಿ ಫಂಡ್' ಮತ್ತು 'ಭಾರತ್ ಕೆ ವೀರ್'ಗಾಗಿ ಧನಸಹಾಯ ಮಾಡುವಂತೆ ಕೋರುವ ಸಂದೇಶ ಅದು. 'ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರ ಸಲಹೆಯ ಮೇರೆಗೆ ನರೇಂದ್ರ ಮೋದಿ ಅವರ ಸರ್ಕಾರ ಮತ್ತೊಂದು ಉತ್ತಮ ನಿರ್ಧಾರ ಕೈಗೊಂಡಿದೆ. ಅದಕ್ಕಾಗಿ ಧನಸಹಾಯ ಮಾಡಿ' ಎಂದು ಪ್ರಚಾರ ಮಾಡಲಾಗುತ್ತಿದೆ. ಸಂಗ್ರಹವಾದ ಹಣವನ್ನು ಸೇನೆ ಮತ್ತು ಅರೆಸೇನಾ ಪಡೆಗಳಿಗೆ ಶಸ್ತ್ರಾಸ್ತ್ರ ಕೊಳ್ಳಲು ಬಳಸಲಾಗುವುದು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಪೋಸ್ಟ್‌ನಲ್ಲಿ ಸೇನೆಗೆ ಸಂಬಂಧಪಟ್ಟ ಎರಡು ನಿಧಿಗಳನ್ನು ಒಟ್ಟಿಗೆ ಸೇರಿಸಲಾಗಿದೆ. ಇವುಗಳಲ್ಲಿ 'ಆರ್ಮಿ ವೆಲ್‌ಫೇರ್ ಕ್ಯಾಶುಯಾಲಿಟಿ ಫಂಡ್' ರಕ್ಷಣಾ ಸಚಿವಾಲಯದ ಅಡಿಯಲ್ಲಿ ಬರುತ್ತದೆ. 'ಭಾರತ್ ಕೆ ವೀರ್' ನಿಧಿಯು ಗೃಹ ಸಚಿವಾಲಯದ ಅಡಿಯಲ್ಲಿ ಬರುತ್ತದೆ. ಇದು ಅರೆಸೇನಾ ಪಡೆ ಮತ್ತು ಕೇಂದ್ರೀಯ ಪೊಲೀಸ್ ಪಡೆಯನ್ನು ಒಳಗೊಂಡಿದೆ. ಎಂಟು ಕೇಂದ್ರೀಯ ಪೊಲೀಸ್ ಪಡೆಗಳ ಮೃತ ಸಿಬ್ಬಂದಿಯ ಕುಟುಂಬಗಳಿಗೆ ನೆರವು ನೀಡುವ ಈ ನಿಧಿಯ ಬಗ್ಗೆ ಹಿಂದೆ ಅಕ್ಷಯ್ ಕುಮಾರ್ ಅವರು ಪ್ರಚಾರ ಮಾಡಿದ್ದರು. ಎರಡು ಬೇರೆ ಬೇರೆ ನಿಧಿಗಳನ್ನು ಬೆಸೆದು, ಅದರ ಜತೆಗೆ ಭಾರತೀಯ ಸೇನೆಯ ವೆಬ್‌ಸೈಟ್‌ನಲ್ಲಿರುವ ಬ್ಯಾಂಕ್ ಖಾತೆಯೊಂದನ್ನು ಬಳಸಿಕೊಂಡು ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಭಾಷಾಭಿಮಾನ

ಪಿ.ಚಂದ್ರಿಕಾ

ಇತ್ತೀಚೆಗೆ ನಾವು ವಿಜಯನಗರದಿಂದ ನಾಗದೇವನಹಳ್ಳಿಗೆ ಮನೆಯನ್ನು ಬದಲಿಸಿದೆವು. ತಕ್ಷಣಕ್ಕೆ ದಿನ ದಿನದ ವ್ಯವಸ್ಥೆಯನ್ನು ನೋಡುವುದು ಅನಿವಾರ್ಯ. ಕಸದ ವಿಲೇವಾರಿಯದ್ದಂತೂ ಬಹುದೊಡ್ಡ ತೊಡಕು. ಬಿಬಿಎಂಪಿಯ ಕಸದ ವಾಹನ ಎಷ್ಟು ಹೊತ್ತಿಗೆ ಬರುತ್ತೆ? ನಾವು ಇರುವಾಗಲೇ ಬರುತ್ತದಾ? ಬಂದದ್ದು ಗೊತ್ತಾಗುವುದು ಹೇಗೆ? ಎರಡನೆಯ ಮಹಡಿಯಿಂದ ಇಳಿದು ಬಂದು ಹಾಕುವಷ್ಟು ಸಮಯ ಅವರು ಕೊಡುತ್ತಾರಾ... ಇತ್ಯಾದಿ ಬಗ್ಗೆ ಅಕ್ಕಪಕ್ಕದವರ ಬಳಿ ವಿಚಾರಿಸಿದೆ. ಮನೆಯಲ್ಲಿ ಕಸ ಇರಿಸಿಕೊಂಡರೆ ನುಸಿ, ಸೊಳ್ಳೆ ಇರುವೆ, ಜಿರಲೆಗಳ ಕಾಟ ಜಾಸ್ತಿಯಾದೀತು ಎನ್ನುವ ಆತಂಕ ಸ್ವಲ್ಪ ಜಾಸ್ತಿಯೇ ಇತ್ತು.

ಮಾರನೆಯ ದಿನ ಬೆಳಿಗ್ಗೆ ಸುಮಾರು ಎಂಟು ಗಂಟೆಯ ಸಮಯ. ಬೆಳಿಗ್ಗಿನ ಕೆಲಸದಲ್ಲಿ ತೊಡಗಿದ್ದವಳಿಗೆ 'ಬಾ ತಾಯಿ ಭಾರತಿಯೇ ಭಾವಭಾಗೀರಥಿಯೇ' ಎನ್ನುವ ಹಾಡು ಕೇಳಿಸಿತು. ಮನಸ್ಸಿಗೆ ಆಹ್ಲಾದವೆನ್ನಿಸಿತು. ಸಾರ್ವಜನಿಕವಾಗಿ ರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆಗಳಂದು, ಆರ್ಕೆಸ್ಟ್ರಾಗಳಲ್ಲಿ ಮಾತ್ರ ಕೇಳುವ ಇಂಥ ಹಾಡನ್ನು ಇಷ್ಟು ಜೋರಾಗಿ ಹಾಕಿಕೊಂಡು ಬರುವವರು ಯಾರು ಎನ್ನುವ ಕುತೂಹಲ ಕೂಡ ಮೂಡಿತು. ಪಕ್ಕದ ಮನೆಯವರು ಫೋನ್ ಮಾಡಿ, 'ಹಾಡನ್ನು ಹಾಕಿಕೊಂಡು ಬರ್ತಾ ಇದೆಯಲ್ಲ, ಅದೇ ಕಸದ ಗಾಡಿ ಬನ್ನಿ' ಎಂದರು. ಹೊಸ ಜಾಗಕ್ಕೆ ಹೊಂದಿಕೊಳ್ಳುವ ಆತಂಕವನ್ನು ಕಳೆವ ಹಾಗೆ ಹಾಡುತ್ತಾ ಕಸದ ಗಾಡಿ ಮನೆಯ ಮುಂದೆ ಬಂದಿತ್ತು. ಜಾಗ ಬದಲಿಸುವಾಗ ಇದ್ದ ಎಲ್ಲಿಗೋ ಬಂದೆ ಎನ್ನುವ ಭಾವ ಮರೆಯಾಗಿಬಿಟ್ಟಿತ್ತು. ದಿನ ಕಳೆದಂತೆ ಸುಮಧುರ ಹಳೆಯ ಕನ್ನಡ ಹಾಡುಗಳ ಕೇಳುತ್ತಾ ಬೆಳಿಗ್ಗೆಯನ್ನು ಸಂಪನ್ನಗೊಳಿಸುವ ಕಸದ ಗಾಡಿಗೆ ಕಾಯುವಂತೆ ಮಾಡಿತ್ತು.

ದಿನ ದಿನದ ಮಾತುಕತೆಯಲ್ಲಿ ಕಸ ತೆಗೆದುಕೊಂಡು ಹೋಗುವ ಪೌರಕಾರ್ಮಿಕ ಎಂ.ದೇವರಾಜ್ ಅವರ ಪರಿಚಯವಾಯ್ತು. ಮಾತಾಡುತ್ತಿರುವಾಗ ಅವರ ಮನೆಮಾತು ತೆಲುಗು, ಆದರೆ ಹುಟ್ಟಿ ಬೆಳೆದದ್ದೆಲ್ಲಾ ಇಲ್ಲೇ ಎಂದೂ ಗೊತ್ತಾಯಿತು. ಆದರೂ, 'ಏನು ಬರೀ ಕನ್ನಡ ಹಾಡೇ ಹಾಕ್ತೀರಲ್ಲಾ' ಎಂದೆ ಕುತೂಹಲದಿಂದ. 'ಸಕ್ಕರೆನೂ ವಜ್ರನೂ ಒಂದೇ ಥರ ಕಾಣ್ಬಹುದು ಅಮ್ಮಾ, ಆದ್ರೆ ಇರುವೆ ಸಕ್ಕರೆ ಹತ್ರಾನೇ ಹೋಗೋದು. ಹೊಟ್ಟೆಯ ಪ್ರಶ್ನೆ ನೋಡಿ, ಅದಕ್ಕೆ ಅದೇ ದೊಡ್ಡದು. ನನಗೆ ಊಟ ಕೊಡ್ತಿರುವ, ಜೀವನ ಕೊಟ್ಟಿರುವ ಕನ್ನಡಾನೇ ದೊಡ್ಡದು' ಎಂದರು. ಆತನ ಹೋಲಿಕೆಗೆ, ವ್ಯಾಖ್ಯಾನಕ್ಕೆ ದಂಗಾದೆ. 'ಅದು ಸರಿ ಈ ಹಾಡೇನು? ಬೇರೆ ಕಡೆ ವಿಷಲ್ ಊದುತ್ತಾ ಬರ್ತಾರಲ್ಲಾ' ಎಂದೆ. ಅದಕ್ಕಾತ, 'ಇಲ್ಲಿ ಬೇರೆ ಬೇರೆ ಭಾಷೆಯವರು ಇದ್ದಾರೆ. ದಿನಾ ಈ ಟೈಮ್‌ಗೆ ಅವರು ನನಗಾಗಿ ಕಾಯ್ತಾರೆ. ಕಸ ತಗೊಂಡ್ ಹೋಗೋದೇ ನನ್ನ ಕೆಲಸ. ಈ ಟೈಮ್‌ನಲ್ಲಿ ನನ್ನ ಕಾಯ್ತಾರಲ್ಲಾ ಅವರಿಗೆ ಎರಡು ಕನ್ನಡ ಹಾಡು ಕೇಳಿಸಿದ್ರೆ ಕನ್ನಡ ಎಷ್ಟು ಚೆನ್ನಾಗಿದೆ ಅಂತ ಗೊತ್ತಾಗುತ್ತಲ್ಲ. ಜೊತೆಗೆ ಭಾಷೆ ಹೀಗಾದ್ರೂ ಅವರ ಕಿವಿಗೆ ಬೀಳ್ತದಲ್ಲಾ ಅಂದ್ಕೊಂಡೆ. ಸುಮ್ನೆ ಕೇಳಿ ಅಂದ್ರೆ ಯಾರು ಕೇಳ್ತಾರೆ? ಬಲವಂತ ಮಾಡಿ ಕೇಳ್ಸೋಕ್ಕಾಗಲ್ಲ. ಅವರು ಕಲೀತಾರೋ, ಬಿಡ್ತಾರೋ ಕೇಳ್ಸೋಕ್ಕೆ ಪ್ರಯತ್ನನಾದ್ರೂ ಮಾಡಬೇಕಲ್ಲಾ? ಅದಕ್ಕೆ ಈ ವ್ಯವಸ್ಥೆ' ಎಂದರು. ಹೆಚ್ಚು ಓದಿರದ, ಆದರೆ ಕನ್ನಡದ ಬಗ್ಗೆ ಮನಸ್ಸಿನಿಂದ ಯೋಚನೆ ಮಾಡುವ ಆತ ನನಗೆ ಅಚ್ಚರಿಯಾಗಿ ಕಂಡರು.

'ಕನ್ನಡ ಉಳಿಯಲ್ಲ, ಯಾರಿಗೆ ಬೇಕು?, ಅದಕ್ಕೆ ಕಾನೂನು ಮಾಡಿ...' ಇತ್ಯಾದಿ ಮಾತನಾಡುವವರ ಮಧ್ಯೆ ತನ್ನ ಪಾಡಿಗೆ ತಾನು ಕಸ ಸಂಗ್ರಹಿಸುವ ಪೌರಕಾರ್ಮಿಕರೊಬ್ಬರಿಗೆ ಇದು ಹೊಳೆದದ್ದು ಹೇಗೆ? ನೆಲದ ಭಾಷೆಯನ್ನು ಗೌರವಿಸಬೇಕು ಎನ್ನುವ ನೈತಿಕ ಪ್ರಜ್ಞೆ ಇಲ್ಲದೆ ಪರಭಾಷಿಕರ ಜೊತೆ ಅವರ ಭಾಷೆಯನ್ನು ಆಡುತ್ತಾ, ಅದೇ ದೊಡ್ಡಸ್ತಿಕೆ ಎಂದುಕೊಳ್ಳುವ ಎಲ್ಲರೂ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ನೆಲದ ಭಾಷೆಯನ್ನು ಜನರಿಗೆ ಸದ್ದಿಲ್ಲದೆ ತಲುಪಿಸುವಂತೆ ದಿನವೂ ತನ್ನ ಕಾಯಕದ ಮಧ್ಯೆಯೂ ಹಳೆಯ, ಸದಭಿರುಚಿಯ ಕನ್ನಡದ ಹಾಡುಗಳೊಂದಿಗೆ ಬರುವ ದೇವರಾಜ್ ಮತ್ತು ಅವರ ಕಸದ ವಾಹನವನ್ನು ಈಗ ಪರಮಾಪ್ತತೆಯಿಂದ ಕಾಯುವೆ. ಪ್ರತಿಯೊಬ್ಬರೂ ತಮ್ಮ ದಿನ ನಿತ್ಯದ ಕಾಯಕದಲ್ಲಿ ಕನ್ನಡವನ್ನು ಹೀಗೆ ಕಂಡುಕೊಂಡರೆ ಉಳಿಯುತ್ತದೋ ಇಲ್ಲವೋ ಎನ್ನುವ ಪ್ರಶ್ನೆಯೇ ಇರುವುದಿಲ್ಲ ಅಲ್ಲವೇ?

ಗುಂಡಣ್ಣ

ಪದಬಂಧ 6141

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

4.ದಾರಿ ತೋರುವವನು ಇಲ್ಲಿದ್ದಾನೆ (5)
5.ಸರಾಗವಾಗಿ ಸಾಗುತ್ತಿರುವ ಗಂಡಾನೆ (3)
6.ವರಿಷ್ಠರ ಮಗಳನ್ನು ಮದುವೆಯಾಗು! (3)
8.ಮನೋಗತದಲ್ಲಿರುವ ಓಟು (2)
11.ಲೋಲುಪನಲ್ಲಿರುವ ಕುಂದು ಗೊತ್ತಾಯಿತೇ? (2)
12.ರಥದ ಚಕ್ರ (3)
13.ಹಣಿಗೆಗಾಗಿ ಬೆಳೆದಿರುವ ದ್ವೇಷ (2)
14.ಸುಗಮವಾಗಿ ಕಿತ್ತಿರುವ ಹೂವು (2)
16.ಕನ್ನ ಹಾಕಿ ಕದ್ದಿರುವ ಚಿನ್ನ ಇಲ್ಲದೆ (3)
19.ನಮ್ಮ ನಾಡ ಹಬ್ಬ (3)
20.ಈತ ಲಗ್ನವಾಗುತ್ತಿರುವವನು (5)

ಮೇಲಿಂದ ಕೆಳಕ್ಕೆ

1.ಕೊನೆಗೆ ಮಗ ತಿರುಗಿದಾಗ ಸೇರುವಿಕೆ (4)
2.ಅಂದವಾಗಿ ಕಾಣುತ್ತಿರುವ ಮೇನೆ (3)
3.ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ (3)
5.ಜೊತೆಯಲ್ಲಿ ಆಲೋಚಿಸುವವನು (5)
7.ಈತ ಕೊಳ್ಳೆ ಹೊಡೆಯುವವನು (5)
9.ಅರಳೆ ಹಿಡಿದಿರುವ ಬಾಲೆ (3)
10.ಸ್ತ್ರೀ ಇಲ್ಲಿದ್ದಾಳೆ (3)
15.ಕೊಬ್ಬಿದ ಆನೆಯಿದು (4)
17.ಆಳವಾದ ಪ್ರಪಾತ (3)
18.ಸೆಕೆಯಿದ್ದಾಗ ಚರ್ಮಗ್ರಂಥಿಗಳಿಂದ ಹೊರಹೊಮ್ಮುವ ದ್ರವ (3)

6140ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧೋಮುಖ 3.ಕಷಾಯ 5.ಗರ್ಭಿಣಿ 7.ಒಸಡು 8.ಸಮೂಹಗಾನ 11.ಗಲಾಟೆ 12.ಬತೇರಿ 5.ಪರೋಕ್ಷ 16.ಆಜುಬಾಜು

ಮೇಲಿಂದ ಕೆಳಕ್ಕೆ:
1.ಅಭ್ಯಂಗ 2.ಖರೆ 3.ಕರಡು 4.ಯಮಶಿಕ್ಷೆ 6.ಣೆರಸ 7.ಒಣಹರಟೆ 9.ನವಾಬ 10.ಅನುಲೇಪ 11.ಗವಾಕ್ಷ 13.ರಿವಾಜು 14.ತೇಲಿ

ಸುಡೊಕು 6525

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9		5		8		4		
	8		7		5		1	9
7		1		6		2		
							3	2
3	6		5		7	8	9	
		8					4	7
		7		5		1		3
5	1		9		8		2	4
2		3					8	

6524 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಆಗಸ್ಟ್ 2025 ಗುರುವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣತ್ರಯೋದಶಿ ಗಂ. 12-45 **ನಕ್ಷತ್ರ:** ಪುಷ್ಯ ಗಂ. 24-09 **ಯೋಗ:** ವ್ಯತೀಪಾತ ಗಂ. 16-14 **ಕರಣ:** ವಣಿಜ ಗಂ. 12-45 ಸಿಂಹ ಮಾಸದ 04 ನೇ ದಿನ. **ಮಳೆ ನಕ್ಷತ್ರ :** ಮಘಾ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 01-30 03-00 **ಸೂರ್ಯೋದಯ :** 06-22 **ಸೂರ್ಯಾಸ್ತ :** 06-45 **ಮುಸ್ಲಿಂ ದಿನಾಂಕ :** 26 ಸಫರ್ **ಅದೃಷ್ಟ ಸಂಖ್ಯೆ :** 9, 11

ಮೇಷ: ನಿಮ್ಮ ಕೆಲಸಗಳೆಲ್ಲ ಬಿರುಸಿನಿಂದ ಸಾಗಲಿದೆ ಮತ್ತು ಮುಕ್ತಾಯದ ಹಂತ ತಲುಪುವುದು. ನಿಮ್ಮ ಜೀವನದಲ್ಲಿ ಹೊಸದೊಂದು ಅಧ್ಯಾಯ ಆರಂಭ ಮಾಡುವ ಬಗ್ಗೆ ಗಮನಹರಿಸಿ. ಆಲಸ್ಯ ದೂರಮಾಡಿ, ಶುಭವಾಗುತ್ತದೆ.

ವೃಷಭ: ತಾಯಿಯವರ ಆರೋಗ್ಯದಲ್ಲಿ ಉತ್ತಮ ಸುಧಾರಣೆ ಕಾಣಬಹುದು. ಮಗನಿಗೆ ಹೆಚ್ಚಿನ ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಕುಟುಂಬಕ್ಕೆ ಸಂತಸ. ಜಮೀನು ಖರೀದಿ, ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನ ಹೆಚ್ಚಳ.

ಮಿಥುನ: ಹಿರಿಯರ ಜೊತೆಗಿನ ಅನಾವಶ್ಯಕ ವಿವಾದ ನಿಮ್ಮ ಏಳಿಗೆಯನ್ನು ಕುಂಠಿತಗೊಳಿಸುತ್ತದೆ. ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆ. ಕಾರ್ಮಿಕರಲ್ಲಿ ಭಿನ್ನಾಭಿಪ್ರಾಯ ಬಾರದಂತೆ ಎಚ್ಚರವಹಿಸಿ.

ಕರ್ಕಾಟಕ: ಷೇರು ಖರೀದಿ ಅಥವಾ ನಿವೇಶನಗಳಿಗೆ ಮುಂಗಡ ಪಾವತಿ ಮಾಡುವ ಮುನ್ನ ಹತ್ತು ಬಾರಿ ಆಲೋಚಿಸಿ, ನಂತರ ತೀರ್ಮಾನಕ್ಕೆ ಬನ್ನಿ. ರೈತಾಪಿ ವರ್ಗದವರಿಗೆ ವೃತ್ತಿಯಲ್ಲಿನ ಕ್ರಿಯಾಶೀಲತೆ ಶುಭದಾಯಕವಾಗುತ್ತದೆ.

ಸಿಂಹ: ಕಟ್ಟಡ ಕಾರ್ಮಿಕರಿಗೆ ಹೆಚ್ಚಿನ ಸಂಪಾದನೆಯ ಜೊತೆಯಲ್ಲಿ ಉಡುಗೊರೆ ಸಿಗುವ ಯೋಗ ಇರುವುದು. ಕರಕುಶಲ ವಸ್ತುಗಳ ತಯಾರಕರು ತಮ್ಮ ಉತ್ತಮವಾದ ಕೆಲಸಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳುವರು.

ಕನ್ಯಾ: ಯಂತ್ರೋಪಕರಣಗಳ ಮಾರಾಟಗಾರರಿಗೆ ಲಾಭವುಂಟಾಗುವುದು. ಆತುರದ ಸ್ವಭಾವವನ್ನು ಕೊಂಚ ಸರಿಪಡಿಸಿಕೊಂಡು ಮತ್ತೊಬ್ಬರ ಭಾವನೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿದು ಪ್ರತಿಕ್ರಿಯಿಸಿರಿ.

ತುಲಾ: ಆಫೀಸಿನ ಕೆಲಸಗಳು ಸುಗಮವಾಗಿ ನೆರವೇರಲಿದೆ. ಸ್ನೇಹಿತರೊಬ್ಬರ ನೆರವಿಗೆ ನಿಲ್ಲಲೇ ಬೇಕಾದ ಪರಿಸ್ಥಿತಿ ಎದುರಾಗಲಿದೆ. ಸಂತಸದಲ್ಲಿ ದಿನ ಕಳೆಯುವಿರಿ. ತಾಂತ್ರಿಕ ವಿದ್ಯಾರ್ಥಿಗಳಿಗೆ ಸರ್ವತೋಮುಖ ಅಭಿವೃದ್ಧಿ ಆಗಲಿದೆ.

ವೃಶ್ಚಿಕ: ನೀವು ಸ್ವಪ್ರೇರಣೆಯಿಂದ ದೊಡ್ಡ ಸಾಧನೆಗಳನ್ನು ಮಾಡುವಿರಿ. ನಿಮ್ಮ ತೀವ್ರ ಪ್ರತಿಸ್ಪರ್ಧಿಯನ್ನು ಭೇಟಿ ಮಾಡುವ ಅವಕಾಶ ಬರಲಿದೆ. ಶ್ರೀ ಆಂಜನೇಯ ಸ್ವಾಮಿಯ ದರ್ಶನವು ಮನಸ್ಸಿಗೆ ಧೈರ್ಯವನ್ನು ತರುವುದು.

ಧನು: ಈ ದಿನ ನೀವು ಮಾಡುವ ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗುವುದು. ಹೀಗಾಗಿ ಯಾವುದೇ ಹೊಸ ನಿರ್ಧಾರ ತೆಗೆದುಕೊಳ್ಳಬೇಡಿ. ಶುಭ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು.

ಮಕರ: ನಿಮ್ಮ ಅಚ್ಚುಕಟ್ಟಾದ ಕೆಲಸಗಳಿಂದ ಅಧಿಕಾರಿ ವರ್ಗದವರಲ್ಲಿ ನಿಮ್ಮ ಮೇಲಿನ ವಿಶ್ವಾಸವನ್ನು ಇಮ್ಮಡಿಗೊಳಿಸಿಕೊಳ್ಳುವಿರಿ. ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚಿನ ಲಾಭವನ್ನು ಹೊಂದುವಿರಿ.

ಕುಂಭ: ಕೆಲಸಗಳು ಎಷ್ಟು ಕಷ್ಟವಾದರೂ ನೀವೆಂದೂ ಸೋಲುವುದಿಲ್ಲ. ವೈದ್ಯಕೀಯ ವಿದ್ಯಾರ್ಥಿಗಳು ಅಧಿಕ ಪರಿಶ್ರಮ ಪಡಬೇಕಾಗುವುದು. ಏಜೆನ್ಸಿಯಂತಹ ಉದ್ಯೋಗ ಪ್ರಾರಂಭಿಸುವ ಬಗ್ಗೆ ಯೋಚಿಸಬಹುದು.

ಮೀನ: ಸ್ಟೇಷನರಿ ಹೋಲ್‌ಸೇಲ್ ವ್ಯಾಪಾರಿಗಳು ವ್ಯಾಪಾರ ವಿಸ್ತರಿಸುವ ಬಗ್ಗೆ ಮಾತುಕತೆ ನಡೆಸಿ. ವೃತ್ತಿಯಲ್ಲಿ ಬದಲಾವಣೆ ಮಾಡುವವರು ಲಕ್ಷ್ಮೀ ಸಮೇತನಾದ ಶ್ರೀನಿವಾಸ ದೇವರ ಸೇವೆ ಮಾಡಿದರೆ ಶುಭವಾಗುವುದು.

ಅಡಿಕೆ ಧಾರಣೆ

ಕುಮಟಾ		ಸಿದ್ದಾಪುರ		ಶಿವಮೊಗ್ಗ	
				ತಟ್ಟಬೆಟ್ಟ	28319-38699
ಚಾಲಿ	38029-43098	ಬಿಳೀಗೋಟು	24299-31100		
ಚಿಪ್ಪು	26569-31899	ಚಾಲಿ	35509-42099	ಬೆಟ್ಟೆ	56009-65209
ಕೋಕ	7089-27399	ಕೋಕ	16900-27109	ಗೊರಬಲು	16289-38899
ಫ್ಯಾಕ್ಟರಿ	4029-31429	ಕೆಂಪುಗೋಟು	19600-23400	ರಾಶಿ	48258-61099
ಹೊಸಚಾಲಿ	36029-43199	ರಾಶಿ	43099-50199	ಸರಕು	55200-96896

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,980
ಇಂದಿನ ಅಂತ್ಯ:	25,050
ದಿನದ ಗರಿಷ್ಠ:	25,088
	69

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹540
	12 ಕ್ಕೆ	₹72
ಮೈಸೂರು:	100 ಕ್ಕೆ	₹548

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹342-615
ದ್ವಿತಳಿ (ಬಿ.ವಿ)	₹271-831

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹186
ಗುಡ್ ಲಾಟ್	₹170

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹26800-26800
ಬೆಂಗಳೂರು	₹28000-30000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1380 (1380)
ಸೋಯಾ (ರಿಫೈನ್ಡ್)	₹1290 (1285)
ಸೂರ್ಯಕಾಂತಿ (ರಿಫೈನ್ಡ್)	₹1415 (1410)
ಪಾಮೋಲಿನ್	₹1280 (1285)

ಆನ್‌ಲೈನ್ ಗೇಮ್ ನಿಷೇಧ ಮಸೂದೆ ಅಂಗೀಕಾರ

ಲೋಕಸಭೆ: ಎಸ್‌ಐಆರ್ ಚರ್ಚೆಗೆ ವಿಪಕ್ಷಗಳ ಪಟ್ಟು: ಧ್ವನಿಮತದಿಂದ ಒಪ್ಪಿಗೆ

ನವದೆಹಲಿ/ಮುಂಬೈ (ಎಎಫ್‌ಪಿ/ಪಿಟಿಐ): ಹಣ ಕಟ್ಟಿ ಆಡಲಾಗುವ ಆನ್‌ಲೈನ್ ಗೇಮ್‌ಗಳನ್ನು ನಿಷೇಧಿಸುವ ಮಸೂದೆಯನ್ನು ಲೋಕಸಭೆಯಲ್ಲಿ ಬುಧವಾರ ಅಂಗೀಕರಿಸಲಾಯಿತು.

ಆನ್‌ಲೈನ್ ಗೇಮ್ ಆಡುವುದನ್ನು ವ್ಯಸನವನ್ನಾಗಿ ಮಾಡಿಕೊಳ್ಳುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳ ಮೂಲಕ ಹಣ ಅಕ್ರಮ ವರ್ಗಾವಣೆ ಹಾಗೂ ಹಣಕಾಸು ವಂಚನೆ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಕೇಂದ್ರ ಸರ್ಕಾರ ಈ ಮಸೂದೆ ಸಿದ್ಧಪಡಿಸಿದೆ.

ಮಧ್ಯಾಹ್ನ ಕಲಾಪ ಆರಂಭಗೊಂಡಾಗ, ಬಿಹಾರದಲ್ಲಿ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಕುರಿತು ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷಗಳ ಸದಸ್ಯರು ಬೇಡಿಕೆ ಮುಂದಿಟ್ಟರು.

ಸ್ಪೀಕರ್ ಇದಕ್ಕೆ ಅವಕಾಶ ನೀಡದಿದ್ದಾಗ, ವಿಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಆರಂಭಿಸಿದರು. ವಿಪಕ್ಷಗಳ ಸದಸ್ಯರು ಪ್ರತಿಭಟನೆ ಆರಂಭಿಸಿದಾಗ, ಧ್ವನಿಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ನಂತರ, ದಿನದಮಟ್ಟಿಗೆ ಸದನವನ್ನು ಮುಂದೂಡಲಾಯಿತು.

‘ಕಳವಳಕಾರಿ ಸಂಗತಿ’: ‘ಆನ್‌ಲೈನ್ ಗೇಮಿಂಗ್ (ಉತ್ತೇಜನ ಮತ್ತು ನಿಯಂತ್ರಣ) ಮಸೂದೆ,2025’ ಅನ್ನು ಮಂಡಿಸಿ ಮಾತನಾಡಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಮಸೂದೆಯಲ್ಲಿನ ಅವಕಾಶಗಳ ಕುರಿತು ಸದನಕ್ಕೆ ಸಂಕ್ಷಿಪ್ತ ಮಾಹಿತಿ ನೀಡಿದರು.

‘ಹಣ ಬಳಸಿ ಆನ್‌ಲೈನ್ ಗೇಮ್‌ಗಳನ್ನು ಆಡುವುದು ಹೆಚ್ಚುತ್ತಿದ್ದು, ಇದು ಕಳವಳಕಾರಿ ಸಂಗತಿ. ಈ ಗೇಮ್‌ಗಳನ್ನು ಆಡುವುದು ಒಂದು ವ್ಯಸನವಾಗುತ್ತಿದೆ. ವಂಚನೆಗೂ ಈ ವೇದಿಕೆಗಳನ್ನು ಬಳಸಲಾಗುತ್ತಿದೆ’ ಎಂದು ಹೇಳಿದರು. ಆಗ, ವಿಪಕ್ಷಗಳ ಸದಸ್ಯರು ತಮ್ಮ ಬೇಡಿಕೆ ಮುಂದಿಟ್ಟುಕೊಂಡು ಪ್ರತಿಭಟಿಸಲು ಆರಂಭಿಸಿದರು.

‘ಆನ್‌ಲೈನ್ ಗೇಮ್‌ಗಳು ನೂರಾರು ಕುಟುಂಬಗಳ ನಾಶಕ್ಕೆ ಕಾರಣವಾಗಿವೆ. ಯುವ ಜನತೆಯ ಭವಿಷ್ಯವನ್ನು ಹಾಳುಮಾಡಿವೆ. ಹೀಗಾಗಿ, ಮಸೂದೆ ಕುರಿತ ಚರ್ಚೆಯಲ್ಲಿ ಪಾಲ್ಗೊಳ್ಳಬೇಕು’ ಎಂದು ವಿಪಕ್ಷಗಳ ಸದಸ್ಯರಿಗೆ ಸ್ಪೀಕರ್ ಓಂ ಬಿರ್ಲಾ ಮನವಿ ಮಾಡಿದರು.

ವಿರೋಧ ಪಕ್ಷಗಳ ಸಂಸದರು ಪ್ರತಿಭಟನೆ ಮುಂದುವರಿಸಿ, ಘೋಷಣೆಗಳನ್ನು ಕೂಗಿದರು. ಆಗ, ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಿ, ಸದನವನ್ನು ಮುಂದೂಡಲಾಯಿತು.

ಲೋಕಸಭೆಯಲ್ಲಿ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿದರು ಪಿಟಿಐ ಚಿತ್ರ

‘ಜನರಿಗೆ ₹20 ಸಾವಿರ ಕೋಟಿ ನಷ್ಟ’

ನವದೆಹಲಿ (ಪಿಟಿಐ): ಆನ್‌ಲೈನ್‌ನಲ್ಲಿ ಹಣವನ್ನು ಪಣಕ್ಕೆ ಇಟ್ಟು ಆಡುವ ಆಟಗಳಲ್ಲಿ ಪ್ರತಿವರ್ಷ ಅಂದಾಜು 45 ಕೋಟಿ ಜನರು ₹20 ಸಾವಿರ ಕೋಟಿಯಷ್ಟು ಹಣ ಕಳೆದುಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ಅಂದಾಜು ಮಾಡಿದೆ.

ಹಣವನ್ನು ತೊಡಗಿಸಿ ಆಡುವ ಆನ್‌ಲೈನ್ ಆಟಗಳು ಸಮಾಜಕ್ಕೆ ದೊಡ್ಡ ಸಮಸ್ಯೆಯಾಗಿ ಬೆಳೆದಿವೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಹೀಗಾಗಿ ಅದು ಈ ಆಟಗಳಿಂದ ಬರುವ ವರಮಾನವನ್ನು ಬಿಟ್ಟುಕೊಟ್ಟು, ಜನರ ಒಳಿತನ್ನು ತನ್ನ ಆದ್ಯತೆಯನ್ನಾಗಿಸಿಕೊಂಡಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಣವನ್ನು ತೊಡಗಿಸಿ ಆನ್‌ಲೈನ್ ಮೂಲಕ ಆಡುವ ಆಟಗಳನ್ನು ನಿಷೇಧಿಸುವ ಮಸೂದೆಯನ್ನು ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದೆ.

ಹಣವನ್ನು ಕಟ್ಟಿ ಆಡಬೇಕಿರುವ ಕೆಲವು ಆನ್‌ಲೈನ್ ಆಟಗಳನ್ನು ತಮ್ಮನ್ನು ‘ಕೌಶಲ ಆಧರಿಸಿದ ಆಟ’ ಎಂಬುದಾಗಿ ಬಿಂಬಿಸಲಾಗುತ್ತಿದೆ. ಆದರೆ ಅವುಗಳನ್ನು ಜೂಜು ಹಾಗೂ ಬೆಟ್ಟಿಂಗ್ ವ್ಯಾಪ್ತಿಯಿಂದ ಹೊರಗೆ ಇರಿಸಲು ಹೀಗೆ ಮಾಡುತ್ತಿವೆ. ಇಂತಹ ಆಟಗಳನ್ನು ಆಡುವವರು ಸಂತ್ರಸ್ತರು, ಅವರಿಗೆ ಹೊಸ ಮಸೂದೆಯು ಶಿಕ್ಷೆಯನ್ನು ನಿಗದಿ ಮಾಡುವುದಿಲ್ಲ. ಆದರೆ, ಇಂತಹ ಆಟಗಳಿಗೆ ವೇದಿಕೆ ಒದಗಿಸಿಕೊಡುವವರಿಗೆ ಹಾಗೂ ಹಣದ ವಹಿವಾಟಿನ ಸೇವೆಗಳನ್ನು ಒದಗಿಸಿಕೊಡುವವರ ವಿರುದ್ಧ ಕ್ರಮ ಆಗುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಆನ್‌ಲೈನ್ ಗೇಮಿಂಗ್ ಉದ್ಯಮಕ್ಕೆ ಪೆಟ್ಟು’

ಆನ್‌ಲೈನ್ ಗೇಮ್ ನಿಷೇಧಿಸುವ ಮಸೂದೆಯನ್ನು ಲೋಕಸಭೆಯು ಅಂಗೀಕರಿಸಿದ್ದು, ಇದು ಕೋಟ್ಯಂತರ ರೂಪಾಯಿ ವಹಿವಾಟು ಒಳಗೊಂಡ ಆನ್‌ಲೈನ್ ಗೇಮಿಂಗ್ ಉದ್ಯಮಕ್ಕೆ ಅಪಾಯ ತಂದೊಡ್ಡಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆನ್‌ಲೈನ್ ಪೋಕರ್ ವೇದಿಕೆಗಳು, ಮನರಂಜನೆ ಉದ್ದೇಶದಿಂದ ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ ಕ್ರಿಕೆಟ್ ಆಟಕ್ಕೆ ಸಂಬಂಧಿಸಿದ ಆ್ಯಪ್‌ಗಳು ಹಾಗೂ ಐಪಿಎಲ್ ಪ್ರಾಯೋಜಕತ್ವ ಹೊಂದಿರುವ ಆ್ಯಪ್‌ಗಳು ಇವೆ. ಈ ಆ್ಯಪ್‌ಗಳ ಮೂಲಕ ನಡೆಯುವ ವ್ಯವಹಾರದ ಮೇಲೆ ಪರಿಣಾಮ ಉಂಟಾಗಲಿದೆ ಎನ್ನಲಾಗುತ್ತಿದೆ. ಈ ಉದ್ಯಮದಲ್ಲಿ ತೊಡಗಿರುವ ಸಂಸ್ಥೆಗಳು ಮಸೂದೆಗೆ ವಿರೋಧ ವ್ಯಕ್ತಪಡಿಸಿವೆ.

‘ಭಾರತ ಮೂಲದ ಈ ಆನ್‌ಲೈನ್ ಗೇಮಿಂಗ್ ವೇದಿಕೆಗಳನ್ನು ನಿಷೇಧಿಸಿದಲ್ಲಿ, ಆನ್‌ಲೈನ್ ಗೇಮ್ ಆಡುವ ಕೋಟ್ಯಂತರ ಜನರು ವಿದೇಶಗಳ ಜೂಜಾಟದ ವೆಬ್‌ಸೈಟ್ ಹಾಗೂ ಅನಿಯಂತ್ರಿತ ವೇದಿಕೆಗಳತ್ತ ಆಕರ್ಷಿತರಾಗುವ ಅಪಾಯ ಇದೆ’ ಎಂದು ಅಖಿಲ ಭಾರತ ಗೇಮಿಂಗ್ ಒಕ್ಕೂಟ ಮತ್ತು ಭಾರತೀಯ ಮನರಂಜನಾ ಕ್ರೀಡೆಗಳ ಮಹಾಒಕ್ಕೂಟ ಹೇಳಿದೆ.

ಮಸೂದೆಯ ಪ್ರಮುಖ ಅಂಶಗಳು

- ಆನ್‌ಲೈನ್ ಬೆಟ್ಟಿಂಗ್‌ನಂತಹ ಚಟುವಟಿಕೆಗಳನ್ನು ನಿಷೇಧಿಸುವುದು, ಅವುಗಳ ಕಾರ್ಯಾಚರಣೆ, ಉತ್ತೇಜಿಸುವುದು ಹಾಗೂ ಜಾಹೀರಾತು ಪ್ರಕಟಿಸುವುದನ್ನು ನಿಷೇಧಿಸುವ ಅವಕಾಶಗಳನ್ನು ಮಸೂದೆ ಒಳಗೊಂಡಿದೆ
- ಮನರಂಜನಾ ಕ್ರೀಡೆಗಳಿಂದ ಹಿಡಿದು ಆನ್‌ಲೈನ್ ಜೂಜಾಟ (ಪೋಕರ್, ರಮ್ಮಿ ಮತ್ತು ಇಸ್ಪೀಟ್ ಕಾರ್ಡ್‌ಗಳನ್ನು ಒಳಗೊಂಡ ಆಟಗಳು) ಹಾಗೂ ಆನ್‌ಲೈನ್ ಲಾಟರಿಗಳನ್ನು ನಿಷೇಧಿಸುವ ಅವಕಾಶಗಳಿವೆ
- ಹಣ ಕಟ್ಟಿ ಆಡುವ ಆಟಗಳ ಕುರಿತು ಜಾಹೀರಾತು ಪ್ರಕಟಿಸಿದಲ್ಲಿ, 2 ವರ್ಷಗಳವರೆಗೆ ಜೈಲು ಮತ್ತು ₹50 ಲಕ್ಷ ವರೆಗೆ ದಂಡ ಅಥವಾ ಎರಡೂ ಶಿಕ್ಷೆ ವಿಧಿಸಲು ಅವಕಾಶ ಇದೆ
- ಆನ್‌ಲೈನ್ ಗೇಮ್ ಆಡುವುದಕ್ಕೆ ಅವಕಾಶ ನೀಡುವವರಿಗೆ/ಪ್ರೋತ್ಸಾಹ ನೀಡುವವರಿಗೆ ಗರಿಷ್ಠ 3 ವರ್ಷ ಜೈಲುಶಿಕ್ಷೆ ಅಥವಾ ₹1 ಕೋಟಿ ವರೆಗೆ ದಂಡ ಇಲ್ಲವೇ ಎರಡನ್ನೂ ವಿಧಿಸಬಹುದಾಗಿದೆ
- ಅಪರಾಧಗಳ ಪುನರಾವರ್ತನೆ ಕಂಡುಬಂದಲ್ಲಿ 3ರಿಂದ 5 ವರ್ಷ ಜೈಲು ಮತ್ತು ₹2 ಕೋಟಿ ವರೆಗೆ ದಂಡ ವಿಧಿಸಬಹುದಾಗಿದೆ

ಚಿಟಿಕೆ ಸುದ್ದಿ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ಐ.ಟಿ, ಎಫ್‌ಎಂಸಿಜಿ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 213 ಅಂಶ ಹೆಚ್ಚಳವಾಗಿ, 81,857ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 68 ಅಂಶ ಏರಿಕೆಯಾಗಿ, 25,050ಕ್ಕೆ ಕೊನೆಗೊಂಡಿದೆ.

‘ಸದೃಢವಾಗಿರುವ ದೇಶೀ ಹೂಡಿಕೆ ಮತ್ತು ಅನುಕೂಲಕರವಾದ ಮಾರುಕಟ್ಟೆ ಅಂಶಗಳು ಸೂಚ್ಯಂಕಗಳ ಏರಿಕೆಗೆ ನೆರವಾದವು. ಆದರೂ, ಅಮೆರಿಕದ ಸುಂಕ ಹೇರಿಕೆ, ರಷ್ಯಾದ ಕಚ್ಚಾ ತೈಲ ಖರೀದಿ ಮೇಲಿನ ನಿರ್ಬಂಧಗಳು ಸವಾಲಾಗಿವೆ’ ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-1900
ಮಧ್ಯಮ	₹1000-1500
ಸಣ್ಣ	₹500-1000

ಮುಂಬೈ ಧಾರಣೆ (ಶೇಂಗಾ)

20-08-2025	
ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7400-7500
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1278 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1335 (1335)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,900 (98,650)
ಬೆಳ್ಳಿ ಕೆ.ಜಿಗೆ	1,12,500 (1,13,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ದಕ್ಷಿಣ ಆಫ್ರಿಕಾಗೆ ಟಾಟಾ ಮತ್ತೆ ಪ್ರವೇಶ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್, ದಕ್ಷಿಣ ಆಫ್ರಿಕಾದ ಪ್ರಯಾಣಿಕ ವಾಹನ ಮಾರುಕಟ್ಟೆಯನ್ನು ಮತ್ತೆ ಪ್ರವೇಶಿಸಿದೆ.

ಹ್ಯಾರಿಯರ್, ಕರ್ವ್, ಪಂಚ್ ಮತ್ತು ಟಿಯಾಗೊ ಮಾದರಿಯ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂದು ಕಂಪನಿ ಬುಧವಾರ ತಿಳಿಸಿದೆ.

‘ದಕ್ಷಿಣ ಆಫ್ರಿಕಾದ ವಾಹನ ಕಂಪನಿ ಮೋಟಸ್ ಹೋಲ್ಡಿಂಗ್ಸ್ ಪಾಲುದಾರಿಕೆಯೊಂದಿಗೆ ಮಾರುಕಟ್ಟೆಗೆ ಮತ್ತೆ ಪ್ರವೇಶಿಸಿದ್ದೇವೆ. ಈ ಮರುಪ್ರವೇಶ ಕಂಪನಿಯ ಜಾಗತಿಕ ಮಾರುಕಟ್ಟೆ ವಿಸ್ತರಣೆಗೆ ಮಹತ್ವದ ಮೈಲಿಗಲ್ಲಾಗಿದೆ’ ಎಂದು ಟಾಟಾ ಮೋಟರ್ಸ್ ಪ್ರಯಾಣಿಕ ವಾಹನದ (ಟಿಎಂಪಿವಿ) ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಹೇಳಿದ್ದಾರೆ.

ಪ್ರಸ್ತುತ ಟಿಎಂಪಿವಿ ರಾಷ್ಟ್ರವ್ಯಾಪಿ 40 ಡೀಲರ್‌ಶಿಪ್‌ಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿದ್ದು, 2026ರ ವೇಳೆಗೆ ಇದನ್ನು 60ಕ್ಕೆ ಹೆಚ್ಚಿಸಲು ನಿರ್ಧರಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಬೆಂಗಳೂರಿನಲ್ಲಿ ಆಫೀಸ್ ಅಟೆಂಡರ್‌ಗಳು / ಪ್ಯೂನ್‌ಗಳು, ಎಲೆಕ್ಟ್ರಿಷಿಯನ್‌ಗಳು, ಪ್ಲಂಬರ್‌ಗಳು ಮತ್ತು ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ: 8277193108.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, TVS, ಹಿಮಾಲಯ ಬ್ರಿಟಾನಿಯಾಗಳಿಗೆ SSLC, PUC, DegreeITI Degree, Diploma ಆದವರು 18K/86K (ವಿದ್ಯಾರ್ಹತೆಯಿಲ್ಲದವರಿಗೂ ವಸತಿಯೂಟವಿದೆ) 8317415401/ 7625020184

ಕರ್ನಾಟಕದಾದ್ಯಂತ ಕಂಪನಿಗಳಿಗೆ work from Home ಕೆಲಸಕ್ಕೆ ಯುವಕ & ಯುವತಿಯರು ಬೇಕಾಗಿದ್ದಾರೆ. (17,900-25,000) 7th,10th, Any Degree. Ph:9019427194

ಕರ್ನಾಟಕದಾದ್ಯಂತ ಫುಲ್ ಟೈಮ್, ಪಾರ್ಟ್ ಟೈಮ್ Work from Home ಕೆಲಸಕ್ಕೆ ವಿದ್ಯಾರ್ಥಿಗಳಿಗೆ, ವಯಸ್ಕರಿಗೂ, ವಿದ್ಯಾರ್ಹತೆಯಿಲ್ಲದವರೂ 18000/- 25000/-. Ph:6364595602

ಪ್ರವಾಸ

Travel

ಚಾರ್‌ಧಾಮ್ ಯಾತ್ರೆ 14 ದಿನಗಳು. ಕಾಶಿ,ಕಲ್ಕತ್ತಾ ಭುವನೇಶ್ವರ್‌ಯಾತ್ರ 10 ದಿನಗಳು. ಸಂಪರ್ಕಿಸಿ ವಿಜಯ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.3 9448294477 9845311899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮೂಲಸೌಕರ್ಯ ವಲಯ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಜುಲೈ ತಿಂಗಳಿನಲ್ಲಿ ಎರಡು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

ಜೂನ್‌ನಲ್ಲಿ ವಲಯದ ಪ್ರಗತಿ ಶೇ 2.2ರಷ್ಟಿತ್ತು. ಅದು ಜುಲೈನಲ್ಲಿ ಶೇ 2ಕ್ಕೆ ಇಳಿದಿದೆ. ಕಳೆದ ವರ್ಷದ ಇದೇ ತಿಂಗಳಿನಲ್ಲಿ ಇದು ಶೇ 6.3ರಷ್ಟಿತ್ತು ಎಂದು ತಿಳಿಸಿದೆ.

ಕಲ್ಲಿದ್ದಲು, ಕಚ್ಚಾತೈಲ, ನೈಸರ್ಗಿಕ ಅನಿಲ ಮತ್ತು ಸಂಸ್ಕರಿಸಿದ ಉತ್ಪನ್ನಗಳ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದೇ ಬೆಳವಣಿಗೆ ಇಳಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ರಸಗೊಬ್ಬರ, ವಿದ್ಯುತ್ ಉತ್ಪಾದನೆ ಕ್ರಮವಾಗಿ ಶೇ 2 ಮತ್ತು ಶೇ 0.5ರಷ್ಟು ಏರಿಕೆ ಕಂಡಿವೆ. ಆದರೆ, ಕಳೆದ ಇದೇ ಜುಲೈನಲ್ಲಿ ಶೇ 5.3 ಮತ್ತು ಶೇ 7.9ರಷ್ಟು ಏರಿಕೆ ಆಗಿತ್ತು. ಉಕ್ಕು ಮತ್ತು ಸಿಮೆಂಟ್ ಉತ್ಪಾದನೆ ಕ್ರಮವಾಗಿ ಶೇ 12.8 ಮತ್ತು ಶೇ 11.7ರಷ್ಟು ಏರಿಕೆ ಕಂಡಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1st DEATH ANNIVERSARY

M. Sanath Kumar
Rtd. Assistant Commissioner G.S.T. & Customs
DOD: 21-08-2024
Deeply missed always remembered from
M. Krishna Murthy & Family Members

OBITUARY



B.S. SRINIVASA RAO
DOB : 24.10.1943 - DOD: 18.08.2025
Deeply mourned by:
Family & Friends
"Om Shanti"

5ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಬಿ.ಎಂ. ತಿಮ್ಮಶೆಟ್ಟಯ್ಯ
ಮಾಜಿ ಅಧ್ಯಕ್ಷರು,
ಸತ್ಯನಾರಾಯಣ ಹೌಸಿಂಗ್ ಸೊಸೈಟಿ,
ಬಸವೇಶ್ವರನಗರ, ಬೆಂಗಳೂರು
ಜನನ: 2-10-1944 ಮರಣ: 21-8-2020
ಸದಾ ನಿಮ್ಮ ನೆನಪಿನಲ್ಲಿ
ಡಾ॥ ನಾಗರಾಜ್ ಬಿ.ಟಿ, ಡಾ॥ ಪವಿತ್ರ, ಕೆ, ಮತೀಶ್, ಭವ್ಯ, ದಿಯಾ ಹಾಗೂ ಹಿತಾ, ಡಾ. ಕುಶಾಲ್.ಎಂ & ಯಶಸ್ ಎಂ.
ಬಸವೇಶ್ವರನಗರ, ಬೆಂಗಳೂರು

ಲೋಕಸಭೆಯಲ್ಲಿ ಮಸೂದೆ ಕೋಲಾಹಲ

ಒಂದನೇ ಪುಟದಿಂದ...

ಸಂವಿಧಾನ (130ನೇ ತಿದ್ದುಪಡಿ) ಮಸೂದೆ–2025, ಕೇಂದ್ರಾಡಳಿತ ಪ್ರದೇಶ ಸರ್ಕಾರಗಳ (ತಿದ್ದುಪಡಿ) ಮಸೂದೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪುನರ್ ರಚನೆ (ತಿದ್ದುಪಡಿ) ಮಸೂದೆಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಸದನದಲ್ಲಿ ಮಂಡಿಸಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿಪಕ್ಷಗಳ ಸದಸ್ಯರು, ‘ಸರ್ಕಾರವು ತರಾತುರಿಯಿಂದ ಸಂವಿಧಾನ ವಿರೋಧಿ ಮಸೂದೆ ಮಂಡಿಸಿದೆ’ ಎಂದು ಜರೆದರು. ವಿಪಕ್ಷಗಳ ಆರೋಪವನ್ನು ಶಾ ತಳ್ಳಿ ಹಾಕಿದರು. ಈ ಮಸೂದೆಗಳನ್ನು ಪರಿಶೀಲನೆಗೆ ಸಂಸತ್ತಿನ ಜಂಟಿ ಸಮಿತಿಗೆ (ಜೆಪಿಸಿ) ಒಪ್ಪಿಸಲಾಗಿದೆ ಎಂದೂ ಅವರು ತಿಳಿಸಿದರು.

‘ಜೆಪಿಸಿಯಲ್ಲಿ ಲೋಕಸಭೆಯ 21 ಸದಸ್ಯರು ಮತ್ತು ರಾಜ್ಯಸಭೆಯ 10 ಸದಸ್ಯರು ಇರಲಿದ್ದಾರೆ. ಮುಂದಿನ ಅಧಿವೇಶನದ ಮೊದಲ ವಾರದ ಕೊನೆಯ ದಿನದೊಳಗೆ ಸಮಿತಿಯು ತನ್ನ ವರದಿ ಸಲ್ಲಿಸಲಿದೆ’ ಎಂದು ಶಾ ತಿಳಿಸಿದರು. ಸದಸ್ಯರ ಹೆಸರುಗಳನ್ನು ಲೋಕಸಭಾಧ್ಯಕ್ಷ ಓಂಬಿರ್ಲಾ ಶೀಘ್ರ ಅಂತಿಮಗೊಳಿಸಲಿದ್ದಾರೆ. ಸಂಸತ್ತಿನ ಚಳಿಗಾಲದ ಅಧಿವೇಶನ ನವೆಂಬರ್ ಮೂರನೇ ವಾರದಲ್ಲಿ ನಡೆಯುವ ಸಂಭವ ಇದೆ.

ಮಧ್ಯಾಹ್ನ ಎರಡು ಗಂಟೆಗೆ ಮಸೂದೆಗಳನ್ನು ಮಂಡಿಸಿದ ತಕ್ಷಣ ವಿರೋಧ ಪಕ್ಷದ ಸದಸ್ಯರು ಪ್ರತಿಭಟನೆ ಆರಂಭಿಸಿದರು. ಟಿಎಂಸಿ ಸಂಸದರು ಘೋಷಣೆಗಳನ್ನು ಕೂಗುತ್ತಾ ಸಭಾಧ್ಯಕ್ಷರ ಪೀಠದ ಎದುರು ದೌಡಾಯಿಸಿದರು. ಕೆಲವರು ಶಾ ಅವರ ಮುಂದೆ ಮಸೂದೆಗಳ ಪ್ರತಿಗಳನ್ನು ಹರಿದು ಹಾಕಿದರು.

ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ, ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸಂಸದರ ನಡುವೆ ಸ್ವಲ್ಪ ಹೊತ್ತು ಮಾತಿನ ಚಕಮಕಿ ನಡೆಯಿತು. ಟಿಎಂಸಿ ಸಂಸದರೊಬ್ಬರು ಶಾ ಬಳಿ ಕಾಗದಗಳನ್ನು ಎಸೆದು ಮೈಕ್ ಹಿಡಿಯುತ್ತಿದ್ದಂತೆ, ಕೇಂದ್ರ ಸಚಿವರಾದ ಕಿರಣ್ ರಿಜಿಜು ಮತ್ತು ರವನೀತ್ ಸಿಂಗ್ ಬಿಟ್ಟೂ ಗೃಹ ಸಚಿವರತ್ತ ಧಾವಿಸಿದರು ಮತ್ತು ಬಿಜೆಪಿಯ ಇತರ ಸಂಸದರು ಅವರನ್ನು ಹಿಂಬಾಲಿಸಿದರು. ಗದ್ದಲ ಜಾಸ್ತಿಯಾದ ಕಾರಣಕ್ಕೆ ಸದನವನ್ನು ಮೂರು ಗಂಟೆಗೆ ಮುಂದೂಡಲಾಯಿತು. ಆ ನಂತರವೂ, ವಿರೋಧ ಪಕ್ಷದ ಸದಸ್ಯರು ಜೋರಾಗಿ ಘೋಷಣೆಗಳನ್ನು ಕೂಗುತ್ತಲೇ ಇದ್ದರು. ಆಡಳಿತ-ವಿಪಕ್ಷ ಸದಸ್ಯರು ಆರೋಪ ಪ್ರತ್ಯಾರೋಪಗಳನ್ನು ಮಾಡಿದರು. ದಾಳಿ ಮಾಡಿದ್ದಾರೆ ಎಂದು ಎರಡೂ ಕಡೆಯವರು ಹೇಳಿಕೊಂಡರು. ಲೋಕಸಭಾಧ್ಯಕ್ಷರಿಗೆ ಉಭಯ ಬಣದವರು ದೂರುಗಳನ್ನು ಸಲ್ಲಿಸಿದರು.

> ಈ ಮಸೂದೆಗಳು ಸಂವಿಧಾನದ ಮೂಲ ಸ್ವರೂಪವನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ. ಮಸೂದೆಗಳು ಕ್ರಿಮಿನಲ್ ನ್ಯಾಯದ ನ್ಯಾಯಶಾಸ್ತ್ರಕ್ಕೆ ವಿರುದ್ಧವಾಗಿವೆ ಮತ್ತು ಸಂಸದೀಯ ಪ್ರಜಾಪ್ರಭುತ್ವವನ್ನು ವಿರೂಪಗೊಳಿಸುತ್ತವೆ. ಜತೆಗೆ, ರಾಜಕೀಯ ದುರುಪಯೋಗಕ್ಕೆ ಹೆಬ್ಬಾಗಿಲು ತೆರೆಯುತ್ತವೆ.
>
> **ಮನೀಷ್ ತಿವಾರಿ,** ಕಾಂಗ್ರೆಸ್ ಸಂಸದ
>
> ಅನಗತ್ಯ ಆತುರ ತೋರಿ ಈ ಮಸೂದೆಗಳನ್ನು ಪರಿಚಯಿಸಲಾಗುತ್ತಿದೆ. ಸದನದ ಕಾರ್ಯವಿಧಾನಗಳ ಪ್ರಕಾರ ಈ ಮಸೂದೆಗಳನ್ನು ಮಂಡಿಸಿಲ್ಲ. ಮಸೂದೆಗಳ ಪ್ರತಿಗಳನ್ನು ಸದನದ ಸದಸ್ಯರಿಗೆ ಏಳು ದಿನ ಮುಂಚಿತವಾಗಿ ನೀಡಬೇಕಿತ್ತು.
>
> **ಎನ್.ಕೆ.ಪ್ರೇಮಚಂದ್ರನ್,** ಆರ್‌ಎಸ್‌ಪಿ ಸಂಸದ
>
> ಈ ಸರ್ಕಾರ ಪೊಲೀಸ್ ರಾಜ್ಯ ರಚಿಸಲು ಮುಂದಾಗಿದೆ. ಇದು ಚುನಾಯಿತ ಸರ್ಕಾರಕ್ಕೆ ಮರಣದಂಡನೆಯಾಗುತ್ತದೆ. ಕ್ಷುಲ್ಲಕ ಆರೋಪಗಳು ಹಾಗೂ ಅನುಮಾನದ ಆಧಾರದಲ್ಲಿ ಕೇಂದ್ರ ತನಿಖಾ ಸಂಸ್ಥೆಗಳು ನ್ಯಾಯಾಧೀಶರಂತೆ ಕಾರ್ಯನಿರ್ವಹಿಸಲು ಈ ಮಸೂದೆಗಳು ಅನುವು ಮಾಡಿಕೊಡುತ್ತವೆ.
>
> **ಅಸಾದುದ್ದೀನ್ ಓವೈಸಿ,** ಎಐಎಂಐಎಂ ಸಂಸದ

ಆರೋಗ್ಯ, ಜೀವ ವಿಮೆಗೆ ಜಿಎಸ್‌ಟಿ ವಿನಾಯಿತಿ?

ಒಂದನೇ ಪುಟದಿಂದ...

ಕೇಂದ್ರ ಸರ್ಕಾರದ ಪ್ರಸ್ತಾವವು ಸ್ಪಷ್ಟವಾಗಿದೆ. ವ್ಯಕ್ತಿಗಳು ಖರೀದಿಸುವ ವಿಮೆಗಳಿಗೆ ಜಿಎಸ್‌ಟಿ ವಿನಾಯಿತಿ ಇರಬೇಕು ಎಂದು ಅದು ಹೇಳುತ್ತದೆ. ಇದರ ಬಗ್ಗೆ ಚರ್ಚೆ ಆಗಿದೆ. ಸಚಿವರ ಗುಂಪು ತನ್ನ ವರದಿಯನ್ನು ಜಿಎಸ್‌ಟಿ ಮಂಡಳಿಗೆ ಸಲ್ಲಿಸಲಿದೆ. ಅದರಲ್ಲಿ ಕೆಲವು ರಾಜ್ಯಗಳ ಹಣಕಾಸು ಸಚಿವರು ವ್ಯಕ್ತಪಡಿಸಿರುವ ಕಳವಳಗಳೂ ದಾಖಲಾಗಲಿವೆ ಎಂದು ಬಿಹಾರದ ಉಪ ಮುಖ್ಯಮಂತ್ರಿ ಕೂಡ ಆಗಿರುವ ಚೌಧರಿ ತಿಳಿಸಿದ್ದಾರೆ.

ತೆರಿಗೆ ಪ್ರಮಾಣ ಕಡಿಮೆ ಮಾಡಲು ಎಲ್ಲ ಸದಸ್ಯರು ಒಪ್ಪಿದ್ದಾರೆ ಎಂದು ಅವರು ಹೇಳಿದ್ದಾರೆ. ಆರೋಗ್ಯ ಹಾಗೂ ಜೀವ ವಿಮೆಗೆ ಸಂಬಂಧಿಸಿದ ಸಚಿವರ ಗುಂಪನ್ನು ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ರಚಿಸಲಾಗಿದೆ. ಈ ವಿಮೆಗಳಿಗೆ ಎಷ್ಟು ತೆರಿಗೆ ನಿಗದಿ ಮಾಡಬೇಕು ಎಂಬ ಬಗ್ಗೆ ಈ ಗುಂಪು ಸಲಹೆ ನೀಡಬೇಕಿದೆ.

ರಷ್ಯಾದ ತೈಲ ಖರೀದಿ ಪುನರಾರಂಭ

ನವದೆಹಲಿ (ರಾಯಿಟರ್ಸ್): ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳಾದ ಇಂಡಿಯನ್ ಆಯಿಲ್ ಮತ್ತು ಭಾರತ್ ಪೆಟ್ರೋಲಿಯಂ ಪುನರಾರಂಭಿಸಿವೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ಗೆ ಪೂರೈಕೆ ಆಗುವ ಕಚ್ಚಾ ತೈಲವನ್ನು ಈ ಕಂಪನಿಗಳು ಖರೀದಿಸಿವೆ ಎಂದು ಮೂಲಗಳು ಹೇಳಿವೆ.

ಕಚ್ಚಾ ತೈಲದ ಮೇಲಿನ ರಿಯಾಯಿತಿ ಕಡಿಮೆ ಆಗಿದ್ದರಿಂದಾಗಿ ಹಾಗೂ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಅಮೆರಿಕವು ಟೀಕಿಸಿದ ನಂತರದಲ್ಲಿ ಜುಲೈನಲ್ಲಿ ಕಂಪನಿಗಳು ಈ ಕಚ್ಚಾ ತೈಲ ಖರೀದಿಸಿರಲಿಲ್ಲ. ಈಗ ರಿಯಾಯಿತಿಯು ತುಸು ಹೆಚ್ಚಾಗಿದೆ.

ರಷ್ಯಾದ ಉರಲ್ ಕಚ್ಚಾ ತೈಲಕ್ಕೆ ಪ್ರತಿ ಬ್ಯಾರೆಲ್‌ಗೆ ಸಿಗುವ ರಿಯಾಯಿತಿಯು ಈಗ 3 ಡಾಲರ್‌ಗೆ ಹೆಚ್ಚಿದೆ. ಹೀಗಾಗಿ, ಈ ಬೆಲೆಯು ಭಾರತದ ತೈಲ ಸಂಸ್ಕರಣಾ ಕಂಪನಿಗಳಿಗೆ ಆಕರ್ಷಕವಾಗಿ ಕಾಣುತ್ತಿದೆ. ಚೀನಾ ಕೂಡ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಹೆಚ್ಚು ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಉರಲ್ ಮಾತ್ರವೇ ಅಲ್ಲದೆ ಇಂಡಿಯನ್ ಆಯಿಲ್ ಕಂಪನಿಯು ರಷ್ಯಾದಿಂದ ಇತರ ಕೆಲವು ದರ್ಜೆಯ ಕಚ್ಚಾ ತೈಲವನ್ನೂ ಖರೀದಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಣಕಾಸಿನ ಲೆಕ್ಕಾಚಾರ ಆಧರಿಸಿ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಮುಂದುವರಿಸಲಾಗುತ್ತದೆ ಎಂದು ಇಂಡಿಯನ್ ಆಯಿಲ್ ಕಂಪನಿಯು ಮಾರುಕಟ್ಟೆ ವಿಶ್ಲೇಷಕರಿಗೆ ಹೇಳಿದೆ.

ಪದವಿ ವಿದ್ಯಾರ್ಥಿನಿ ವರ್ಷಿತಾ ಕೊಲೆ ಖಂಡಿಸಿ ವಿವಿಧ ಸಂಘಟನೆಗಳ ಸದಸ್ಯರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು

ವಿದ್ಯಾರ್ಥಿನಿಯ ಕೊಲೆ; ಆರೋಪಿ ಬಂಧನ

ಒಂದನೇ ಪುಟದಿಂದ...

‘ಹೆದ್ದಾರಿಯಲ್ಲಿ ತೆರಳುತ್ತಿದ್ದ ಪ್ರಯಾಣಿಕರೊಬ್ಬರು ವಾಹನ ನಿಲ್ಲಿಸಿ ಮೂತ್ರ ವಿಸರ್ಜನೆಗೆ ತೆರಳಿದ್ದಾಗ ಮೃತದೇಹ ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರ ಹೆಚ್ಚಿನ ವಿವರ ತಿಳಿಯಲಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಚಿವರ ಭೇಟಿ

ವಿವಿಧ ಸಂಘಟನೆಗಳ ಕಾರ್ಯಕರ್ತರು ಮಳೆಯ ನಡುವೆಯೂ ರಾಷ್ಟ್ರೀಯ ಹೆದ್ದಾರಿ–48 ತಡೆದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

‘ವರ್ಷಿತಾ ಕುಟುಂಬ ಸದಸ್ಯರಿಗೆ ಸರ್ಕಾರದಿಂದ ₹ 2.5 ಲಕ್ಷ, ವೈಯಕ್ತಿಕವಾಗಿ ₹ 2.5 ಲಕ್ಷ ಪರಿಹಾರ ನೀಡಲಾಗುವುದು’ ಎಂದು ಸುಧಾಕರ್ ಭರವಸೆ ನೀಡಿದರು.

‘ಪಾಕ್ ಸೈನ್ಯದಿಂದ ಘೋರ ಲೈಂಗಿಕ ಹಿಂಸಾಚಾರ’

ವಿಶ್ವಸಂಸ್ಥೆ (ಪಿಟಿಐ): 1971ರ ಬಾಂಗ್ಲಾ ವಿಮೋಚನೆ ಸಂದರ್ಭದಲ್ಲಿ ಪಾಕಿಸ್ತಾನ ಸೇನೆಯು ಮಹಿಳೆಯರ ವಿರುದ್ಧ ಘೋರ ಲೈಂಗಿಕ ದೌರ್ಜನ್ಯ ಎಸಗಿತ್ತು. ಈ ಪ್ರವೃತ್ತಿಯು ಈಗಲೂ ನಿರ್ಭೀತಿಯಿಂದ ಮುಂದುವರಿದಿದೆ ಎಂದು ಭಾರತ ಕಿಡಿಕಾರಿದೆ.

ವಿಶ್ವಸಂಸ್ಥೆಯಲ್ಲಿ ನಡೆದ ಬಹಿರಂಗ ಚರ್ಚೆಯಲ್ಲಿ ಮಾತನಾಡಿದ ಭಾರತದ 'ಚಾರ್ಜ್ ಡಿ ಅಫೇರ್ಸ್' ಎಲ್ಡೋಸ್ ಮ್ಯಾಥ್ಯು ಪೊನ್ನೂಸ್ ಅವರು, 1971ರ ಅವಧಿಯಲ್ಲಿ ಪೂರ್ವ ಪಾಕಿಸ್ತಾನದಲ್ಲಿ (ಬಾಂಗ್ಲಾದೇಶ) ನಡೆದ ಲೈಂಗಿಕ ದೌರ್ಜನ್ಯವು ನಾಚಿಕೆಗೇಡಿನ ಸಂಗತಿ ಎಂದು ಹೇಳಿದರು.

ಅಲ್ಪಸಂಖ್ಯಾತ ಸಮುದಾಯಗಳ ಸಾವಿರಾರು ದುರ್ಬಲ ಮಹಿಳೆಯರು ಮತ್ತು ಬಾಲಕಿಯರ ಅಪಹರಣ, ಕಳ್ಳಸಾಗಾಣಿಕೆ, ಬಾಲ್ಯವಿವಾಹ ಮತ್ತು ಬಲವಂತದ ವಿವಾಹ, ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ನಡೆದಿರುವುದು ವರದಿಯಾಗಿದೆ ಮತ್ತು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ಕಚೇರಿ (ಒಎಚ್‌ಸಿಎಚ್‌ಆರ್) ಸೇರಿದಂತೆ ಇತಿಹಾಸದಲ್ಲಿ ದಾಖಲಾಗಿದೆ ಎಂದು ತಿಳಿಸಿದರು.

ಗ್ರಾ.ಪಂ ಸದಸ್ಯರಿಗೂ ಷೇರು ಹೂಡಿಕೆ ತರಬೇತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ 2.5 ಲಕ್ಷ ಗ್ರಾಮ ಪಂಚಾಯಿತಿಗಳ ಸದಸ್ಯರಿಗೆ ‘ಹೂಡಿಕೆ ಶಿಕ್ಷಣ’ ನೀಡುವ ಗುರಿಯೊಂದಿಗೆ, ಪಂಚಾಯತ್ ರಾಜ್ ಸಚಿವಾಲಯವು, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಸಹಯೋಗದಲ್ಲಿ ರಾಷ್ಟ್ರವ್ಯಾಪಿ ತರಬೇತಿ ಕಾರ್ಯಕ್ರಮವೊಂದನ್ನು ರೂಪಿಸಿದೆ.

ಈ ತರಬೇತಿಯಡಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಮತ್ತು ಪಂಚಾಯತ್ ರಾಜ್ ಬ್ಲಾಕ್ ಮಟ್ಟದ ಸಿಬ್ಬಂದಿಗೆ ಷೇರುಪೇಟೆ ಮತ್ತು ಮ್ಯೂಚುವಲ್ ಫಂಡ್‌ಗಳಲ್ಲಿ ಬಂಡವಾಳ ತೊಡಗಿಸುವ ಕುರಿತು ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಷೇರುಪೇಟೆಯಲ್ಲಿ ಬಂಡವಾಳ ತೊಡಗಿಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ. ಆದರೆ, ಇದರಲ್ಲಿ ಗ್ರಾಮೀಣರ ಸಹಭಾಗಿತ್ವ ಕಡಿಮೆ ಇದೆ. ಗ್ರಾಮೀಣ ಮಟ್ಟದಲ್ಲಿ ಹಣಕಾಸು ಸಾಕ್ಷರತೆ ಹೆಚ್ಚಿಸಿ, ಸುರಕ್ಷಿತ ಹೂಡಿಕೆ ಪ್ರೋತ್ಸಾಹಿಸುವುದರ ಭಾಗವಾಗಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.

ಈಗಾಗಲೇ ಪುಣೆಯಲ್ಲಿ ಮಹಾರಾಷ್ಟ್ರದ ವಿವಿಧ ಜಿಲ್ಲೆಗಳ 100ಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳ ಅಧ್ಯಕ್ಷರಿಗೆ ಮತ್ತು ಬ್ಲಾಕ್ ಮಟ್ಟದ ಪ್ರತಿನಿಧಿಗಳಿಗೆ ತರಬೇತಿ ನೀಡಲಾಗಿದೆ. ತರಬೇತಿ ಪಡೆದ ಪಂಚಾಯಿತಿ ಅಧ್ಯಕ್ಷರನ್ನು ‘ಹಣಕಾಸು ಸಾಕ್ಷರತೆ ರಾಯಭಾರಿ’ಯಾಗಿ ಪರಿಗಣಿಸಲಾಗುವುದು ಎಂದು ಪಂಚಾಯತ್ ರಾಜ್ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಷೇರು, ಮ್ಯೂಚುವಲ್ ಫಂಡ್‌ನಲ್ಲಿ ಹೆಚ್ಚಿದ ಹೂಡಿಕೆ

	2020 ಮಾರ್ಚ್	2024 ಸೆಪ್ಟೆಂಬರ್
ಹೂಡಿಕೆದಾರರ ಸಂಖ್ಯೆ	2.2 ಕೋಟಿ	5 ಕೋಟಿ
ಡಿಮ್ಯಾಟ್ ಖಾತೆಗಳ ಸಂಖ್ಯೆ	4.2 ಕೋಟಿ	10 ಕೋಟಿ
ಮ್ಯೂಚುವಲ್ ಫಂಡ್ ಹೂಡಿಕೆ	₹22 ಲಕ್ಷ ಕೋಟಿ	₹67 ಲಕ್ಷ ಕೋಟಿ
ಬ್ಯಾಂಕ್ ಠೇವಣಿ	₹137 ಲಕ್ಷ ಕೋಟಿ	₹225 ಲಕ್ಷ ಕೋಟಿ

‘ಉಕ್ರೇನ್‌ಗೆ ಸೇನೆ ಕಳಿಸುವುದಿಲ್ಲ’

ವಾಷಿಂಗ್ಟನ್ (ಎಪಿ): ರಷ್ಯಾದಿಂದ ಉಕ್ರೇನ್‌ಗೆ ರಕ್ಷಣೆ ನೀಡಲು ಸೇನೆಯನ್ನು ಕಳುಹಿಸುವುದಿಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭರವಸೆ ನೀಡಿದ್ದಾರೆ.

‘ನಾನು ಅಧ್ಯಕ್ಷ. ಹಾಗಾಗಿ ಭರವಸೆ ನೀಡುತ್ತೇನೆ. ಉಕ್ರೇನ್‌ಗೆ ಸೇನೆಯನ್ನು ಕಳುಹಿಸುವುದಿಲ್ಲ’ ಎಂದು ಟ್ರಂಪ್ ಮಂಗಳವಾರ ನೀಡಿದ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಇತರ ನಾಯಕರೊಡನೆ ಸೋಮವಾರ ಸಭೆ ನಡೆಸಿದ ಬಳಿಕ ಪ್ರತಿಕ್ರಿಯಿಸಿದ್ದ ಟ್ರಂಪ್ ಉಕ್ರೇನ್‌ಗೆ ಸೇನಾ ನೆರವು ನೀಡುವ ವರದಿಗಳನ್ನು ನಿರಾಕರಿಸಿರಲಿಲ್ಲ.

ರಷ್ಯಾ ಮತ್ತು ಉಕ್ರೇನ್ ನಡುವಿನ ಶಾಂತಿ ಸ್ಥಾಪನೆ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದ ಟ್ರಂಪ್, ‘ನ್ಯಾಟೊಕ್ಕೆ ಸೇರುವ ಮತ್ತು ರಷ್ಯಾದಿಂದ ಕ್ರಿಮಿಯಾವನ್ನು ಮರಳಿ ಪಡೆಯುವ ಉಕ್ರೇನ್ ಆಶಯ ಈಡೇರುವುದಿಲ್ಲ’ ಎಂದು ಹೇಳಿದರು.

‘ಭಾರತದ ಮೇಲೆ ಅಮೆರಿಕದಿಂದ ಸುಂಕದ ಶಿಕ್ಷೆ’ಗೆ ರಷ್ಯಾ ಖಂಡನೆ

‘ಸವಾಲು ಎದುರಿಸಲು ತಂತ್ರಗಾರಿಕೆ ಸಿದ್ಧವಿದೆ’

ನವದೆಹಲಿ (ಪಿಟಿಐ/ರಾಯಿಟರ್ಸ್): ‘ನಮ್ಮಿಂದ ಕಚ್ಚಾ ತೈಲ ಖರೀದಿ ಮಾಡುತ್ತಿರುವುದಕ್ಕೆ ಅಮೆರಿಕವು ಹೆಚ್ಚಿನ ಪ್ರಮಾಣದ ಸುಂಕ ವಿಧಿಸಿ ಭಾರತವನ್ನು ಶಿಕ್ಷಿಸಲು ಮುಂದಾಗಿದೆ. ಅಮೆರಿಕದ ಈ ಕ್ರಮದಿಂದ ಎದುರಾಗುವ ಯಾವುದೇ ಸವಾಲು ಎದುರಿಸಲು ರಷ್ಯಾದ ಬಳಿ ‘ವಿಶೇಷ ತಂತ್ರಗಾರಿಕೆ’ ಸಿದ್ಧವಿದೆ’ ಎಂದು ಭಾರತದಲ್ಲಿರುವ ರಷ್ಯಾದ ರಾಯಭಾರಿ ರೋಮನ್ ಬಬೂಷ್ಕಿನ್ ಅವರು ಬುಧವಾರ ಹೇಳಿದರು.

ಇಲ್ಲಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ‘ಸೇನೆ ಅಥವಾ ಹಾರ್ಡ್‌ವೇರ್ ಕ್ಷೇತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ರಷ್ಯಾದ ಜೊತೆ ಭಾರತವು ವ್ಯಾಪಾರ ಸಂಬಂಧ ಹೊಂದಿದೆ. ಎರಡೂ ದೇಶಗಳ ಸಂಬಂಧವು ಇನ್ನಷ್ಟು ಹತ್ತಿರಗೊಳ್ಳುತ್ತಿದೆ. ಆದ್ದರಿಂದ, ರಷ್ಯಾವೇ ಬೇಕು ಎನ್ನುವುದು ಭಾರತದ ಆಯ್ಕೆ’ ಎಂದರು.

‘ಭಾರತದ ಮೇಲೆ ಅಮೆರಿಕವು ತೆಗೆದುಕೊಂಡ ಕ್ರಮವು ನ್ಯಾಯ ಸಮ್ಮತವಾಗಿಲ್ಲ. ಇದು ಭಾರತಕ್ಕೆ ಸವಾಲಿನ ಸಂದರ್ಭ. ನಮ್ಮ ಇಂಧನ ಒಪ್ಪಂದದ ಸಂಬಂಧ ಎದುರಾಗುವ ಯಾವುದೇ ಸವಾಲನ್ನು ಎದುರಿಸಲು ನಾವು ಬದ್ಧರಾಗಿದ್ದೇವೆ. ಯಾವುದೇ ಬಾಹ್ಯ ಒತ್ತಡಕ್ಕೂ ಮಣಿಯದೆಯೇ ಎರಡೂ ದೇಶಗಳ ಮಧ್ಯದ ಇಂಧನ ಕ್ಷೇತ್ರದ ಕುರಿತ ನಮ್ಮ ಸಹಕಾರವು ಮುಂದುವರಿಯಲಿದೆ ಎಂಬ ವಿಶ್ವಾಸವಿದೆ’ ಎಂದರು.

‘ಅತಿ ಶೀಘ್ರವಾಗಿ ನಾವು, ಭಾರತ ಮತ್ತು ಚೀನಾ ತ್ರಿಪಕ್ಷೀಯ ಸಭೆಯೊಂದನ್ನು ನಡೆಸಲಿದ್ದೇವೆ. ಈ ವರ್ಷದ ಕೊನೆಯಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ’ ಎಂದರು.

> ರಷ್ಯಾ–ಉಕ್ರೇನ್ ಯುದ್ಧವನ್ನು ಅಂತ್ಯಗೊಳಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸಿ ನಿರ್ಬಂಧ ಹೇರಿದ್ದಾರೆ
>
> **ಕರೋಲಿನ್ ಲೆವಿಟ್,** ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ

> ಅಮೆರಿಕವು ಭಾರತದ ವಸ್ತುಗಳ ಮೇಲೆ ಹೆಚ್ಚಿನ ಸುಂಕ ವಿಧಿಸಿದೆ. ಆದ್ದರಿಂದ ಭಾರತದ ವಸ್ತುಗಳನ್ನು ಸ್ವಾಗತಿಸಲು ನಮ್ಮ ಮಾರುಕಟ್ಟೆ ಸಿದ್ಧವಿದೆ
>
> **ರೋಮನ್ ಬಬೂಷ್ಕಿನ್,** ರಷ್ಯಾದ ರಾಯಭಾರಿ

‘ಪಶ್ಚಿಮದಿಂದ ಖರೀದಿ: ಭಾರತಕ್ಕೆ ನಷ್ಟ’

‘ಒಂದು ವೇಳೆ ಭಾರತವು ನಮ್ಮಿಂದ ತೈಲ ಖರೀದಿಯನ್ನು ನಿಲ್ಲಿಸಿ, ಪಶ್ಚಿಮ ದೇಶಗಳಿಂದ ತೈಲ ಖರೀದಿಸಿದರೆ, ಭಾರತಕ್ಕೆ ಇದು ಲಾಭದಾಯಕವೇನೂ ಆಗುವುದಿಲ್ಲ. ಪಶ್ಚಿಮದ ದೇಶಗಳು ನವ ವಸಹತುಶಾಹಿ ಶಕ್ತಿಯ ರೀತಿಯಲ್ಲಿ ವರ್ತಿಸುತ್ತಿವೆ. ಭಾರತದ ತೈಲ ಕಂಪನಿಗಳಿಗೆ ಜಾಗತಿಕ ಮಾರಾಟ ಬೆಲೆಗಿಂತ ಶೇ5ರಿಂದ ಶೇ7ರಷ್ಟು ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಮಾರಾಟ ಮಾಡುತ್ತಿದ್ದೇವೆ. ಭಾರತಕ್ಕೆ ತೈಲ ಮಾರಾಟವನ್ನು ಮುಂದುವರಿಸಲು ನಮ್ಮ ಬಳಿ ‘ಭಾರಿ ವಿಶೇಷ ತಂತ್ರಗಾರಿಕೆ’ ಇದೆ’ ಎಂದು ರಷ್ಯಾದ ರಾಯಭಾರಿ ರೋಮನ್ ಬಬೂಷ್ಕಿನ್ ಹೇಳಿದರು.

ಆಗಸ್ಟ್ 23ರಿಂದ ಜೀ ಪವರ್ ಆರಂಭ

> ‘ಜೀ ಪವರ್’ ಹೈಬ್ರೀಡ್ ಚಾನೆಲ್ ಆಗಿದ್ದು ಇಲ್ಲಿ ಎಲ್ಲಾ ವರ್ಗದ ಜನರನ್ನು ತನ್ನತ್ತ ಸೆಳೆಯುವ ಕಾಂಟೆಂಟ್ ಇರಲಿದೆ. ಈ ವಾಹಿನಿಯಲ್ಲಿ ಬರಲಿರುವ 4 ಧಾರಾವಾಹಿಗಳು ಮಹಿಳಾ ಪ್ರಧಾನವಾಗಿದ್ದರೂ, ಅಲ್ಲಿ ಪುರುಷರು ಹಾಗೂ ಯುವಜನತೆಯ ಭಾವನೆಗಳಿಗೂ ಬೆಲೆ ಕೊಡಲಾಗಿದೆ. ಈ ವಾಹಿನಿಯಲ್ಲಿ ಕರುನಾಡಿನ ಸಂಸ್ಕೃತಿ, ಶ್ರೀಮಂತ ಪರಂಪರೆಗೆ ಒತ್ತು ನೀಡಿದ್ದೇವೆ.
> **ಭಾಸ್ಕರ್ ಅಯ್ಯರ್,** ಬಿಸಿನೆಸ್ ಹೆಡ್, ಜೀ ಪವರ್

ಕಳೆದ ಮೂರು ದಶಕಗಳಿಂದ ಹಲವು ಭಾಷೆಗಳಲ್ಲಿ ಪ್ರೇಕ್ಷಕರನ್ನು ಮನರಂಜಿಸುತ್ತಾ ಬಂದಿರುವ, ದೇಶದ ಜನಪ್ರಿಯ ಮಾಧ್ಯಮ ಸಂಸ್ಥೆಗಳಲ್ಲಿ ಒಂದಾದ ಜೀ ಎಂಟರ್‌ಟೇನ್ಮೆಂಟ್ ಎಂಟರ್‌ಪ್ರೈಸಸ್ ಲಿ. (ZEEL) ಹೊಸ ಹೆಜ್ಜೆಯೊಂದನ್ನು ಇರಿಸಿದೆ.

ಕರ್ನಾಟಕದಲ್ಲಿ ಈ ಸಂಸ್ಥೆಯ ಜೀ ಕನ್ನಡ ವಾಹಿನಿ ಮನೆಮಾತಾಗಿದೆ. ಜೀ ಕನ್ನಡದ ಯಶಸ್ಸಿನ ಬಳಿಕ ತನ್ನ ಮಹತ್ವಾಕಾಂಕ್ಷೆಯ ‘ಜೀ ಪವರ್’ ಚಾನಲ್ ಆರಂಭಿಸುವ ಮೂಲಕ ಮನರಂಜನೆಯ ಹೊಸ ಪರ್ವಕ್ಕೆ ನಾಂದಿ ಹಾಡಲಿದೆ. ‘ಜೀ ಪವರ್’ ಇದೇ ಆ.23ರಂದು ಪ್ರಾರಂಭವಾಗಲಿದೆ.

ಹೊಸ ಯೋಚನೆ, ಹೊಸ ಭಾವನೆ ಹಾಗೂ ಹೊಸ ಬಗೆಯ ಮನರಂಜನೆ ನೀಡಲು ಸಜ್ಜಾಗಿರುವ ‘ಜೀ ಪವರ್’ ಮನರಂಜನೆಯಲ್ಲಿ ಹೊಸ ಯುಗವನ್ನು ಆರಂಭಿಸಲಿದೆ. ‘ಇದು ಕೇವಲ ವಾಹಿನಿಯಲ್ಲ ಕಲ್ಪನೆ, ನಿಜಜೀವನ ಮತ್ತು ಕರುನಾಡಿನ ಸಂಸ್ಕೃತಿಯನ್ನು ಒಳಗೊಂಡ ವಾಹಿನಿಯಾಗಿರಲಿದೆ. ಪ್ರಬಲ ಕಥಾನಾಯಕಿಯರು ಮತ್ತು ಕಥಾನಾಯಕರಿರುವ ಧಾರಾವಾಹಿಗಳು, ಸಮಾಜವನ್ನು ತಲುಪುವ ವಾಸ್ತವ ಕಾರ್ಯಕ್ರಮಗಳು, ಮಹಿಳಾ ಪ್ರಧಾನ ಧಾರಾವಾಹಿಗಳು, ಬ್ಲಾಕ್‌ಬಸ್ಟರ್ ಚಲನಚಿತ್ರಗಳು, ಹಬ್ಬದ ಮತ್ತು ವಿಶೇಷ ಕಾರ್ಯಕ್ರಮಗಳೊಂದಿಗೆ ‘ಜೀ ಪವರ್’ ಕನ್ನಡಿಗರ ನೆಚ್ಚಿನ ವಾಹಿನಿಯಾಗಲಿದೆ’ ಎಂದಿದೆ ಸಂಸ್ಥೆ.

> ‘ಜೀ ಪವರ್’ನಲ್ಲಿ ಪ್ರಸಾರ ಆಗುವ ಧಾರಾವಾಹಿಗಳು ತಮ್ಮ ವಿಭಿನ್ನ ಮತ್ತು ಅಮೋಘವಾದ ಕಥೆಗಳ ಮೂಲಕ ಯುವಜನತೆಯನ್ನೂ ತನ್ನತ್ತ ಸೆಳೆಯಲಿದೆ. ನಮ್ಮ ಕಥೆಗಳು ಸಂಕ್ಷಿಪ್ತ ಮತ್ತು ವಾಸ್ತವ ಆಲೋಚನೆಯನ್ನು ಪ್ರೇರೇಪಿಸುವಂತೆ ಇರಲಿವೆ. ‘ಜೀ ಪವರ್’ ಮೂಲಕ ಕರುನಾಡ ಜನರಿಗೆ ಹಿಂದೆದೂ ಕಾಣದ ರೀತಿಯಲ್ಲಿ ಮನರಂಜನೆ ನೀಡುವ ಮೂಲಕ ಜೀ ಸಂಸ್ಥೆಯು ಜನರಿಗೆ ಮತ್ತಷ್ಟು ಹತ್ತಿರವಾಗಲಿದೆ.
> **ರಾಘವೇಂದ್ರ ಹುಣಸೂರ್,** ಚೀಫ್ ಕಂಟೆಂಟ್ ಆಫೀಸರ್, ZEEL

‘ಜೀ ಪವರ್’ ಲಾಂಚ್ ಕಾರ್ಯಕ್ರಮದಲ್ಲಿ ಜೀ ಕನ್ನಡ ಮತ್ತು ಜೀ5 ಕನ್ನಡ ಬಿಸಿನೆಸ್ ಮುಖ್ಯಸ್ಥ ದೀಪಕ್ ಶ್ರೀರಾಮುಲು, ZEELನ ದಕ್ಷಿಣ ಮತ್ತು ಪಶ್ಚಿಮ ಕ್ಲಸ್ಟರ್ ಮುಖ್ಯಸ್ಥ ಸಿಜು ಪ್ರಭಾಕರ್, ಜೀ ಕನ್ನಡ, ಜೀ ಪವರ್ ಪ್ರೋಗ್ರಾಮಿಂಗ್ ಫಿಕ್ಷನ್ ವಿಭಾಗದ ನಿರ್ದೇಶಕ ಸುಧೀಂದ್ರ ಭಾರದ್ವಾಜ್, ‘ಜೀ ಪವರ್’ ಬಿಸಿನೆಸ್ ಹೆಡ್ ಭಾಸ್ಕರ್ ಅಯ್ಯರ್ ಇದ್ದರು.

‘ಜೀ ಪವರ್’ ಪ್ರತಿ ಪೀಳಿಗೆಯನ್ನೂ ಆಕರ್ಷಿಸುತ್ತದೆ. ಮಹಿಳಾ ಪ್ರಧಾನ ಕಥೆಗಳು ಇದ್ದರೂ ಯುವಕರು ಮತ್ತು ಪುರುಷರ ಭಾವನೆಗಳಿಗೂ ಒತ್ತುಕೊಟ್ಟಿರುವುದರಿಂದ ಎಲ್ಲಾ ಪೀಳಿಗೆಯವರನ್ನೂ ತನ್ನತ್ತ ಸೆಳೆಯುವಲ್ಲಿ ‘ಜೀ ಪವರ್’ ಯಶಸ್ವಿ ಆಗಲಿದೆ. ಪ್ರತಿಯೊಂದು ಧಾರಾವಾಹಿಯೂ ತನ್ನ ವಿಭಿನ್ನವಾದ ಕಥಾಹಂದರ ಹಾಗೂ ಸಂಭಾಷಣೆಯಿಂದ ಮೊದಲ ದಿನದಿಂದಲೇ ವೀಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ’ ಎಂದಿದೆ ZEEL.

ಈ ವಾಹಿನಿಯಲ್ಲಿ ನಾಲ್ಕು ಧಾರಾವಾಹಿಗಳಾದ ‘ರಾಜಕುಮಾರಿ’, ‘ಶುಭಸ್ಯ ಶೀಘ್ರಂ’, ‘ಜೋಡಿ ಹಕ್ಕಿ’ ಮತ್ತು ‘ಗೌರಿ’ ಹಾಗೂ ಒಂದು ರಿಯಾಲಿಟಿ ಶೋ- ‘ಹಳ್ಳಿ ಪವರ್’ ಪ್ರಸಾರವಾಗಲಿದೆ. ಜೊತೆಗೆ ಭಕ್ತಿ ಕಾರ್ಯಕ್ರಮ-ಭವಿಷ್ಯ ದರ್ಶನ ಸೇರಿದಂತೆ ಅತ್ಯಾಕರ್ಷಕ ಕಾರ್ಯಕ್ರಮಗಳೂ ಇರಲಿವೆ. ವಾಹಿನಿಯಲ್ಲಿ ಎಲ್ಲಾ ವಯಸ್ಸಿನ ಗುಂಪುಗಳನ್ನು ಸೆಳೆಯುವ ಕಥೆಗಳಿರಲಿದ್ದು ಕುಟುಂಬದವರು ಒಟ್ಟಾಗಿ ಕುಳಿತು ನೋಡುತ್ತಾ ಕಳೆದುಹೋದ ಕೌಟುಂಬಿಕ ಕ್ಷಣಗಳನ್ನು ಮರುಕಳಿಸುವಂತೆ ಮಾಡುತ್ತದೆ ಎಂದಿದೆ ಸಂಸ್ಥೆ. ಈ ಎಲ್ಲ ಧಾರಾವಾಹಿಗಳು ಆಗಸ್ಟ್ 25ರಿಂದ ಸಂಜೆ 7 ಗಂಟೆಗೆ ಪ್ರಾರಂಭವಾಗಲಿದ್ದು, ಗ್ರ್ಯಾಂಡ್ ಲಾಂಚ್ ಕಾರ್ಯಕ್ರಮ 23ರಿಂದ ಪ್ರಸಾರ ಆಗಲಿದೆ.

ಪ್ರತಿ ದಿನ ಬೆಳಗ್ಗೆ 7.30ರಿಂದ 9 ಗಂಟೆಯವರೆಗೆ ‘ಭವಿಷ್ಯ ದರ್ಶನ’ ನಡೆಯಲಿದ್ದು, ಇದನ್ನು ಖ್ಯಾತ ಜ್ಯೋತಿಷಿ ಗೋಪಾಲಕೃಷ್ಣ ಶರ್ಮ ನಡೆಸಿಕೊಡಲಿದ್ದಾರೆ.

ಈ ಮೂಲಕ ‘ಜೀ ಪವರ್’ ಕನ್ನಡ ಮನರಂಜನಾ ಕ್ಷೇತ್ರಕ್ಕೆ ಕಾಲಿಡಲು ಕ್ಷಣಗಣನೆ ಶುರುವಾಗಿದ್ದು ಇದೇ 23 ರಂದು ಕರುನಾಡಿನ ಮನೆಮನಗಳಿಗೆ ಲಗ್ಗೆ ಇಡಲಿದೆ. ❖

ಭಿನ್ನ ಪರಿಕಲ್ಪನೆಯ ಇನ್ ಹಿಸ್ ನೇಮ್

• ಅಭಿಲಾಷ್ ಪಿ.ಎಸ್.

ಏಪ್ರಿಲ್‌ನಲ್ಲಿ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯ ಭೀಕರತೆಯನ್ನು ಚಿತ್ರವೊಂದು ತೆರೆದಿಟ್ಟಿತ್ತು. ಪತಿಯ ಶವದೆದುರು ಮೌನವಾಗಿ ಕುಳಿತ ಪತ್ನಿಯ ಚಿತ್ರ ಎಲ್ಲರ ಮನಸ್ಸಿನಲ್ಲೂ ಹಸಿಯಾಗಿದೆ. ಈ ಘಟನೆಯನ್ನೇ ಆಧಾರವಾಗಿಟ್ಟು ಕೊಂಡು, ಅಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ರೂಪದಲ್ಲಿ ತಯಾರಾಗಿರುವ ‘ಇನ್ ಹಿಸ್ ನೇಮ್’ ಎನ್ನುವ ಕನ್ನಡ ಹಾಡು ಇದೀಗ ಮೆಚ್ಚುಗೆ ಪಡೆಯುತ್ತಿದೆ. ನಟ ಸುದೀಪ್ ಅವರೂ ಈ ಹಾಡು ಕೇಳಿ ಮೆಚ್ಚಿ, ಜನರೂ ಇದನ್ನು ನೋಡಬೇಕು ಎಂದಿದ್ದಾರೆ.

‘ಶಾಖಾಹಾರಿ’ ಸಿನಿಮಾದ ಸಂಗೀತ ನಿರ್ದೇಶಕ ಮಯೂರ್ ಅಂಬೆಕಲ್ಲು, ತೇಜಸ್ ಕಿರಣ್ ಜೊತೆಗೂಡಿ ‘ಭಾವ ತೀರ ಯಾನ’ ಎಂಬ ಸಿನಿಮಾ ನಿರ್ದೇಶಿಸಿದ್ದರು. ತೇಜಸ್–ಮಯೂರ್ ಸೇರಿಯೇ ಈ ‘ಇನ್ ಹಿಸ್ ನೇಮ್’ ಹಾಡನ್ನು ನಿರ್ದೇಶಿಸಿದ್ದು, ಮಯೂರ್ ಅವರೇ ಸಂಗೀತ ಸಂಯೋಜಿಸಿದ್ದಾರೆ. ಹಾಡಿನ ಪರಿಕಲ್ಪನೆಯೇ ಭಿನ್ನವಾಗಿದ್ದು, ಈ ಬಗ್ಗೆ ಮಯೂರ್ ಮಾತಿಗಿಳಿದರು.

‘ಬಹಳ ಹಿಂದೆಯೇ ಈ ಹಾಡು ಸಿದ್ಧವಾಗಿತ್ತು. ಚಂದನಾ ಅನಂತಕೃಷ್ಣ ಅವರ ಜೊತೆಗೂಡಿ ಬೇರೊಂದು ಸಂದರ್ಭಕ್ಕೆಂದು ಹಾಡು ಮಾಡಲಾಗಿತ್ತು. ‘ಭಾವ ತೀರ ಯಾನ’ ಸಿನಿಮಾ ಕಾರಣದಿಂದ ಈ ಹಾಡಿನ ಶೂಟಿಂಗ್ ವಿಳಂಬವಾಗಿತ್ತು. ಈ ನಡುವೆ ಪಹಲ್ಗಾಮ್ ಘಟನೆ ನಡೆಯಿತು. ಇದು ನಮ್ಮ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತ್ತು. ಆ ಘಟನೆ ಬಹಳ ಕ್ರೂರವಾಗಿತ್ತು. ಈ ಸಂದರ್ಭದಲ್ಲಿ ನಮ್ಮ ಹಾಡನ್ನು ಕೇವಲ ಪ್ರೇಮಗೀತೆಯಾಗಿ ಪ್ರಸ್ತುತಪಡಿಸದೆ ಭಿನ್ನವಾಗಿ ಜನರ ಎದುರಿಗೆ ಇಡುವ ನಿರ್ಧಾರ ಮಾಡಿದೆವು.



ಚಂದನಾ, ನಿರ್ದರ್ಶನ್

ಹಾಡು ನಿರ್ಮಾಣ ಮಾಡಿದ ಚಂದನಾ ಅನಂತಕೃಷ್ಣ

ಭಾನುಪ್ರಕಾಶ್ ಜೋಯಿಸ್ ಅವರ ಸಾಹಿತ್ಯವಿರುವ ಈ ಹಾಡನ್ನು ನಟಿ ಚಂದನಾ ಅನಂತಕೃಷ್ಣ ಹಾಡಿದ್ದು, ಅವರೇ ಮುಖ್ಯಭೂಮಿಕೆಯಲ್ಲಿದ್ದಾರೆ. ಈ ಹಾಡಿನ ನಿರ್ಮಾಣವನ್ನೂ ಚಂದನಾ ಅವರೇ ಮಾಡಿದ್ದಾರೆ. ಚಂದನಾಗೆ ಜೋಡಿಯಾಗಿ ನಿರ್ದರ್ಶನ್ ನಟಿಸಿದ್ದು, ಶಿವಶಂಕರ್ ನೂರಂಬಡ ಛಾಯಾಚಿತ್ರಗ್ರಹಣ, ಅನುರಂಜನ್ ಎಚ್.ಆರ್. ಸಂಕಲನ ಈ ಹಾಡಿಗಿದೆ.

ತೇಜಸ್ ಜೊತೆಗೂಡಿ ಈ ಪರಿಕಲ್ಪನೆಯನ್ನು ಚಂದನಾ ಅವರ ಬಳಿ ಹೇಳಿದಾಗ ಅವರೂ ತಕ್ಷಣದಲ್ಲೇ ಒಪ್ಪಿಕೊಂಡರು. ಕೊಂಚ ಹೆಚ್ಚಿನ ಬಜೆಟ್ ಬೇಕಿದ್ದ ಕಾರಣ ಚಂದನಾ ಅವರೇ ನಿರ್ಮಾಣಕ್ಕೆ ಇಳಿದರು. ಪ್ರೀತಿಗೂ–ಭಯೋತ್ಪಾದನೆಗೂ ಎಲ್ಲಿಯ ಸಂಬಂಧ? ಎರಡೂ ತದ್ವಿರುದ್ಧವಾದ ವಿಷಯ. ಹೀಗಾಗಿ ಸಂಕಲನದಲ್ಲಿ ಪ್ರಯೋಗ ಮಾಡಿದೆವು. ಚಂದನಾ ಅವರ ನಟನೆ ಈ ಹಾಡಿಗೆ ಹೊಸ ರೂಪವನ್ನೇ ನೀಡಿದೆ’ ಎಂದರು ಮಯೂರ್.

‘ಈ ಪರಿಕಲ್ಪನೆಯಲ್ಲಿ ಹಾಡು ಮಾಡಲು ನಿರ್ಧರಿಸಿದ ಬಳಿಕ ಕ್ಲೈಮ್ಯಾಕ್ಸ್‌ನ ಟ್ಯೂನ್ ಬದಲಾಯಿಸಿದೆವು. ಸಾಹಿತ್ಯದಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲಿಲ್ಲ. ಬರವಣಿಗೆ ಸಂದರ್ಭದಲ್ಲೇ ದೃಶ್ಯಗಳು ಹೀಗೇ ಬರಬೇಕು ಎಂದು ನಿರ್ಧರಿಸಿದ್ದೆವು. ಬೆಂಗಳೂರು ಹಾಗೂ ಊಟಿಯಲ್ಲಿ ಚಿತ್ರೀಕರಣ ನಡೆಸಿದ್ದೆವು. ಸುದೀಪ್ ಅವರು ಕರೆದು ಮಾತನಾಡಿಸಿದಾಗ ಬಹಳ ಖುಷಿಯಾಯಿತು. ನಮ್ಮೊಂದಿಗೆ ಸುಮಾರು 40 ನಿಮಿಷ ಹಾಡಿನ ಬಗ್ಗೆ ಚರ್ಚೆ ಮಾಡಿದರು’ ಎನ್ನುತ್ತಾರೆ ಮಯೂರ್.

ತೇಜಸ್, ಮಯೂರ್

> ಇವರು ನಮ್ಮ ಕನ್ನಡದ ಪ್ರತಿಭೆಗಳು. ಸಂಕಲನ ಬಹಳ ಚೆನ್ನಾಗಿದೆ. ಅವರು ಮಾಡಿದ ಈ ಹಾಡಿಗೆ ಬಹಳ ಹೆಮ್ಮೆ ಪಡಬೇಕು. ಸಿನಿಮಾದಲ್ಲೇ ಈ ರೀತಿ ಹಾಡು ತೆಗೆಯಲು ಸಾಧ್ಯವಿಲ್ಲ.
> **ಸುದೀಪ್,** ನಟ

‘ಪರಿಕಲ್ಪನೆ ಕೇಳಿ ಮೈ ಜುಂ ಎಂದಿತ್ತು’

‘ಈ ಪರಿಕಲ್ಪನೆಯನ್ನು ತೇಜಸ್–ಮಯೂರ್ ಹೇಳಿದಾಕ್ಷಣ ಮೈ ಜುಂ ಎಂದಿತ್ತು. ಈ ರೀತಿಯಲ್ಲೇ ಹಾಡನ್ನು ನಿರ್ಮಾಣ ಮಾಡಬೇಕು ಎಂದು ನಿರ್ಧರಿಸಿದೆ. ಇದು ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಿಗೆ ನಮ್ಮ ಶ್ರದ್ಧಾಂಜಲಿ. ಸಾಮಾನ್ಯವಾಗಿ ಬರಬೇಕಿದ್ದ ಹಾಡೊಂದು ಭಿನ್ನವಾದ ರೂಪವನ್ನೇ ಪಡೆದಿದೆ. ನನ್ನದು ಅರೇಂಜ್ಡ್ ಮದುವೆಯಾದ ಕಾರಣ ಕೆಲ ಸಲಹೆಗಳನ್ನು ನಾನೂ ನೀಡಿದ್ದೆ. ಇದನ್ನು ಬಳಸಿಕೊಂಡು ತೇಜಸ್–ಮಯೂರ್ ಬದಲಾವಣೆಗಳನ್ನು ಮಾಡಿಕೊಂಡರು. ಈ ಹಾಡಿನ ನಿರ್ಮಾಣಕ್ಕೆ ನಾವು ಬಹಳ ಶ್ರಮ ಹಾಕಿದ್ದೆವು. ಹೀಗಾಗಿ ಬಹಳ ರಿಚ್ ಆಗಿಯೇ ಹಾಡು ಮೂಡಿಬಂದಿದೆ. ಹಾಡು ಮೊದಲೇ ರೆಕಾರ್ಡಿಂಗ್ ಆಗಿತ್ತು, ಈ ಪರಿಕಲ್ಪನೆಗಾಗಿ ಕೊನೆಯ ಸಾಲುಗಳನ್ನು ರಿರೆಕಾರ್ಡಿಂಗ್ ಮಾಡಿದೆವು. ನಿರ್ದರ್ಶನ್ ಜೊತೆಗೆ ವರ್ಕ್‌ಶಾಪ್ ಕೂಡಾ ಮಾಡಿದ್ದೆ. ಹೀಗಾಗಿಯೇ ನಮ್ಮಿಬ್ಬರ ಪಾತ್ರಗಳು ಬಹಳ ನೈಜವಾಗಿ ಬಂದಿದೆ’ ಎನ್ನುತ್ತಾರೆ ಚಂದನಾ ಅನಂತಕೃಷ್ಣ.

‘ಸುದೀಪ್ ಅವರು ಬಹಳ ಸೂಕ್ಷ್ಮವಾಗಿ ಈ ಹಾಡನ್ನು ನೋಡಿದ್ದಾರೆ. ಅವರು ಒಂದೊಂದು ದೃಶ್ಯದ ಬಗ್ಗೆ ಚರ್ಚಿಸಿದರು. ನಮ್ಮ ಈ ಸಣ್ಣ ಪ್ರಯತ್ನಕ್ಕೆ ಅವರ ಬೆಂಬಲ ಕಂಡು ಖುಷಿಯಾಯಿತು. ಮಾಡಿದ ಪ್ರಯತ್ನ ಸಾರ್ಥಕವಾಯಿತು ಎಂದೆನಿಸಿತು’ ಎಂದರು ಚಂದನಾ. ❖

ದೆಹಲಿ ಸಿ.ಎಂ ರೇಖಾ ಮೇಲೆ ಹಲ್ಲೆ: ಬಂಧನ

‘ಜನ ಸಂವಾದ’ ಕಾರ್ಯಕ್ರಮದಲ್ಲಿ ನಡೆದ ಘಟನೆ • ಹತ್ಯೆಗೆ ನಡೆದ ‘ಯೋಜಿತ ಸಂಚು’: ಮುಖ್ಯಮಂತ್ರಿ ಕಚೇರಿ

ದೆಹಲಿ ಮುಖ್ಯಮಂತ್ರಿ ನಿವಾಸದ ಹೊರಗೆ ಬಿಗಿ ಭದ್ರತೆ ಕಲ್ಪಿಸಲಾಗಿತ್ತು ಪಿಟಿಐ ಚಿತ್ರ

ರೇಖಾ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರ ಮೇಲೆ ‘ಜನ ಸಂವಾದ’ ಕಾರ್ಯಕ್ರಮದಲ್ಲಿ ವ್ಯಕ್ತಿಯೊಬ್ಬ ಹಲ್ಲೆ ನಡೆಸಿದ್ದು, ಇದು ರೇಖಾ ಅವರ ಹತ್ಯೆಗೆ ನಡೆಸಿದ ‘ಯೋಜಿತ ಸಂಚಿನ ಭಾಗ’ ಎಂದು ಮುಖ್ಯಮಂತ್ರಿ ಕಚೇರಿ (ಸಿಎಂಒ) ಹೇಳಿದೆ.

ಕೊಲೆ ಯತ್ನ ಆರೋಪಕ್ಕೆ ಸಂಬಂಧಿಸಿದಂತೆ ಗುಜರಾತ್‌ನ ರಾಜ್‌ಕೋಟ್ ನಿವಾಸಿ ಸಕರಿಯಾ ರಾಜೇಶ್‌ಭಾಯಿ ಖಿಮ್ಜಿಭಾಯಿ (41) ಎಂಬುವವನನ್ನು ಬಂಧಿಸಿ, ಎಫ್‌ಐಆರ್ ದಾಖಲಿಸಲಾಗಿದೆ. ಆರೋಪಿಯನ್ನು ಗುಪ್ತಚರ ದಳ ಮತ್ತು ದೆಹಲಿ ಪೊಲೀಸ್ ವಿಶೇಷ ಘಟಕವು ವಿಚಾರಣೆ ನಡೆಸುತ್ತಿದೆ. ಬೆಳಿಗ್ಗೆ 8.15ರ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರೇಖಾ ಅವರನ್ನು ವೈದ್ಯರು ಪರೀಕ್ಷಿಸಿದ್ದಾರೆ. ಸದ್ಯ ಅವರು ವೈದ್ಯರ ನಿಗಾದಲ್ಲಿದ್ದಾರೆ ಎಂದು ಸಿಎಂಒ ಅಧಿಕಾರಿಗಳು ತಿಳಿಸಿದ್ದಾರೆ.

ಸಿವಿಲ್ ಲೈನ್ಸ್‌ನಲ್ಲಿರುವ ಮುಖ್ಯಮಂತ್ರಿಗಳ ಕಚೇರಿಯಲ್ಲಿ ಬುಧವಾರ ‘ಜನ ಸಂವಾದ’ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಜನರೊಂದಿಗೆ ಕುಳಿತು ತನ್ನ ಸರದಿ ಬಂದಾಗ ಮುಖ್ಯಮಂತ್ರಿ ಅವರ ಬಳಿ ಹೋದ ಆರೋಪಿಯು, ಅವರೊಂದಿಗೆ ಮಾತನಾಡುತ್ತಲೇ ಏಕಾಏಕಿ ಹಲ್ಲೆ ನಡೆಸಿದ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ರೇಖಾ ಗುಪ್ತಾ ಅವರ ಕೈ, ಭುಜ ಮತ್ತು ತಲೆಗೆ ಪೆಟ್ಟಾಗಿದೆ ಎಂದು ಲೋಕೋಪಯೋಗಿ ಸಚಿವ ಪರ್ವೇಶ್ ವರ್ಮಾ ತಿಳಿಸಿದ್ದಾರೆ.

ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ‘ಝಡ್’ ಶ್ರೇಣಿ ಭದ್ರತೆ ಹೊಂದಿದ್ದಾರೆ. ಘಟನೆ ಕುರಿತ ವಿಸ್ತೃತ ವರದಿಯನ್ನು ಪೊಲೀಸರು ಸಲ್ಲಿಸಿದ ಬಳಿಕ ಮುಖ್ಯಮಂತ್ರಿ ಅವರ ಭದ್ರತೆ ಕುರಿತು ಗೃಹ ಸಚಿವಾಲಯ ಪರಿಶೀಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

> ಇಂಥ ದಾಳಿಯಿಂದ ಜನರಿಗೆ ಸೇವೆ ಸಲ್ಲಿಸಬೇಕೆಂಬ ನನ್ನ ತುಡಿತವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಹಿಂದೆಂದಿಗಿಂತ ಹೆಚ್ಚಿನ ಶಕ್ತಿ ಮತ್ತು ಸಮರ್ಪಣೆಯೊಂದಿಗೆ ಜನಸೇವೆ ಮುಂದುವರಿಸುತ್ತೇನೆ
> **ರೇಖಾ ಗುಪ್ತಾ,** ಮುಖ್ಯಮಂತ್ರಿ

> ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪರ–ವಿರೋಧ ಅಭಿಪ್ರಾಯ ವ್ಯಕ್ತಪಡಿಸುವುದು ಸ್ವೀಕಾರಾರ್ಹ, ಆದರೆ ಅಲ್ಲಿ ಹಿಂಸಾಚಾರಕ್ಕೆ ಆಸ್ಪದವಿಲ್ಲ
> **ಅರವಿಂದ ಕೇಜ್ರಿವಾಲ್**
> ಮಾಜಿ ಮುಖ್ಯಮಂತ್ರಿ

ಸಿ.ಸಿ.ಟಿ.ವಿ ದೃಶ್ಯ ಹಸ್ತಾಂತರ

ಆರೋಪಿಯು ಎರಡು ದಿನಗಳ ಹಿಂದಷ್ಟೇ ದೆಹಲಿಗೆ ಬಂದು ಉತ್ತರ ದೆಹಲಿಯ ಸಿವಿಲ್ ಲೈನ್ಸ್‌ನಲ್ಲಿ ನೆಲಸಿದ್ದ. ಈ ಹಲ್ಲೆಯು ಪೂರ್ವಯೋಜಿತ ಸಂಚು ಎಂದು ಸಿ.ಸಿ.ಟಿ.ವಿ ದೃಶ್ಯಗಳನ್ನು ಉಲ್ಲೇಖಿಸಿ ಅಧಿಕೃತ ಮೂಲಗಳು ತಿಳಿಸಿವೆ.

ಆರೋಪಿಯು ಹಲ್ಲೆಗೂ ಕನಿಷ್ಠ 24 ತಾಸು ಮುನ್ನ ಸಿದ್ಧತೆ ನಡೆಸಿರುವುದು ಸಿ.ಸಿ.ಟಿ.ವಿ ದೃಶ್ಯಾವಳಿಗಳ ಮೂಲಕ ಗೊತ್ತಾಗುತ್ತದೆ. ಆತ ಫೋನ್‌ನಲ್ಲಿ ಮಾತನಾಡುವ ದೃಶ್ಯ ಸೆರೆಯಾಗಿದೆ. ಈ ದೃಶ್ಯಾವಳಿಗಳನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿ ವಿರುದ್ಧ 5 ಕ್ರಿಮಿನಲ್ ಪ್ರಕರಣ

ರಾಜೇಶ್ ಭಾಯಿ

ಚಾಕುವಿನಿಂದ ಹಲ್ಲೆ ಸೇರಿ ಐದು ಕ್ರಿಮಿನಲ್ ಪ್ರಕರಣಗಳು ಆರೋಪಿ ವಿರುದ್ಧ ದಾಖಲಾಗಿರುವುದು ತಿಳಿದುಬಂದಿದೆ. ಮುಖ್ಯಮಂತ್ರಿ ಅವರ ಮೇಲೆ ಹಲ್ಲೆ ನಡೆಸಿದ ಸಂದರ್ಭದಲ್ಲಿ ಆರೋಪಿ ಬಳಿ ಯಾವುದೇ ಶಸ್ತ್ರಾಸ್ತ್ರಗಳು ಇರಲಿಲ್ಲ. ಮುಖ್ಯಮಂತ್ರಿ ಭೇಟಿಗೂ ಮುನ್ನ ಕಠಿಣ ಭದ್ರತಾ ತಪಾಸಣೆ ನಡೆಸಲಾಗುತ್ತದೆ ಎಂದು ಆತನಿಗೂ ತಿಳಿದಿತ್ತು. ಬಟ್ಟೆ ಮತ್ತು ಕಾಗದಗಳಿದ್ದ ಚೀಲವನ್ನು ಆತ ಹಿಡಿದುಕೊಂಡು ಬಂದಿದ್ದ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ನನ್ನ ಮಗ ನಾಯಿ ಪ್ರೇಮಿ’

ಆರೋಪಿಯ ತಾಯಿ ಭಾನುಬೆನ್ ಸಕರಿಯಾ ಅವರು, ‘ನನ್ನ ಮಗ ಯಾವುದೇ ರಾಜಕೀಯ ಪಕ್ಷಗಳೊಂದಿಗೆ ಸಂಬಂಧ ಹೊಂದಿಲ್ಲ. ಸುಪ್ರೀಂ ಕೋರ್ಟ್ ಬೀದಿನಾಯಿಗಳ ಕುರಿತು ಇತ್ತೀಚೆಗೆ ನೀಡಿದ ತೀರ್ಪು ವಿರೋಧಿಸುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಿದ್ದ. ನನ್ನ ಮಗ ‘ನಾಯಿ ಪ್ರೇಮಿ’ ಎಂದು ಹೇಳಿದರು.

‘ಅವನಿಗೆ ನಾಯಿಗಳು, ಗೋವು, ಹಕ್ಕಿಗಳೆಂದರೆ ಪ್ರೀತಿ. ಹೀಗಾಗಿ ಸುಪ್ರೀಂ ಕೋರ್ಟ್ ತೀರ್ಪಿನಿಂದ ಬೇಸರಗೊಂಡಿದ್ದ’ ಎಂದು ತಿಳಿಸಿದರು.

ಎನ್‌ಡಿಎ ಮೈತ್ರಿಕೂಟದ ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ನಾಮಪತ್ರ ಸಲ್ಲಿಸಿದರು –ಪಿಟಿಐ ಚಿತ್ರ

ಚುನಾವಣೆ: ರಾಧಾಕೃಷ್ಣನ್ ನಾಮಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ಎನ್‌ಡಿಎ ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿಯಾಗಿ ಸಿ.ಪಿ.ರಾಧಾಕೃಷ್ಣನ್ ಬುಧವಾರ ನಾಮಪತ್ರ ಸಲ್ಲಿಕೆ ಮಾಡಿದರು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಇದ್ದರು.

ರಾಧಾಕೃಷ್ಣನ್ ಅವರ ಪರವಾಗಿ ಪ್ರಧಾನಿ ಮೋದಿ ಅವರು ನಾಲ್ಕು ಸೆಟ್ ನಾಮಪತ್ರಗಳನ್ನು ಚುನಾವಣಾಧಿಕಾರಿ, ರಾಜ್ಯಸಭಾ ಕಾರ್ಯದರ್ಶಿ ಪಿ.ಸಿ. ಮೋದಿ ಅವರಿಗೆ ಹಸ್ತಾಂತರಿಸಿದರು. ಈ ನಾಮಪತ್ರಗಳಿಗೆ ಮೋದಿ, ಸಿಂಗ್, ಶಾ ಹಾಗೂ ಜೆಡಿಯು ನಾಯಕ ರಾಜೀವ್ ರಂಜನ್ ಸಿಂಗ್ ಸೂಚಕರಾಗಿ ಸಹಿ ಹಾಕಿದರು. ನಾಮಪತ್ರಗಳನ್ನು ಪರಿಶೀಲಿಸಿದ ಚುನಾವಣಾಧಿಕಾರಿ ರಾಧಾಕೃಷ್ಣನ್ ಅವರಿಂದ ರಿಜಿಸ್ಟರ್‌ಗೆ ಸಹಿ ಹಾಕಿಸಿದರು. ನಂತರ ಅವರು, ನಾಮಪತ್ರದ ಸ್ವೀಕೃತಿ ಪತ್ರವನ್ನು ಪ್ರಧಾನಿ ಅವರಿಗೆ ನೀಡಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಪ್ರೇರಣಾ ಸ್ಥಳದಲ್ಲಿರುವ ಮಹಾತ್ಮಾ ಗಾಂಧಿ, ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಹಾಗೂ ಸಂಸತ್ ಭವನದ ಆವರಣದಲ್ಲಿರುವ ಗಣ್ಯ ವ್ಯಕ್ತಿಗಳ ಪ್ರತಿಮೆಗೆ ರಾಧಾಕೃಷ್ಣನ್ ಗೌರವ ಸಲ್ಲಿಸಿದರು.

ಉಪ ರಾಷ್ಟ್ರಪತಿ ಚುನಾವಣೆಗೆ ಲೋಕಸಭೆ ಹಾಗೂ ರಾಜ್ಯಸಭೆಯ ಸದಸ್ಯರು, ರಾಜ್ಯಸಭೆಯ ನಾಮ ನಿರ್ದೇಶಿತ ಸದಸ್ಯರು ಮತ ಚಲಾಯಿಸಬಹುದಾಗಿದೆ.

ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಪದವಿ ವ್ಯಾಸಂಗ ಕುರಿತ ಮಾಹಿತಿಯನ್ನು ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ(ಸಿಐಸಿ) ನಿರ್ದೇಶನ ನೀಡಿದ್ದನ್ನು ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ(ಡಿಯು) ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ದೆಹಲಿ ಹೈಕೋರ್ಟ್ ಬುಧವಾರ ಕಾಯ್ದಿರಿಸಿತು.

ನ್ಯಾಯಮೂರ್ತಿ ಸಚಿನ್ ದತ್ತಾ ಅವರು ಬುಧವಾರ ತೀರ್ಪು ಪ್ರಕಟಿಸಬೇಕಿತ್ತು. ಆದರೆ, ಅವರು ಕಲಾಪ ನಡೆಸಲಿಲ್ಲ. ಆಗಸ್ಟ್ 25ರಂದು ತೀರ್ಪು ಪ್ರಕಟಿಸುವ ನಿರೀಕ್ಷೆ ಇದೆ.

ವಿಚಾರಣೆ ವೇಳೆ, ದೆಹಲಿ ವಿಶ್ವವಿದ್ಯಾಲಯ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ,‘ಮಾಹಿತಿ ತಿಳಿದುಕೊಳ್ಳುವ ಹಕ್ಕಿಗಿಂತ ಖಾಸಗಿತನ ಹಕ್ಕು ಮಿಗಿಲಾದದ್ದು. ಹೀಗಾಗಿ, ಸಿಐಸಿ ಆದೇಶವು ರದ್ದುಗೊಳಿಸಲು ಯೋಗ್ಯವಾಗಿದೆ’ ಎಂದರು.

‘ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ತೋರಿಸಲು ದೆಹಲಿ ವಿಶ್ವವಿದ್ಯಾಲಯ ಸಿದ್ಧವಿದೆ. ಅದೇ, ಆರ್‌ಟಿಐ ಅಡಿ ಅರ್ಜಿ ಸಲ್ಲಿಸುವ ಅಪರಿಚಿತರು ಈ ದಾಖಲೆಗಳನ್ನು ಪರಿಶೀಲನೆ ನಡೆಸುವುದಕ್ಕಾಗಿ ಬಹಿರಂಗ ಪಡಿಸಲು ಸಾಧ್ಯವಿಲ್ಲ’ ಎಂದರು.

ಮೋದಿ ಅವರ ಪದವಿ ವ್ಯಾಸಂಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಕೋರಿ ನೀರಜ್ ಎಂಬುವವರು ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು. ದಾಖಲೆಗಳನ್ನು ಪರಿಶೀಲಿಸಲು ಅವಕಾಶ ನೀಡಿ ಸಿಐಸಿ 2016ರಲ್ಲಿ ಆದೇಶಿಸಿತ್ತು.

ಸಂವಿಧಾನ ರಚನಾಸಭೆಯಲ್ಲಿನ ಚರ್ಚೆ ಉಲ್ಲೇಖಿಸಿ ಸುಪ್ರೀಂ ಕೋರ್ಟ್ ಪ್ರಶ್ನೆ

‘ಶಕ್ತಿ ಕೇಂದ್ರ’ಗಳ ಮಧ್ಯೆ ಸೌಹಾರ್ದ ಇದೆಯೇ’

ನವದೆಹಲಿ (ಪಿಟಿಐ): ‘ಸಂವಿಧಾನ ರಚನಕಾರರ ಕಲ್ಪನೆಯಂತೆ ರಾಜ್ಯಪಾಲರು ಹಾಗೂ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ನಡುವೆ ಸೌಹಾರ್ದ ಸಂಬಂಧ ಇದೆಯೇ’ ಎಂದು ಸುಪ್ರಿಂ ಕೋರ್ಟ್ ಬುಧವಾರ ಪ್ರಶ್ನಿಸಿದೆ.

ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರು ಇರುವ ಸಂವಿಧಾನ ಪೀಠವು, ರಾಜ್ಯಪಾಲರ ನೇಮಕ ಮತ್ತು ಅಧಿಕಾರ ಕುರಿತು ಸಂವಿಧಾನ ರಚನಾಸಭೆಯಲ್ಲಿ ನಡೆದ ಚರ್ಚೆಗಳನ್ನು ಉಲ್ಲೇಖಿಸಿ, ಕೇಂದ್ರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಈ ಪ್ರಶ್ನೆ ಕೇಳಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ವಿಕ್ರಮನಾಥ್, ಪಿ.ಎಸ್. ನರಸಿಂಹ ಹಾಗೂ ಎ.ಎಸ್. ಚಂದೂರ್ಕರ್ ಅವರು ಈ ಪೀಠದಲ್ಲಿದ್ದಾರೆ.

ಶಾಸನಸಭೆಗಳಲ್ಲಿ ಅಂಗೀಕಾರಗೊಂಡ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಕಾಲಮಿತಿ ನಿಗದಿ ಮಾಡುವುದಕ್ಕೆ ಸಂಬಂಧಿಸಿ ರಾಷ್ಟ್ರಪತಿ ಅವರು ಸುಪ್ರೀಂ ಕೋರ್ಟ್ ಸಲಹೆ ಕೇಳಿದ್ದಾರೆ. ಈ ಕುರಿತಂತೆ ಬುಧವಾರವೂ ವಿಚಾರಣೆ ಮುಂದುವರಿಯಿತು.

> ರಾಜ್ಯಪಾಲ ಮತ್ತು ಸರ್ಕಾರ ಎರಡು ಶಕ್ತಿಕೇಂದ್ರಗಳಾಗಿದ್ದು, ಅನೇಕ ವಿಷಯಗಳು ಕುರಿತು ಸಮಾಲೋಚನೆಗಳು ನಡೆಯುವ ಜೊತೆಗೆ ಈ ಎರಡು ‘ಶಕ್ತಿ ಕೇಂದ್ರ’ಗಳ ನಡುವೆ ಸೌಹಾರ್ದ ಸಂಬಂಧ ಇದೆಯೇ?
> **ಸುಪ್ರೀಂ ಕೋರ್ಟ್**

ಇದಕ್ಕೆ ಪ್ರತಿಕ್ರಿಯಿಸಿದ ಮೆಹ್ತಾ,‘ಈ ವಿಚಾರಕ್ಕೆ ಸಂಬಂಧಿಸಿ ವಿವಿಧ ಸ್ತರಗಳಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ. ಇದರ ಹೊರತಾಗಿ ಅವಲೋಕಿಸಿದಾಗ, ರಾಜಕೀಯವಾಗಿ ಆಶ್ರಯ ಬೇಡುವವರಿಗಾಗಿ ರಾಜ್ಯಪಾಲರ ಹುದ್ದೆ ಸೃಷ್ಟಿಸಿಲ್ಲ. ರಾಜ್ಯಪಾಲರಿಗೆ ಇರುವ ಅಧಿಕಾರಗಳು ಹಾಗೂ ಜವಾಬ್ದಾರಿಗಳ ಕುರಿತು ಸಂವಿಧಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ’ ಎಂದು ಹೇಳಿದರು.

‘ಸಂವಿಧಾನದಲ್ಲಿ ಉಲ್ಲೇಖಿಸಿರುವಂತೆ ಒಕ್ಕೂಟ ವ್ಯವಸ್ಥೆಯನ್ನು ಗಮನದಲ್ಲಿ ಇಟ್ಟುಕೊಂಡೇ ರಾಜ್ಯಪಾಲರ ನೇಮಕ ಹಾಗೂ ಅವರ ಪಾತ್ರ ಕುರಿತಂತೆ ಸಂವಿಧಾನರಚನಾ ಸಭೆಯಲ್ಲಿ ವ್ಯಾಪಕ ಚರ್ಚೆಗಳು ನಡೆದಿವೆ’ ಎಂದೂ ಮೆಹ್ತಾ ಪೀಠಕ್ಕೆ ತಿಳಿಸಿದರು.

‘ಸುಪ್ರೀಂ’ ಸುದ್ದಿ

‘ಎಂ–ಟೆಕ್ ಓದಿದ ಪತ್ನಿಗೆ ₹50 ಲಕ್ಷ ಜೀವನಾಂಶ ನೀಡಿ’

ಪತ್ನಿಗೆ ಜೀವನಾಂಶ ನೀಡುವ ವಿಚಾರದಲ್ಲಿ ಗಂಡನ ಸಾಮರ್ಥ್ಯ ಹಾಗೂ ಪತ್ನಿಯ ಅಗತ್ಯವನ್ನು ಸುಪ್ರೀಂ ಕೋರ್ಟ್ ಪರಿಗಣನೆಗೆ ತೆಗೆದುಕೊಂಡಿದೆ.

ವೈದ್ಯಕೀಯ ಪದವಿ ಹೊಂದಿರುವ ಪತಿಯು ಹೆಚ್ಚಿನ ಮೊತ್ತ ಪಾವತಿಸುವ ಸಾಮರ್ಥ್ಯ ಹೊಂದಿದ್ದು, ಎಂ.ಟೆಕ್ ಮತ್ತು ಎಲ್‌ಎಲ್‌ಬಿ ಪದವಿ ಹೊಂದಿರುವ ಪತ್ನಿಗೆ ಶಾಶ್ವತ ಜೀವನಾಂಶವನ್ನು ₹15 ಲಕ್ಷದಿಂದ ₹50 ಲಕ್ಷಕ್ಕೆ ಹೆಚ್ಚಿಸಿ, ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ನ್ಯಾಯಪೀಠವು ತೀರ್ಪು ನೀಡಿದೆ.

ನ್ಯಾಯಾಲಯವು ಮಹಿಳೆಯ ಮನವಿಯನ್ನು ಭಾಗಶಃ ಅಂಗೀಕರಿಸಿ, ವಿಚ್ಛೇದನದ ತೀರ್ಪನ್ನು ಎತ್ತಿಹಿಡಿಯಿತು. ಆದರೆ, ಕರ್ನಾಟಕ ಹೈಕೋರ್ಟ್ ಆದೇಶವನ್ನು ಮಾರ್ಪಡಿಸಿ, ಮೇಲ್ಮನವಿ ಸಲ್ಲಿಸಿದ್ದ ಪತ್ನಿಗೆ ನೀಡಬೇಕಿರುವ ಶಾಶ್ವತ ಜೀವನಾಂಶವನ್ನು ₹50 ಲಕ್ಷಕ್ಕೆ ಹೆಚ್ಚಿಸಿತು.

‘ಜೀವನಾಂಶ ನಿರ್ಧರಿಸಲು ಅನೇಕ ಅಂಶಗಳನ್ನು ಪರಿಗಣಿಸುವ ಅಗತ್ಯವಿದೆ. ಪ್ರತಿವಾದಿಯು ಕೌಟುಂಬಿಕ ನ್ಯಾಯಾಲಯವು ಸೂಚಿಸಿದ್ದಕ್ಕಿಂತ ಹೆಚ್ಚಿನ ಮೊತ್ತ ಜೀವನಾಂಶ ಪಾವತಿಸಲು ಅರ್ಹರಾಗಿದ್ದಾರೆ ಎಂದು ದಾಖಲೆಗಳಿಂದ ಕಂಡುಬಂದಿದೆ. ಅರ್ಜಿದಾರರು ನಿರುದ್ಯೋಗಿ ಎಂದು ಹೇಳಿಕೊಂಡಿದ್ದು, ಹೆಚ್ಚು ಅರ್ಹತೆ, ಸಂಪಾದಿಸುವ ಸಾಮರ್ಥ್ಯ ಹೊಂದಿದ್ದಾರೆ. ಅವರು ತೀವ್ರ ಆರ್ಥಿಕ ಅಭಾವದ ಸ್ಥಿತಿಯಲ್ಲಿಲ್ಲ’ ಎಂದು ನ್ಯಾಯಪೀಠವು ಒತ್ತಿ ಹೇಳಿದೆ.

ಅರ್ಜಿದಾರ ದಂಪತಿಯು 2009ರ ಫೆಬ್ರುವರಿ 27ರಂದು ಮದುವೆಯಾಗಿದ್ದರು. ಪತಿಯು 2009ರಿಂದ 2010ರವರೆಗೂ ಚಂಡೀಗಢದಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆ ತೆರಳಿದ್ದ ವೇಳೆ ತಾನು ಆರ್ಥಿಕ ನೆರವು ನೀಡಿದ್ದೆ ಎಂದು ಪತ್ನಿ ಅರ್ಜಿಯಲ್ಲಿ ತಿಳಿಸಿದ್ದರು. ದಂಪತಿಗೆ ಮಕ್ಕಳಿರಲಿಲ್ಲ. ಇಬ್ಬರ ನಡುವೆ ಉಂಟಾದ ಮನಸ್ತಾಪದಿಂದ ವಿಚ್ಛೇದನಕ್ಕೆ ಮುಂದಾಗಿದ್ದರು. ಪತಿಯು ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದ್ದ ಕೌಟುಂಬಿಕ ನ್ಯಾಯಾಲಯವು 2015ರಲ್ಲಿ ವಿಚ್ಛೇದನ ನೀಡಿ, ₹15 ಲಕ್ಷ ಶಾಶ್ವತ ಜೀವನಾಂಶ ನೀಡುವಂತೆ ಆದೇಶ ನೀಡಿತ್ತು.

ಇಬ್ಬರು ಕೂಡ ಈ ವಿಚಾರವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಈ ವೇಳೆ ಇಬ್ಬರ ಆದಾಯಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸುವಂತೆ ನೋಟಿಸ್ ನೀಡಿತ್ತು. ಆ ವೇಳೆ, ವೈದ್ಯ ಪತಿಯು ಮಾಸಿಕ ₹1.40 ಲಕ್ಷ ವೇತನ ಪಡೆದಿರುವುದಾಗಿ ದಾಖಲೆ ಸಲ್ಲಿಸಿದ್ದರು. ಪತ್ನಿ ತಾನು ನಿರುದ್ಯೋಗಿ ಎಂದು ಹೇಳಿಕೊಂಡಿದ್ದರು. ಇಬ್ಬರ ಮನವಿಯನ್ನು ಪರಿಗಣಿಸಿದ್ದ ಹೈಕೋರ್ಟ್, ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿದ್ದ ಪತ್ನಿ ಹೆಚ್ಚಿನ ಜೀವನಾಂಶ ಕೋರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಸಂಕ್ಷಿಪ್ತ ಸುದ್ದಿ

ಚುನಾವಣಾ ವಿಶ್ಲೇಷಕ ಸಂಜಯ್ ವಿರುದ್ಧ ಎಫ್‌ಐಆರ್

ನಾಗ್ಪುರ (ಪಿಟಿಐ): ಕಳೆದ ಲೋಕಸಭೆ ಚುನಾವಣೆಯಿಂದ ಮಹಾರಾಷ್ಟ್ರದ ವಿಧಾನಸಭೆ ಚುನಾವಣೆ ಹೊತ್ತಿಗೆ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಸಂಖ್ಯೆ ಅಧಿಕಗೊಂಡಿದೆ ಎಂದು ಸುಳ್ಳು ಮಾಹಿತಿ ಹಂಚಿಕೊಂಡಿದ್ದ ಆರೋಪದಡಿ ಚುನಾವಣಾ ವಿಶ್ಲೇಷಕ ಸಂಜಯ್ ಕುಮಾರ್ ಅವರ ವಿರುದ್ಧ ಇಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

ಲೋಕಸಭೆ ಚುನಾವಣೆ ಮತ್ತು ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯ ಮಧ್ಯೆ ಆರು ತಿಂಗಳ ಅಂತರವಿತ್ತು. ಈ ಅವಧಿಯಲ್ಲಿ ಎರಡು ಕ್ಷೇತ್ರಗಳಲ್ಲಿ ಮತದಾರರ ಸಂಖ್ಯೆ ಅಧಿಕಗೊಂಡಿದೆ ಎಂದು ಸಂಜಯ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ದಾಖಲೆಗಳು, ವಿಶ್ಲೇಷಣೆಗಳ ಸಮೇತ ಪೋಸ್ಟ್ ಹಂಚಿಕೊಂಡಿದ್ದರು.

ಬಳಿಕ ಈ ಮಾಹಿತಿಗಳಲ್ಲಿ ಕೆಲವು ದೋಷಗಳಿವೆ ಎಂದು ಹೇಳಿ ಸಂಜಯ್ ಅವರು ಪೋಸ್ಟ್ ಅನ್ನು ಅಳಿಸಿ ಹಾಕಿದ್ದರು. ತಪ್ಪು ಮಾಹಿತಿ ಹಂಚಿಕೊಂಡಿದ್ದಕ್ಕಾಗಿ ಕ್ಷಮೆಯನ್ನೂ ಕೇಳಿದ್ದರು. ರಾಮ್‌ಟೇಕ್ ನಗರದ ತಹಶೀಲ್ದಾರ್ ಅವರ ದೂರಿನ ಅನ್ವಯ ಸಂಜಯ್ ಅವರ ಮೇಲೆ ಎಫ್‌ಐಆರ್ ದಾಖಲಾಗಿದೆ.

ಮಾದಕವಸ್ತು ವಹಿವಾಟು: ವಿದ್ಯಾರ್ಥಿ ಬಂಧನ

ಹೈದರಾಬಾದ್ (ಪಿಟಿಐ): ₹7.3 ಲಕ್ಷ ಮೌಲ್ಯದ ಮಾದಕ ವಸ್ತುಗಳ ವಹಿವಾಟು ನಡೆಸುತ್ತಿದ್ದ ಆರೋಪದಡಿ ಬೆಂಗಳೂರಿನ ವಿದ್ಯಾರ್ಥಿ ಮತ್ತು ಹೈದರಾಬಾದ್‌ನ ಖಾಸಗಿ ಕಂಪನಿಯ ಉದ್ಯೋಗಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

12.57 ಗ್ರಾಂ ಎಂಡಿಎಂಎ, 305 ಗ್ರಾಂ ಗಾಂಜಾ, ಒಂದು ಕಾರು ಮತ್ತು ಮೂರು ಮೊಬೈಲ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ

ಬಿಸಿಎ ವಿದ್ಯಾರ್ಥಿ(19 ವರ್ಷ) ನೈಜೀರಿಯ ವ್ಯಕ್ತಿಗಳಿಂದ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದರು.

ಅಮೀಬಾ ಸೋಂಕು: ಶಂಕಿತ ಪ್ರಕರಣ

ತಿರುವನಂತಪುರ: ಕೇರಳದಲ್ಲಿ ‘ಮಿದುಳು ತಿನ್ನುವ ಅಮೀಬಾ’ (ಅಮೀಬಿಕ್ ಮೆನಿಂಗೊ ಎನ್ಸೆಫಲೈಟಿಸ್) ಸೋಂಕಿನ ಪ್ರಕರಣಗಳ ಹೆಚ್ಚಳವು ಆತಂಕ ಮೂಡಿಸಿರುವ ನಡುವೆಯೇ ಬುಧವಾರ ಮಲಪ್ಪುರಂನಲ್ಲಿ 11 ವರ್ಷದ ಬಾಲಕಿಯಲ್ಲಿ ಸೋಂಕಿನ ಗುಣಲಕ್ಷಣಗಳು ಪತ್ತೆಯಾಗಿದೆ.

ಸೋಂಕಿನ ಗುಣಲಕ್ಷಣಗಳು ಪತ್ತೆಯಾಗಿರುವ ಬಾಲಕಿ ಜ್ವರದಿಂದ ಬಳಲುತ್ತಿದ್ದು, ಆಕೆಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಂಕು ಹರಡಿದೆಯೇ? ಇಲ್ಲವೇ ಎಂಬುದನ್ನು ದೃಢಪಡಿಸುವ ವರದಿಗಾಗಿ ಕಾಯುತ್ತಿದ್ದೇವೆ ಎಂದು ಮಲಪ್ಪುರಂ ಜಿಲ್ಲಾ ಆರೋಗ್ಯಾಧಿಕಾರಿ ಮಾಹಿತಿ ನೀಡಿದ್ದಾರೆ.

ಕನ್ನಡದಲ್ಲಿ ರೈಲ್ವೆ ಪರೀಕ್ಷೆ: ವೈಷ್ಣವ್

ನವದೆಹಲಿ: ರೈಲ್ವೆಯಲ್ಲಿ ವಿವಿಧ ಹುದ್ದೆಗಳ ನೇಮಕಾತಿಗಾಗಿ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ 15 ಭಾಷೆಗಳಲ್ಲಿ ನಡೆಸಲಾಗುತ್ತದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ ಪ್ರಶ್ನೆಗೆ ಉತ್ತರಿಸಿದ ಅವರು, ‘ಅರ್ಜಿ ಸಲ್ಲಿಸುವ ಎಲ್ಲರನ್ನೂ ಸಮಾನವಾಗಿ ಪರಿಗಣಿಸಲಾಗುತ್ತದೆ. ಯಾವುದೇ ರಾಜ್ಯ ಅಥವಾ ಪ್ರದೇಶದ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದಿಲ್ಲ’ ಎಂದು ಸ್ಪಷ್ಟಪಡಿಸಿದರು. ‘ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಹದಿನೈದು ಭಾಷೆಗಳ ಪೈಕಿ ಯಾವುದಾದರೂ ಒಂದು ಪರೀಕ್ಷಾ ಮಾಧ್ಯಮ ಆಯ್ಕೆ ಮಾಡಿಕೊಳ್ಳಬೇಕು’ ಎಂದರು.

ಕಡೇ ಎಸೆತದಲ್ಲಿ ದುಬೆ ಗೆಲುವಿನ ಸಿಕ್ಸರ್

ಮಹಾರಾಜ ಟ್ರೋಫಿ: ಮೈಸೂರು ವಿರುದ್ಧ ಗುಲ್ಬರ್ಗ ಮಿಸ್ಟಿಕ್ಸ್‌ಗೆ ರೋಚಕ ಜಯ

• ಮೋಹನ್ ಕುಮಾರ ಸಿ.

ಮೈಸೂರು: ಕಡೆಯ ಎಸೆತದಲ್ಲಿ ಸಿಕ್ಸರ್ ಸಿಡಿಸಿದ ಪ್ರವೀಣ್ ದುಬೆ (ಔಟಾಗದೆ 53; 6x7) ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗ ಮಿಸ್ಟಿಕ್ಸ್‌ಗೆ ಏಳು ವಿಕೆಟ್‌ಗಳ ರೋಚಕ ಗೆಲುವು ತಂದುಕೊಟ್ಟರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಗುಲ್ಬರ್ಗ ತಂಡದ ಆಟಗಾರರು ರನ್ ಹೊಳೆ ಹರಿಸಿದರು. ಹೀಗಾಗಿ ವಾರಿಯರ್ಸ್‌ನ ಎಂ.ವೆಂಕಟೇಶ್ (ಔಟಾಗದೆ 93; 53 ಎಸೆತ, 4x6, 6x5) ಅವರ ಸೊಗಸಾದ ಇನಿಂಗ್ಸ್ ಫಲ ನೀಡಲಿಲ್ಲ.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಮೈಸೂರು ವಾರಿಯರ್ಸ್ ಎಸ್.ಯು.ಕಾರ್ತಿಕ್ (1) ಅವರ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ತವರಿನ ಅಂಗಳದಲ್ಲಿ ಎಂ.ವೆಂಕಟೇಶ್ ಗೋಡೆಯಂತೆ ನಿಂತು ಜೊತೆಯಾಟಗಳ ಮೂಲಕ ಅದ್ಭುತ ಇನ್ನಿಂಗ್ಸ್ ಕಟ್ಟಿದರು. ನಾಯಕ ಮನೀಷ್ ಪಾಂಡೆ (29; 19 ಎಸೆತ, 4x6) ಜೊತೆ 73 ರನ್ (38 ಎಸೆತ) ಹಾಗೂ ಯಶೋವರ್ಧನ್ ಪರಂತಾಪ್ (48; 19 ಎಸೆತ, 4x3, 6x4) ಜೊತೆ 91 (46 ಎಸೆತ) ರನ್‌ಗಳನ್ನು ಸೇರಿಸಿದರು. ಈ ಮೂಲಕ ವಾರಿಯರ್ಸ್ 5 ವಿಕೆಟ್‌ಗೆ 209 ರನ್ ಕಲೆಹಾಕಿ ಮಿಸ್ಟಿಕ್ಸ್‌ಗೆ ಸವಾಲಿನ ಗುರಿ ನೀಡಿತು.

ಅಬ್ಬರಿಸಿದ ಲವನೀತ್, ದುಬೆ: ಕೆ.ಗೌತಮ್ ಅವರ ಮೊದಲ ಓವರ್‌ನಲ್ಲಿ ಗುಲ್ಬರ್ಗದ ಲವನೀತ್ ಸಿಸೋಡಿಯಾ (37; 13 ಎಸೆತ, 4x1, 6x5) ಸತತ 4 ಸಿಕ್ಸರ್ ಸಿಡಿಸಿ ವಾರಿಯರ್ಸ್‌ಗೆ ನಡುಕ ಹುಟ್ಟಿಸಿದರು. ಗೌತಮ್ ಮಿಶ್ರ ಬೌಲಿಂಗ್‌ನಲ್ಲಿ ಮತ್ತೊಂದು ಸಿಕ್ಸರ್ ಸಿಡಿಸಲು ಹೋಗಿ ಲವ್‌ನಿತ್ ಔಟಾದರು. ಇಬ್ಬರ ನಡುವೆ ಮಾತಿನ ಚಕಮಕಿಯೂ ನಡೆಯಿತು.

ತಾಳ್ಮೆಯಿಂದ ಆಡುತ್ತಿದ್ದ ನಿಕಿನ್ ಜೋಸ್ (21) ಗಾಯಗೊಂಡು ನಿವೃತ್ತರಾದರು. ಈ ವೇಳೆ ಆರ್.ಸ್ಮರಣ್ (38; 24 ಎಸೆತ, 6x4) ಹಾಗೂ ಕೆ.ವಿ. ಸಿದ್ಧಾರ್ಥ್ (ಔಟಾಗದೆ 49; 34 ಎಸೆತ, 4x5, 6x1) ಉಪಯುಕ್ತ ಇನ್ನಿಂಗ್ಸ್ ಕಟ್ಟಿದರು. 41 ಎಸೆತದಲ್ಲಿ 66 ರನ್ ಜೊತೆಯಾಟ ಬಂದಿತು. ಕಾರ್ತಿಕ್ ಬೌಲಿಂಗ್‌ನಲ್ಲಿ ಸ್ಮರಣ್ ಔಟಾದ ನಂತರ ಬಂದ ಪ್ರವೀಣ್ ದುಬೆ ಸಿಕ್ಸರ್‌ಗಳನ್ನು ಸಿಡಿಸಿ ಗೆಲುವಿನ ಆಸೆ ಚಿಗುರಿಸಿದರು. ಕಡೆ 5 ಓವರ್‌ನಲ್ಲಿ 73 ರನ್ ಪೇರಿಸಿದ ಇಬ್ಬರೂ ತಂಡವನ್ನು ಗೆಲುವಿನ ದಡ ಸೇರಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿಸಿದರು.

ಸಂಕ್ಷಿಪ್ತ ಸ್ಕೋರ್: ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 5ಕ್ಕೆ 209 (ಎಂ.ವೆಂಕಟೇಶ್ 93, ಯಶೋವರ್ಧನ್ ಪರಂತಾಪ್ 48, ಲವೀಶ್ ಕೌಶಲ್ 25ಕ್ಕೆ 2) ಗುಲ್ಬರ್ಗ ಮಿಸ್ಟಿಕ್ಸ್ 20 ಓವರ್‌ಗಳಲ್ಲಿ 3ಕ್ಕೆ 213 (ಪ್ರವೀಣ್ ದುಬೆ 53, ಕೆ.ವಿ. ಸಿದ್ಧಾರ್ಥ್ 49, ಶಿಖರ್ ಶೆಟ್ಟಿ 32ಕ್ಕೆ 1) **ಪಂದ್ಯದ ಆಟಗಾರ:** ಪ್ರವೀಣ್ ದುಬೆ

ಮೈಸೂರು ವಾರಿಯರ್ಸ್ ಎದುರು ಕೊನೆಯ ಎಸೆತದಲ್ಲಿ ಸಿಕ್ಸರ್ ಸಿಡಿಸಿ ಗುಲ್ಬರ್ಗ ಮಿಸ್ಟಿಕ್ಸ್‌ಗೆ ಗೆಲುವು ತಂದುಕೊಟ್ಟ ಪ್ರವೀಣ್ ದುಬೆ ಅವರನ್ನು ಸಹ ಆಟಗಾರರು ಅಭಿನಂದಿಸಿದರು ಚಿತ್ರ: ಅನೂಪ್ ರಾಘ.ಟಿ.

ನವೀನ ಆಲ್‌ರೌಂಡ್ ಆಟ: ಬ್ಲಾಸ್ಟರ್ಸ್‌ಗೆ ಮಣಿದ ಟೈಗರ್ಸ್

ಮೈಸೂರು: ಎಂ.ಜಿ.ನವೀನ ಅವರ ಆಲ್‌ರೌಂಡ್ ಆಟದ ಬಲದಿಂದ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಬೆಂಗಳೂರು ಬ್ಲಾಸ್ಟರ್ಸ್ 3 ವಿಕೆಟ್‌ಗಳ ರೋಚಕ ಜಯ ಸಾಧಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಹುಬ್ಬಳ್ಳಿ ಟೈಗರ್ಸ್ ಎಸ್.ರಕ್ಷಿತ್ (61; 42 ಎಸೆತ 4x3, 6x4) ಅವರ ತಾಳ್ಮೆಯ ಅರ್ಧಶತಕದಿಂದ 8ಕ್ಕೆ 141 ರನ್‌ಗಳ ಸಾಧಾರಣ ಮೊತ್ತ ಕಲೆಹಾಕಿತು. ವಿದ್ಯಾಧರ ಪಾಟೀಲ (25ಕ್ಕೆ 2) ಮತ್ತು ಎಂ.ಜಿ. ನವೀನ್ (31ಕ್ಕೆ 2) ಉತ್ತಮ ಬೌಲಿಂಗ್ ದಾಳಿ ನಡೆಸಿದರು. ಗುರಿ ಬೆನ್ನಟ್ಟಿದ ಬೆಂಗಳೂರು ಆಘಾತ ಅನುಭವಿಸಿತು. ಎಲ್.ಆರ್.ಚೇತನ್ (32), ಸೂರಜ್ ಅಹುಜಾ (26) ಹಾಗೂ ಎಂ.ಜಿ.ನವೀನ್ (33; 12 ಎಸೆತ, 4x2, 6x3) ಆಸರೆಯಾದರು. ಕಡೆ ಓವರ್‌ನಲ್ಲಿ ಬೌಂಡರಿ ಬಾರಿಸಿದ ನವೀನ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 141 (ಎಸ್.ರಕ್ಷಿತ್ 61, ವಿದ್ಯಾಧರ ಪಾಟೀಲ 25ಕ್ಕೆ2, ಎಂ.ಜಿ. ನವೀನ್ 31ಕ್ಕೆ2) **ಬೆಂಗಳೂರು ಬ್ಲಾಸ್ಟರ್ಸ್:** 19.2 ಓವರ್‌ಗಳಲ್ಲಿ 7ಕ್ಕೆ 145 (ಎಂ.ಜಿ.ನವೀನ್ 33, ಎಲ್.ಆರ್.ಚೇತನ್ 32, ಯಶ್‌ರಾಜ್ ಪೂಂಜ 34ಕ್ಕೆ 3) **ಪಂದ್ಯದ ಆಟಗಾರ:** ಎಂ.ಜಿ.ನವೀನ

ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್

ಸ್ಕೀಟ್ ಚಿನ್ನ ಗೆದ್ದ ಅನಂತಜೀತ್

ಶಿಮ್ಕೆಂಟ್ (ಕಜಾಕಸ್ತಾನ) (ಪಿಟಿಐ): ಭಾರತದ ಅನಂತಜೀತ್ ಸಿಂಗ್ ನರೂಕ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ವೈಯಕ್ತಿಕ ವಿಭಾಗದಲ್ಲಿ ಮೊದಲ ಚಿನ್ನ ಗೆದ್ದುಕೊಂಡರು. ಬುಧವಾರ ನಡೆದ ಪುರುಷರ ಸ್ಕೀಟ್ ಸ್ಪರ್ಧೆಯ ಫೈನಲ್‌ನಲ್ಲಿ ಅವರು ಕುವೈತ್‌ನ ಮನ್ಸೂರ್ ಅಲ್ ರಶೀದಿ ಅವರನ್ನು ಸೋಲಿಸಿದರು.

ಬೆಳಿಗ್ಗೆ, ಭಾರತದ ಸೌರಭ್ ಚೌಧರಿ ಮತ್ತು ಉದಯೋನ್ಮುಖ ಶೂಟರ್ ಸುರುಚಿ ಇಂದರ್ ಸಿಂಗ್ ಅವರನ್ನೊಳಗೊಂಡ ತಂಡ 10 ಮೀ. ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಚೀನಾ ತೈಪೆಯ ಎದುರಾಳಿಗಳನ್ನು ಸೋಲಿಸಿ ಕಂಚಿನ ಪದಕ ಗೆದ್ದುಕೊಂಡಿತ್ತು.

27 ವರ್ಷ ವಯಸ್ಸಿನ ನರೂಕ 57–56 ರಿಂದ ಏಷ್ಯನ್ ಗೇಮ್ಸ್ ಚಾಂಪಿಯನ್ ಅಲ್ ರಶೀದಿ ಅವರನ್ನು ಸೋಲಿಸಿ ಚಾಂಪಿಯನ್ ಆದರು. ಕಂಚಿನ ಪದಕ ಕತಾರ್‌ನ ಅಲ್ ಇಶಾಖ್ ಅಲಿ ಅಹ್ಮದ್ ಪಾಲಾಯಿತು.



ಅನಂತಜೀತ್ ಸಿಂಗ್ ನರೂಕ 'ಎಕ್ಸ್' ಚಿತ್ರ

2023ರ ಚಾಂಪಿಯನ್‌ಷಿಪ್‌ನಲ್ಲಿ ತಂಡ ವಿಭಾಗದಲ್ಲಿ ಮತ್ತು ಮಿಶ್ರ ವಿಭಾಗದಲ್ಲಿ ಚಿನ್ನ ಗೆದಿದ್ದ ನರೂಕಾ ಸ್ಕೀಟ್ ಸ್ಪರ್ಧೆಯ ಕ್ವಾಲಿಫೈಯಿಂಗ್ ಸುತ್ತಿನ ಬಳಿಕ 119ರ ಸ್ಕೋರ್‌ನೊಡನೆ ಎರಡನೇ ಸ್ಥಾನದಲ್ಲಿದ್ದರು. ಕುವೈತ್‌ನ ಅಬ್ದುಲಜೀಜ್ ಅಲ್ಸಾದ್ (120) ಮೊದಲಿಗರಾಗಿದ್ದರು. ಅಲ್ ರಶೀದಿ (119) ಮೂರನೇ ಸ್ಥಾನದಲ್ಲಿದ್ದರು.

ನರೂಕಾ ಅವರಿಗೆ ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಇದು ಒಟ್ಟಾರೆ ಐದನೇ ಪದಕ.

ಸೌರಭ್ ಮತ್ತು ಸುರುಚಿ ಜೋಡಿ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಐದನೇ ಸ್ಥಾನ ಪಡೆದು ಪದಕ ಸುತ್ತಿಗೆ ಅರ್ಹತೆ ಪಡೆದಿತ್ತು.

ಜೂನಿಯರ್ ವಿಭಾಗದಲ್ಲಿ ಚಿನ್ನ: ವಂಶಿಕಾ ಚೌಧರಿ ಮತ್ತು ಗ್ಯಾವಿನ್ ಅಂಥೋನಿ ಜೋಡಿ, ಜೂನಿಯರ್ ವಿಭಾಗದ 10 ಮೀ. ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು. ಇವರಿಬ್ಬರು ಫೈನಲ್‌ನಲ್ಲಿ ಕೊರಿಯಾದ ಕಿಮ್ ಯೆಜಿನ್– ಕಿಮ್ ದೂಯಿಯಾನ್ ಜೋಡಿಯನ್ನು 16–14ರಿಂದ ಸೋಲಿಸಿದರು.

ಚೆನ್ನೈನಲ್ಲಿ ಅಂತರ ರಾಜ್ಯ ಸೀನಿಯರ್ ಅಥ್ಲೆಟಿಕ್ಸ್

ಮಣಿಕಂಠ, ಶಿವಾಜಿಗೆ ರಜತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಅಥ್ಲೀಟ್‌ಗಳು ಚೆನ್ನೈನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಂತರರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಜಯದ ಖಾತೆತೆರೆಯಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದಲ್ಲಿ ಬುಧವಾರ ಕರ್ನಾಟಕದ ಮಣಿಕಂಠ ಹೋಬಳಿದಾರ್ ಅವರು ಪುರುಷರ 100 ಮೀಟರ್ಸ್ ಓಟದಲ್ಲಿ ಬೆಳ್ಳಿ ಪದಕ ಜಯಿಸಿದರು. ಅವರು 10.35 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ತಮಿಳುನಾಡಿನ ತಮಿಳ್ ಅರಸು ಅವರು (10.22ಸೆ) ಪ್ರಥಮ ಸ್ಥಾನ ಗಳಿಸಿದರು. ತಮಿಳುನಾಡಿನ ರಾಗುಲ್ ಕುಮಾರ್ ಜಿ (10.40ಸೆ) ಅವರು ಮೂರನೇ ಸ್ಥಾನ ಪಡೆದರು.

ಆದರೆ ಮುಂದಿನ ತಿಂಗಳು ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಅರ್ಹತೆ ಗಳಿಸಲು 10 ಸಕೆಂಡುಗಳ ಅರ್ಹತಾ ಮಟ್ಟವನ್ನು ಯಾರೂ ಸಾಧಿಸಲಿಲ್ಲ.

ಕರ್ನಾಟಕದ ಸ್ನೇಹಾ ಮತ್ತು ಮಣಿಕಂಠ

ಶಿವಾಜಿ

ಪುರುಷರ 10 ಸಾವಿರ ಮೀಟರ್ಸ್ ಓಟದಲ್ಲಿ ಶಿವಾಜಿ ಪರಶು ಮಾದಪ್ಪಗೌಡರ (ಕಾಲ: 30:57.69) ಅವರು ಬೆಳ್ಳಿ ಪದಕ ಜಯಿಸಿದರು. ಉತ್ತರ ಪ್ರದೇಶದ ಅಭಿಷೇಕ್ (30ನಿ,56.64ಸೆ) ಹಾಗೂ ಶಿವಂ ಅವರು ಕ್ರಮವಾಗಿ ಪ್ರಥಮ ಮತ್ತು ತೃತೀಯ ಸ್ಥಾನ ಪಡೆದರು.

ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಲು ಆಗಸ್ಟ್ 24 ಕೊನೆಯ ದಿನವಾಗಿದೆ. ಅರ್ಹತೆಯ ಆಕಾಂಕ್ಷಿಗಳಾಗಿರುವ ಅಥ್ಲೀಟ್‌ಗಳಿಗೆ ಈ ಐದು ದಿನಗಳ ಕೂಟವು ಕೊನೆಯ ಅವಕಾಶವಾಗಿದೆ.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕದ ಎಸ್.ಎಸ್. ಸ್ನೇಹಾ (11.61ಸೆ) ಅವರು ಕಂಚಿನ ಪದಕ ಗಳಿಸಿದರು. ಈ ವಿಭಾಗದಲ್ಲಿ ತಮಿಳುನಾಡಿನ ಧನಲಕ್ಷ್ಮೀ (11.36ಸೆ) ಮತ್ತು ಆರ್. ಅಭಿನಯ (11.58ಸೆ) ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದರು.

ಮಹಿಳೆಯರ 400 ಮೀ ಓಟದ ಸೆಮಿಫೈನಲ್‌ನಲ್ಲಿ ಹೀಟ್ಸ್‌ನಲ್ಲಿ ಅನುಭವಿ ಎಂ.ಆರ್. ಪೂವಮ್ಮ 54.52ಸೆಕೆಂಡುಗಳಲ್ಲಿ ಗುರಿ ಮುಟ್ಟಿ, ಫೈನಲ್ ಪ್ರವೇಶಿಸಿದರು.

ಆದರೆ ಕಾಂಟಿನೆಂಟಲ್ ಟೂರ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ ವಿಜೇತರಾಗಿದ್ದ ಜಿ.ಕೆ. ವಿಜಯಕುಮಾರಿ ಅವರಿಗೆ ಅಭ್ಯಾಸದ ಸಂದರ್ಭದಲ್ಲಿ ಹಿಮ್ಮಡಿಗೆ ಗಾಯವಾಗಿತ್ತು. ಇದರಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು.

ಹಿಮಾಚಲ ಪ್ರದೇಶದ ಸೀಮಾ ಅವರು 5 ಸಾವಿರ ಮೀಟರ್ಸ್ ಓಟದಲ್ಲಿ ನೂತನ ಕೂಟ ದಾಖಲೆ ನಿರ್ಮಿಸಿದರು. ಅವರು 15ನಿ, 42.64ಸೆಕೆಂಡುಗಳಲ್ಲಿ (ಹಳೆಯದು: 15ನಿ,46.92ಸೆ) ಗುರಿ ತಲುಪಿದರು. ಮಹಾರಾಷ್ಟ್ರದ ರವೀನಾ ಗಾಯಕವಾಡ (16ನಿ,53.24ಸೆ) ಮತ್ತು ಜಾರ್ಖಂಡ್‌ನ ಎಂ. ಸಂಘಮಿತ್ರ (18ನಿ,04.36ಸೆ) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಚಿಟಿಕೆ ಸುದ್ದಿ

ಕ್ರೀಡಾ ಕಾಯ್ದೆಗೆ ರಾಷ್ಟ್ರಪತಿ ಅಂಕಿತ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕ್ರೀಡಾ ಆಡಳಿತ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಅಂಕಿತ ಹಾಕಿದ್ದಾರೆ. ಹೀಗಾಗಿ ಈ ಕಾಯ್ದೆ ಕಾನೂನಿನ ಸ್ವರೂಪ ಪಡೆದುಕೊಂಡಿತು. ಈ ಸಂಬಂಧ ಮಂಗಳವಾರ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ.

ಈ ಹಿಂದೆ 2011ರ ರಾಷ್ಟ್ರೀಯ ಕ್ರೀಡಾಸಂಹಿತೆ ಜಾರಿಯಲ್ಲಿತ್ತು. ಈಗ ಜಾರಿಯಾಗುವ ಹೊಸ ಕಾನೂನಿನಡಿ ರಾಷ್ಟ್ರೀಯ ಕ್ರೀಡಾ ಮಂಡಳಿ ಮತ್ತು ರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ ಅಸ್ತಿತ್ವಕ್ಕೆ ಬರಲಿದೆ. ರಾಷ್ಟ್ರೀಯ ಕ್ರೀಡಾ ಮಂಡಳಿಯು, ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಮಾನ್ಯತೆ ನೀಡುವ ಅಥವಾ ರದ್ದುಗೊಳಿಸುವ ಅಧಿಕಾರ ಹೊಂದಿದೆ.

ಬ್ರಸೆಲ್ಸ್ ಡೈಮಂಡ್ ಲೀಗ್: ಚೋಪ್ರಾ ಅಲಭ್ಯ



ನವದೆಹಲಿ (ಪಿಟಿಐ): ಪ್ರತಿಷ್ಠಿತ ಡೈಮಂಡ್ ಲೀಗ್ ಫೈನಲ್ಸ್‌ಗೆ ಈಗಾಗಲೇ ಸ್ಥಾನ ಖಚಿತ ಪಡಿಸಿಕೊಂಡಿರುವ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಇದೇ ಶುಕ್ರವಾರ ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್‌ನ ಅಂತಿಮ ಲೆಗ್‌ನಲ್ಲಿ ಭಾಗವಹಿಸದಿರಲು ನಿರ್ಧರಿಸಿದ್ದಾರೆ.

ಒಟ್ಟು 14 ಡೈಮಂಡ್ ಲೀಗ್ ಕೂಟಗಳಲ್ಲಿ ನಾಲ್ಕರಲ್ಲಷ್ಟೇ ಪುರುಷರ ಜಾವೆಲಿನ್ ಥ್ರೊ ಸ್ಪರ್ಧೆಗಳು ನಡೆಯುತ್ತವೆ. ಚೋಪ್ರಾ ಎರಡರಲ್ಲಿ ಮಾತ್ರ ಭಾಗವಹಿಸಿದ್ದರೂ, ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ.

ಕರ್ನಾಟಕ ನಿರ್ಗಮನ

ಜಲಂಧರ್ (ಪಿಟಿಐ): ಕರ್ನಾಟಕ ತಂಡ ಇಲ್ಲಿ ನಡೆಯುತ್ತಿರುವ 15ನೇ ಹಾಕಿ ಇಂಡಿಯಾ ಜೂನಿಯರ್ ಪುರುಷರ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 2–3ರಿಂದ ಹರಿಯಾಣ ಎದುರು ವೀರೋಚಿತ ಸೋಲು ಕಂಡಿತು.

ಬುಧವಾರ ನಡೆದ ಟೂರ್ನಿಯ ಎಂಟರ ಘಟ್ಟದ ಮೊದಲ ಪಂದ್ಯದಲ್ಲಿ ಹರಿಯಾಣದ ನವರಾಜ್ ಸಿಂಗ್ (6ನೇ ನಿ.) ಹಾಗೂ ಸಚಿನ್ (22ನೇ ನಿ.) ಗೋಲು ಗಳಿಸಿ ತಮ್ಮ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಪುಟಿದೆದ್ದ ಕರ್ನಾಟಕ ತಂಡದ ನಿತೇಶ್ ಶರ್ಮಾ (28ನೇ ನಿ.) ಹಾಗೂ ಸಂಪನ್ ಜಿ. (43ನೇ ನಿ.) ತಲಾ ಒಂದು ಗೋಲು ಗಳಿಸಿ, ಸಮಬಲ ಸಾಧಿಸಿದರು. ಆದರೆ ಕಡೆಯ ಕ್ಷಣದಲ್ಲಿ ಗೋಲು ಗಳಿಸಿದ ಚಿರಾಗ್ (59ನೇ ನಿ.), ಕರ್ನಾಟಕದ ಸೆಮಿಫೈನಲ್ ಕನಸು ಕಮರುವಂತೆ ಮಾಡಿದರು.

ಉಳಿದಂತೆ, ಹಾಲಿ ಚಾಂಪಿಯನ್ ಪಂಜಾಬ್, ಉತ್ತರ ಪ್ರದೇಶ ಹಾಗೂ ಒಡಿಶಾ ತಂಡಗಳೂ ಅಂತಿಮ ನಾಲ್ಕರ ಸುತ್ತಿಗೆ ಪ್ರವೇಶಿಸಿದವು.

ಭಾರತಕ್ಕೆ ಸುಲಭ ಜಯ

ಥಿಂಪು (ಪಿಟಿಐ): ಶಿಸ್ತುಬದ್ಧ ಆಟವಾಡಿದ ಭಾರತ ತಂಡ ಸ್ಯಾಫ್ 17 ವರ್ಷದೊಳಗಿನ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ನೇಪಾಳ ತಂಡವನ್ನು 7–0 ಗೋಲುಗಳಿಂದ ಸೋಲಿಸಿ ಶುಭಾರಂಭ ಮಾಡಿತು.

ನಿರಾ ಚಾನು ಲಾಂಗ್ಜಮ್, ಅಭಿಷ್ಟಾ ಬಸ್ನೆಟ್ ಹಾಗೂ ಅನುಷ್ಕಾ ಕುಮಾರಿ ತಲಾ ಎರಡು ಮತ್ತು ಜೂಲನ್ ಒಂದು ಗೋಲು ಹೊಡೆದರು.

'ಚಿನ್ನಸ್ವಾಮಿ' ಗತವೈಭವ ಮರಳಿ ತರಲು ಬದ್ಧ

ಕೆಎಸ್‌ಸಿಎ ಚುನಾವಣೆ: ವೆಂಕಟೇಶ್ ಪ್ರಸಾದ್ ಬಳಗದಿಂದ ಪ್ರಣಾಳಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಗತವೈಭವವನ್ನು ಮರಳಿ ತರಲು ತಾವು ಬದ್ಧರಾಗಿರುವುದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಡಳಿತ ಸಮಿತಿಯ ಚುನಾವಣೆಯಲ್ಲಿ ಸ್ಪರ್ಧಿಸಲಿರುವ, ಭಾರತ ಕ್ರಿಕೆಟ್ ತಂಡದ ಮಾಜಿ ವೇಗದ ಬೌಲರ್ ವೆಂಕಟೇಶ್ ಪ್ರಸಾದ್ ಮತ್ತು ತಂಡವು ಘೋಷಿಸಿತು.

ಬುಧವಾರ ಸಂಜೆ ಸುದ್ದಿಗಾರರು ಕಿಕ್ಕಿರಿದು ಸೇರಿದ್ದ ಪತ್ರಿಕಾಗೋಷ್ಠಿಯಲ್ಲಿ ಪ್ರಸಾದ್ ಮತ್ತು ಕೆಎಸ್‌ಸಿಎ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಅವರು 'ಪ್ರಣಾಳಿಕೆ' ಬಿಡುಗಡೆ ಮಾಡಿದರು.

'ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ 50 ವರ್ಷಗಳಿಗೂ ಹೆಚ್ಚಿನ ಇತಿಹಾಸವಿದೆ. ಪ್ರತಿಷ್ಠಿತ ಅಂತರರಾಷ್ಟ್ರೀಯ ಕ್ರೀಡಾಂಗಣ ಇದಾಗಿದೆ. ಇಲ್ಲಿ ಮತ್ತೆ ಬಿಸಿಸಿಐ ಹಾಗೂ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ನಡೆಯುವಂತೆ ಮಾಡಲು ಬದ್ಧರಾಗಿದ್ದೇವೆ' ಎಂದು ಈ ಜೋಡಿಯು ಘೋಷಣೆ ಮಾಡಿತು.

ಕಳೆದ ಜೂನ್ 4ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಅದರಲ್ಲಿ 11 ಅಭಿಮಾನಿಗಳು ಮೃತಪಟ್ಟಿದ್ದರು. ಈ ಘಟನೆಯ ನಂತರ ಕ್ರೀಡಾಂಗಣದಲ್ಲಿ ಯಾವುದೇ ಕ್ರಿಕೆಟ್ ಪಂದ್ಯಗಳನ್ನು ನಡೆಸಲೂ ರಾಜ್ಯ ಸರ್ಕಾರ ಅನುಮತಿ ನೀಡುತ್ತಿಲ್ಲ. ಅದಕ್ಕಾಗಿ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯನ್ನು ಮೈಸೂರಿಗೆ ಸ್ಥಳಾಂತರಿಸಲಾಗಿದೆ. ಮುಂದಿನ ತಿಂಗಳು ಇಲ್ಲಿ ನಡೆಯಬೇಕಿರುವ ಮಹಿಳಾ ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೂ ಅನಿಶ್ಚಿತತೆ ಕಾಡುತ್ತಿದೆ.

'ಆ ಘಟನೆಯು (ಕಾಲ್ತುಳಿತ) ನಡೆದಿದ್ದು ದುರದೃಷ್ಟಕರ. ಅಂತಹ ದುರ್ಘಟನೆ ನಡೆಯಬಾರದಿತ್ತು. ಅದಕ್ಕಾಗಿ ನಮಗೆ ವಿಷಾದವಿದೆ. ಚಿನ್ನಸ್ವಾಮಿ ಕ್ರೀಡಾಂಗಣವು ಕರ್ನಾಟಕ ಕ್ರಿಕೆಟ್‌ನ ಮುಕುಟ ಮಣಿಯಾಗಿದೆ. ನಮ್ಮ ತಂಡವು ಅಧಿಕಾರಕ್ಕೆ ಬಂದರೆ ಸರ್ಕಾರ ಮತ್ತು ಸ್ಥಳೀಯ ಆಡಳಿತ ಸಂಸ್ಥೆಗಳೊಂದಿಗೆ ಉತ್ತಮ ಬಾಂಧವ್ಯವನ್ನು ಮರುಸ್ಥಾಪಿಸುತ್ತೇವೆ. ಅವುಗಳ ಮನವೊಲಿಸಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮತ್ತೆ ಕ್ರಿಕೆಟ್ ಅರಳುವಂತೆ ಮಾಡುತ್ತೇವೆ' ಎಂದು ಪ್ರಸಾದ್ ಹೇಳಿದರು.

ಕೆಎಸ್‌ಸಿಎ ಆಡಳಿತ ಸಮಿತಿಯ ಚುನಾವಣೆಯಲ್ಲಿ ಸ್ಪರ್ಧಿಸಲು 16 ಜನರ ತಂಡವನ್ನು ರಚಿಸಲಾಗುವುದು ಎಂದು ಹೇಳಿದ ಪ್ರಸಾದ್ 'ನಾನು ಮುಖ್ಯ ಆಯ್ಕೆಗಾರ' ಎಂದರು. ರಾಜ್ಯದ ದಿಗ್ಗಜ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಸೇರಿದಂತೆ ಹಲವು ಪ್ರಮುಖರು ಬೆಂಬಲಿಸುವ ಕುರಿತು ನಿರೀಕ್ಷೆ ವ್ಯಕ್ತಪಡಿಸಿದರು.

'ಕೆಎಸ್‌ಸಿಎ ವಲಯಗಳಲ್ಲಿ ಕ್ರಿಕೆಟ್ ಬೆಳವಣಿಗೆ ಮತ್ತು ಮೂಲಸೌಲಭ್ಯ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಎಲ್ಲ ಜಿಲ್ಲೆಗಳಲ್ಲಿ ವಯೋಮಿತಿಯ ಕ್ರಿಕೆಟ್‌ನಲ್ಲಿ ಪ್ರತಿಭಾವಂತರನ್ನು ಪ್ರೋತ್ಸಾಹಿಸುವುದು. ಅವಕಾಶಗಳನ್ನು ವಿಕೇಂದ್ರಿಕರಿಸಲು ಬಿಸಿಸಿಐ ಪಂದ್ಯಗಳನ್ನು ವಲಯ ಕೇಂದ್ರಗಳಲ್ಲಿ (ಬೆಂಗಳೂರಿನಿಂದ ಹೊರಗೆ) ಆಯೋಜಿಸಲು ಒತ್ತು ನೀಡುವುದು. ಎಲ್ಲ ವಲಯಗಳಲ್ಲಿ ಟರ್ಫ್ ಮೈದಾನಗಳ ಸಂಖ್ಯೆ ಹೆಚ್ಚಿಸುವುದು. ಮಹಿಳಾ ಕ್ರಿಕೆಟ್ ಅಭಿವೃದ್ಧಿಗೂ ಪ್ರೋತ್ಸಾಹ ನೀಡಲು ಆದ್ಯತೆ ನೀಡುತ್ತೇವೆ' ಎಂದು ಹೇಳಿದರು.

'ಬೇರೆ ಬೇರೆ ವಯೋಮಿತಿಯ ಟೂರ್ನಿಗಳನ್ನು ಅಚ್ಚುಕಟ್ಟಾಗಿ ಆಯೋಜಿಸುವುದು. ಆಯ್ಕೆ ಪ್ರಕ್ರಿಯೆಯನ್ನು ಉತ್ತಮಗೊಳಿಸುವುದು. ಮಾಜಿ ಕ್ರಿಕೆಟಿಗರ ಮುಂದಾಳತ್ವದಲ್ಲಿ ಕರ್ನಾಟಕ ಕ್ರಿಕೆಟ್ ಅಕಾಡೆಮಿಯನ್ನು ಪುನರುಜ್ಜೀವನಗೊಳಿಸುವುದು. ಮಾಜಿ ಕ್ರಿಕೆಟಿಗರನ್ನು ಮಾರ್ಗದರ್ಶಕರು ಹಾಗೂ ತರಬೇತುದಾರರನ್ನಾಗಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದು. ವಲಯಗಳಲ್ಲಿ ಅಕಾಡೆಮಿಗಳ ಸ್ಥಾಪನೆ. ಅಂಪೈರ್, ರೆಫರಿ, ಸ್ಕೋರರ್ ಮತ್ತು ನೆರವು ಸಿಬ್ಬಂದಿಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು' ಎಂದು ಪ್ರಸಾದ್ ವಿವರಿಸಿದರು.

ಭಾರತ ಕ್ರಿಕೆಟ್ ತಂಡದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ (ಮಧ್ಯ), ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಮತ್ತು ಕೆಎಸ್‌ಸಿಎ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಅವರು ಮುಂಬರಲಿರುವ ಕೆಎಸ್‌ಸಿಎ ಚುನಾವಣೆ ಪ್ರಣಾಳಿಕೆ ಬಿಡುಗಡೆ ಮಾಡಿದರು

ರಾಜ್ಯದಲ್ಲಿ ಪುರುಷರ ಕ್ರಿಕೆಟ್‌ಗೆ ಸರಿಸಮನಾಗಿ ಮಹಿಳಾ ಕ್ರಿಕೆಟ್‌ಗೂ ಪ್ರೋತ್ಸಾಹ ಸಿಗಬೇಕು. ಅದಕ್ಕಾಗಿ ಎಲ್ಲ ವಯೋಮಾನದವರಿಗೂ ಲೀಗ್‌ಗಳನ್ನು ಆಯೋಜಿಸಬೇಕು

ಶಾಂತಾ ರಂಗಸ್ವಾಮಿ, ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ

'ಕ್ರೀಡಾಂಗಣ ಸ್ಥಳಾಂತರ ಆಗಲು ಬಿಡಲ್ಲ'

'ಚಿನ್ನಸ್ವಾಮಿ ಕ್ರೀಡಾಂಗಣವು ಐತಿಹಾಸಿಕ ಕ್ರಿಕೆಟ್ ತಾಣವಾಗಿದೆ. ನಾವು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧಿಕಾರದ ಚುಕ್ಕಾಣಿ ಹಿಡಿದರೆ ಸ್ಮಾರ್ಟ್ ಕ್ರೀಡಾಂಗಣವನ್ನಾಗಿ ಉನ್ನತ ದರ್ಜೆಗೇರಿಸುತ್ತೇವೆ. ಯಾವುದೇ ಕಾರಣಕ್ಕೂ ನಗರದಿಂದ ಹೊರಗೆ ಸ್ಥಳಾಂತರವಾಗಲು ಆಸ್ಪದ ಕೊಡುವುದಿಲ್ಲ' ಎಂದು ಕೆಎಸ್‌ಸಿಎ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಹೇಳಿದರು.

'ಕಾಲ್ತುಳಿತ ಪ್ರಕರಣದ ತನಿಖೆಯು ಮುಗಿದ ನಂತರ, ವರದಿಯನ್ನು ಪಡೆದು ಕೂಲಂಕಷವಾಗಿ ಅಧ್ಯಯನ ನಡೆಸಲಾಗುವುದು. ತನಿಖಾ ಆಯೋಗ ಮತ್ತು ಸರ್ಕಾರ ಶಿಫಾರಸು ಮಾಡಿದ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಪುನರಾರಂಭಿಸಲು ಅಗತ್ಯ ಅನುಮತಿಗಳನ್ನು ಪಡೆಯುವುದು. ನಿಗದಿತ ವೇಳಾಪಟ್ಟಿಯ ಪ್ರಕಾರ ಟೂರ್ನಿಗಳನ್ನು ಆಯೋಜಿಸಲಾಗುವುದು' ಎಂದೂ ಅವರು ಹೇಳಿದರು.

'ಕ್ರೀಡಾಂಗಣವನ್ನು ಉನ್ನತ ದರ್ಜೆಗೇರಿಸಲಾಗುವುದು. ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದರು.

ಬಿಎಫ್‌ಐ ಚುನಾವಣೆ ಇಂದು

ನವದೆಹಲಿ (ಪಿಟಿಐ): ಆಡಳಿತಾತ್ಮಕ ಸಮಸ್ಯೆ, ಆಂತರಿಕ ಕಲಹಗಳಿಂದ ನಲುಗಿಹೋಗಿದ್ದ ಭಾರತ ಬಾಕ್ಸಿಂಗ್ ಫೆಡರೇಷನ್‌ಗೆ (ಬಿಎಫ್‌ಐ) ಬಹುನಿರೀಕ್ಷಿತ ಚುನಾವಣೆ ಕೊನೆಗೂ ಗುರುವಾರ ನಡೆಯಲಿದೆ.

ಎರಡು ಬಾರಿಯ ಅಧ್ಯಕ್ಷ ಅಜಯ್ ಸಿಂಗ್ ಮೂರನೇ ಸಲ ಆಯ್ಕೆ ಬಯಸಿದ್ದಾರೆ. ಫೆಬ್ರುವರಿ 2ರಂದು ಈ ಹಿಂದಿನ ಪದಾಧಿಕಾರಿಗಳ ಅವಧಿ ಮುಗಿದಿತ್ತು.

ಈ ಮೊದಲು ಚುನಾವಣೆ ಮಾರ್ಚ್ 28ರಂದು ನಡೆಯಬೇಕಾಗಿತ್ತು. ಆದರೆ ದಾವೆ– ಪ್ರತಿ ದಾವೆಗಳಿಂದಾಗಿ ಚುನಾವಣೆ ಮುಂದಕ್ಕೆ ಹೋಗಿತ್ತು.

ಸ್ಥಾನ ಉಳಿಸಿಕೊಂಡ ಲಾಕ್ರಾ, ದಿಲ್‌ಪ್ರೀತ್

ನವದೆಹಲಿ (ಪಿಟಿಐ): ಬಿಹಾರದ ರಾಜಗೀರ್‌ನಲ್ಲಿ ನಡೆಯಲಿರುವ ಏಷ್ಯಾ ಕಪ್ ಹಾಕಿ ಟೂರ್ನಿಗೆ 18 ಆಟಗಾರರ ಭಾರತ ತಂಡವನ್ನು ಬುಧವಾರ ಪ್ರಕಟಿಸಲಾಗಿದ್ದು, ಅಚ್ಚರಿಯ ಬದಲಾವಣೆಗಳೇನೂ ಆಗಿಲ್ಲ. ಮಿಡ್‌ಫೀಲ್ಡರ್ ರಾಜಿಂದರ್ ಸಿಂಗ್, ಮುನ್ಪಡೆ ಆಟಗಾರರಾದ ಶಿಲಾನಂದ ಲಾಕ್ರಾ ಮತ್ತು ದಿಲ್‌ಪ್ರೀತ್ ಸಿಂಗ್ ಸ್ಥಾನ ಉಳಿಸಿಕೊಂಡಿದ್ದಾರೆ.

ಹರ್ಮನ್‌ಪ್ರೀತ್ ಸಿಂಗ್

ಟೂರ್ನಿಯು ಆಗಸ್ಟ್ 29 ರಿಂದ ಸೆಪ್ಟೆಂಬರ್ 7ರವರೆಗೆ ನಡೆಯಲಿದೆ. ಏಷ್ಯಾ ಕಪ್ ಗೆಲ್ಲುವ ತಂಡವು ಮುಂದಿನ ವರ್ಷದ ಆಗಸ್ಟ್‌ನಲ್ಲಿ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಎಫ್‌ಐಎಚ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯಲಿದೆ.

ಅನುಭವಿ ಡ್ರ್ಯಾಗ್‌ಫ್ಲಿಕ್ಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ತಂಡದ ನಾಯಕರಾಗಿ ಮುಂದುವರಿದಿದ್ದಾರೆ.

ತಂಡ ಹೀಗಿದೆ: ಗೋಲ್ ಕೀಪರ್ಸ್: ಕೃಷನ್ ಬಿ. ಪಾಠಕ್, ಸೂರಜ್ ಕರ್ಕೇರಾ.

ಡಿಫೆಂಡರ್ಸ್: ಸುಮಿತ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಹರ್ಮನ್‌ಪ್ರೀತ್ ಸಿಂಗ್, ಅಮಿತ್ ರೋಹಿದಾಸ್, ಜುಗರಾಜ್ ಸಿಂಗ್.

ಮಿಡ್‌ಫೀಲ್ಡರ್ಸ್: ರಾಜಿಂದರ್ ಸಿಂಗ್, ರಾಜ ಕುಮಾರ್ ಪಾಲ್, ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕಸಾಗರ ಪ್ರಸಾದ್.

ಫಾರ್ವರ್ಡ್ಸ್: ಮನದೀಪ್ ಸಿಂಗ್, ಶಿಲಾನಂದ ಲಾಕ್ರಾ, ಅಭಿಷೇಕ್, ಸುಖಜೀತ್ ಸಿಂಗ್ ಮತ್ತು ದಿಲ್‌ಪ್ರೀತ್ ಸಿಂಗ್.

ಕರುವಾನ ಎದುರು ಡ್ರಾ ಸಾಧಿಸಿದ ಪ್ರಜ್ಞಾನಂದ

ಸಿಂಕ್‌ಫೀಲ್ಡ್ ಕಪ್: ಗುಕೇಶ್‌ಗೆ ಜಯ

ಸೇಂಟ್ ಲೂಯಿ (ಪಿಟಿಐ): ಮೊದಲ ಸುತ್ತಿನ ಸೋಲಿನಿಂದ ಸಾವರಿಸಿಕೊಂಡ ವಿಶ್ವ ಚಾಂಪಿಯನ್ ಡಿ.ಗುಕೇಶ್, ಮಂಗಳವಾರ ನಡೆದ ಸಿಂಕ್‌ಫೀಲ್ಡ್ ಕಪ್ ಚೆಸ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಉಜ್ಬೇಕಿಸ್ತಾನದ ಆಟಗಾರ ನದಿರ್ಬೆಕ್ ಅಬ್ದುಸತ್ತಾರೋವ್ ಅವರನ್ನು ಸೋಲಿಸಿದರು.

ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಫ್ಯಾಬಿಯಾನೊ ಕರುವಾನ ಅವರ ಜೊತೆ ಪಾಯಿಂಟ್ ಹಂಚಿಕೊಂಡರು.

ಫ್ರಾನ್ಸ್‌ನ ಗ್ರ್ಯಾಂಡ್ ಮಾಸ್ಟರ್ ಅಲಿರೇಜಾ ಫಿರೋಜ ಮತ್ತೊಂದು ಪಂದ್ಯದಲ್ಲಿ ಪರಿಪೂರ್ಣ 'ಎಂಡ್‌ಗೇಮ್' ಆಟದಿಂದ ಪೋಲೆಂಡ್‌ನ ಡುಡಾ ಯಾನ್ ಕ್ರಿಸ್ಟೋಫ್ ಅವರ ರಕ್ಷಣಾಕೋಟೆ ಛಿದ್ರಗೊಳಿಸಿ ಗೆಲುವು ಪಡೆದರು.

ಅಮೆರಿಕದ ಲೆವೊನ್ ಅರೋನಿಯನ್ ಅವರು ಸ್ವದೇಶದ ಸ್ಯಾಮುಯೆಲ್ ಸೆವಿಯನ್ ಜೊತೆ ಡ್ರಾ ಮಾಡಿಕೊಂಡರು. ಅಮೆರಿಕದ ವೆಸ್ಲಿ ಸೊ ಮತ್ತು ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ನಡುವಣ ಪಂದ್ಯ ಕೂಡ ಡ್ರಾ ಆಯಿತು.

₹3.26 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಹತ್ತು ಆಟಗಾರರು ಭಾಗವಹಿಸುತ್ತಿದ್ದಾರೆ. ಇನ್ನೂ ಏಳು ಸುತ್ತುಗಳು ಉಳಿದಿದ್ದು, ಪ್ರಜ್ಞಾನಂದ, ಅರೋನಿಯನ್, ಫಿರೋಜಾ ಅವರು 1.5 ಅಂಕ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ. ಗುಕೇಶ್, ಕರುವಾನ, ವೆಸ್ಲಿ, ಸೆವಿಯನ್, ವೇಷಿಯರ್ ಲಗ್ರಾವ್ ನಂತರದ ಸ್ಥಾನದಲ್ಲಿದ್ದಾರೆ. ಡುಡಾ (ಅರ್ಧ ಅಂಕ) ಒಂಬತ್ತನೇ ಸ್ಥಾನದಲ್ಲಿದ್ದಾರೆ. ಅಬ್ದುಸತ್ತಾರೋವ್ ಇನ್ನೂ ಪಾಯಿಂಟ್ ಖಾತೆ ತೆರೆದಿಲ್ಲ.

ಗುಕೇಶ್

ಪ್ರಜ್ಞಾನಂದ

ಕರುವಾನ

ಪ್ರದರ್ಶನ ಪಂದ್ಯದಲ್ಲಿ ಆನಂದ್– ಗ್ಯಾರಿ ಕ್ಯಾಸ್ಪರೋವ್ ಮುಖಾಮುಖಿ

ನವದೆಹಲಿ (ಪಿಟಿಐ): ಭಾರತದ ಚೆಸ್ ದಿಗ್ಗಜ ವಿಶ್ವನಾಥನ್ ಆನಂದ್ ಅವರು ರಷ್ಯಾದ ದಂತಕಥೆ ಗ್ಯಾರಿ ಕ್ಯಾಸ್ಪರೋವ್ ಜೊತೆ ದೀರ್ಘ ಕಾಲದ ನಂತರ ಮುಖಾಮುಖಿಯಾಗಲಿದ್ದಾರೆ. ಹಾಲಿ ವಿಶ್ವ ಚಾಂಪಿಯನ್ ಗುಕೇಶ್, ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಎದುರಾಳಿಯಾಗಲಿದ್ದಾರೆ. ಅಕ್ಟೋಬರ್‌ನಲ್ಲಿ ಅಮೆರಿಕದ ಸೇಂಟ್ ಲೂಯಿಯಲ್ಲಿ ನಡೆಯಲಿರುವ 'ಕ್ಲಚ್ ಚೆಸ್ (ಲೆಜೆಂಡ್ಸ್) ಪ್ರದರ್ಶನ ಪಂದ್ಯಗಳು ಈ ಮುಖಾಮುಖಿಗಳಿಗೆ ವೇದಿಕೆಯಾಗಿದೆ.

ವಿ. ಆನಂದ್

ಕ್ಯಾಸ್ಪರೋವ್

ಕ್ಯಾಸ್ಪರೋವ್ ಮತ್ತು ಆನಂದ್ 2021ರಲ್ಲಿ ಕೊನೆಯ ಬಾರಿ ಜಾಗ್ರೆಬ್‌ನ ಕ್ರೊವೇಷ್ಯಾ ರ‍್ಯಾಪಿಡ್ ಮತ್ತು ಬ್ಲಿಟ್ಝ್ ಟೂರ್ನಿಯಲ್ಲಿ ಎದುರಾಳಿಗಳಾಗಿದ್ದರು. ಆಗ ಆನಂದ್ ಜಯಶಾಲಿಯಾಗಿದ್ದರು. ಇವರಿಬ್ಬರು ವಿವಿಧ ಮಾದರಿಯಲ್ಲಿ 82 ಸಲ ಮುಖಾಮುಖಿ ಆಗಿದ್ದಾರೆ. 30 ಪಂದ್ಯಗಳು ಡ್ರಾ ಆಗಿದ್ದು, ಉಳಿದವುಗಳಲ್ಲಿ ಕ್ಯಾಸ್ಪರೋವ್ ಹೆಚ್ಚಿನ ಸಲ ಜಯಗಳಿಸಿದ್ದಾರೆ.

ಅಕ್ಟೋಬರ್ 7 ರಿಂದ11 ರವರೆಗೆ ಪ್ರದರ್ಶನ ಪಂದ್ಯಗಳು ರ‍್ಯಾಪಿಡ್ ಮತ್ತು ಬ್ಲಿಟ್ಝ್ ಮಾದರಿಗಳಲ್ಲಿ ನಡೆಯಲಿವೆ. ₹1.25 ಕೋಟಿ ಬಹುಮಾನ ನಿಧಿಯೂ ಇದೆ ಎಂದು ಸೇಂಟ್ ಲೂಯಿ ಚೆಸ್ ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ. ಸೇಂಟ್ ಲೂಯಿ ನಗರ ಅಮೆರಿಕದ ಚೆಸ್ ರಾಜಧಾನಿಯಾಗಿ ಬೆಳೆದಿದೆ.

ಮಾಜಿ ಚಾಂಪಿಯನ್ನರ ಹಣಾಹಣಿಯ ಬಳಿಕ ಇದೇ ಸ್ಥಳದಲ್ಲಿ, ಅಕ್ಟೋಬರ್ 27 ರಿಂದ 29ರವರೆಗೆ ಹಾಲಿ ಆಟಗಾರರು ಎದುರಾಗಲಿದ್ದಾರೆ. ಅತಿ ಹೆಚ್ಚಿನ ರೇಟಿಂಗ್ ಹೊಂದಿರುವ ಟೂರ್ನಿಯಲ್ಲಿ ಅಗ್ರ ಕ್ರಮಾಂಕದ ಆಟಗಾರ ಕಾರ್ಲ್‌ಸನ್, ಹಿಕಾರು ನಕಾಮುರಾ, ಫ್ಯಾಬಿಯಾನೊ ಕರುವಾನ ಮತ್ತು ಗುಕೇಶ್ ಆಡಲಿದ್ದಾರೆ. ಈ ಟೂರ್ನಿಯು ಒಟ್ಟಾರೆ ₹3.58 ಕೋಟಿ ಬಹುಮಾನ ಮೊತ್ತ ಹೊಂದಿದೆ.